prajavani.net prajavani | ಮಂಗಳವಾರ, ಜೂನ್ 30, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 180 | ಪುಟ 16 | www.prajavani.net



ಕಿದಂಬಿಗೆ ಬೆಳ್ಳಿ
ಭಾರತದ ಕಿದಂಬಿ ಶ್ರೀಕಾಂತ್ ಅವರು ಅಮೆರಿಕ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ರನ್ನರ್ ಅಪ್ ಆದರು. ಚೀನಾ ತೈಪೆಯ ಸು ಲಿಯಾಂಗ್ ಪ್ರಶಸ್ತಿ ಗೆದ್ದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 76,728 | ನಿಫ್ಟಿ 23,946 | $/₹ 94.51 | ಚಿನ್ನ (Std. 10g) ₹1,47,300 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,36,900 (ಬೆಂಗಳೂರು)

ಹೊಸ ನೋಂದಣಿಗೂ ಅವಕಾಶ

ಅಕ್ಟೋಬರ್ 1ಕ್ಕೆ ಅಥವಾ ಅದಕ್ಕೂ ಮೊದಲು 18 ವರ್ಷ ತುಂಬಿದವರಿಗೆ ನಮೂನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ಜೂನ್ 30ರಿಂದ ಆರಂಭವಾಗುತ್ತಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಜತೆಗೇ ಹೊಸ ಮತದಾರರ ನೋಂದಣಿಗೂ ಚುನಾವಣಾ ಆಯೋಗ ಅವಕಾಶ ಮಾಡಿಕೊಟ್ಟಿದೆ.

ಎಸ್‌ಐಆರ್

ಪರಿಷ್ಕರಣಾ ಕಾರ್ಯಕ್ಕೆ ನಿಯೋಜಿಸಲ್ಪಟ್ಟಿರುವ ಮತಗಟ್ಟೆ ಅಧಿಕಾರಿಗಳು (ಬಿಎಲ್‌ಒ) 2026ರ ಜೂನ್ 16ರವರೆಗಿನ ಮತದಾರರ ಪಟ್ಟಿಯಲ್ಲಿ ಹೆಸರಿರುವ ಪ್ರತಿ ಮತದಾರರ ಮನೆಗೂ ಎನ್ಯುಮರೇಷನ್ ಫಾರಂ (ಗಣತಿ ನಮೂನೆ) ತಲುಪಿಸುತ್ತಾರೆ. ಇದೇ ವರ್ಷದ ಅಕ್ಟೋಬರ್ 1ಕ್ಕೆ ಅಥವಾ ಅದಕ್ಕೂ ಮೊದಲು 18 ವರ್ಷ ತುಂಬಿದ ಯುವಕ–ಯುವತಿಯರೂ ಭರ್ತಿ ಮಾಡಿಕೊಡಬಹುದು. ಹೊಸ ಮತದಾರರ ಸೇರ್ಪಡೆಗಾಗಿಯೇ ಪ್ರತಿ ಬಿಎಲ್‌ಒಗೂ 30 ಹೆಚ್ಚುವರಿ ಗಣತಿ ನಮೂನೆ ನೀಡಲಾಗಿದೆ.

ಈ ಕುರಿತು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಸೋಮವಾರ ಮಾಧ್ಯಮಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಮತಗಟ್ಟೆ ಅಧಿಕಾರಿಗಳು ಮನೆಗಳಿಗೆ ಭೇಟಿ ನೀಡಿದಾಗ ಆ ಮನೆಯ ಪ್ರತಿ ಮತದಾರರಿಗೂ ಗಣತಿ ನಮೂನೆಯ ಎರಡು ಪ್ರತಿಗಳನ್ನು ನೀಡುತ್ತಾರೆ. ಎರಡನ್ನೂ ಭರ್ತಿ ಮಾಡಿದ ನಂತರ ಭಾವಚಿತ್ರ ಅಂಟಿಸಿ, ಸಹಿ ಮಾಡಬೇಕು. ಒಂದನ್ನು ಬಿಎಲ್‌ಒಗಳಿಗೆ ನೀಡಿ, ಮತ್ತೊಂದಕ್ಕೆ ಅವರ ಸಹಿ ಪಡೆದು ಸಂಗ್ರಹಿಸಿಟ್ಟುಕೊಳ್ಳಬೇಕು. ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ನೋಂದಾಯಿಸಿಕೊಳ್ಳುವವರಿಗೂ ಇದೇ ನಿಯಮ ಅನ್ವಯವಾಗುತ್ತದೆ. ಗಣತಿ ನಮೂನೆಯ 11 ಕೋಟಿ ಪ್ರತಿಗಳನ್ನು ಮುದ್ರಿಸಲಾಗಿದೆ.

2 ಸ್ಟಿಕ್ಕರ್ ಬಳಕೆ: ಮತಗಟ್ಟೆ ಅಧಿಕಾರಿಗಳು ಮನೆಗಳಿಗೆ ಭೇಟಿ ನೀಡಿದಾಗ ಮನೆಯಲ್ಲಿ ಜನರು ಇದ್ದು, ಗಣತಿ ನಮೂನೆಗಳನ್ನು ಸ್ವೀಕರಿಸಿದರೆ ಅಂತಹ ಮನೆಗಳಿಗೆ ನೇರಳೆ ಬಣ್ಣದ ಚೌಕಾಕಾರದ ಸ್ಟಿಕ್ಕರ್ ಅಂಟಿಸಲಾಗುತ್ತದೆ.

▶ 9

ದಾಖಲೆ ಸಲ್ಲಿಕೆ ಸದ್ಯಕ್ಕಿಲ್ಲ

ಮತದಾರರು ಗಣತಿ ನಮೂನೆಗಳನ್ನು ತಪ್ಪಿಲ್ಲದೆ, ಗೊಂದಲಗಳಿಗೆ ಅವಕಾಶ ಇಲ್ಲದಂತೆ ಭರ್ತಿ ಮಾಡಿ, ಸಹಿ ಮಾಡಿ, ಭಾವಚಿತ್ರ ಲಗತ್ತಿಸಿ ಮತಗಟ್ಟೆ ಅಧಿಕಾರಿಗಳಿಗೆ ಮರಳಿಸಿದರೆ ಸಾಕು. ನಮೂನೆಯ ಜತೆಗೆ ಯಾವ ದಾಖಲೆಯನ್ನೂ ತಕ್ಷಣಕ್ಕೆ ಸಲ್ಲಿಸಬೇಕಿಲ್ಲ.

ಗಣತಿ ನಮೂನೆ ಸಂಗ್ರಹಿಸುವ ಕಾರ್ಯ ಜುಲೈ 29ಕ್ಕೆ ಕೊನೆಗೊಳ್ಳಲಿದ್ದು, ಕರಡು ಪಟ್ಟಿಯನ್ನು ಆ.5ರಂದು ಪ್ರಕಟಿಸಲಾಗುತ್ತದೆ. ಗಣತಿ ನಮೂನೆ ಭರ್ತಿ ಮಾಡಿ ಸಲ್ಲಿಸದವರ ಹೆಸರನ್ನು ಕರಡು ಪಟ್ಟಿಯಲ್ಲಿ ಸೇರಿಸುವುದಿಲ್ಲ. ಕರಡು ಪ್ರಕಟಿಸಿದ ನಂತರ ನಿಯಮ ಪ್ರಕಾರ ಇಲ್ಲದ ಮತದಾರರಿಗೆ ನೋಟಿಸ್ ನೀಡಿ ದಾಖಲೆ ಸಂಗ್ರಹಿಸಲಾಗುವುದು ಎಂದು ಆಯೋಗ ಹೇಳಿದೆ.

ಆನ್‌ಲೈನ್‌ನಲ್ಲೂ ಅರ್ಜಿ

ಮತದಾರರು ಆನ್‌ಲೈನ್‌ನಲ್ಲಿಯೂ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಭಾರತ ಚುನಾವಣಾ ಆಯೋಗದ ವೆಬ್‌ಸೈಟ್ voters.eci.gov.in ಮತ್ತು ECINET ಮೊಬೈಲ್ ಅಪ್ಲಿಕೇಷನ್‌ನಲ್ಲೂ ನಮೂನೆ ಭರ್ತಿ ಮಾಡಬಹುದು.

ಹೆಚ್ಚಿನ ಮಾಹಿತಿಗೆ ಕರ್ನಾಟಕ ರಾಜ್ಯ ಮುಖ್ಯ ಚುನಾವಣಾಧಿಕಾರಿ ವೆಬ್‌ಸೈಟ್ https://ceo.karnataka.gov.in/vfc/details/ ಸಂಪರ್ಕಿಸಬಹುದು.

ಪ್ರಶ್ನೆಗಳಿಗೆ ಉತ್ತರಿಸಿ ಎಸ್‌ಐಆರ್ ಮಾಡಲಿ: ಪ್ರಿಯಾಂಕ್ ಖರ್ಗೆ



‘ನಮ್ಮ ಪ್ರಶ್ನೆಗಳಿಗೆ ಚುನಾವಣಾ ಆಯೋಗ ಉತ್ತರ ಕೊಟ್ಟು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮಾಡಲಿ’ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಎಸ್‌ಐಆರ್ ಬಗ್ಗೆ ನಾವು ಸಚಿವ ಸಂಪುಟ ಸಭೆಯಲ್ಲಿ ಕೆಲವು ಆಕ್ಷೇಪಗಳನ್ನು ವ್ಯಕ್ತಪಡಿಸಿದ್ದೇವೆ’ ಎಂದರು.

▶ 9

ಮತದಾರರ ಪರವಾಗಿ ಸಹಿಗೆ ಅವಕಾಶ

ವಲಸೆ, ಉದ್ಯೋಗ ಮತ್ತಿತರ ಕಾರಣಗಳಿಗೆ ಮನೆಯ ಕೆಲವು ಮತದಾರರು ಮನೆಯಿಂದ ದೀರ್ಘ ಸಮಯ ಹೊರಗೆ ಇದ್ದು, ಎಸ್‌ಐಆರ್ ಪ್ರಕ್ರಿಯೆ ವೇಳೆಗೆ ಬರಲು ಸಾಧ್ಯವಾಗದಿದ್ದರೆ ಅವರ ಪರವಾಗಿ ಮನೆಯ ಇತರೆ ಮತದಾರರು ಸಹಿ ಮಾಡಬಹುದು. ಅರ್ಜಿಗಳನ್ನು ಕನ್ನಡ ಅಥವಾ ಇಂಗ್ಲಿಷ್ ಎರಡು ಭಾಷೆಗಳಲ್ಲಷ್ಟೇ ಭರ್ತಿ ಮಾಡಲು ಅವಕಾಶ ನೀಡಲಾಗಿದೆ.

▶ 9

‘ಆರ್ಥಿಕ ಸಬಲೆ ಹೆಂಡತಿಗೆ ಜೀವನಾಂಶ ನೀಡಬೇಕಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೆಂಡತಿ ಆರ್ಥಿಕವಾಗಿ ಸದೃಢಳಾಗಿದ್ದು, ಗಂಡನಿಗಿಂತ ಹೆಚ್ಚು ಸಂಪಾದಿಸುತ್ತಾಳೆ ಮತ್ತು ಮಕ್ಕಳನ್ನು ನೋಡಿಕೊಳ್ಳುವಂತಹ ಯಾವುದೇ ಹೆಚ್ಚುವರಿ ಹೊಣೆಗಾರಿಕೆ ಹೊಂದಿಲ್ಲ ಎಂದಾದರೆ, ಪತ್ನಿಯು ತನ್ನ ಗಂಡನಿಂದ ಜೀವನಾಂಶ ಪಡೆಯುವಂತೆ ಆದೇಶಿಸಲಾಗದು’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.



ಮಧ್ಯಂತರ ಅರ್ಜಿಯೊಂದರಲ್ಲಿ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್ ನೀಡಿದ್ದ ಆದೇಶವನ್ನು ರದ್ದುಪಡಿಸುವಂತೆ ಕೋರಿ ಪತಿಯೊಬ್ಬರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಚಿಲ್ಲಕೂರು ಸುಮಲತಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

‘ಪುರುಷರು ಮಹಿಳೆಯರಿಗೆ ಜೀವನಾಂಶ ನೀಡಬೇಕೆಂಬ ಕೇವಲ ಲಿಂಗ ಆಧಾರಿತ ಊಹೆಗಳ ಮೇಲೆ ಜೀವನಾಂಶ ನೀಡಲು ನ್ಯಾಯಾಲಯಗಳು ಒಲವು ತೋರಬಾರದು. ಪತ್ನಿಗೆ ತನ್ನ ಗಂಡನ ಜೀವನಶೈಲಿಯ ಮಾನದಂಡಕ್ಕೆ ಅನುಗುಣವಾಗಿ ತನ್ನನ್ನು ತಾನು ಕಾಪಾಡಿಕೊಳ್ಳಲು ಯಾವುದೇ ಆರ್ಥಿಕ ಮೂಲಗಳಿಲ್ಲ ಎಂದು ಸಾಬೀತಾದಾಗ ಮಾತ್ರ ನ್ಯಾಯಾಲಯಗಳು ಪರಿಸ್ಥಿತಿಗಳನ್ನು ಅವಲೋಕಿಸಿ ಜೀವನಾಂಶದ ಆದೇಶಗಳನ್ನು ಹೊರಡಿಸಬೇಕಾಗುತ್ತದೆ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

‘ಈ ಪ್ರಕರಣದಲ್ಲಿ ಪತ್ನಿ ಪತಿಗಿಂತಲೂ ಹೆಚ್ಚಿನ ಸಂಬಳ ಪಡೆಯುತ್ತಿರುವುದನ್ನು ಗಮನಿಸಿದಾಗ, ಆಕೆ ತನ್ನನ್ನು ತಾನು ನಿರ್ವಹಿಸಿಕೊಳ್ಳಬಹುದು ಎಂಬುದು ದೃಢವಾಗುತ್ತದೆ’ ಎಂದು ನ್ಯಾಯಪೀಠ ಆದೇಶದಲ್ಲಿ ಉಲ್ಲೇಖಿಸಿದೆ. ಅರ್ಜಿದಾರ ಪತಿಯ ಪರ ಹೈಕೋರ್ಟ್ ವಕೀಲ ಎಂ.ದೇವರಾಜ್ ವಾದ ಮಂಡಿಸಿದ್ದರು.

ಪ್ರಕರಣ: ವ್ಯಾಜ್ಯಕರ್ತ ದಂಪತಿ 2024ರಲ್ಲಿ ಮದುವೆಯಾಗಿ ಕೇವಲ ಎರಡು ತಿಂಗಳು ಒಟ್ಟಿಗೆ ವಾಸ ಮಾಡಿದ್ದರು. 2025ರಲ್ಲಿ ಪತ್ನಿ, ಕೌಟುಂಬಿಕ ದೌರ್ಜನ್ಯ ರಕ್ಷಣೆ ಕಾಯ್ದೆ–2005ರ ಅಡಿಯಲ್ಲಿ ತನಗೆ ಪ್ರತಿ ತಿಂಗಳೂ ₹1,13,515 ಜೀವನಾಂಶ, ಪರ್ಯಾಯ ವಸತಿ ಮತ್ತು ಪರಿಹಾರ ನೀಡಲು ನಿರ್ದೇಶಿಸಬೇಕು’ ಎಂದು ಕೋರಿ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ಏತನ್ಮಧ್ಯೆ, ಮಧ್ಯಂತರ ಜೀವನಾಂಶಕ್ಕಾಗಿ ಕೋರಿದ ಅರ್ಜಿಯನ್ನು ಪುರಸ್ಕರಿಸಿದ್ದ ಕೋರ್ಟ್, ಮಧ್ಯಂತರ ಜೀವನಾಂಶವಾಗಿ ಪ್ರತಿ ತಿಂಗಳೂ ₹20 ಸಾವಿರ ಪಾವತಿಸುವಂತೆ 2025ರ ಡಿಸೆಂಬರ್ 19ರಂದು ನಿರ್ದೇಶಿಸಿತ್ತು. ಪತಿ ಈ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ಮುಖ್ಯಾಂಶಗಳು

- ಲಿಂಗಾಧಾರಿತ ಊಹೆ ಮೇಲೆ ಜೀವನಾಂಶ ನೀಡಲು ಒಲವು ಬೇಡ
- ನ್ಯಾಯಾಲಯಗಳು ಪರಿಸ್ಥಿತಿ ಅವಲೋಕಿಸಿ ಆದೇಶ ನೀಡಬೇಕು

ಚಿನಕುರುಳಿ ಪ್ರಕಾಶ್ ಶೆಟ್ಟಿ



ಅಯೋಧ್ಯೆ: ತುರ್ತು ವಿಚಾರಣೆ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಯೋಧ್ಯೆ ರಾಮಮಂದಿರದ ಕಾಣಿಕೆ ಹಾಗೂ ದೇಣಿಗೆ ಕಳವು ಪ್ರಕರಣದ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ಸಲ್ಲಿಸಿದ್ದ ಅರ್ಜಿಯ ತುರ್ತು ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.



ಬೇಸಿಗೆ ರಜೆಯ ನಂತರ ಈ ಪ್ರಕರಣವನ್ನು ವಿಚಾರಣೆಗೆ ಪಟ್ಟಿ ಮಾಡಲಾಗುವುದು ಎಂದು ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಶೀಲ್ ನಾಗು ಅವರ ಪೀಠ ಹೇಳಿದೆ. ‘ಆಕಾಶವೇನೂ ಬೀಳುವುದಿಲ್ಲ...ತುರ್ತು ಏನಿದೆ’ ಎಂದು ಪೀಠವು ಮೌಖಿಕವಾಗಿ ಪ್ರಶ್ನಿಸಿದೆ.

ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ಗೆ ಸಂಬಂಧಿಸಿದಂತೆ ನಡೆದಿರುವ ಹಣದ ದುರುಪಯೋಗ ಮತ್ತು ಇತರ ಅಕ್ರಮಗಳ ಬಗ್ಗೆ ಕಾಲಮಿತಿಯ ತನಿಖೆ ನಡೆಸಲು ಸಿಬಿಐ ನೇತೃತ್ವದ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆಗೆ ನಿರ್ದೇಶನ ನೀಡುವಂತೆ ವಕೀಲರಾದ ಅಜಯ್ ಕುಮಾರ್ ರಾಯ್ ಮತ್ತು ದಿನೇಶ್ ಕುಮಾರ್ ಯಾದವ್ ಸಲ್ಲಿಸಿರುವ ಅರ್ಜಿಯಲ್ಲಿ ಕೋರಲಾಗಿದೆ.

ಸಾರ್ವಜನಿಕ ಹಿತಾಸಕ್ತಿ ರಕ್ಷಿಸಲು ಹಾಗೂ ಲಕ್ಷಾಂತರ ಭಕ್ತರು ಮತ್ತು ದಾನಿಗಳ ವಿಶ್ವಾಸವನ್ನು ಪುನಃಸ್ಥಾಪಿಸಲು ಬಲವಾದ ಮೇಲ್ವಿಚಾರಣಾ ಹಾಗೂ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ಕೇಂದ್ರ ಸರ್ಕಾರ, ಉತ್ತರ ಪ್ರದೇಶ ಸರ್ಕಾರ ಮತ್ತು ದೇವಾಲಯ ಟ್ರಸ್ಟ್ ಜಾರಿಗೆ ತರಬೇಕು ಎಂದು ಅರ್ಜಿಯಲ್ಲಿ ಒತ್ತಾಯಿಸಲಾಗಿದೆ.

ಅಕ್ರಮಗಳ ವರದಿಗಳು ಅಯೋಧ್ಯೆಯ ವೈಭವದ ಮರುಸ್ಥಾಪನೆಗಾಗಿ ಹೋರಾಡಿದ ಜನರಲ್ಲಿ ಕಳವಳ ಉಂಟು ಮಾಡಿದೆ. ಹಾಗಾಗಿ, ಸ್ವತಂತ್ರ ಹಾಗೂ ವೃತ್ತಿಪರ ತನಿಖೆಯ ಅಗತ್ಯ ಇದೆ ಎಂದು ಪ್ರತಿಪಾದಿಸಲಾಗಿದೆ.

ಜೂನ್ 13ರಂದು ಉತ್ತರ ಪ್ರದೇಶ ಸರ್ಕಾರ ರಚಿಸಿರುವ ಎಸ್‌ಐಟಿ ಎಫ್‌ಐಆರ್ ದಾಖಲಿಸದೆಯೇ ಪ್ರಾಥಮಿಕ ತನಿಖೆ ಆರಂಭಿಸಿದೆ ಎಂದು ಅರ್ಜಿಯಲ್ಲಿ ಬೊಟ್ಟು ಮಾಡಲಾಗಿದೆ.

ಹೋಂ ಸ್ಟೇ: ಯುವತಿ ಸಾವು, ಯುವಕ ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಮುದ್ದೇನಹಳ್ಳಿ ಬಳಿಯ ಹೋಂ ಸ್ಟೇ ಕೊಠಡಿಯಲ್ಲಿ ಯುವತಿಯೊಬ್ಬರ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಯುವತಿ ಜತೆಯಲ್ಲಿದ್ದ ಯುವಕ ಕೂಡ ಅಸ್ವಸ್ಥನಾಗಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಇರುವುದು ಹಲವು ರೀತಿ ಅನುಮಾನಗಳಿಗೆ ಕಾರಣವಾಗಿದೆ.

ಬೆಂಗಳೂರಿನ ಸಾಯಿ ಸುರಭಿ (24) ಮೃತರು. ಕೇರಳಂನ ಕ್ಯಾಬ್ ಚಾಲಕ ಸಂಜೀತ್ ಅಲಿ (26) ಪ್ರಜ್ಞಾಹೀನರಾಗಿದ್ದಾರೆ. ಅವರನ್ನು ಚಿಕಿತ್ಸೆಗಾಗಿ ಚಿಕ್ಕಬಳ್ಳಾಪುರ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.



ಸಾಯಿ ಸುರಭಿ



ಸಂಜೀತ್ ಆಲಿ

ಶನಿವಾರ ಈ ಇಬ್ಬರು ಹೋಂ ಸ್ಟೇಗೆ ಬಂದಿದ್ದರು. ಸೋಮವಾರ ಹೋಂ ಸ್ಟೇ ಸಿಬ್ಬಂದಿ ಕೊಠಡಿ ಬಳಿ ಬಂದಾಗ ವಿಷಯ ಗೊತ್ತಾಗಿದೆ. ಮೇಲ್ನೋಟಕ್ಕೆ ನೇಣು ಬಿಗಿದ ಸ್ಥಿತಿಯಲ್ಲಿ ಶವ ಕಂಡರೂ ಹಗ್ಗ ಕತ್ತರಿಸಲಾಗಿದೆ. ಕೊಲೆಯೊ ಅಥವಾ ಇಬ್ಬರೂ ಆತ್ಮಹತ್ಯೆಗೆ ಯತ್ನಿಸಿದಾಗ ನಡೆದ ಸಾವೊ ಎಂಬುದು ತನಿಖೆಯಿಂದ ತಿಳಿಯಬೇಕಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಾಯಿ ಸುರಭಿ ಚಿಕ್ಕಬಳ್ಳಾಪುರ ಮುದ್ದೇನಹಳ್ಳಿ ಮಧುಸೂದನ ಸಾಯಿ ವೈದ್ಯಕೀಯ ಕಾಲೇಜಿನಲ್ಲಿ ಈಚೆಗೆ ಕೆಲಸಕ್ಕೆ ಸೇರಿದ್ದರು.

‘ಕೇರಳಂನ ಕ್ಯಾಬ್ ಚಾಲಕ ಸಂಜೀತ್ ಅಲಿ ನನ್ನ ಮಗಳನ್ನು ಪ್ರೀತಿ ಹೆಸರಲ್ಲಿ ನಂಬಿಸಿದ್ದ. ಮಾದಕ ವಸ್ತುಗಳ ವ್ಯಸನಕ್ಕೂ ದೂಡಿದ್ದ. ಮಾನಸಿಕ ಕಿರುಕುಳ ನೀಡುತ್ತಿದ್ದ. ಈ ಹಿಂದೆ ಆತನ ವಿರುದ್ಧ ಬೆಂಗಳೂರಿನ ಬನಶಂಕರಿ ಠಾಣೆಯಲ್ಲಿ ದೂರು ಸಹ ನೀಡಿದ್ದೆವು. ಆರು ತಿಂಗಳ ಹಿಂದೆ ಮಗಳು ನಾಪತ್ತೆ ಆಗಿದ್ದಳು. ಆಗಲೂ ಪ್ರಕರಣ ದಾಖಲಿಸಿದ್ದೆವು’ ಎಂದು ಸುರಭಿ ತಾಯಿ ಗೀತಾ ಕಣ್ಣೀರು ಹಾಕಿದರು.

‘ಮಗಳಿಗೆ ಮಾದಕ ವಸ್ತು ವ್ಯಸನ ಮುಕ್ತ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಿದ್ದೆವು. ಈಚೆಗೆ ಮುದ್ದೇನಹಳ್ಳಿಯಲ್ಲಿ ಕೆಲಸಕ್ಕೆ ಸೇರಿದ್ದಳು. ಸಂಜೀತ್ ಅಲಿ ಮತ್ತೆ ಅಲ್ಲಿಗೂ ಹೋಗಿ ತಲೆ ಕೆಡಿಸಿದ್ದಾನೆ. ಇದೊಂದು ಲವ್ ಜಿಹಾದ್. ಅವನೇ ಹತ್ಯೆ ಮಾಡಿದ್ದಾನೆ’ ಎಂದು ಆರೋಪಿಸಿದರು.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ ಹಾಗೂ ನಂದಿಗಿರಿಧಾಮ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

ಖಾಲಿ ನಿವೇಶನ ಪಾರ್ಕಿಂಗ್‌ಗೆ ಬಳಸಿದರೆ 35 ವರ್ಷ ತೆರಿಗೆ ಇಲ್ಲ

ಹೊಸ ಪಾರ್ಕಿಂಗ್ ನೀತಿಯನ್ನು ಸಿದ್ಧಪಡಿಸುತ್ತಿರುವ ಜಿಬಿಎ

• ನವೀನ್ ಮಿನೇಜಸ್



ಬೆಂಗಳೂರು: ನಗರದಲ್ಲಿ ಖಾಲಿ ನಿವೇಶನಗಳನ್ನು ಹೊಂದಿರುವ ಮಾಲೀಕರು ಆ ಜಾಗವನ್ನು ಸಾರ್ವಜನಿಕ ಪಾರ್ಕಿಂಗ್ ಸ್ಥಳವಾಗಿ ಬದಲಾಯಿಸಿದರೆ ಅವರಿಗೆ 35 ವರ್ಷಗಳವರೆಗೆ ಆಸ್ತಿ ತೆರಿಗೆಯಲ್ಲಿ ವಿನಾಯಿತಿ ಸಿಗುವ ಸಾಧ್ಯತೆ ಇದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮತ್ತು ನಗರ ಸಂಚಾರ ಪೊಲೀಸರು ಜಂಟಿಯಾಗಿ ಹೊಸ ಪಾರ್ಕಿಂಗ್ ನೀತಿಯನ್ನು ಸಿದ್ಧಪಡಿಸುತ್ತಿದ್ದಾರೆ. ಖಾಸಗಿ ಸಹಭಾಗಿತ್ವದ ಮೂಲಕ ರಸ್ತೆ ಬದಿಯಲ್ಲದ ಪಾರ್ಕಿಂಗ್ ವ್ಯವಸ್ಥೆಯನ್ನು ಉತ್ತೇಜಿಸುವುದು ಹಾಗೂ ಅದೇ ಸಮಯದಲ್ಲಿ ರಸ್ತೆ ಬದಿಯ ಪಾರ್ಕಿಂಗ್ ಅನ್ನು ದುಬಾರಿ ಮತ್ತು ಕಟ್ಟುನಿಟ್ಟಾಗಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

ಸೋಮವಾರ ನಗರಾಭಿವೃದ್ಧಿ ಇಲಾಖೆಯು ಜಿಬಿಎ ಸೇರಿದಂತೆ ವಿವಿಧ ಸಂಸ್ಥೆಗಳ ಹಿರಿಯ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆ ನಡೆಸಿ, 'ಗ್ರೇಟರ್ ಬೆಂಗಳೂರು ಪ್ರದೇಶ ಪಾರ್ಕಿಂಗ್ ನಿಯಮಗಳು- 2026' ಅನ್ನು ಅಂತಿಮಗೊಳಿಸುವ ಕುರಿತು ಚರ್ಚಿಸಲಾಗಿದೆ. ಈ ನಿಯಮಗಳ ವಿವರಗಳನ್ನು ಪರಿಷ್ಕರಿಸಿದ ನಂತರ, ಸಾರ್ವಜನಿಕರಿಂದ ಸಲಹೆ-ಅಭಿಪ್ರಾಯಗಳನ್ನು ಆಹ್ವಾನಿಸಲು ಸರ್ಕಾರವು ಕರಡು ಅಧಿಸೂಚನೆಯನ್ನು ಹೊರಡಿಸಲು ಯೋಜಿಸಿದೆ.

'ನಿಯಮಗಳನ್ನು ಅಂತಿಮಗೊಳಿಸುವ ಮುನ್ನ ಇನ್ನೂ ಹಲವು ಸುತ್ತಿನ ಸಭೆಗಳು ನಡೆಯಲಿವೆ. ಎಲ್ಲ ಇಲಾಖೆಗಳೊಂದಿಗೆ ಸಭೆ ನಡೆಸಿದ್ದೇವೆ. ಕೆಲವು ನಿಯಮಗಳನ್ನು ಮತ್ತಷ್ಟು ಪರಿಷ್ಕರಿಸಲು ಸಲಹೆಗಳು ಬಂದಿವೆ' ಎಂದು ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಮಾಹಿತಿ ನೀಡಿದರು.

ಕರಡು ಪಾರ್ಕಿಂಗ್ ನಿಯಮಗಳ ಪ್ರಕಾರ, ಖಾಲಿ ನಿವೇಶನಗಳನ್ನು ಹಾಗೇ ಬಿಡುವ ಬದಲು ಸಾರ್ವಜನಿಕ ಪಾರ್ಕಿಂಗ್‌ಗೆ ಬಳಸುವಂತೆ ಖಾಸಗಿ ಭೂಮಾಲೀಕರನ್ನು ಉತ್ತೇಜಿಸಲು ಜಿಬಿಎ ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ಪ್ರಸ್ತಾಪಿಸುತ್ತಿದೆ. ಪಾರ್ಕಿಂಗ್ ಜಾಗ ಎಷ್ಟು ವಿಶಾಲವಾಗಿರುತ್ತದೆಯೋ, ಅಷ್ಟು ದೀರ್ಘಾವಧಿಯ ತೆರಿಗೆ ವಿನಾಯಿತಿ ಸಿಗಲಿದೆ.

ಜಮೀನನ್ನು ವಾಣಿಜ್ಯ ಉದ್ದೇಶಗಳಿಗಾಗಿ ಬಳಸಿಕೊಂಡರೆ ಮಾಲೀಕರಿಗೆ ಹೆಚ್ಚಿನ ಲಾಭ ಸಿಗುತ್ತದೆ ಎಂಬ ಕಾರಣಕ್ಕೆ, ಈ ತೆರಿಗೆ ವಿನಾಯಿತಿಯ ಕಲ್ಪನೆಯನ್ನು ಪ್ರಸ್ತಾಪಿಸಲಾಗಿದೆ. ಆದರೆ, ಮಾಲೀಕರು ವಿಧಿಸಬಹುದಾದ ಪಾರ್ಕಿಂಗ್ ಶುಲ್ಕದ ದರವನ್ನು ಈ ನೀತಿಯಲ್ಲಿ ನಿಗದಿಪಡಿಸಿಲ್ಲ. ವಿನಾಯಿತಿ ಅವಧಿ ಮುಗಿದ ನಂತರ, ಮಾಲೀಕರು ಕೇವಲ ಸೇವಾ ಶುಲ್ಕವನ್ನು ಪಾವತಿಸಬೇಕಾಗುತ್ತದೆ ಎಂದು ಕರಡುವಿನಲ್ಲಿ ಇದೆ.

ಪಾರ್ಕಿಂಗ್ ಸೌಲಭ್ಯವು ವರ್ಷಕ್ಕೆ ಕನಿಷ್ಠ 250 ದಿನಗಳು ಮತ್ತು ದಿನಕ್ಕೆ ಕನಿಷ್ಠ 12 ಗಂಟೆ ಇರಬೇಕು, ಕನಿಷ್ಠ ಪಾರ್ಕಿಂಗ್ ಸಾಮರ್ಥ್ಯವನ್ನು ಕಾಯ್ದುಕೊಳ್ಳಬೇಕು, ಪಾರ್ಕಿಂಗ್‌ನ ನೈಜ-ಸಮಯದ ಡೇಟಾವನ್ನು ಜಿಬಿಎಯೊಂದಿಗೆ ಹಂಚಿಕೊಳ್ಳಬೇಕು. ಇದನ್ನು ಪ್ರತ್ಯೇಕವಾಗಿ ಸಾರ್ವಜನಿಕ ಪಾರ್ಕಿಂಗ್‌ಗಾಗಿಯೇ ಬಳಸಬೇಕು.

ಪ್ರಸ್ತಾಪಿತ ತೆರಿಗೆ ವಿನಾಯಿತಿ ವಿವರ

200 ಪ್ರಯಾಣಿಕ ಕಾರ್ ಯೂನಿಟ್ (ಪಿಸಿಯು)	35 ವರ್ಷ
ಬಹುಮಹಡಿ ಪಾರ್ಕಿಂಗ್ ರಚನೆಯ 200 ಪಿಸಿಯು	25 ವರ್ಷ
200 ಪಿಸಿಯುಗಿಂತ ಕಡಿಮೆ ಸಾಮರ್ಥ್ಯ	15 ವರ್ಷ



'ಕನಿಷ್ಠ ಪಾರ್ಕಿಂಗ್ ಶುಲ್ಕ ನೀತಿ'

ಇತರ ಪ್ರಮುಖ ಪ್ರಸ್ತಾಪಗಳ ಪೈಕಿ, ಸೈಕಲ್‌ಗಳು ಮತ್ತು ನಿಗದಿತ ಆಟೊರಿಕ್ಷಾ ನಿಲ್ದಾಣಗಳನ್ನು ಹೊರತುಪಡಿಸಿ, ನಗರದಾದ್ಯಂತ ಉಚಿತ ಸಾರ್ವಜನಿಕ ಪಾರ್ಕಿಂಗ್ ಅನ್ನು ಕೊನೆಗೊಳಿಸಲು ಮತ್ತು ರಸ್ತೆಯ ವರ್ಗೀಕರಣದ ಆಧಾರದ ಮೇಲೆ ಕನಿಷ್ಠ ಪಾರ್ಕಿಂಗ್ ಶುಲ್ಕವನ್ನು ಪರಿಚಯಿಸಲು ಈ ನೀತಿಯು ಪ್ರಸ್ತಾಪಿಸಿದೆ.

ಅತ್ಯಂತ ಜನನಿಬಿಡ ಎ-ವರ್ಗದ ರಸ್ತೆಗಳಲ್ಲಿ, ಕಾರುಗಳ ರಸ್ತೆ ಬದಿಯ ಪಾರ್ಕಿಂಗ್‌ಗೆ ಗಂಟೆಗೆ ಕನಿಷ್ಠ ₹80 ಪಾವತಿಸಬೇಕಾಗುತ್ತದೆ. ವಸತಿ ಪ್ರದೇಶದ ರಸ್ತೆಗಳಲ್ಲಿ ನಿಲುಗಡೆ ಮಾಡುವ ವಾಹನಗಳಿಗಾಗಿ ನಿವಾಸಿಗಳು ಪಾರ್ಕಿಂಗ್ ಪರ್ಮಿಟ್‌ಗಳನ್ನು ಖರೀದಿಸಬೇಕಾಗಬಹುದು. ವಾರ್ಷಿಕ ಪರ್ಮಿಟ್ ಶುಲ್ಕವನ್ನು ಹ್ಯಾಚ್‌ಬ್ಯಾಕ್‌ಗಳಿಗೆ ₹15,000, ಸೆಡಾನ್‌ಗಳಿಗೆ ₹20,000 ಮತ್ತು ಎಸ್‌ಯುವಿಗಳಿಗೆ ₹25,000 ಎಂದು ಪ್ರಸ್ತಾಪಿಸಲಾಗಿದೆ. ಜೊತೆಗೆ ಸಂದರ್ಶಕರ ಪಾರ್ಕಿಂಗ್‌ಗೂ ಇನ್ಮುಂದೆ ಶುಲ್ಕ ಭರಿಸಬೇಕಾಗುತ್ತದೆ.

ಶೇ 76.32ರಷ್ಟು ಮ್ಯಾಪಿಂಗ್ ಪೂರ್ಣ

ಮನೆಮನೆಗೆ ಭೇಟಿ ನೀಡಲಿರುವ ಬಿಎಲ್‌ಒಗಳು: ಸಹಕರಿಸಲು ರಾವ್ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಶೇ 76.32ರಷ್ಟು ಮ್ಯಾಪಿಂಗ್ ಕಾರ್ಯ ಪೂರ್ಣಗೊಂಡಿದೆ. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಸಮೀಕ್ಷೆಯಿಂದ ಯಾವುದೇ ಮನೆ ಹೊರಗುಳಿಯದಂತೆ ಕ್ರಮ ಕೈಗೊಳ್ಳಲಾಗುವುದು' ಎಂದು ಬೆಂಗಳೂರು ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜೂನ್ 30ರಿಂದ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ-ಮನೆಗೆ ಭೇಟಿ ನೀಡಿ ಗಣತಿ ನಮೂನೆಗಳನ್ನು ವಿತರಿಸಲಿದ್ದಾರೆ. ಭೇಟಿ ಸಂದರ್ಭದಲ್ಲಿ ನಿವಾಸಿಗಳು ಲಭ್ಯವಿಲ್ಲದಿದ್ದರೆ ಬಿಎಲ್‌ಒಗಳು ಮತ್ತೆರಡು ಬಾರಿ ಭೇಟಿ ನೀಡಲಿದ್ದಾರೆ' ಎಂದು ತಿಳಿಸಿದರು.

ಎಸ್‌ಐಆರ್ ಪೂರ್ವಭಾವಿ ಚಟುವಟಿಕೆಯಾಗಿ 2002ರ ಮತದಾರರ ಪಟ್ಟಿಯನ್ನು 2025ರ ಮತದಾರರ ಪಟ್ಟಿಯೊಂದಿಗೆ ಮ್ಯಾಪಿಂಗ್ ಮಾಡಲಾಗುತ್ತಿದೆ. ಮ್ಯಾಪಿಂಗ್ ಆಗದೇ ಉಳಿದ ಮತದಾರರ ಮ್ಯಾಪಿಂಗ್ ಶೀಘ್ರ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.

ಬೆಳಿಗ್ಗೆ ವಿತರಣೆ, ಸಂಜೆ ಸಂಗ್ರಹ: ಬಿಎಲ್‌ಒಗಳು ಬೆಳಿಗ್ಗೆ ಮನೆಗಳಿಗೆ ಭೇಟಿ ನೀಡಿ ಗಣತಿ ನಮೂನೆಗಳನ್ನು ವಿತರಿಸಲಿದ್ದಾರೆ. ಸಂಜೆ ವೇಳೆಗೆ ಭರ್ತಿ ಮಾಡಿದ ನಮೂನೆಗಳನ್ನು ಸಂಗ್ರಹಿಸಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ವ್ಯವಸ್ಥೆ ಮಾಡಲಾಗಿದೆ. ಮತದಾರರು ಭಾವಚಿತ್ರ ಬದಲಿಸುವ ಅಗತ್ಯವಿದ್ದಲ್ಲಿ ತಮ್ಮ ಇತ್ತೀಚಿನ ಛಾಯಾಚಿತ್ರವನ್ನು ಸಹ ಭರ್ತಿ ಮಾಡಿದ ನಮೂನೆಗಳೊಂದಿಗೆ ಸಲ್ಲಿಸಬೇಕು. ಗಣತಿ ನಮೂನೆಗಳನ್ನು 'ವೋಟರ್ ಕಲೆಕ್ಷನ್ ಸೆಂಟರ್'ಗಳಲ್ಲಿ ಹಾಗೂ ರಜಾದಿನಗಳಲ್ಲಿ ಮತಗಟ್ಟೆಗಳಲ್ಲಿ ಸಲ್ಲಿಸಬಹುದು ಎಂದರು.

ಗಣತಿ ನಮೂನೆ ಭರ್ತಿ ಮಾಡುವ ವೇಳೆ ಅಥವಾ ಮತದಾರರ ನೋಂದಣಿಗೆ ಸಂಬಂಧಿಸಿದ ಗೊಂದಲಗಳಿದ್ದಲ್ಲಿ ಮಾರ್ಗದರ್ಶನ ನೀಡಲು ಮತದಾರರ ನೋಂದಣಾಧಿಕಾರಿಗಳು ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ 2,855 ಮತದಾರರ ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಜೊತೆಗೆ ವಾರ್ಡ್ ಕಚೇರಿಗಳಲ್ಲಿ ಬಿಎಲ್‌ಒಗಳಿಗೆ ನೆರವಾಗಲು 902 ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ವಿವರ ನೀಡಿದರು.


ಮಾಹಿತಿಗಾಗಿ https://ceo.karnataka.gov.in/vfc/details ಸಂಪರ್ಕಿಸಬಹುದು.

ಅಂಕಿ ಅಂಶಗಳು

1,03,88,363 ಒಟ್ಟು ಮತದಾರರು

79,27,902 ಮ್ಯಾಪಿಂಗ್ ಆಗಿರುವ ಮತದಾರರು

24,60,461 ಮ್ಯಾಪಿಂಗ್ ಬಾಕಿ ಇರುವ ಮತದಾರರು



ಎಸ್‌ಐಆರ್ ವೇಳಾಪಟ್ಟಿ

ಜೂನ್ 30ರಿಂದ ಜುಲೈ 29	ಮನೆ-ಮನೆಗೆ ಭೇಟಿ
ಜುಲೈ 29	ಮತಗಟ್ಟೆಗಳ ಮರುಹೊಂದಾಣಿಕೆ
ಆಗಸ್ಟ್ 5	ಕರಡು ಮತದಾರರ ಪಟ್ಟಿ ಪ್ರಕಟಣೆ
ಆಗಸ್ಟ್ 5ರಿಂದ ಸೆಪ್ಟೆಂಬರ್ 4	ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಕೆ
ಆಗಸ್ಟ್ 5ರಿಂದ ಅಕ್ಟೋಬರ್ 3	ಹಕ್ಕು, ಆಕ್ಷೇಪಣೆಗಳ ವಿಚಾರಣೆ, ವಿಲೇವಾರಿ
ಅಕ್ಟೋಬರ್ 7	ಅಂತಿಮ ಮತದಾರರ ಪಟ್ಟಿ ಪ್ರಕಟಣೆ

16,505 ಸಿಬ್ಬಂದಿ

ಜಿಲ್ಲೆಯಲ್ಲಿ 28 ಮತದಾರರ ನೋಂದಣಾಧಿಕಾರಿಗಳು, 75 ಸಹಾಯಕ ಮತದಾರರ ನೋಂದಣಾಧಿಕಾರಿಗಳು, 905 ಬಿಎಲ್‌ಒ ಮೇಲ್ವಿಚಾರಕರು ಹಾಗೂ 8,972 ಬಿಎಲ್‌ಒಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ತರಬೇತಿ ನೀಡಲಾಗಿದೆ. ಮಾನ್ಯತೆ ಪಡೆದ ಪಕ್ಷಗಳಿಂದ 16,505 ಬಿಎಲ್‌ಎ-2 ಗಳನ್ನು ನೇಮಕ ಮಾಡಿ, ಮಾಹಿತಿಯನ್ನು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಮತದಾರರ ನೋಂದಣಾಧಿಕಾರಿಗೆ ಸಲ್ಲಿಸಲಾಗಿದೆ ಎಂದು ಮಹೇಶ್ವರ ರಾವ್ ತಿಳಿಸಿದರು.

ಸಹಾಯವಾಣಿ ಸ್ಥಾಪನೆ

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಜನರ ಅಹವಾಲು ಆಲಿಸಲು ಬೆಂಗಳೂರು ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಹಾಯವಾಣಿ ಕೇಂದ್ರವನ್ನು ತೆರೆಯಲಾಗಿದೆ.

ಯಲಹಂಕ, ಬ್ಯಾಟರಾಯನಪುರ, ಯಶವಂತಪುರ, ದಾಸರಹಳ್ಳಿ, ಮಹದೇವಪುರ, ಬೆಂಗಳೂರು ದಕ್ಷಿಣ ಮತ್ತು ಆನೇಕಲ್ ಕ್ಷೇತ್ರಗಳಿಗೆ ಸಂಬಂಧಿಸಿ, ಸಾರ್ವಜನಿಕರು ದೂರವಾಣಿ ಸಂಖ್ಯೆ 080-22967200ಕ್ಕೆ ಕರೆ ಮಾಡಬಹುದು ಎಂದು ಜಿಲ್ಲಾಧಿಕಾರಿ ಕಾಂತರಾಜು ಪಿ.ಎಸ್ ತಿಳಿಸಿದ್ದಾರೆ.

ಇ-ಮೇಲ್ adeobangaloreurban@gmail.com ಮೂಲಕ, ಕಚೇರಿಯ ಸಾಮಾಜಿಕ ಮಾಧ್ಯಮ/ಜಾಲತಾಣಗಳಾದ ಫೇಸ್ ಬುಕ್ -Deputy Commissioner, Bengaluru Urban, ಇನ್ ಸ್ಟಾಗ್ರಾಮ್- dc_bangalore_urban, ಟ್ವಿಟರ್- DC_blrurban ಮೂಲಕ ಅವಹಾಲು ಸಲ್ಲಿಸಬಹುದು ಎಂದಿದ್ದಾರೆ.

ಪಕ್ಷದ ಪ್ರತಿನಿಧಿಗಳೊಂದಿಗೆ ಸಭೆ



ಮಹೇಶ್ವರ ರಾವ್

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ ಬಗ್ಗೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ರಜಾದಿನ ಹಾಗೂ ಸಂಜೆ ವೇಳೆಯಲ್ಲಿಯೂ ಬಿಎಲ್‌ಒಗಳ ಮೂಲಕ ಕಾರ್ಯ ನಿರ್ವಹಿಸುವುದು, ಮತದಾರರ ಗುರುತಿನ ಚೀಟಿ ವಿತರಣೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಯಿತು. ವಿಶೇಷ ಆಯುಕ್ತೆ ಸುಷಮಾ ಗೋಡಬೋಲೆ, ಆಯುಕ್ತರಾದ ಪೊಮ್ಮಲ ಸುನೀಲ್ ಕುಮಾರ್, ಜಿ. ಜಗದೀಶ್, ರಮೇಶ್ ಕೆ.ಎನ್., ರಾಜೇಂದ್ರ ಕೆ.ವಿ, ಬೆಂಗಳೂರು ಜಿಲ್ಲಾಧಿಕಾರಿ ಕಾಂತರಾಜು, ಜಂಟಿ ಆಯುಕ್ತೆ ಪಲ್ಲವಿ, ಸಹಾಯಕ ಆಯುಕ್ತ ಶ್ರೀನಿವಾಸ್ ಉಪಸ್ಥಿತರಿದ್ದರು.

ಟ್ರಂಪ್ ಅಧಿಕಾರಕ್ಕೆ ಮತ್ತಷ್ಟು ಶಕ್ತಿ ತುಂಬಿದ 'ಸುಪ್ರೀಂ' ತೀರ್ಪು

ವಾಷಿಂಗ್ಟನ್ (ಎಎಫ್‌ಪಿ): ಅಮೆರಿಕ ಸರ್ಕಾರದ ಸ್ವಾಯತ್ತ ಸಂಸ್ಥೆಗಳ ಸದಸ್ಯರನ್ನು ವಜಾಗೊಳಿಸಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಅಧಿಕಾರ ಇದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ತೀರ್ಪು ನೀಡಿದೆ. ಆದರೆ, ಫೆಡರಲ್ ರಿಸರ್ವ್‌ನ ಗವರ್ನರ್ ಲೀಸಾ ಕುಕ್ ಅವರನ್ನು ಕೆಲಸದಿಂದ ತೆಗೆಯಲು ನ್ಯಾಯಾಲಯ ತಡೆ ನೀಡಿದೆ.

ಡೆಮಾಕ್ರಟಿಕ್ ಫೆಡೆರಲ್ ಟ್ರೇಡ್ ಕಮಿಷನರ್ ರೆಬೆಕಾ ಸ್ಲಾಟರ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ. 'ಅಧೀನ ಅಧಿಕಾರಿಗಳನ್ನು ಕೆಲಸದಿಂದ ತೆಗೆದು ಹಾಕುವುದು ಅಧ್ಯಕ್ಷರ ಅಧಿಕಾರ' ಎಂದು ಕೋರ್ಟ್ ಹೇಳಿದೆ.

ಟ್ರಂಪ್ ಅವರಿಗೆ ಈ ತೀರ್ಪು ದೊಡ್ಡ ಶಕ್ತಿ ನೀಡಲಿದೆ ಎಂದು ವಿಶ್ಲೇಷಿಸಲಾಗಿದೆ. ತಮ್ಮ ಮಿತ್ರರನ್ನು ಆಡಳಿತದ ಒಳಗೆ ಸೇರಿಸಿ, ಸರ್ಕಾರವನ್ನು ಸಂಪೂರ್ಣವಾಗಿ ಬದಲಾಯಿಸುವ ಟ್ರಂಪ್ ಅವರ ಉದ್ದೇಶಕ್ಕೆ ಈ ತೀರ್ಪು ಇಂಬು ನೀಡಲಿದೆ ಎನ್ನಲಾಗುತ್ತಿದೆ. 'ಅತ್ಯಂತ ಅಗತ್ಯವಾದ ಸಮಯದಲ್ಲಿಯೇ ಈ ತೀರ್ಪು ಪ್ರಕಟವಾಗಿದೆ' ಎಂದು ಟ್ರಂಪ್ ಅವರು ಪೋಸ್ಟ್ ಹಂಚಿಕೊಂಡಿದ್ದಾರೆ.


ಇಲ್ಲಿದೆ ನೋಡಿ ಕಸ...

DH DECCAN HERALD
ಪ್ರಜಾವಾಣಿ
ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ

- ಕರೀಗೌಡ-ಸಿಇಒ- 77605 04651
- ರಮಾಮಣಿ-ಸಿಒಒ- 94481 97256
- ರಾಜೇಶ್-ಸಿಜಿಎಂ- 948068 84046
- ರಾಘವೇಂದ್ರ ಪ್ರಸಾದ್ -ಸಿಜಿಎಂ-91102 89696

ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಕಳುಹಿಸಿಕೊಡಿ ಮತ್ತು ಆ ಮಾಹಿತಿಯನ್ನು ನಿಮ್ಮ ಹೆಸರು ಹಾಗೂ ವಿಳಾಸದೊಂದಿಗೆ 'ಪ್ರಜಾವಾಣಿ'ಗೂ ಕಳುಹಿಸಿಕೊಡಿ. ಕಸ ತೆರವು ಮಾಡಿದ ಮೇಲೆ ಅದರ ಚಿತ್ರ ಮಾಹಿತಿಯನ್ನೂ ಕಳುಹಿಸಿ. ಅದನ್ನೂ ಪ್ರಕಟಿಸಲಾಗುತ್ತದೆ.



ಕೆ.ಆರ್.ಪುರದ ಕಲ್ಕೆರೆಯ ಎನ್‌ಆರ್‌ಐ ಬಡಾವಣೆ 1ನೇ ಹಂತದಲ್ಲಿನ ಕಸ –ಜಿ.ಎನ್.ಶ್ರೀನಿವಾಸಗೌಡ




ನಾಗಸಂದ್ರ ಮೆಟ್ರೊ ನಿಲ್ದಾಣದಿಂದ ಹಾವನೂರ ಬಡಾವಣೆಗೆ ಹೋಗುವ ಪೂರ್ಣಪ್ರಜ್ಞ ಶಾಲೆ ರಸ್ತೆಯಲ್ಲಿ ಬಿದ್ದ ಕಸದ ರಾಶಿ –ಶಂತನು ಎಸ್.ಎಚ್



ಟೆಲಿಕಾಮ್ ಬಡಾವಣೆ 7ನೇ ಕ್ರಾಸ್ ಉದ್ಯಾನದ ಬದಿಯಲ್ಲಿ ಕಸದ ರಾಶಿ –ಟಿ.ಚಂದ್ರಶೇಖರ್



ಲಗ್ಗೆರೆ ಮುಖ್ಯ ರಸ್ತೆಯಲ್ಲಿರುವ 'ಬಿ ಬೆಸ್ಟ್ ಶಾಲೆ' ಸಮೀಪ ಸುರಿಯಲಾಗಿರುವ ಕಸ –ಕುಸುಮಾ ಗೌಡ



ಕೆ.ಆರ್.ಪುರದ ಲಕ್ಷ್ಮಿ ವೆಂಕಟೇಶ್ವರ ಚಿತ್ರಮಂದಿರದಿಂದ ನೇತ್ರಾವತಿ ಬಡಾವಣೆ ರಸ್ತೆಯ ಇಕ್ಕೆಲದಲ್ಲಿ ಬಿದ್ದಿರುವ ತ್ಯಾಜ್ಯದ ರಾಶಿ – ಗೌರಮ್ಮ



ಚಿಕ್ಕಲ್ಲಸಂದ್ರ ಮುಖ್ಯರಸ್ತೆಯಲ್ಲಿ ಬಿದ್ದಿರುವ ತ್ಯಾಜ್ಯ –ಎನ್.ವಿ.ರಮೇಶ್

ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ

ನಂ.6, "ಲಕ್ಷ್ಮೀ ಸದನ" 5ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು–18.

ದಿನಾಂಕ:31.03.2026 ರಲ್ಲಿದ್ದಂತೆ ಆಸ್ತಿ–ಜವಾಬ್ದಾರಿ ತಃಖ್ತೆ

ರೂ. ಗಳಲ್ಲಿ

ಕ್ರಮ ಸಂಖ್ಯೆ	ವಿವರಗಳು	31.03.2026ಕ್ಕೆ	31.03.2025ಕ್ಕೆ
	ಬಂಡವಾಳ ಮತ್ತು ಜವಾಬ್ದಾರಿಗಳು		
I)	ಷೇರು ಬಂಡವಾಳ	131,83,20,628.24	75,63,60,216.00
II)	ಆಪದ್ಧನ ಮತ್ತು ಇತರೆ ನಿಧಿಗಳು	125,66,18,490.62	87,40,40,912.63
III)	ಠೇವಣಿಗಳು	1452,48,14,199.04	1133,59,62,199.09
IV)	ಹೊರಗಿನಿಂದ ತಂದ ಸಾಲಗಳು	1335,49,82,518.00	953,27,76,124.00
V)	ಇತರೆ ಜವಾಬ್ದಾರಿಗಳು ಮತ್ತು ಅವಕಾಶಗಳು	135,44,40,832.31	130,92,07,700.76
VI)	ನಿವ್ವಳ ಲಾಭ	712,40,631.10	12,30,38,074.45
	ಒಟ್ಟು ಜವಾಬ್ದಾರಿಗಳು	**3188,04,17,299.31**	**2393,13,85,226.93**
	ಆಸ್ತಿ ಮತ್ತು ಸ್ವತ್ತುಗಳು		
I)	ನಗದು ಶಿಲ್ಕು	51,35,66,456.00	31,75,48,976.00
II)	ಬ್ಯಾಂಕುಗಳ ಶಿಲ್ಕುಗಳು ಮತ್ತು ಕಾಲ್‌ಮನಿ	70,66,19,743.96	22,96,58,192.05
III)	ಹೂಡಿಕೆಗಳು	479,04,28,644.00	382,94,18,644.00
IV)	ಸಾಲ ಮತ್ತು ಮುಂಗಡಗಳು	2420,50,24,460.81	1818,04,70,510.02
V)	ನಿಗಧಿ ಆಸ್ತಿಗಳು	75,81,66,822.86	43,43,72,297.83
VI)	ಇತರೆ ಆಸ್ತಿಗಳು	90,66,11,171.68	93,99,16,607.03
	ಒಟ್ಟು ಆಸ್ತಿಗಳು	**3188,04,17,299.31**	**2393,13,85,226.93**
	ಅನಿಶ್ಚಿತ ಹೊಣೆಗಾರಿಕೆ	**4,80,75,542.68**	**12,23,68,280.68**
	ಸಂಗ್ರಹಣ ಬಿಲ್ಲುಗಳು	–	-

31.03.2026 ರ ವರ್ಷಾಂತ್ಯಕ್ಕೆ ಲಾಭ ಮತ್ತು ನಷ್ಟ ತಃಖ್ತೆ

(ರೂ. ಗಳಲ್ಲಿ)

ಕ್ರ.ಸಂ.	ವಿವರಗಳು	31.03.2026ಕ್ಕೆ	31.03.2025ಕ್ಕೆ
I	**ಆದಾಯ**		
ಅ	ಸಾಲಗಳು ಮತ್ತು ಮುಂಗಡಗಳ ಮೇಲೆ ಮತ್ತು ಹೂಡಿಕೆಗಳ ಮೇಲೆ ಬಂದ ಬಡ್ಡಿ	215,26,32,072.84	165,41,00,436.80
ಆ	ಇತರೆ ಆದಾಯಗಳು	551,97,100.10	429,09,426.25
	ಒಟ್ಟು ಆದಾಯ	**220,78,29,172.94**	**169,70,09,863.05**
II	**ವೆಚ್ಚ**		
ಅ	ಠೇವಣಿಗಳು ಮತ್ತು ತಂದ ಸಾಲಗಳ ಮೇಲೆ ಬಡ್ಡಿ ಪಾವತಿಸಿದ್ದು	150,32,33,141.70	107,84,58,957.33
ಆ	**ಕಾರ್ಯಚರಣೆ ವೆಚ್ಚಗಳು**	57,10,27,370.14	42,75,87,831.27
ಇ	**ಅವಕಾಶಗಳು ಮತ್ತು ಆಕಸ್ಮಿಕ ವೆಚ್ಚಗಳು**	623,28,030.00	679,25,000.00
	ಒಟ್ಟು ವೆಚ್ಚ	**213,65,88,541.84**	**157,39,71,788.60**
III	**ಆದಾಯ ಮತ್ತು ನಷ್ಟ**		
ಅ	ನಿವ್ವಳ ಲಾಭ	712,40,631.10	12,30,38,074.45
IV	**ಲಾಭಾಂಶ ವಿಲೇವಾರಿ**		
ಅ	**ಮೀಸಲು ನಿಧಿಗೆ**	356,20,316.00	615,19,037.00
ಆ	**ಸಹಕಾರ ಶಿಕ್ಷಣ ನಿಧಿಗೆ**	7,12,406.00	12,30,381.00
ಇ	**ಕೃಷಿ ಸಾಲ ಸ್ಥಿರೀಕರಣ ನಿಧಿ**	52,36,186.00	90,43,298.00
ಈ	**ವಸೂಲಾಗದ ಮತ್ತು ಸಂದೇಹಾಸ್ಪದ ನಿಧಿ**	44,50,758.00	76,86,804.00
ಉ	**ಹೂಡಿಕೆ ಸಮತೋಲನ ನಿಧಿ**	5,04,419.00	8,71,171.00
ಊ	**ಕಟ್ಟಡ ನಿಧಿಗೆ**	37,07,482.00	64,03,107.00
ಋ	**ಬ್ಯಾಂಕಿನ ಸದಸ್ಯರ ವಿಶೇಷ ಸಹಾಯ ನಿಧಿಗೆ**	31,51,360.00	54,42,641.00
ಎ	**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಅಭಿವೃದ್ಧಿ ನಿಧಿ**	17,85,770.00	30,84,163.00
ಏ	**ಲಾಭಾಂಶ ಸಮತೋಲನ ನಿಧಿ**	3,21,439.00	5,55,149.00
ಐ	**ರೈತ ಕ್ಷೇಮ ನಿಧಿಗೆ**	15,75,050.00	27,20,232.00
ಒ	**ನೌಕರರ ಕ್ಷೇಮ ನಿಧಿ ಮತ್ತು ಮರಣ ಪರಿಹಾರ ನಿಧಿಗೆ**	21,26,317.00	36,72,313.00
ಓ	**ಧರ್ಮದ ನಿಧಿಗೆ**	6,02,456.00	10,40,489.00
ಔ	**ನಿವೃತ ನೌಕರರ ಪಿಂಚಣಿ ನಿಧಿಗೆ**	5,72,334.00	9,88,464.00
ಅಂ	**ಉಳಿದ ಲಾಭಾಂಶ**	108,74,338.10	187,80,825.45
	ಒಟ್ಟು ಆದಾಯ	**712,40,631.10**	**12,30,38,074.45**

ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಬೆಂಗಳೂರು–18
ದಿನಾಂಕ:31.03.2026 ರಲ್ಲಿದ್ದಂತೆ ಬ್ಯಾಂಕಿನ ಆಸ್ತಿ ಜವಾಬ್ದಾರಿ ತಃಖ್ತೆಗೆ "ಲೆಕ್ಕಗಳ ಮೇಲಿನ ಟಿಪ್ಪಣಿ"

ಕ್ರ.ಸಂ.	ವಿವರಗಳು	31.03.2026 (ಲಕ್ಷಗಳಲ್ಲಿ)	31.03.2025 (ಲಕ್ಷಗಳಲ್ಲಿ)
1.	**ಹೂಡಿಕೆಗಳು (ಎಸ್.ಎಲ್.ಆರ್)**	**24462.90**	**20078.80**
ಎ)	ಶಾಶ್ವತ ಪ್ರವರ್ಗ ಕೇಂದ್ರ ಸರ್ಕಾರದ ಸೆಕ್ಯೂರಿಟಿಗಳಲ್ಲಿ	0.00	0.00
ಬಿ)	ಶಾಶ್ವತ ಪ್ರವರ್ಗ ರಾಜ್ಯ ಸರ್ಕಾರದ ಸೆಕ್ಯೂರಿಟಿಗಳಲ್ಲಿ	24462.90	20078.80
2.	**ಹೂಡಿಕೆಗಳು (ನಾನ್–ಎಸ್.ಎಲ್.ಆರ್)**	**23441.39**	18125.39
	ಚಾಲ್ತಿ ಪ್ರವರ್ಗ : ನಿಗಧಿ ಠೇವಣಿಗಳಲ್ಲಿ		
ಎ)	ಕೆ.ಎಸ್.ಸಿ. ಅಪೆಕ್ಸ್ ಬ್ಯಾಂಕ್ ನಿಗಧಿ ಠೇವಣಿಗಳಲ್ಲಿ	16213.93	13262.93
ಬಿ)	ಕೆ.ಎಸ್.ಸಿ. ಅಪೆಕ್ಸ್ ಬ್ಯಾಂಕ್ ಮೀಸಲು ನಿಗಧಿ ಠೇವಣಿಗಳಲ್ಲಿ	2754.58	1854.58
ಸಿ)	ಕೆ.ಎಸ್.ಸಿ. ಅಪೆಕ್ಸ್ ಬ್ಯಾಂಕ್ ಕೃಷಿ ಸಾಲ ಸ್ಥಿರೀಕರಣ ನಿಧಿ ನಿಗಧಿ ಠೇವಣಿಗಳಲ್ಲಿ	819.88	644.88
	ಚಾಲ್ತಿ ಪ್ರವರ್ಗ : ಷೇರುಗಳಲ್ಲಿ		
ಎ)	ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್	3648.00	2448.00
ಬಿ)	ಇಫ್ಕೋ	5.00	5.00
3	**ನಿರ್ದೇಶಕರುಗಳಿಗೆ, ಅವರ ಸಂಬಂಧಿಕರಿಗೆ ಅವರುಗಳು ಆಸಕ್ತಿ ಹೊಂದಿರುವ ಕಂಪನಿಗಳಿಗೆ/ಸಂಸ್ಥೆಗಳಿಗೆ ನೀಡಿದ ಮುಂಗಡಗಳು**		
	ಎ) ಫಂಡ್ ಆಧಾರಿತ	57.20	113.16
	ಬಿ) ನಾನ್ ಫಂಡ್ ಆಧಾರಿತ	ಇರುವುದಿಲ್ಲ	ಇರುವುದಿಲ್ಲ
4.	**ಠೇವಣಿಗಳ ವೆಚ್ಚ: ಠೇವಣಿಗಳ ಸರಾಸರಿ ವೆಚ್ಚ ಶೇಕಡ ಪ್ರಮಾಣ**	**5.53%**	**5.50%**
5.	**ಅನುತ್ಪಾದಕ ಆಸ್ತಿಗಳು:**		
ಎ)	ಒಟ್ಟು ಅನುತ್ಪಾದಕ ಆಸ್ತಿಗಳು	4906.39	4965.22
ಬಿ)	ನಿವ್ವಳ ಅನುತ್ಪಾದಕ ಆಸ್ತಿಗಳು	1484.83	1518.30
ಸಿ)	ಒಟ್ಟು ಸಾಲಗಳ ಮೇಲೆ ಒಟ್ಟು ಅನುತ್ಪಾದಕ ಆಸ್ತಿಗಳ ಶೇಕಡ ಪ್ರಮಾಣ	2.03%	2.73%
ಡಿ)	ನಿವ್ವಳ ಸಾಲದ ಮೇಲೆ ನಿವ್ವಳ ಅನುತ್ಪಾದಕ ಆಸ್ತಿಗಳ ಶೇಕಡ ಪ್ರಮಾಣ	0.62%	0.85%
6.	**ಅನುತ್ಪಾದಕ ಆಸ್ತಿಗಳ ಏರಿಳಿತ (% ಗ್ರಾಸ್)**	–2.20%	–1.83%
7.	**ಲಾಭದಾಯಕತೆ**		
ಎ)	ದುಡಿಯುವ ನಿಧಿಗೆ ಬಡ್ಡಿ ಆದಾಯದ ಶೇಕಡ ಪ್ರಮಾಣ	8.06%	7.10%
ಬಿ)	ದುಡಿಯುವ ನಿಧಿಗೆ ಬಡ್ಡಿಯೇತರ ಆದಾಯ ಶೇಕಡ ಪ್ರಮಾಣ	0.20%	0.21%

ಕ್ರ.ಸಂ.	ವಿವರಗಳು	31.03.2026 (ಲಕ್ಷಗಳಲ್ಲಿ)	31.03.2025 (ಲಕ್ಷಗಳಲ್ಲಿ)
ಸಿ)	ದುಡಿಯುವ ನಿಧಿಗೆ ವ್ಯವಹಾರದ ಲಾಭದ ಶೇಕಡ ಪ್ರಮಾಣ	0.26%	0.94%
ಡಿ)	ಆಸ್ತಿಗಳ ಮೇಲಿನ ಆದಾಯ	0.26%	0.62%
ಇ)	ಪ್ರತಿ ನೌಕರನ ವಹಿವಾಟು (ಠೇವಣಿಗಳು ಮತ್ತು ಮುಂಗಡಗಳು)	1225.63	913.80
ಎಫ್)	ದುಡಿಯುವ ನಿಧಿಗೆ ಸಿಬ್ಬಂದಿ ವೆಚ್ಚ	1.43%	1.58%
ಜಿ)	ನೌಕರನ ತಲಾ ಲಾಭ ಗಳಿಕೆ ರೂ ಲಕ್ಷಗಳಲ್ಲಿ	2.33	3.94
8.	**ಅವಕಾಶಗಳು**		
ಎ)	ಅನುತ್ಪಾದಕ ಆಸ್ತಿಗಳಿಗೆ ಮಾಡಬೇಕಾದ ಅವಕಾಶ	3421.56	3446.92
ಬಿ)	ಅನುತ್ಪಾದಕ ಆಸ್ತಿಗಳಿಗೆ ವಾಸ್ತವವಾಗಿ ಮಾಡಿರುವ ಅವಕಾಶ	3496.92	3446.92
ಸಿ)	ಲಾಭದ ಲೆಕ್ಕಕ್ಕೆ ತೆಗೆದುಕೊಂಡ ಸುಸ್ತಿ ಬಡ್ಡಿ, ಗ್ರಾಚುಯಿಟಿ ನಿಧಿ, ಭವಿಷ್ಯ ನಿಧಿ, ಅಂತರ ಶಾಖಾ ಲೆಕ್ಕ ಸಮನ್ವಯ ಬಾಕಿ ಇವುಗಳ ಸಂಬಂಧ ಮಾಡಬೇಕಾದ ಅವಕಾಶ	ಇರುವುದಿಲ್ಲ	ಇರುವುದಿಲ್ಲ
ಡಿ)	ಲಾಭದ ಲೆಕ್ಕಕ್ಕೆ ತೆಗೆದುಕೊಂಡ ಸುಸ್ತಿಬಡ್ಡಿ, ಗ್ರಾಚುಯಿಟಿ ನಿಧಿ, ಭವಿಷ್ಯ ನಿಧಿ, ಅಂತರ ಶಾಖಾ ಲೆಕ್ಕಗಳ ಸಮನ್ವಯ ಬಾಕಿ ಇವುಗಳ ಸಂಬಂಧ ವಾಸ್ತವವಾಗಿ ಮಾಡಿದ ಅವಕಾಶ	ಇರುವುದಿಲ್ಲ	ಇರುವುದಿಲ್ಲ
ಇ)	ಹೂಡಿಕೆಗಳ ಮೇಲೆ ಸವಕಳ ಸಂಬಂಧ ಮಾಡಬೇಕಾದ ಅವಕಾಶ	ಇರುವುದಿಲ್ಲ	ಇರುವುದಿಲ್ಲ
ಎಫ್)	ಹೂಡಿಕೆಗಳ ಮೇಲೆ ಸವಕಳ ಸಂಬಂಧ ವಾಸ್ತವವಾಗಿ ಮಾಡಿದ ಅವಕಾಶ	ಇರುವುದಿಲ್ಲ	ಇರುವುದಿಲ್ಲ
9.	**ಅವಕಾಶಗಳ ಮೇಲೆ ಏರಿಳಿತ**	(+) ಏರಿಕೆ/ಇಳಿಕೆ	(+) ಏರಿಕೆ/ಇಳಿಕೆ
ಎ)	ಅನುತ್ಪಾದಕ ಆಸ್ತಿಗಳಿಗೆ	50.00	364.25
ಬಿ)	ಹೂಡಿಕೆಗಳ ಮೇಲೆ ಸವಕಳ	ಇರುವುದಿಲ್ಲ	ಇರುವುದಿಲ್ಲ
ಸಿ)	ಸ್ಟ್ಯಾಂಡರ್ಡ್ ಆಸ್ತಿಗಳಿಗೆ ಅವಕಾಶ	200.00	200.00
ಡಿ)	ಆದಾಯ ತೆರಿಗೆಗೆ ಮಾಡಿದ ಅವಕಾಶ	350.00	315.00
ಇ)	ಕ್ರಮ ಸಂಖ್ಯೆ 7 ರಲ್ಲಿನ ಇತರೆ ಅಂಶಗಳ ಬಗ್ಗೆ	ಇರುವುದಿಲ್ಲ	ಇರುವುದಿಲ್ಲ
10.	**ಡಿ.ಐ.ಸಿ.ಜಿ.ಸಿ.ಗೆ ಬಾಕಿ ಸೇರಿದಂತೆ ಪಾವತಿಸಿದ ವಿಮಾ ಕಂತು (ಜಿ.ಎಸ್.ಟಿ. ಹೊರತುಪಡಿಸಿ)**	148.15	128.78
11	**ಉಲ್ಲಂಘನೆಗೆ ಆರ್‌ಬಿ ಐ ವಿಧಿಸಿರುವ ದಂಡ**	ಇರುವುದಿಲ್ಲ	ಇರುವುದಿಲ್ಲ
12.	**ಠೇವಣಿದಾರರ ಹಿತಾಸಕ್ತಿ ನಿಧಿ ಭಾರತೀಯ ರಿಸರ್ವ್ ಬ್ಯಾಂಕ್ (ಡೆಫ್ ಫಂಡ್)**	159.54	158.76
13.	**CAPITAL TO RISK ASSETS/EXPOSURE AND RISK ASSEST RATIO AS ON 31.03.2026 (CRAR)**	10.23	9.24
14	ಅನುತ್ಪಾದಕ ನಾನ್–ಎಸ್.ಎಲ್.ಆರ್ ಹೂಡಿಕೆಗಳ ಏರಿಳಿತ	ಇರುವುದಿಲ್ಲ	ಇರುವುದಿಲ್ಲ

ಸ್ವತಂತ್ರ ಲೆಕ್ಕಪರಿಶೋಧಕರ ವರದಿ

(ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ, 1959 ರ ಸೆಕ್ಷನ್ 63(1) ರ ಅಡಿಯಲ್ಲಿ)

ಇವರಿಗೆ: ದಿ ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತದ ಸದಸ್ಯರುಗಳಿಗೆ:

ಅರ್ಹತಾ ಅಭಿಪ್ರಾಯ :

ನಾವು ಈ ಲೆಕ್ಕಪರಿಶೋಧನೆಯೊಂದಿಗೆ ಲಗತ್ತಿಸಿರುವ ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಇದರ 31ನೇ ಮಾರ್ಚ್ 2026 ರ ಹಣಕಾಸಿನ ಲೆಕ್ಕಪತ್ರಗಳನ್ನು ಪರಿಶೋಧಿಸಿದ್ದು, ಇದರಲ್ಲಿ 2026 ರ ಮಾರ್ಚ್31ಕ್ಕೆ ಇದ್ದ ಆಸ್ತಿ ಜವಾಬ್ದಾರಿ ತಃಖ್ತೆ ಮತ್ತು ಇದೇ ದಿನಾಂಕಕ್ಕೆ ಕೊನೆಗೊಂಡ ಹಣಕಾಸು ವರ್ಷದ ಲಾಭ ಮತ್ತು ನಷ್ಟದ ತಃಖ್ತೆಗಳನ್ನು ಒಳಗೊಂಡಿರುತ್ತದೆ. ಅಲ್ಲದೇ ಗುರುತರವಾದ ಲೆಕ್ಕಪತ್ರಗಳನ್ನಿಡುವ ಧೋರಣೆಯ (ನಿರೂಪಣೆ) ಸಾರಾಂಶ ಮತ್ತು ಅಗತ್ಯವಿರುವ ವಿವರಣಾತ್ಮಕ ಸೂಚನೆಗಳು ಸೇರಲ್ಪಟ್ಟಿವೆ.

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮ್ಮ ಅತ್ಯುತ್ತಮ ಮಾಹಿತಿಗೆ ಮತ್ತು ನಮಗೆ ನೀಡಿದ ವಿವರಣೆಗಳ ಪ್ರಕಾರ, ನಮ್ಮ ವರದಿಯ 'ಅರ್ಹತಾ ಅಭಿಪ್ರಾಯಕ್ಕೆ ಆಧಾರ' ವಿಭಾಗದಲ್ಲಿ ವಿವರಿಸಲಾದ ವಿಷಯದ ಪರಿಣಾಮಗಳನ್ನು ಹೊರತುಪಡಿಸಿ ಮತ್ತು ದೀರ್ಘಾವಧಿ ಲೆಕ್ಕಪರಿಶೋಧನಾ ವರದಿಯಲ್ಲಿನ ನಮ್ಮ ವ್ಯಾಖ್ಯಾನಗಳಿಗೆ ಒಳಪಟ್ಟು, ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಸದರಿ ಹಣಕಾಸು ಹೇಳಿಕೆಗಳು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ಮತ್ತು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ 1959 ರ ಅಡಿಯಲ್ಲಿ ಅಗತ್ಯವಿರುವ ಮಾಹಿತಿಯನ್ನು ಸೂಕ್ತ ರೀತಿಯಲ್ಲಿ ಒದಗಿಸುತ್ತವೆ. ಅಲ್ಲದೆ, ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಅಕೌಂಟಿಂಗ್ ತತ್ವಗಳಿಗೆ ಅನುಗುಣವಾಗಿ, ಮಾರ್ಚ್ 31, 2026 ರಲ್ಲಿದ್ದಂತೆ ಬ್ಯಾಂಕಿನ ವ್ಯವಹಾರಗಳ ಸ್ಥಿತಿ ಮತ್ತು ಆ ದಿನಾಂಕಕ್ಕೆ ಕೊನೆಗೊಂಡ ವರ್ಷದ ಲಾಭದ ನೈಜ ಮತ್ತು ನಿಷ್ಪಕ್ಷಪಾತ ಚಿತ್ರಣವನ್ನು ನೀಡುತ್ತದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ.

ಅರ್ಹತಾ ಅಭಿಪ್ರಾಯಕ್ಕೆ ಆಧಾರ :

1. ಬ್ಯಾಂಕು ಭಾರತೀಯ ಜೀವ ವಿಮಾ ನಿಗಮದಲ್ಲಿ (LIC) ಗ್ರೂಪ್ ಗ್ರಾಚ್ಯುಟಿ ಪಾಲಿಸಿಯನ್ನು ಹೊಂದಿದೆ (ಪಾಲಿಸಿ ಸಂಖ್ಯೆ: 501001681 ಮತ್ತು 501011732). ಆಕ್ಚುರಿಯಲ್ ಮೌಲ್ಯಮಾಪನದ (Actuarial Valuation) ಪ್ರಕಾರ, ಪ್ರಸ್ತುತ ಗ್ರಾಚ್ಯುಟಿ ಹೊಣೆಗಾರಿಕೆಯು ₹1,421.67 ಲಕ್ಷಗಳಾಗಿದೆ. ಆದರೆ ಇದರ ಎದುರು LIC ಯಲ್ಲಿ ಕೇವಲ ₹323.97 ಲಕ್ಷಗಳ ನಿಧಿ ಮಾತ್ರ ಲಭ್ಯವಿದ್ದು, ₹110.80 ಲಕ್ಷಗಳಷ್ಟು ಭರ್ತಿಯಾಗದ ಹೊಣೆಗಾರಿಕೆ ಬಾಕಿ ಉಳಿದಿದೆ. ಆದಾಗ್ಯೂ, ಬ್ಯಾಂಕು ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ICAI) ಹೊರಡಿಸಿರುವ ಅಕೌಂಟಿಂಗ್ ಸ್ಟ್ಯಾಂಡರ್ಡ್ (AS) 15 "ಉದ್ಯೋಗಿ ಪ್ರಯೋಜನಗಳು" ನಿಯಮದ ಪ್ರಕಾರ ಪ್ರೀಮಿಯಂ ಅನ್ನು ನಿರ್ಧರಿಸುವ ಬದಲು, ಆಂತರಿಕ ಅಂದಾಜುಗಳು ಮತ್ತು ನಿಧಿಯ ಲಭ್ಯತೆಯ ಆಧಾರದ ಮೇಲೆ ನಿರ್ಧರಿಸಿದೆ. ಇದಲ್ಲದೆ, ಪ್ರಸಕ್ತ ವರ್ಷದಲ್ಲಿ ರಜೆ ನಗದೀಕರಣಕ್ಕಾಗಿ ಯಾವುದೇ ಹಣಕಾಸು ಅವಕಾಶವನ್ನು ಮಾಡಲಾಗಿಲ್ಲ.
   ಬ್ಯಾಂಕು ಒಂದು ವೇಳೆ AS–15 ನಿಯಮವನ್ನು ಪಾಲಿಸಿದ್ದರೆ, ಗ್ರಾಚ್ಯುಟಿ ಹೊಣೆಗಾರಿಕೆಯು ₹110.80 ಲಕ್ಷಗಳಷ್ಟು ಹೆಚ್ಚಾಗುತ್ತಿತ್ತು ಮತ್ತು ವರ್ಷದ ಲಾಭವು ಅಷ್ಟೇ ಪ್ರಮಾಣದಲ್ಲಿ ಕಡಿಮೆಯಾಗುತ್ತಿತ್ತು. ಹೆಚ್ಚುವರಿಯಾಗಿ, ರಜೆ ನಗದೀಕರಣದ ಹೊಣೆಗಾರಿಕೆಯನ್ನು ಲೆಕ್ಕ ಹಾಕಲಾಗಿಲ್ಲ, ಆದರೆ ಇದು ಹಣಕಾಸು ಹೇಳಿಕೆಗಳ ಮೇಲೆ ಗಮನಾರ್ಹ ಪರಿಣಾಮ ಬೀರುವ ಸಾಧ್ಯತೆಯಿದೆ.
2. ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ICAI) ಹೊರಡಿಸಿರುವ ಅಕೌಂಟಿಂಗ್ ಸ್ಟ್ಯಾಂಡರ್ಡ್ (AS) 22 "ಆದಾಯದ ಮೇಲಿನ ತೆರಿಗೆಗಳ ಅಕೌಂಟಿಂಗ್" ನಿಯಮದ ಪ್ರಕಾರ, ಅಕೌಂಟಿಂಗ್ ಆದಾಯ ಮತ್ತು ತೆರಿಗೆಗೆ ಒಳಪಡುವ ಆದಾಯದ ನಡುವಿನ ಸಮಯದ ವ್ಯತ್ಯಾಸಗಳಿಂದ ಉಂಟಾಗುವ ವಿಳಂಬಿತ ತೆರಿಗೆ ಆಸ್ತಿ ಅಥವಾ ಹೊಣೆಗಾರಿಕೆಯನ್ನು ಬ್ಯಾಂಕು ನಿರ್ಧರಿಸಿಲ್ಲ.
   ಅಗತ್ಯ ವಿವರಗಳ ಕೊರತೆಯಿಂದಾಗಿ, ಈ ವಿಳಂಬಿತ ತೆರಿಗೆ ಆಸ್ತಿ/ಹೊಣೆಗಾರಿಕೆಯನ್ನು ಗುರುತಿಸದಿರುವುದರ ನಿಖರ ಹಣಕಾಸು ಪರಿಣಾಮವನ್ನು ಅಳೆಯಲು ಸಾಧ್ಯವಾಗಿಲ್ಲ. ಆದಾಗ್ಯೂ, ಈ ಲೋಪವು ಬ್ಯಾಂಕಿನ ಆರ್ಥಿಕ ಸ್ಥಿತಿ ಮತ್ತು ಕಾರ್ಯಕ್ಷಮತೆಯ ಪ್ರಸ್ತುತಿಗೆ ಪ್ರಮುಖವಾಗಿದೆ ಎಂದು ಪರಿಗಣಿಸಲಾಗಿದೆ.
3. ಬ್ಯಾಂಕು ಭಾರತೀಯ ರಿಸರ್ವ್ ಬ್ಯಾಂಕ್ (RBI) ಸೂಚಿಸಿರುವ ಆದಾಯ ಗುರುತಿಸುವಿಕೆ, ಆಸ್ತಿ ವರ್ಗೀಕರಣ ಮತ್ತು ಪ್ರಾವಿಶನಿಂಗ್ (IRAC) ನಿಯಮಗಳನ್ನು ಸಮರ್ಪಕವಾಗಿ ಪಾಲಿಸಿಲ್ಲ, ಪ್ರಮುಖವಾಗಿ ಮುಂಗಡಗಳ ವರ್ಗೀಕರಣ ಮತ್ತು ಬಡ್ಡಿ ಆದಾಯದ ಹಿಂಪಡೆಯುವಿಕೆಯಲ್ಲಿ (Reversal of Interest Income) ಲೋಪಗಳಾಗಿವೆ. ಇಂತಹ ಹಲವು ನಿಯಮ ಉಲ್ಲಂಘನೆಗಳನ್ನು ದೀರ್ಘಾವಧಿ ಲೆಕ್ಕಪರಿಶೋಧನಾ ವರದಿಯಲ್ಲಿ (LFAR) ದಾಖಲಿಸಲಾಗಿದೆ ಮತ್ತು ವರದಿ ಮಾಡಲಾಗಿದೆ.
   ಬ್ಯಾಂಕು ಕೋರ್ ಬ್ಯಾಂಕಿಂಗ್ ಸೊಲ್ಯೂಷನ್ (CBS) ವ್ಯವಸ್ಥೆಯನ್ನು ಹೊಂದಿದ್ದರೂ ಸಹ, ಅನುತ್ಪಾದಕ ಆಸ್ತಿಗಳ (NPA) ಹೇಳಿಕೆಗಳನ್ನು ಹಸ್ತಚಾಲಿತವಾಗಿ (Manually) ಸಿದ್ಧಪಡಿಸುತ್ತಿರುವುದು ಕಂಡುಬಂದಿದೆ. ಇಂತಹ ಹಸ್ತಚಾಲಿತ ಲೆಕ್ಕಾಚಾರದಲ್ಲಿ ಯಾವುದೇ ಲಿಖಿತ ಅಥವಾ ಸ್ಥಿರವಾದ ಕಾರ್ಯವಿಧಾನವನ್ನು ಅನುಸರಿಸುತ್ತಿಲ್ಲ. ಹೆಚ್ಚುವರಿಯಾಗಿ, ಬ್ಯಾಂಕು ವೈಯಕ್ತಿಕ ಎನ್‌ಪಿಎ (NPA) ಖಾತೆಗಳ ವಿವರವಾದ ವಿಭಜನೆ ಅಥವಾ ಸೂಕ್ತ ದಾಖಲೆಯನ್ನು ನಿರ್ವಹಿಸುತ್ತಿಲ್ಲ. ಇದರಿಂದಾಗಿ ಖಾತೆಯ ಮಟ್ಟದಲ್ಲಿ ವರ್ಗೀಕರಣ ಮತ್ತು ಪ್ರಾವಿಶನಿಂಗ್‌ನ ನಿಖರತೆಯನ್ನು ಪರಿಶೀಲಿಸುವುದು ಕಷ್ಟಕರವಾಗಿದೆ.
   ವ್ಯವಸ್ಥೆ ಆಧಾರಿತ (System–driven) ವಿಶ್ವಾಸಾರ್ಹ ದತ್ತಾಂಶದ ಕೊರತೆ ಮತ್ತು ಎನ್‌ಪಿಎ ಲೆಕ್ಕಾಚಾರದ ಪ್ರಕ್ರಿಯೆಗೆ ಪೂರಕ ದಾಖಲೆಗಳಿಲ್ಲದ ಕಾರಣ, ಈ ವ್ಯತ್ಯಾಸಗಳಿಂದ ಹಣಕಾಸು ಹೇಳಿಕೆಗಳ ಮೇಲಾಗುವ ಒಟ್ಟು ಪರಿಣಾಮವನ್ನು ಅಳೆಯಲು ನಮಗೆ ಸಾಧ್ಯವಾಗಿಲ್ಲ. ಆದಾಗ್ಯೂ, ಈ ನ್ಯೂನತೆಗಳ ಸ್ವರೂಪವನ್ನು ಗಮನಿಸಿದಾಗ, ಇದು ಹಣಕಾಸು ಹೇಳಿಕೆಗಳಲ್ಲಿ ವರದಿಯಾಗಿರುವ ಮುಂಗಡಗಳು, ಆದಾಯ ಮತ್ತು ಪ್ರಾವಿಷನ್‌ಗಳಲ್ಲಿ ದೊಡ್ಡ ಮಟ್ಟದ ತಪ್ಪು ವರದಿಗಳಿಗೆ ಕಾರಣವಾಗಿರಬಹುದು.
4. ಭಾರತೀಯ ರಿಸರ್ವ್ ಬ್ಯಾಂಕ್ ನವೆಂಬರ್ 15, 2021 ರಂದು ಹಣಕಾಸು ಹೇಳಿಕೆಗಳ ಪ್ರಸ್ತುತಿ ಮತ್ತು ಬಹಿರಂಗಪಡಿಸುವಿಕೆಗೆ ಸಂಬಂಧಿಸಿದಂತೆ ಹೊರಡಿಸಿದ ಮಾಸ್ಟರ್ ಸರ್ಕ್ಯುಲರ್ ಪ್ರಕಾರ, ಮಾರ್ಚ್ 31, 2026 ಕ್ಕೆ ಕೊನೆಗೊಂಡ ವರ್ಷದ ಹಣಕಾಸು ಹೇಳಿಕೆಗಳಲ್ಲಿ ಕೆಲವು ಪ್ರಮುಖ ವಿವರಗಳನ್ನು ಕಡ್ಡಾಯವಾಗಿ ಬಹಿರಂಗಪಡಿಸಬೇಕಾಗಿತ್ತು. ಇದರಲ್ಲಿ ವರ್ಷದ ಅವಧಿಯಲ್ಲಿ ಅನುತ್ಪಾದಕ ಮುಂಗಡಗಳ (NPA) ಒಟ್ಟು ಚಲನೆ, ಅಂದರೆ ಹೊಸ ಸೇರ್ಪಡೆಗಳು, ಶ್ರೇಣಿ ಸುಧಾರಣೆಗಳ (Upgradations) ಮೂಲಕ ಆದ ಕಡಿತಗಳು, ವಸೂಲಾತಿಗಳು ಮತ್ತು ವಜಾಗೊಳಿಸಿದ (Write–offs) ವಿವರಗಳ ಸಾರಾಂಶ ಸೇರಿದೆ.
   ಆದರೆ, ಬ್ಯಾಂಕು ಈ ಮಾಹಿತಿಯನ್ನು ತನ್ನ 'ನೋಟ್ಸ್ ಟು ಅಕೌಂಟ್ಸ್'ನಲ್ಲಿ ನೀಡಿಲ್ಲ ಎಂಬುದು ಕಂಡುಬಂದಿದೆ. ಇದೇ ರೀತಿ, ಸದರಿ ಮಾಸ್ಟರ್ ಸರ್ಕ್ಯುಲರ್ ಅಡಿಯಲ್ಲಿ ಅಗತ್ಯವಿರುವಂತೆ, ಅನುತ್ಪಾದಕ ಆಸ್ತಿಗಳಿಗಾಗಿ ಕಾಯ್ದಿರಿಸಲಾದ ಪ್ರಾವಿಷನ್‌ಗಳ ಮೊತ್ತ ಮತ್ತು ಅದರ ಚಲನೆಯ ವಿವರಗಳನ್ನು ಸಹ ಒದಗಿಸಿಲ್ಲ.
   ಈ ಕಡ್ಡಾಯ ವಿವರಗಳನ್ನು ಬಹಿರಂಗಪಡಿಸದ ಕಾರಣ, ಹಣಕಾಸು ಹೇಳಿಕೆಗಳು ಆರ್‌ಬಿಐ ಸೂಚಿಸಿದ ಪ್ರಸ್ತುತಿ ಮತ್ತು ಬಹಿರಂಗಪಡಿಸುವಿಕೆಯ ಚೌಕಟ್ಟನ್ನು ಪೂರ್ಣವಾಗಿ ಪಾಲಿಸುವುದಿಲ್ಲ. ಇದರ ಆರ್ಥಿಕ ಪರಿಣಾಮವನ್ನು ಅಳೆಯಲು ಸಾಧ್ಯವಾಗದಿದ್ದರೂ, ಇದು ಪಾರದರ್ಶಕತೆಗೆ ಧಕ್ಕೆ ತರುತ್ತದೆ ಮತ್ತು ಬ್ಯಾಂಕಿನ ಆಸ್ತಿ ಗುಣಮಟ್ಟವನ್ನು ಮೌಲ್ಯಮಾಪನ ಮಾಡುವ ಬಳಕೆದಾರರ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ.
5. ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿರುವ ಐಆರ್‌ಎಸಿ (IRAC) ನಿಯಮಗಳ ಪ್ರಕಾರ, ಬ್ಯಾಂಕುಗಳು ಆಸ್ತಿ ವರ್ಗ ಮತ್ತು ವಲಯದ ಮಾನ್ಯತೆಯ ಆಧಾರದ ಮೇಲೆ ನಿಗದಿತ ದರಗಳಲ್ಲಿ ಸ್ಟ್ಯಾಂಡರ್ಡ್ ಆಸ್ತಿಗಳಿಗೆ (Standard Assets) ಹಣಕಾಸು ಮೀಸಲಾತಿಯನ್ನು (Provision) ಮಾಡಬೇಕಾಗುತ್ತದೆ.
   ಆದರೆ, ಮಾರ್ಚ್ 31, 2026 ರಲ್ಲಿದ್ದಂತೆ ಸ್ಟ್ಯಾಂಡರ್ಡ್ ಆಸ್ತಿಗಳಿಗಾಗಿ ರಚಿಸಲಾದ ಪ್ರಾವಿಷನ್‌ಗಳ ಸಮರ್ಪಕತೆಯನ್ನು ಸ್ವತಂತ್ರವಾಗಿ ಪರಿಶೀಲಿಸಲು ಅನುಕೂಲವಾಗುವಂತೆ ಬ್ಯಾಂಕು ಯಾವುದೇ ವಿವರವಾದ ಕೆಲಸದ ಪತ್ರಿಕೆಗಳನ್ನು (Working Papers), ವರ್ಗೀಕರಣವಾರು ವಿಭಜನೆಯನ್ನು ಅಥವಾ ಸೂಕ್ತ ಪೂರಕ ದಾಖಲೆಗಳನ್ನು ಒದಗಿಸಿಲ್ಲ. ಪರಿಶೀಲಿಸಬಹುದಾದ ದತ್ತಾಂಶಗಳ ಕೊರತೆಯಿಂದಾಗಿ, ಸ್ಟ್ಯಾಂಡರ್ಡ್ ಆಸ್ತಿಗಳಿಗಾಗಿ ಇರಿಸಲಾಗಿರುವ ಪ್ರಾವಿಷನ್‌ನ ಸರಿಯಾದಂತೆ ಮತ್ತು ಸಮರ್ಪಕತೆಯ ಬಗ್ಗೆ ನಾವು ಯಾವುದೇ ಪ್ರತಿಕ್ರಿಯೆ ನೀಡಲು ಸಾಧ್ಯವಿಲ್ಲ. ಯಾವುದೇ ಕೊರತೆಯಿದ್ದಲ್ಲಿ, ಹಣಕಾಸು ಹೇಳಿಕೆಗಳ ಮೇಲಾಗುವ ಸಂಭಾವ್ಯ ಪರಿಣಾಮವು ಗಣನೀಯವಾಗಿರಬಹುದು ಆದರೆ ಅದನ್ನು ಈಗ ಅಳೆಯಲು ಸಾಧ್ಯವಿಲ್ಲ.
6. ಮಾರ್ಚ್ 31, 2026 ರಲ್ಲಿದ್ದಂತೆ, ಬ್ಯಾಂಕಿನ ಖಾತೆ ಪುಸ್ತಕಗಳ ಪ್ರಕಾರ ಇರುವ 'ಜಿಎಸ್‌ಟಿ ಇನ್ಪುಟ್ ಕ್ರೆಡಿಟ್ ಸ್ವೀಕರಿಸಬೇಕಾದ' (GST Input Credit Receivable) ಬಾಕಿ ಮೊತ್ತವು, ಜಿಎಸ್‌ಟಿ ಪೋರ್ಟಲ್‌ನಲ್ಲಿ ನಿರ್ವಹಿಸಲಾಗುವ 'ಜಿಎಸ್‌ಟಿ ಎಲೆಕ್ಟ್ರಾನಿಕ್ ಕ್ರೆಡಿಟ್ ಲೆಡ್ಜರ್'ನಲ್ಲಿ ಲಭ್ಯವಿರುವ ಬಾಕಿ ಮೊತ್ತಕ್ಕಿಂತ ಹೆಚ್ಚಾಗಿದೆ.
   ಬ್ಯಾಂಕು ಈ ವ್ಯತ್ಯಾಸಕ್ಕೆ ಯಾವುದೇ ಸಮನ್ವಯ ಪಟ್ಟಿ (Reconciliation) ಅಥವಾ ಸೂಕ್ತ ವಿವರಣೆಯನ್ನು ಒದಗಿಸಿಲ್ಲ. ಸಾಕಷ್ಟು ಮತ್ತು ಸೂಕ್ತವಾದ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ, ಪುಸ್ತಕಗಳಲ್ಲಿ ದಾಖಲಾಗಿರುವ ಈ ಹೆಚ್ಚುವರಿ ಮೊತ್ತದ ನಿಖರತೆ ಮತ್ತು ವಸೂಲಾತಿಯನ್ನು ಪರಿಶೀಲಿಸಲು ನಮಗೆ ಸಾಧ್ಯವಾಗಿಲ್ಲ.
   ಆದ್ದರಿಂದ, ಜಿಎಸ್‌ಟಿ ಇನ್ಪುಟ್ ಕ್ರೆಡಿಟ್ ಮೊತ್ತವನ್ನು ವಾಸ್ತವಕ್ಕಿಂತ ಹೆಚ್ಚಾಗಿ ತೋರಿಸಲಾಗಿದ್ದು (Overstated), ಇದು ಬ್ಯಾಂಕಿನ ಆಸ್ತಿಗಳು ಮತ್ತು ಲಾಭವನ್ನು ಹೆಚ್ಚಿಸಿ ತೋರಿಸಲು ಕಾರಣವಾಗಿದೆ. ನಮ್ಮ ಅಭಿಪ್ರಾಯದಲ್ಲಿ, ಈ ವಿಷಯವು ಹಣಕಾಸು ಹೇಳಿಕೆಗಳಿಗೆ ಪ್ರಮುಖವಾಗಿದೆ.
7. ಮಾರ್ಚ್ 31, 2026 ಕ್ಕೆ ಇದ್ದಂತೆ, ಜನರಲ್ ಲೆಡ್ಜರ್‌ನಲ್ಲಿ (General Ledger) ಪ್ರತಿಫಲಿಸುವ NEFT ಮತ್ತು RTGS ಕ್ಲಿಯರಿಂಗ್ ಖಾತೆಗಳ ಆವರ್ತಕ ಪರಿಶೀಲನೆ ಮತ್ತು ಸಾಮರಸ್ಯಕ್ಕಾಗಿ (reconciliation) ಬ್ಯಾಂಕ್ ಸೂಕ್ತವಾದ ಕಾರ್ಯವಿಧಾನಗಳನ್ನು ಸ್ಥಾಪಿಸಿರುವುದನ್ನು ನಾವು ಗಮನಿಸಿದ್ದೇವೆ. ಆದಾಗ್ಯೂ, ಸಿಸ್ಟಮ್ ವಲಸೆಯ (migration) ಸಮಯದಿಂದ ಹಲವಾರು ನಮೂದುಗಳು (entries) ಸಾಮರಸ್ಯ ಅಥವಾ ಕ್ಲಿಯರೆನ್ಸ್‌ಗಾಗಿ ಬಾಕಿ ಉಳಿದಿವೆ, ಮತ್ತು ಬ್ಯಾಂಕ್ ಈ ಖಾತೆಗಳಿಗೆ ಸೂಕ್ತವಾದ ಪೋಷಕ ದಾಖಲೆಗಳನ್ನು ಅಥವಾ ಸಾಮರಸ್ಯದ ಹೇಳಿಕೆಗಳನ್ನು (reconciliatory statements) ಒದಗಿಸಲು ವಿಫಲವಾಗಿದೆ.
   ಸಾಕಷ್ಟು ಮತ್ತು ಸೂಕ್ತವಾದ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ, ಈ ಖಾತೆಗಳಲ್ಲಿ ಹೊಂದಾಣಿಕೆಯಾಗದೆ ಉಳಿದಿರುವ ಬಾಕಿ ಮೊತ್ತಗಳಿಗೆ ಸಂಬಂಧಿಸಿದಂತೆ ಯಾವುದೇ ಬದಲಾವಣೆಗಳು/ಹೊಂದಾಣಿಕೆಗಳು (Adjustments) ಅಗತ್ಯವಿದೆಯೇ ಎಂದು ನಿರ್ಧರಿಸಲು ನಮಗೆ ಸಾಧ್ಯವಾಗಿಲ್ಲ.
   ಆದ್ದರಿಂದ, ಈ ಕ್ಲಿಯರಿಂಗ್ ಖಾತೆಗಳ ಅಡಿಯಲ್ಲಿ ವರದಿಯಾದ ಬಾಕಿಗಳ ಸಂಪೂರ್ಣತೆ ಮತ್ತು ನಿಖರತೆಯನ್ನು ಹಾಗೂ ಹಣಕಾಸು ಹೇಳಿಕೆಗಳ ಮೇಲಾಗುವ ಅದರ ಒಟ್ಟಾರೆ ಪರಿಣಾಮವನ್ನು ಮೌಲ್ಯಮಾಪನ ಮಾಡಲು ನಮಗೆ ಸಾಧ್ಯವಾಗುತ್ತಿಲ್ಲ. ನಮ್ಮ ದೃಷ್ಟಿಯಲ್ಲಿ, ಈ ವಿಷಯವು ಅತ್ಯಂತ ಪ್ರಮುಖವಾಗಿದೆ ಮತ್ತು ಇದು ಕ್ಲಿಯರಿಂಗ್ ಖಾತೆಗಳ ಸಮನ್ವಯದ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ದೌರ್ಬಲ್ಯವನ್ನು ಎತ್ತಿ ತೋರಿಸುತ್ತದೆ.
8. ನಮ್ಮ ಲೆಕ್ಕಪರಿಶೋಧನೆಯ ಅವಧಿಯಲ್ಲಿ, ಆದಾಯ ತೆರಿಗೆ ಮತ್ತು ಇ–ಟಿಡಿಎಸ್ (e–TDS) ರಿಟರ್ನ್ಸ್ ಪ್ರಕ್ರಿಯೆಯಲ್ಲಿ ಪ್ರಮುಖ ನಿಯಂತ್ರಣ ನ್ಯೂನತೆಗಳು ಮತ್ತು ವರದಿ ಮಾಡುವಲ್ಲಿನ ಲೋಪಗಳನ್ನು ನಾವು ಗಮನಿಸಿದ್ದೇವೆ. ಪ್ರಮುಖವಾಗಿ, ಇ–ಟಿಡಿಎಸ್ ರಿಟರ್ನ್ಸ್‌ನ ಭಾಗ 'ಎ' (Part A) ಮತ್ತು ಭಾಗ 'ಬಿ' (Part B) ನಲ್ಲಿ ವರದಿ ಮಾಡಲಾದ ಒಟ್ಟು ವೇತನದ (Gross Salary) ನಡುವೆ ಗಣನೀಯ ವ್ಯತ್ಯಾಸವಿದೆ; ಏಕೆಂದರೆ ನಂತರ ಲಭ್ಯವಾದ ಮಾಹಿತಿಯನ್ನು ಭಾಗ 'ಬಿ' ನಲ್ಲಿ ಸೇರಿಸಿದ ನಂತರ, ಪರಿಷ್ಕೃತ ಇ–ಟಿಡಿಎಸ್ ರಿಟರ್ನ್ಸ್‌ಗಳನ್ನು (Revised e–TDS returns) ಸಲ್ಲಿಸಲಾಗಿಲ್ಲ.

ಇದಲ್ಲದೆ, ರಿಯಾಯಿತಿ ದರದ ಸಾಲಗಳ (Concessional Loans) ಮಾಹಿತಿ ಇಲ್ಲದ ಕಾರಣ, ನೌಕರರ ಸಾಲದ ಪರ್ಕ್ವಿಸಿಟ್‌ಗಳ (Loan Perquisites) ಮೇಲಿನ ಶಾಸನಬದ್ಧ ತೆರಿಗೆಯನ್ನು ಕಡಿತಗೊಳಿಸಲಾಗಿಲ್ಲ. ಹಾಗೆಯೇ, ಬ್ಯಾಂಕಿನಿಂದ ಅಗತ್ಯ ವಿವರಗಳನ್ನು ಪಡೆದುಕೊಳ್ಳದ ಕಾರಣ ಕಡ್ಡಾಯ ನಿಯತಕಾಲಿಕ ಸಮನ್ವಯಗಳನ್ನು (Periodic Reconciliations) ಕೈಬಿಡಲಾಗಿದೆ. ಹೆಚ್ಚುವರಿಯಾಗಿ, ಟಿಡಿಎಸ್ (TDS) ಕಡಿತಗೊಳಿಸದ ನೌಕರರ ಸಂಬಳದ ವಿವರಗಳನ್ನು ಇ–ಟಿಡಿಎಸ್ ರಿಟರ್ನ್ಸ್‌ನಿಂದ ಸಂಪೂರ್ಣವಾಗಿ ಹೊರಗಿಡಲಾಗಿದೆ. ಅಂತಿಮವಾಗಿ, ತೆರಿಗೆ ಕಡಿತ ಪ್ರಕ್ರಿಯೆಯಲ್ಲಿ ಯಾವುದೇ ಸ್ಥಿರತೆ ಮತ್ತು ಏಕರೂಪತೆ ಇರಲಿಲ್ಲ; ಸಿಬ್ಬಂದಿಯಿಂದ ಯಾವುದೇ ಅಧಿಕೃತ ಆದಾಯ ತೆರಿಗೆ ಘೋಷಣೆಗಳನ್ನು (Income Tax Declarations) ಸಂಗ್ರಹಿಸಲಾಗಿಲ್ಲ, ಮತ್ತು ತೆರಿಗೆ ವ್ಯಾಪ್ತಿಗೆ ಬರುವ ಉದ್ಯೋಗಿಗಳಿಗೆ ವಿವಿಧ ತಿಂಗಳುಗಳಲ್ಲಿ ಅನಿಯಮಿತವಾಗಿ ತೆರಿಗೆಯನ್ನು ವಸೂಲಿ ಮಾಡಲಾಗಿದೆ (ಇದಕ್ಕೆ ಡೆಪ್ಯುಟಿ ಜನರಲ್ ಮ್ಯಾನೇಜರ್ ಅವರ ದಾಖಲೆಗಳೇ ಉದಾಹರಣೆಯಾಗಿದೆ).

ಬ್ಯಾಂಕಿನ ಆಡಳಿತ ಮಂಡಳಿಯು ಈ ವ್ಯವಸ್ಥಿತ ಲೋಪಗಳನ್ನು ಒಪ್ಪಿಕೊಂಡಿದ್ದು, ಪ್ರಸಕ್ತ ಹಣಕಾಸು ವರ್ಷದಿಂದಲೇ ಸುಧಾರಣಾ ಕ್ರಮಗಳನ್ನು ಜಾರಿಗೆ ತರಲು ಬದ್ಧವಾಗಿದೆ

ನಾವು ನಮ್ಮ ಲೆಕ್ಕಪರಿಶೋಧನೆಯನ್ನು ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ICAI) ಸೂಚಿಸಿರುವ ಲೆಕ್ಕಪರಿಶೋಧನಾ ಮಾನದಂಡಗಳಿಗೆ (Standards on Auditing) ಅನುಗುಣವಾಗಿ ನಡೆಸಿದ್ದೇವೆ. ಆ ಮಾನದಂಡಗಳ ಅಡಿಯಲ್ಲಿ ನಮ್ಮ ಜವಾಬ್ದಾರಿಗಳನ್ನು ಈ ವರದಿಯ 'ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧಕರ ಜವಾಬ್ದಾರಿಗಳು' ವಿಭಾಗದಲ್ಲಿ ಮುಂದೆ ವಿವರಿಸಲಾಗಿದೆ. ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ನೈತಿಕ ಅವಶ್ಯಕತೆಗಳೊಂದಿಗೆ ICAI ಹೊರಡಿಸಿರುವ ನೈತಿಕ ಸಂಹಿತೆಗೆ (Code of Ethics) ಅನುಗುಣವಾಗಿ ನಾವು ಬ್ಯಾಂಕಿನಿಂದ ಸ್ವತಂತ್ರರಾಗಿದ್ದೇವೆ. ಈ ಅವಶ್ಯಕತೆಗಳಿಗೆ ಮತ್ತು ICAI ನ ನೈತಿಕ ಸಂಹಿತೆಗೆ ಅನುಗುಣವಾಗಿ ನಾವು ನಮ್ಮ ಇತರ ನೈತಿಕ ಜವಾಬ್ದಾರಿಗಳನ್ನು ಪೂರೈಸಿದ್ದೇವೆ. ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳು ನಮ್ಮ ಅರ್ಹತಾ ಅಭಿಪ್ರಾಯಕ್ಕೆ (Qualified Opinion) ಸೂಕ್ತ ಮತ್ತು ಸಮರ್ಪಕ ಆಧಾರವನ್ನು ಒದಗಿಸುತ್ತವೆ ಎಂದು ನಾವು ನಂಬುತ್ತೇವೆ.

ಆರ್ಥಿಕ ತಃಖ್ತೆಗಳ ಬಗ್ಗೆ ಆಡಳಿತ ಮತ್ತು ಶಾಸನಾತ್ಮಕ ನಿರ್ವಹಣೆ ವಹಿಸಿಕೊಂಡವರ ಜವಾಬ್ದಾರಿಗಳು:

ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಅಕೌಂಟಿಂಗ್ ತತ್ವಗಳಿಗೆ ಅನುಗುಣವಾಗಿ, ಬ್ಯಾಂಕಿನ ಆರ್ಥಿಕ ಸ್ಥಿತಿ ಮತ್ತು ಆರ್ಥಿಕ ಕಾರ್ಯಕ್ಷಮತೆಯ ನೈಜ ಮತ್ತು ನಿಷ್ಪಕ್ಷಪಾತ ಚಿತ್ರಣವನ್ನು (True and Fair View) ನೀಡುವ ಈ ಹಣಕಾಸು ಹೇಳಿಕೆಗಳ ತಯಾರಿಕೆಗೆ ಸಂಬಂಧಿಸಿದಂತೆ, ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, 1949 ಮತ್ತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ("ಕಾಯ್ದೆ") ರಲ್ಲಿ ತಿಳಿಸಲಾದ ವಿಷಯಗಳಿಗೆ ಬ್ಯಾಂಕಿನ ನಿರ್ದೇಶಕರ ಮಂಡಳಿಯು ಜವಾಬ್ದಾರರಾಗಿರುತ್ತಾರೆ. ಈ ಜವಾಬ್ದಾರಿಯು ಬ್ಯಾಂಕಿನ ಆಸ್ತಿಗಳನ್ನು ರಕ್ಷಿಸಲು ಮತ್ತು ವಂಚನೆಗಳು ಹಾಗೂ ಇತರ ಅಕ್ರಮಗಳನ್ನು ತಡೆಗಟ್ಟಲು ಮತ್ತು ಪತ್ತೆಹಚ್ಚಲು ಕಾಯ್ದೆಯ ನಿಬಂಧನೆಗಳ ಪ್ರಕಾರ ಸೂಕ್ತ ಅಕೌಂಟಿಂಗ್ ದಾಖಲೆಗಳನ್ನು ನಿರ್ವಹಿಸುವುದನ್ನು ಒಳಗೊಂಡಿರುತ್ತದೆ; ಹಾಗೆಯೇ ಸೂಕ್ತ ಅಕೌಂಟಿಂಗ್ ನೀತಿಗಳ ಆಯ್ಕೆ ಮತ್ತು ಅನ್ವಯ; ಸಮಂಜಸವಾದ ಮತ್ತು ವಿವೇಕಯುತವಾದ ತೀರ್ಪುಗಳು ಮತ್ತು ಅಂದಾಜುಗಳನ್ನು ಮಾಡುವುದು; ಮತ್ತು ವಂಚನೆ ಅಥವಾ ದೋಷದಿಂದಾಗಿ ಉಂಟಾಗುವ ಗಣನೀಯ ತಪ್ಪು ವರದಿಗಳಿಂದ ಮುಕ್ತವಾದ, ನೈಜ ಮತ್ತು ನಿಷ್ಪಕ್ಷಪಾತ ಚಿತ್ರಣವನ್ನು ನೀಡುವ ಹಣಕಾಸು ಹೇಳಿಕೆಗಳ ತಯಾರಿಕೆ ಮತ್ತು ಪ್ರಸ್ತುತಿಗೆ ಪ್ರಸ್ತುತವಾದ, ಅಕೌಂಟಿಂಗ್ ದಾಖಲೆಗಳ ನಿಖರತೆ ಮತ್ತು ಸಂಪೂರ್ಣತೆಯನ್ನು ಖಚಿತಪಡಿಸಿಕೊಳ್ಳಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಸೂಕ್ತ ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆಯನ್ನು ಸಹ ಇದು ಒಳಗೊಂಡಿರುತ್ತದೆ.

ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸುವಾಗ, ಬ್ಯಾಂಕು ನಿರಂತರ ವ್ಯವಹಾರ ಸಂಸ್ಥೆಯಾಗಿ (Going Concern) ಮುಂದುವರಿಯುವ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಲು, ಸಂದರ್ಭಕ್ಕೆ ಅನುಗುಣವಾಗಿ ನಿರಂತರ ವ್ಯವಹಾರಕ್ಕೆ ಸಂಬಂಧಿಸಿದ ವಿಷಯಗಳನ್ನು ಬಹಿರಂಗಪಡಿಸಲು ಮತ್ತು ಅಕೌಂಟಿಂಗ್‌ನ ನಿರಂತರ ವ್ಯವಹಾರದ ಆಧಾರವನ್ನು ಬಳಸಲು ಆಡಳಿತ ಮಂಡಳಿಯು ಜವಾಬ್ದಾರರಾಗಿರುತ್ತಾರೆ.

ಸದರಿ ನಿರ್ದೇಶಕರ ಮಂಡಳಿಯು ಬ್ಯಾಂಕಿನ ಹಣಕಾಸು ವರದಿ ಪ್ರಕ್ರಿಯೆಯ (Financial Reporting Process) ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಸಹ ಹೊಂದಿರುತ್ತಾರೆ.

ಆರ್ಥಿಕ ತಃಖ್ತೆಗಳ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರ ಜವಾಬ್ದಾರಿ:

ಹಣಕಾಸು ಹೇಳಿಕೆಗಳು ಒಟ್ಟಾರೆಯಾಗಿ ವಂಚನೆ ಅಥವಾ ದೋಷದಿಂದಾಗಿ ಉಂಟಾಗುವ ಗಣನೀಯ ತಪ್ಪು ವರದಿಗಳಿಂದ (Material Misstatement) ಮುಕ್ತವಾಗಿವೆಯೇ ಎಂಬುದರ ಬಗ್ಗೆ ಸಮಂಜಸವಾದ ಭರವಸೆಯನ್ನು (Reasonable Assurance) ಪಡೆಯುವುದು ಮತ್ತು ನಮ್ಮ ಅಭಿಪ್ರಾಯವನ್ನು ಒಳಗೊಂಡಿರುವ ಲೆಕ್ಕಪರಿಶೋಧಕರ ವರದಿಯನ್ನು ನೀಡುವುದು ನಮ್ಮ ಉದ್ದೇಶವಾಗಿದೆ. ಸಮಂಜಸವಾದ ಭರವಸೆಯು ಉನ್ನತ ಮಟ್ಟದ ಭರವಸೆಯಾಗಿದೆ, ಆದರೆ ಲೆಕ್ಕಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ನಡೆಸಿದ ಲೆಕ್ಕಪರಿಶೋಧನೆಯು ಯಾವಾಗಲೂ ಅಸ್ತಿತ್ವದಲ್ಲಿರುವ ಗಣನೀಯ ತಪ್ಪು ವರದಿಯನ್ನು ಪತ್ತೆಹಚ್ಚುತ್ತದೆ ಎಂಬುದಕ್ಕೆ ಇದು ಗ್ಯಾರಂಟಿ ಅಲ್ಲ. ತಪ್ಪು ವರದಿಗಳು ವಂಚನೆ ಅಥವಾ ದೋಷದಿಂದ ಉಂಟಾಗಬಹುದು ಮತ್ತು ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ, ಈ ಹಣಕಾಸು ಹೇಳಿಕೆಗಳ ಆಧಾರದ ಮೇಲೆ ಬಳಕೆದಾರರು ತೆಗೆದುಕೊಳ್ಳುವ ಆರ್ಥಿಕ ನಿರ್ಧಾರಗಳ ಮೇಲೆ ಪ್ರಭಾವ ಬೀರುತ್ತವೆ ಎಂದು ಸಮಂಜಸವಾಗಿ ನಿರೀಕ್ಷಿಸಬಹುದಾದರೆ ಅವುಗಳನ್ನು ಗಣನೀಯ (Material) ಎಂದು ಪರಿಗಣಿಸಲಾಗುತ್ತದೆ.

ಲೆಕ್ಕಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ನಡೆಸುವ ಲೆಕ್ಕಪರಿಶೋಧನೆಯ ಭಾಗವಾಗಿ, ನಾವು ಸಂಪೂರ್ಣ ಲೆಕ್ಕಪರಿಶೋಧನೆಯುದ್ದಕ್ಕೂ ವೃತ್ತಿಪರ ತೀರ್ಪು (Professional Judgment) ಮತ್ತು ವೃತ್ತಿಪರ ಸಂದೇಹಾಸ್ಪದತೆಯನ್ನು (Professional Scepticism) ಕಾಯ್ದುಕೊಳ್ಳುತ್ತೇವೆ. ನಾವು ಈ ಕೆಳಗಿನವುಗಳನ್ನು ಸಹ ಮಾಡುತ್ತೇವೆ:

- ಹಣಕಾಸು ಹೇಳಿಕೆಗಳಲ್ಲಿ ವಂಚನೆ ಅಥವಾ ದೋಷದಿಂದಾಗಿ ಉಂಟಾಗುವ ಗಣನೀಯ ತಪ್ಪು ವರದಿಗಳ ಅಪಾಯಗಳನ್ನು ಗುರುತಿಸುತ್ತೇವೆ ಮತ್ತು ಮೌಲ್ಯಮಾಪನ ಮಾಡುತ್ತೇವೆ, ಆ ಅಪಾಯಗಳಿಗೆ ಸ್ಪಂದಿಸುವ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸುತ್ತೇವೆ ಮತ್ತು ನಿರ್ವಹಿಸುತ್ತೇವೆ, ಹಾಗೂ ನಮ್ಮ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ಸೂಕ್ತ ಮತ್ತು ಸಮರ್ಪಕವಾದ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳನ್ನು ಪಡೆಯುತ್ತೇವೆ. ದೋಷದಿಂದ ಉಂಟಾಗುವ ತಪ್ಪು ವರದಿಯನ್ನು ಪತ್ತೆಹಚ್ಚುವುದಕ್ಕಿಂತ ವಂಚನೆಯಿಂದ ಉಂಟಾಗುವ ಗಣನೀಯ ತಪ್ಪು ವರದಿಯನ್ನು ಪತ್ತೆಹಚ್ಚದಿರುವ ಅಪಾಯವು ಹೆಚ್ಚಾಗಿರುತ್ತದೆ, ಏಕೆಂದರೆ ವಂಚನೆಯು ರಹಸ್ಯ ಒಪ್ಪಂದ, ನಕಲಿ ದಾಖಲೆ ಸೃಷ್ಟಿ, ಉದ್ದೇಶಪೂರ್ವಕ ಲೋಪಗಳು, ತಪ್ಪು ನಿರೂಪಣೆಗಳು ಅಥವಾ ಆಂತರಿಕ ನಿಯಂತ್ರಣದ ಉಲ್ಲಂಘನೆಯನ್ನು ಒಳಗೊಂಡಿರಬಹುದು.
- ಸಂದರ್ಭಕ್ಕೆ ಸೂಕ್ತವಾದ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸಲು ಲೆಕ್ಕಪರಿಶೋಧನೆಗೆ ಪ್ರಸ್ತುತವಾದ ಆಂತರಿಕ ನಿಯಂತ್ರಣದ (Internal Control) ಬಗ್ಗೆ ತಿಳುವಳಿಕೆಯನ್ನು ಪಡೆಯುತ್ತೇವೆ.
- ಬಳಸಲಾದ ಅಕೌಂಟಿಂಗ್ ನೀತಿಗಳ ಸೂಕ್ತತೆಯನ್ನು ಮತ್ತು ಆಡಳಿತ ಮಂಡಳಿಯು ಮಾಡಿದ ಅಕೌಂಟಿಂಗ್ ಅಂದಾಜುಗಳು ಹಾಗೂ ಸಂಬಂಧಿತ ಬಹಿರಂಗಪಡಿಸುವಿಕೆಗಳ ಸಮಂಜಸತೆಯನ್ನು ಮೌಲ್ಯಮಾಪನ ಮಾಡುತ್ತೇವೆ.
- ಆಡಳಿತ ಮಂಡಳಿಯು ಅಕೌಂಟಿಂಗ್‌ನ ನಿರಂತರ ವ್ಯವಹಾರದ (Going Concern) ಆಧಾರವನ್ನು ಬಳಸಿರುವುದರ ಸೂಕ್ತತೆಯ ಬಗ್ಗೆ ತೀರ್ಮಾನಕ್ಕೆ ಬರುತ್ತೇವೆ ಮತ್ತು ಪಡೆದ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳ ಆಧಾರದ ಮೇಲೆ, ಸಂಸ್ಥೆಯು ನಿರಂತರ ವ್ಯವಹಾರವಾಗಿ ಮುಂದುವರಿಯುವ ಸಾಮರ್ಥ್ಯದ ಬಗ್ಗೆ ಗಮನಾರ್ಹ ಸಂದೇಹವನ್ನು ಉಂಟುಮಾಡುವ ಘಟನೆಗಳು ಅಥವಾ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ಯಾವುದೇ ಗಣನೀಯ ಅನಿಶ್ಚಿತತೆ (Material Uncertainty) ಅಸ್ತಿತ್ವದಲ್ಲಿದೆಯೇ ಎಂದು ತೀರ್ಮಾನಿಸುತ್ತೇವೆ. ಒಂದು ವೇಳೆ ಗಣನೀಯ ಅನಿಶ್ಚಿತತೆ ಅಸ್ತಿತ್ವದಲ್ಲಿದೆ ಎಂದು ನಾವು ತೀರ್ಮಾನಿಸಿದರೆ, ಹಣಕಾಸು ಹೇಳಿಕೆಗಳಲ್ಲಿನ ಸಂಬಂಧಿತ ಬಹಿರಂಗಪಡಿಸುವಿಕೆಗಳ ಕಡೆಗೆ ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ಗಮನ ಸೆಳೆಯಲು ನಾವು ಬದ್ಧರಾಗಿರುತ್ತೇವೆ, ಅಥವಾ ಅಂತಹ ಬಹಿರಂಗಪಡಿಸುವಿಕೆಗಳು ಅಪೂರ್ಣವಾಗಿದ್ದರೆ, ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಬೇಕಾಗುತ್ತದೆ. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರ ವರದಿಯ ದಿನಾಂಕದವರೆಗೆ ಪಡೆದ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳನ್ನು ಆಧರಿಸಿವೆ. ಆದಾಗ್ಯೂ, ಭವಿಷ್ಯದ ಘಟನೆಗಳು ಅಥವಾ ಪರಿಸ್ಥಿತಿಗಳು ಸಂಸ್ಥೆಯು ನಿರಂತರ ವ್ಯವಹಾರವಾಗಿ ಮುಂದುವರಿಯುವುದನ್ನು ನಿಲ್ಲಿಸಲು ಕಾರಣವಾಗಬಹುದು.
- ಬಹಿರಂಗಪಡಿಸುವಿಕೆಗಳನ್ನು ಒಳಗೊಂಡಂತೆ ಹಣಕಾಸು ಹೇಳಿಕೆಗಳ ಒಟ್ಟಾರೆ ಪ್ರಸ್ತುತಿ, ರಚನೆ ಮತ್ತು ವಿಷಯವನ್ನು ಮೌಲ್ಯಮಾಪನ ಮಾಡುತ್ತೇವೆ, ಮತ್ತು ಹಣಕಾಸು ಹೇಳಿಕೆಗಳು ಅವುಗಳ ಆಧಾರವಾಗಿರುವ ವಹಿವಾಟುಗಳು ಮತ್ತು ಘಟನೆಗಳನ್ನು ಸೂಕ್ತ ರೀತಿಯಲ್ಲಿ ಪ್ರಸ್ತುತಪಡಿಸುತ್ತವೆಯೇ ಎಂಬುದನ್ನು ಮೌಲ್ಯಮಾಪನ ಮಾಡುತ್ತೇವೆ.

ನಾವು ಆಡಳಿತದ ಜವಾಬ್ದಾರಿಯನ್ನು ಹೊಂದಿರುವವರೊಂದಿಗೆ, ಇತರ ವಿಷಯಗಳ ಜೊತೆಗೆ, ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಸಮಯ ಹಾಗೂ ಪ್ರಮುಖ ಲೆಕ್ಕಪರಿಶೋಧನಾ ಸಂಶೋಧನೆಗಳು, ಸೇರಿದಂತೆ ನಮ್ಮ ಲೆಕ್ಕಪರಿಶೋಧನೆಯ ಅವಧಿಯಲ್ಲಿ ನಾವು ಗುರುತಿಸಿದ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಗಮನಾರ್ಹ ನ್ಯೂನತೆಗಳ ಬಗ್ಗೆ ಸಂವಹನ ನಡೆಸುತ್ತೇವೆ.

ನಾವು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಪ್ರಸ್ತುತ ನೈತಿಕ ಅವಶ್ಯಕತೆಗಳನ್ನು ಪಾಲಿಸಿದ್ದೇವೆ ಎಂಬ ಹೇಳಿಕೆಯನ್ನು ಸಹ ಆಡಳಿತದ ಜವಾಬ್ದಾರಿಯನ್ನು ಹೊಂದಿರುವವರಿಗೆ ಒದಗಿಸುತ್ತೇವೆ ಮತ್ತು ನಮ್ಮ ಸ್ವಾತಂತ್ರ್ಯದ ಮೇಲೆ ಪರಿಣಾಮ ಬೀರಬಹುದು ಎಂದು ಸಮಂಜಸವಾಗಿ ಭಾವಿಸಬಹುದಾದ ಎಲ್ಲಾ ಸಂಬಂಧಗಳು ಮತ್ತು ಇತರ ವಿಷಯಗಳನ್ನು ಹಾಗೂ ಅನ್ವಯವಾಗುವಲ್ಲಿ, ಸಂಬಂಧಿತ ಸುರಕ್ಷತಾ ಕ್ರಮಗಳನ್ನು (Safeguards) ಅವರೊಂದಿಗೆ ಹಂಚಿಕೊಳ್ಳುತ್ತೇವೆ.

ಕಾನೂನು ಮತ್ತು ನಿಯಂತ್ರಣ ಅಗತ್ಯತೆ ಬಗ್ಗೆ ವರದಿ:

1. ಆಸ್ತಿ–ಜವಾಬ್ದಾರಿ ಪಟ್ಟಿ (Balance Sheet) ಮತ್ತು ಲಾಭ ಮತ್ತು ನಷ್ಟದ ಖಾತೆಯನ್ನು (Profit and Loss Account) ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿರುವ 'ಹಣಕಾಸು ಹೇಳಿಕೆಗಳು – ಪ್ರಸ್ತುತಿ ಮತ್ತು ಬಹಿರಂಗಪಡಿಸುವಿಕೆ'ಯ ಮಾಸ್ಟರ್ ಡೈರೆಕ್ಷನ್‌ನ ಕ್ರಮವಾಗಿ ಫಾರ್ಮ್ "ಎ" (Form A) ಮತ್ತು ಫಾರ್ಮ್ "ಬಿ" (Form B) ನಲ್ಲಿ ಸಿದ್ಧಪಡಿಸಲಾಗಿದೆ.
2. ಜೂನ್ 30, 2008 ರ ಗ್ರಾಮೀಣಾಭಿವೃದ್ಧಿಗಾಗಿ ರಾಷ್ಟ್ರೀಯ ಕೃಷಿ ಬ್ಯಾಂಕ್‌ನ (NABARD) ಸುತ್ತೋಲೆಯ ಪ್ರಕಾರ ಸುತ್ತೋಲೆ ಸಂಖ್ಯೆ 106/Dos–19/2008/ Ref. ಸಂ. NB.DOS. POL/1309/J.1/2008–09 ಸುತ್ತೋಲೆಯಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಮೇಲೆ ದೀರ್ಘ ನಮೂನೆಯ ಲೆಕ್ಕಪರಿಶೋಧನೆ ವರದಿಯನ್ನು (LFAR) ಲಗತ್ತಿಸಲಾಗಿದೆ.
3. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ರ ಸೆಕ್ಷನ್ 63 ರ ಉಪ–ಸೆಕ್ಷನ್ (16) ರ ಅಗತ್ಯದಂತೆ, ನಾವು ಈ ಕೆಳಗಿನಂತೆ ವರದಿ ಮಾಡುತ್ತೇವೆ:

- ನಮ್ಮ ಅತ್ಯುತ್ತಮ ಜ್ಞಾನ ಮತ್ತು ನಂಬಿಕೆಯ ಪ್ರಕಾರ, ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಅಗತ್ಯವಿರುವ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನಾವು ಪಡೆದುಕೊಂಡಿದ್ದೇವೆ;
- ನಮ್ಮ ಪರಿಶೀಲನೆಯಿಂದ ಕಂಡುಬರುವಂತೆ ಬ್ಯಾಂಕ್ ಮತ್ತು ಅದರ ಶಾಖೆಗಳು ಸೂಕ್ತ ಖಾತೆ ಪುಸ್ತಕಗಳನ್ನು ನಿರ್ವಹಿಸಿವೆ ಮತ್ತು ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಶಾಖೆಗಳು ಅಥವಾ ಸಹಕಾರ ಕೇಂದ್ರ ಬ್ಯಾಂಕಿನ ಕಚೇರಿಗಳಿಂದ ಸೂಕ್ತವಾದ ಮತ್ತು ಸಮರ್ಪಕವಾದ ವಿವರಣೆಗಳನ್ನು ಪಡೆಯಲಾಗಿದೆ.
- ಶಾಖೆಗಳ ಖಾತೆಗಳನ್ನು ನಾವು ಲೆಕ್ಕಪರಿಶೋಧನೆ ಮಾಡಿದ್ದೇವೆ ಮತ್ತು ಅದನ್ನು ಈ ವರದಿಯಲ್ಲಿ ಪರಿಗಣಿಸಲಾಗಿದೆ.
- ಈ ವರದಿಯಲ್ಲಿ ಪರಿಗಣಿಸಲಾದ ಆಸ್ತಿ–ಜವಾಬ್ದಾರಿ ಪಟ್ಟಿ ಮತ್ತು ಲಾಭ ಮತ್ತು ನಷ್ಟದ ಖಾತೆಯು ಖಾತೆ ಪುಸ್ತಕಗಳು ಮತ್ತು ಸಲ್ಲಿಕೆಗಳೊಂದಿಗೆ ಹೊಂದಾಣಿಕೆಯಾಗುತ್ತವೆ.

ಸಹಿ/–	ಸಹಿ/–	ಸಹಿ/–	ಸಹಿ/–	ಸಹಿ/–
ಪುಂಡಲೀಕ ಎಲ್.ಸಾದುರೆ ಕ.ಸ.ಸೇ.	**ಲಿಂಗೇಶ್‌ಕುಮಾರ ಎಸ್.**	**ಕೆ. ಸಿ. ಕೃಷ್ಣಪ್ಪ**	**ರಮೇಶ್ ಎಂ.**	**ಅಶೋಕ ಹೆಚ್.ಎನ್.**
ಮುಖ್ಯಕಾರ್ಯನಿರ್ವಹಣಾಧಿಕಾರಿ	ನಿರ್ದೇಶಕರು	ನಿರ್ದೇಶಕರು	ಉಪಾಧ್ಯಕ್ಷರು	ಅಧ್ಯಕ್ಷರು

ದಿನಾಂಕ: 22–06–2026
ಸ್ಥಳ: ಬೆಂಗಳೂರು

ಹೆಚ್.ಆರ್. ಸುರೇಶ್ & ಕೋ.
ಚಾರ್ಟಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ಸಂಖ್ಯೆ: 004268S

ಸಹಿ/–
ಸುಮಂತ್ ಹೆಚ್.ಎಸ್
ಪಾಲುದಾರರು
ಸದಸ್ಯತ್ವ ಸಂಖ್ಯೆ: 214898
UDIN: 26214898HSDRNS7523

ಸ್ಥಾಪನೆ : 1966 ಯಶಸ್ವಿ 58 ವರ್ಷಗಳ ಸಾರ್ಥಕ ಸಹಕಾರ ಬ್ಯಾಂಕಿಂಗ್ ಸೇವೆಯಲ್ಲಿ ನೋಂದಣಿ ಸಂಖ್ಯೆ : ಡಿ.ವೈ.ಆರ್.443

ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ-741, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

ಪ್ರಧಾನ ಕಛೇರಿ : 080-23151204, 23152073, ಬಸವೇಶ್ವರನಗರ ಶಾಖೆ : 080-23231238, 23232587, ಅನ್ನಪೂರ್ಣೇಶ್ವರಿನಗರ ಶಾಖೆ : 080-23183734, E-mail : contact@rcbl.co

ದಿನಾಂಕ 31-03-2026 ರಲ್ಲಿದ್ದಂತೆ ಆಸ್ತಿ ಜವಾಬ್ದಾರಿಗಳ ಸಮತೋಲನ ಪಟ್ಟಿ

ದಿನಾಂಕ 31/03/2025 ರಂತೆ	ಜವಾಬ್ದಾರಿಗಳು	ದಿನಾಂಕ 31/03/2026 ರಂತೆ	ದಿನಾಂಕ 31/03/2025 ರಂತೆ	ಆಸ್ತಿಗಳು	ದಿನಾಂಕ 31/03/2026 ರಂತೆ
200000000	ಅಧಿಕೃತ ಷೇರು ಬಂಡವಾಳ	200000000			
133119300	ಪಾವತಿಯಾದ ಷೇರು ಬಂಡವಾಳ	136266700	52884803	ನಗದು ಶಿಲ್ಕು ಮತ್ತು ಭಾರತೀಯ ರಿಸರ್ವ್	54610828
502477776	ಮೀಸಲು ನಿಧಿ ಮತ್ತು ಇತರೆ ನಿಧಿಗಳು	527427790	147905586	ಇತರೆ ಬ್ಯಾಂಕ್‌ಗಳ ಚಾಲ್ತಿ ಖಾತೆಯ ಶಿಲ್ಕು	128764957
3614319913	ಠೇವಣಿಗಳು ಮತ್ತು ಇತರೆ ಖಾತೆಗಳು	3912151618	1653213348	ಹೂಡಿಕೆಗಳು	2182640389
0	ಜವಾಬ್ದಾರಿಗಳು	0	2056216426	ಸಾಲಗಳು ಮತ್ತು ಮುಂಗಡಗಳು	2214380456
234535134	ಇತರೆ ಜವಾಬ್ದಾರಿಗಳು ಮತ್ತು ಅವಕಾಶಗಳು	261254880	13826216	ಸ್ಥಿರಾಸ್ತಿ & ಚರಾಸ್ತಿಗಳು	12914912
0		0	560405744	ಇತರೆ ಆಸ್ತಿಗಳು	243789446
4484452123	ಒಟ್ಟು ಮೊತ್ತ	4837100988	4484452123	ಒಟ್ಟು ಮೊತ್ತ	4837100988
6626141	ಅನಿಶ್ಚಿತ ಜವಾಬ್ದಾರಿಗಳು ಡಿ.ಇ.ಎ ಫಂಡ್ ಖಾತೆಯ ಮೊತ್ತ	7056484			

ದಿನಾಂಕ 31-03-2026 ರಲ್ಲಿದ್ದಂತೆ ಲಾಭ-ನಷ್ಟ ತ:ಖ್ತೆ

ದಿನಾಂಕ 31/03/2025 ರಂತೆ	ನಷ್ಟ	ದಿನಾಂಕ 31/03/2026 ರಂತೆ	ದಿನಾಂಕ 31/03/2025 ರಂತೆ	ಲಾಭ	ದಿನಾಂಕ 31/03/2026 ರಂತೆ
278412653	ಠೇವಣಿಗಳ ಮೇಲಿನ ಬಡ್ಡಿ	276490985	373791095	ಸಾಲಗಳು ಮತ್ತು ಇತರೆಗಳ ಮೇಲಿನ ಬಡ್ಡಿ	382933661
39704867	ಸಿಬ್ಬಂದಿ ವೇತನ , ಪಿ.ಎಫ್. ಹಾಗೂ ಭತ್ಯೆಗಳು	34725419	193989	ಕಮೀಷನ್, ಎಕ್ಸ್‌ಛೇಂಜ್ ಮತ್ತು ಬ್ರೋಕರೇಜ್	204471
853140	ನಿರ್ದೇಶಕರುಗಳ ಸಭೆಯ ಸಂಭಾವನೆ	1027860	8366584	ಇತರೆ ಜಮಾಗಳ ಆದಾಯ	9526786
3180118	ಬಾಡಿಗೆ, ತೆರಿಗೆ, ವಿಮೆ, ವಿದ್ಯುತ್, ಇತರೆ ವೆಚ್ಚಗಳು	2406782			
7729710	ಕಾನೂನು ಸಲಹಾ ವೆಚ್ಚಗಳು	828119			
222152	ಅಂಚೆ, ತಂತಿ, ದೂರವಾಣಿ ವೆಚ್ಚಗಳು	297459			
640424	ಲೆಕ್ಕಪರಿಶೋಧನಾ ವೆಚ್ಚಗಳು	610000			
2602010	ಸವಕಳಿ ಮತ್ತು ರಿಪೇರಿ ವೆಚ್ಚಗಳು	2347568			
605579	ಮುದ್ರಣ, ಲೇಖನ ಸಾಮಾಗ್ರಿ ಮತ್ತು ಜಾಹೀರಾತು ವೆಚ್ಚಗಳು	647477			
14492923	ಇತರೆ ವೆಚ್ಚಗಳು	16749655			
0	ಅವಕಾಶಗಳು ಮತ್ತು ಅನಿಶ್ಚಿತಗಳು	14068215			
9537741	ಆದಾಯ ತೆರಿಗೆ	10947750			
20421	ಮುಂದೂಡಲ್ಪಟ್ಟ (ಡೆಫರ್) ತೆರಿಗೆ	-425717			
31306669	ನಿವ್ವಳ ಲಾಭ	31943346			
382351668	ಒಟ್ಟು	392664918	382351668	ಒಟ್ಟು	392664918

Disclosure in financial statements – 'Notes to Account's- UCBs The Reserve Bank of India Master Direction - DoR.ACC.REC. No.208/21.04.018/2025-26 Dated November 28, 2025 (Updated as on April 1, 2026)

1. Regulatory Capital (Amount in ₹ crore)

Sr No.	Particulars	31/03/2026	31/03/2025
i)	Paid up share capital (net of deductions, if any)	13.63	13.31
ii)	Other Tier 1 capital	34.71	43.94
iii)	Tier 1 capital (I + ii)	48.35	57.25
iv)	Tier 2 capital	7.87	7.80
v)	Total capital (Tier 1+Tier 2)	56.20	65.05
vi)	Total Risk Weighted Assets (RWAs)	221.43	217.74
vii)	Paid-up share capital as percentage of RWAs	6.16%	6.11%
viii)	Tier 1 Ratio (Tier 1 capital as a percentage of RWAs)	21.83%	26.29%
ix)	Tier 2 Ratio (Tier 2 capital as a percentage of RWAs)	3.56%	3.58%
x)	Capital to Risk Weighted Assets Ratio (CRAR) (Total Capital as a percentage of RWAs)	25.39	29.87

2. Asset liability management: a) **Maturity pattern of certain items of assets and liabilities** (Amount in ₹ crore)

	1 to 14 Days	15 to 28 Days	29 Days to 3 Months	Over 3 Months and up to 6 Months	Over 6 Months and up to 1 Year	Over 1Year and up to 3 Year	Over 3 Year and up to 5 Year	Over 5 Year	Total
Deposits	31.77	5.26	22.27	11.32	56.06	147.96	39.87	76.71	391.22
Advances	0.25	0.88	0.90	1.77	12.55	23.56	39.94	141.59	221.44
Investments	60.95	4.18	35.84	20.20	17.20	35.95	0.00	43.94	218.26
Borrowings									

Note: The Investments are matched with the deficit in advances over deposits

3. Investments: a) **Composition of Investment Portfolio** (Amount in ₹ crore)

	Government Securities/State Development Loans As on 31/03/2026	Government Securities/State Development Loans As on 31/03/2025
Held to Maturity	62.74	62.64
Available for Sale	98.95	55.09
Less: Provision for NPI & IDR	4.22	2.85
Net	94.73	52.24
Total Investments	**157.47**	**114.88**

b) **Movement of Provisions for Depreciation and Investment Fluctuation Reserve** (Amount in ₹ crore)

Particulars	31/03/2026	31/03/2025
i) Movement of provisions held towards depreciation on investments	2.85	2.85
a) Opening balance	1.37	0.00
b) Add: Provisions made during the year	0.00	0.00
c) Less: Write off / write back of excess provisions during the year	4.22	2.85
d) Closing balance		
ii) Movement of Investment Fluctuation Reserve	5.10	5.07
a) Opening balance	0.00	0.03
b) Add: Amount transferred during the year	0.00	0.00
c) Less: Drawdown	5.10	5.10
d) Closing balance		
iii) Closing balance in IFR as a percentage of closing balance of investments in AFS and HFT/Current category	5.16%	9.27%

c) **Sale and transfers to/from HTM category :** Where the value of sales and transfers of securities to/from HTM category exceeds 5 per cent of the book value of investments held in HTM category at the beginning of the year, banks shall disclose the market value of the investments held in the HTM category. The excess of book value over market value for which provision is not made shall also be disclosed. The 5 per cent threshold referred to above shall exclude:

i) The one-time transfer of securities to/from HTM category with the approval of Board of Directors undertaken by banks at the beginning of the accounting year - Yes

d) **Non-SLR investment portfolio**

i) Non-performing non-SLR investments: ***NIL***

ii) Issuer composition of non-SLR investments

Sr No	Issuer	Amount		Extent of Private Placement		Extent of 'Below Investment Grade' Securities		Extent of 'Unrated' Securities		Extent of 'Unlisted' Securities	
(1)	(2)	(3)		(4)		(5)		(6)		(7)	
		Current year	Previous Year	Current year	Previous Year	Current year	Previous Year	Current year	Previous Year	Current year	Previous Year
a)	PSUs										
b)	FIs										
c)	Banks										
d)	Private Corporate										
e)	Subsidiaries/ Joint Ventures										
f)	Others			00.002	00.002						
g)	Provision held towards depreciation										
	Total *			00.002	00.002						

4. Asset Quality: a) Classification of advances and provisions held pending

	Standard	Non-Performing				Total
	Total Standard Advances	Sub- standard	Doubtful	Loss	Total Non- Performing Advances	
Gross Standard Advances and NPAs						
Opening Balance	199.49	4.34	1.24	0.55	6.13	205.62
Add: Additions during the year	[redacted]				5.03	51.81
Less: Reductions during the year*					4.51	36.00
Closing balance	214.78	0.88	5.45	0.32	6.65	221.43
*Reductions in Gross NPAs due to:	[redacted]					
Upgradation						
Recoveries (excluding recoveries from upgraded accounts)						
Write-offs						
Provisions (excluding Floating Provisions)						
Opening balance of provisions held	0.82				15.18	15.18
Add: Fresh provisions made during the year	[redacted]				0.00	0.00
Less: Excess provision reversed/ Write-off loans					0.00	0.00
Closing balance of provisions held	0.86				15.18	15.18
Net NPAs						
Opening Balance	[redacted]				NIL	[redacted]
Add: Fresh additions during the year					NIL	
Less: Reductions during the year					NIL	
Closing Balance					NIL	

Ratios (in per cent)	31/03/2026	31/03/2025
Gross NPA to Gross Advances	3.00%	2.98%
Net NPA to Net Advances	0.00%	0.00%
Provision coverage ratio	228.19%	247.63%

b) Sector-wise Advances and Gross NPAs (Amount in ₹ crore)

Sr. No.	Sector	31/03/2026 Outstanding Total Advances	31/03/2026 Gross NPAs	31/03/2026 Percentage of Gross NPAs to Total Advances in that sector	31/03/2025 Outstanding Total Advances	31/03/2025 Gross NPAs	31/03/2025 Percentage of Gross NPAs to Total Advances in that sector
i)	**Priority Sector**						
a)	Agriculture and allied activities	1.30	0.00	0.00%	1.18	0.00	0.00%
b)	Advances to industries sector eligible as priority sector lending	25.44	0.89	3.48%	21.16	0.89	4.21%
c)	Services						
d)	Other Loans Including Personal loans	41.62	2.37	5.69%	59.57	1.88	3.16%
	Subtotal (i)	68.36	3.25		81.90	2.77	
ii)	**Non-priority Sector**						
a)	Agriculture and allied activities						
b)	Industry						
c)	Services						
d)	Other Loans Including Personal loans	153.07	3.41	2.23%	123.72	3.35	2.71%
	Sub-total (ii)	153.07	3.41	2.23%	123.72	3.35	2.71%
	Total (I + ii)	**221.43**	**6.65**		**205.62**	**6.12**	
	PSLC Purchased	**200.00**			**76.00**		

c) Overseas assets, NPA and revenue : No Exposure/ transactions during the current/ previous Years.

d) Particulars of resolutions plan and restructuring : ii) Details of accounts subjected to restructuring - NIL

e) Divergence in asset clarification and provisioning

Sr.	Particulars	Amount (In crores)
1.	Gross NPAs as on March 31 2025* as reported by the bank	6.12
2.	Gross NPAs as on March 31 2025 as assessed by Reserve Bank of India	8.11
3.	Divergence in Gross NPAS(2-1)	1.98
4.	Net NPAs as on March 31,2025 as reported by the bank	0.00
5.	Net NPAs as on March 31,2025 as assessed by Reserve Bank of India	0.00
6.	Divergence in Net NPAs (5-4)	0.00
7.	Provisions for NPAs as on March 31,2025 reported by the bank	15.18
8.	Provisions for NPAs as on March 31,2025 as assessed by Reserve Bank of India	15.18
9.	Divergence in Provision (8-7)	0.00
10.	Reported Profit before Provisions and Contingencies for the year ended March31,2025	4.51
11.	Reported Net Profit after Tax (PAT) for the year ended March 31,2025	4.51
12.	Adjusted (notional) Net Profit after Tax (PAT) for the year ended March 31,2025 after considering the divergence in provisioning	0.00

*March 31,2025 is the close of the reference period in respect of which divergences were assessed

f) **Disclosure of transfer of loan exposure**: Nil

g) **Non – Fund Based Credit Facilities:** Nil

h) **Fraud accounts**

Banks shall make disclose details on the number and amount of frauds as well as the provisioning thereon as per template given below.

(Amounts in ₹ crore)

	31/03/2026	31/03/2025
Number of frauds reported	0	0
Amount involved in fraud (₹ crore)	0.00	0.00
Amount of provision made for such frauds (₹ crore)	0.00	0.00
Amount of Un-amortized provision debited from 'other reserves' as at the end of the year. (₹ crore)	0.00	0.00

i) Disclosure under Resolution Framework for COVID-19-related Stress Format for disclosures to be made starting March 31, 2026 NA

5. Exposures

a) **Exposure to real estate sector**: Bank has not Provided any Loans to Real Estate Sector NIL

b) **Exposure to capital market**-NIL

c) **Risk category-wise country Exposure**-Not applicable

d) **Unsecured advances** (Amounts in ₹ crore)

Particulars	31/03/2026	31/03/2025
Total unsecured advances of the bank	1.92	1.21

e) **Factoring exposures**-NIL

f) **Unhedged foreign currency Exposure**-Not Applicable

Annex 1

THE RAJAJINAGAR COOP BANK LTD

Part A - Details of loans extended against eligible gold and silver collateral

	PARTICULARS	Loan Outstanding Rs. in Crore	As % of Total Loans	Average Ticket Size Rs. in Crore	Average LTV ratio	Gross NPA (%)
1	Opening Balance of the FY (a) +(b)	14.67	7.13%	0.01	58.43	-
	(a) Consumption Loans	14.67	7.13%	0.01	58.43	-
	of which bullet repayment	14.57	7.09%	0.01	58.47	-
	(b) Income generating Loans	-	-	-	-	-
2	New Loans sanctioned and disbursed during the FY (c) + (d)	28.83	13.02%	0.02	57.43	NA
	(c) Consumption Loans	28.83	13.02%	0.02	57.43	NA
	of which bullet repayment	28.73	12.97%	0.02	57.42	NA
	(d) Income generating Loans	-	-	-	-	NA
3	Renewals sanctioned and Disbursed during the FY	-	-	-	-	NA
4	Top - up Loans Sanctioned and disbursed during the FY	-	-	-	-	NA
5	Loans repaid during the FY (e) + (f)	21.10	9.53%	0.01	NA	NA
	(e) Consumption Loans	21.10	9.53%	0.01	NA	NA
	of which bullet repayment	20.95	9.46%	0.01	NA	NA
	(f) Income generating Loans	-	-	-	NA	NA
6	Non performing loans recovered during the FY (g) + (h)	-	-	-	NA	NA
	(g) Consumption Loans	-	-	-	NA	NA
	of which bullet repayment	-	-	-	NA	NA
	(h) Income generating Loans	-	-	-	NA	NA
7	Loans Written off during the FY (i)+ (j)	-	-	-	NA	NA
	(i) Consumption Loans	-	-	-	NA	NA
	of which bullet repayment	-	-	-	NA	NA
	(j) Income generating Loans	-	-	-	NA	NA
8	Closing balance at the end of FY (k) + (l)	22.40	10.12%	0.02		
	(k) Consumption Loans	22.40	10.12%	0.02	56.16	-
	of which bullet repayment	22.35	10.09%	0.02	56.15	-
	(l) Income generating Loans	-	-	-		-

PART B - Details of Gold and Silver Collateral and Auctions

SI No.	Particulars	
a)	Unclaimed gold an silver collateral at the end of the FY (in grams)	NIL
b)	Number of loan accounts in which auctions were conducted	NIL
c)	Total Outstanding in Loan accounts mentioned in (b)	NIL
d)	Gold or Silver collateral acquired during the FY due to default of Loans (in grams)	NIL
e)	Gold or Silver collateral auctioned during the FY (in Crore)	NIL
f)	Recovery made through auctions during the FY (in Crore)	NIL
g)	Recovery Persentage:	NA
h)	as % of Value of gold or silver collateral	
i)	as % of Outstanding loan	

6. Concentration of deposits, advances and NPAs: a) Concentration of deposits (Amounts in ₹ crore)

Particulars	31/03/2026	31/03/2025
Total deposits of the twenty largest depositors	25.85	26.46
Percentage of deposits of twenty largest depositors to total deposits of the bank	6.61%	7.32%

b) Concentration of advances (Amounts in ₹ crore)

Particulars	31/03/2026	31/03/2025
Total advance of the twenty largest borrowers	22.09	19.90
Percentage of advances of twenty largest borrowers to total advance of the bank	9.97%	9.68%

c) Concentration of NPAs (Amounts in ₹ crore)

Particulars	31/03/2026	31/03/2025
Total Exposure of the twenty largest NPA accounts	5.43	5.47
Percentage of twenty largest NPA accounts to total Exposure of the bank	2.45%	2.66%

7. Derivative: Nil

8. Transfers to Depositor Education and Awareness Fund (DEA Fund) (Amounts in ₹ crore)

Sr. No.	Particulars	31/03/2026	31/03/2025
i)	Opening balance of amounts transferred to DEA Fund	0.67	0.68
ii)	Add: Amounts transferred to DEA Fund during the year	0.07	0.01
iii)	Less: Amounts reimbursed by DEA Fund towards claims	0.03	0.02
iv)	Closing balance of amounts transferred to DEA Fund	0.71	0.67

9. Disclosure of complaints: a) **Summary information on complaints received by the bank from customers and from the Offices of Banking Ombudsman (OBOs)**

Sr No		Particulars	31/03/2026	31/03/2025
	Complaints received by the bank from its customers			
1		Number of complaints pending at beginning of the year	-	-
2		Number of complaints received during the year	2	5
3		Number of complaints disposed during the year	2	5
	3.1	Of which, number of complaints rejected by the bank	-	-
4		Number of complaints pending at the end of the year	-	-
	Maintainable complaints received by the bank from OBOs			
5		Number of maintainable complaints received by the bank from OBOs	-	-
	5.1.	Of 5, number of complaints resolved in favour of the bank by BOs	-	-
	5.2	Of 5, number of complaints resolved through conciliation/ mediation/ advisories issued by BOs	-	-
	5.3	Of 5, number of complaints resolved after passing of Awards by BOs against the bank	-	-
6		Number of Awards unimplemented within the stipulated time (other than those appealed)	-	-
Note: Maintainable complaints refer to complaints on the grounds specifically mentioned in BO Scheme 2006 and covered within the ambit of the Scheme.				

10. Disclosure of penalties imposed by the Reserve Bank of India: Penalties imposed by the Reserve Bank of India under the provisions of the: (i) Banking Regulation Act, 1949 and (ii) Payment and Settlement Systems Act, 2007 shall be disclosed in the 'Notes to Accounts' to the balance sheet in the concerned bank's next Annual Report. Banks shall make appropriate disclosures on the nature of the breach, number of instances of default and the quantum of penalty imposed - *NIL*

11. Other Disclosures : a) Business ratios

Particular	31/03/2026	31/03/2025
i) Interest Income as a percentage to Working Funds	8.26%	8.84%
ii) Non-interest income as a percentage to Working Funds	0.21%	0.11%
iii) Cost of Deposits	7.07%	7.70%
iv) Net Interest Margin	2.41%	2.46%
v) Operating Profit as a percentage to Working Funds	0.92%	0.96%
vi) Return on Assets	0.69%	0.70%
vii) Business (deposits plus advances) per employee (in ₹ crore)	18.56	15.75
viii) Profit per employee (in ₹ crore)	0.13	0.11

b) Bancassurance business: Bank has not taken any Bancassurance business

c) Marketing and distribution: Nil

d) Disclosures regarding Priority Sector Lending Certificates(PSLCs): The Bank Has Purchased PSLCs (General) of Rs.170 Crores, Small & Marginal Farmer (Weaker Section Sub Target) of Rs.30 Crores at a premium of Rs.53,42,400/- including GST under RCM

e) Provisions and contingencies:

Provision debited to Profit and Loss Account	31/03/2026	31/03/2025
i) Provisions for NPI	0.00	0.00
ii) Provision towards NPA	0.00	0.00
iii) Provision made towards Income tax	1.09	0.95
iv) Provisions for Investment Depreciation Reserve	1.36	0.00
v) General Provision	0.00	0.00

f) Payment of DICGC Insurance Premium:

Sr No.	Particulars	31/03/2026	31/03/2025
i)	Payment of DICGC Insurance Premium	0.45	0.42
ii)	Arrears in payment of DICGC premium	0.00	0.00

g) Disclosure of facilities granted to directors and their relative:

Sr No.	Director Name and their Relative Details	Loan Balance
i)	Smt Usha SS, Director,Sri.S.M.Muniraju , Loan Account No: 1001073021742	9.40 Lakhs

Bank has not provided any fund or non-fund (guarantees, letters of credit, etc.) facilities extended to director's relatives, companies or firms in which they are interested during this Financial Year.

h) Bank has shares at Bangalore DCC Bank for Rs. 25,000/-. Dividend for the same has not been credited during this financial year. However, provision for the same has not been created as the Bank already has sufficient provision in IFR.

i) Following Bank Deposit are under lien for the banking facilities/ arrangements:

Name of Bank where FD is maintained	Amount	Lien Against
Indusind Bank Ltd	2,00,00,000	Clearing Trunk System (CTS)
HDFC Bank Ltd	50,00,000	ATM facility
HDFC Bank Ltd	20,00,000	RTGS/NEFT facility
HDFC Bank Ltd	20,00,000	IMPS facility

j) Employee Benefit w.r.t Gratuity liability is being handled by fund trust created by making contribution to the scheme of Life Insurance Corporation of India (LIC). The Premium is remitted annually as per demand raised by LIC of India and in view of the same, bank has no outstanding liability to be discharged towards gratuity liability as at the end of the year.

k) Further, the Bank has recognized provision towards leave encashment liability at the end of the year based on the leaves carried forwarded and salary drawn as applicable.

(ಅನುಷ .ಎಂ.ಎನ್)
ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

(ಡಿ.ಎನ್. ಸುಬ್ಬರಾಯಪ್ಪ)
ಉಪಾಧ್ಯಕ್ಷರು

(ಕೆ.ಎಲ್.ತಿಮ್ಮಪ್ಪ)
ಅಧ್ಯಕ್ಷರು

ದೃಢೀಕರಣ ಪತ್ರ

ನಾನು ಮೇಲ್ಕಂಡ "ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿ.," ಇದರ 2025-26 ನೇ ಸಾಲಿನ ಲೆಕ್ಕಪರಿಶೋಧನೆಯನ್ನು ನಡೆಸಿರುತ್ತೇನೆ. ನನ್ನ ಅತ್ಯುತ್ತಮ ಜ್ಞಾನ ಹಾಗೂ ನಂಬಿಕೆಯಂತೆ ಲೆಕ್ಕಪರಿಶೋಧನೆಗೆ ಅಗತ್ಯವಾದ ಮಾಹಿತಿ ಹಾಗೂ ವಿವರಣೆಯನ್ನು ಪಡೆದಿರುತ್ತೇನೆ ಹಾಗೂ ಅವು ಸತ್ಯವಾದವುಗಳೆಂದು ಕಂಡುಬಂದಿರುತ್ತದೆ. ನನ್ನ ಅಭಿಪ್ರಾಯದಂತೆ ಹಾಗೂ ನನಗೆ ದೊರೆತ ಮಾಹಿತಿ ವಿವರಣೆಯಂತೆ ಹಾಗೂ ಲಗತ್ತಿಸಿರುವ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಿರುವುದಕ್ಕೆ ಒಳಪಟ್ಟು ಬ್ಯಾಂಕಿನ ಲಾಭ-ನಷ್ಟ ಮತ್ತು ಆಸ್ತಿ-ಜವಾಬ್ದಾರಿ ತ:ಖ್ತೆಯು ಬ್ಯಾಂಕಿನ ಆರ್ಥಿಕ ಸ್ಥಿತಿಯ ನಿಜ ಸಮಂಜಸ ಸ್ಥಿತಿಯನ್ನು ದಿನಾಂಕ 31-03-2026 ರಲ್ಲಿದ್ದಂತೆ ತಿಳಿಯಪಡಿಸುತ್ತದೆ.

ಮೆ॥ ವೈ.ಸಿ.ಆರ್.ಜೆ & ಅಸೋಸಿಯೆಟ್ಸ್
ಲೆಕ್ಕ ಪರಿಶೋಧಕರು
ಫರ್ಮ್ ನೊಂದಣಿ ಸಂಖ್ಯೆ: 00697ಎಸ್
(ಸಿ.ಎ ರಮೇಶ್ ಅಂಗಡಿ) ಪಾಲುದಾರರು
ಸ.ಸಂ 234143
UDIN: 26234143NPMCLR4196

ಸ್ಥಳ: ಬೆಂಗಳೂರು
ದಿನಾಂಕ: 25-06-2026

ವೈಶಾಕ್ ಆತ್ಮಹತ್ಯೆ: ಪೊಲೀಸರ ವಿರುದ್ಧ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ, 'ಬಿಗ್‌ಬಾಸ್' ಕನ್ನಡ ರಿಯಾಲಿಟಿ ಶೋನ ಮಾಜಿ ಸ್ಪರ್ಧಿ ಕೃಷಿ ತಾಪಂಡ ಅವರ ಆಪ್ತ ಗೆಳೆಯ ವೈಶಾಕ್ (45) ಆತ್ಮಹತ್ಯೆ ಪ್ರಕರಣದಲ್ಲಿ ಎಚ್‌ಎಎಲ್ ಠಾಣೆಯ ಹಿಂದಿನ ತನಿಖಾಧಿಕಾರಿಗಳ ವಿರುದ್ಧ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಆದೇಶಿಸಿದ್ದಾರೆ.

ಉದ್ಯಮಿ ಅರವಿಂದ್ ವೆಂಕಟೇಶ್ ರೆಡ್ಡಿಗೆ ಬೆದರಿಕೆ ಹಾಕಿದ್ದ ಪ್ರಕರಣದಲ್ಲಿ ವೈಶಾಕ್ ಅವರನ್ನು ಎಚ್‌ಎಎಲ್ ಠಾಣೆ ಪೊಲೀಸರು ಕಳೆದ ಫೆಬ್ರುವರಿ 6ರಂದು ಬಂಧಿಸಿದ್ದರು. ವಿಚಾರಣೆಯ ನೆಪದಲ್ಲಿ ವೈಶಾಕ್ ಮೇಲೆ ಎಚ್‌ಎಎಲ್ ಠಾಣೆಯ ಹಿಂದಿನ ತನಿಖಾಧಿಕಾರಿ ಹಾಗೂ ತನಿಖಾ ತಂಡದಲ್ಲಿದ್ದ ಸಿಬ್ಬಂದಿ ದೌರ್ಜನ್ಯ ಎಸಗಿದ್ದರು. ಅಲ್ಲದೇ ಜಾಮೀನು ಪಡೆದು ಹೊರಬಂದ ಮೇಲೂ ವೈಶಾಕ್ ಅವರನ್ನು ಠಾಣೆಗೆ ಕರೆಸಿ ಕಿರುಕುಳ ನೀಡಿದ್ದರು ಎಂಬ ಆರೋಪವಿದೆ. ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಕೃಷಿ ತಾಪಂಡ ಅವರ ಆರ್.ಆರ್ ನಗರದ ಎಲಿಗೆಂಟ್ ಟೆರಸ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್ ಸಂಖ್ಯೆ: 403ರಲ್ಲಿ ಜೂನ್ 24ರಂದು ವೈಶಾಕ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು.

ಅಪರಾಧ ಸುದ್ದಿ

₹25.23 ಕೋಟಿ ಮೌಲ್ಯದ ಡ್ರಗ್ಸ್ ವಶ

ನಗರದ 9 ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಭರ್ಜರಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 9 ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ₹25.23 ಕೋಟಿ ಮೌಲ್ಯದ ವಿವಿಧ ಮಾದರಿಯ ಮಾದಕ ವಸ್ತುಗಳು, ಇ- ಸಿಗರೇಟ್ ಜಪ್ತಿ ಮಾಡಿರುವ ಪೊಲೀಸರು, 17 ಮಂದಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳ, ಆರ್.ಎಂ.ಸಿ ಯಾರ್ಡ್, ಸುಬ್ರಹ್ಮಣ್ಯ ನಗರ, ಮಡಿವಾಳ, ರಾಜಾಜಿನಗರ, ವೈಟ್‌ಫೀಲ್ಡ್, ತಿಲಕ್‌ನಗರ, ಯಶವಂತಪುರ, ಇಂದಿರಾ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ 10 ಕೆ.ಜಿ 306 ಗ್ರಾಂ ಎಂಡಿಎಂಎ, 127 ಕೆ.ಜಿ 302 ಗ್ರಾಂ ಗಾಂಜಾ, 3 ಕೆ.ಜಿ 314 ಗ್ರಾಂ ಹೈಡ್ರೊಗಾಂಜಾ, 300 ಇ-ಸಿಗರೇಟ್, 90 ಹುಕ್ಕಾ ಫ್ಲೇವರ್‌ಗಳು, 30 ಹುಕ್ಕಾ ಪಾಟ್, ಏಳು ಮೊಬೈಲ್ ಫೋನ್, ಆರು ದ್ವಿಚಕ್ರ ವಾಹನ, ಒಂದು ಕಾರು ಜಪ್ತಿ ಮಾಡಲಾಗಿದೆ. ಇದರ ಮಾರುಕಟ್ಟೆ ಮೌಲ್ಯ ₹25.23 ಕೋಟಿ ಎಂಬುದಾಗಿ ಅಂದಾಜಿಸಲಾಗಿದೆ ಎಂದು ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾಹಿತಿ ನೀಡಿದರು.

'ಖಚಿತ ಮಾಹಿತಿ ಆಧರಿಸಿ ವಿವಿಧೆಡೆ ಕಾರ್ಯಾಚರಣೆ ನಡೆಸಲಾಯಿತು. ಮೂವರು ವಿದೇಶಿಯರು, ಹೊರ ರಾಜ್ಯದ 8 ಹಾಗೂ ಸ್ಥಳೀಯ ಆರು ಮಂದಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಲಾಗಿದೆ' ಎಂದು ಮಾಹಿತಿ ನೀಡಿದರು.



ಆರೋಪಿಗಳಿಂದ ಜಪ್ತಿ ಮಾಡಿಕೊಂಡ ವಿವಿಧ ಮಾದರಿಯ ಮಾದಕ ವಸ್ತುಗಳನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಪರಿಶೀಲಿಸಿದರು

'ನೈಜೀರಿಯಾದ ಮೂವರು ಪೆಡ್ಲರ್‌ಗಳು 'ಲಗೇಜ್ ಟ್ರಾಲಿ ಬ್ಯಾಗ್'ನಲ್ಲಿ ಸಿಂಥೆಟಿಕ್ ಡ್ರಗ್ಸ್ ಅಡಗಿಸಿಟ್ಟು ತರುತ್ತಿದ್ದರು. ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ನೈಜೀರಿಯಾದ ಪ್ರಜೆಗಳಿಂದ ₹23 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ' ಎಂದರು.

'ವಿದೇಶ ಮತ್ತು ಅನ್ಯರಾಜ್ಯದ ವ್ಯಕ್ತಿಗಳಿಂದ ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ಖರೀದಿಸುತ್ತಿದ್ದ ಪೆಡ್ಲರ್‌ಗಳು, ಬಳಿಕ ಅದನ್ನು ಕಾಲೇಜು ವಿದ್ಯಾರ್ಥಿಗಳು, ಟೆಕಿಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು. ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಡ್ರಗ್ಸ್ ಪೂರೈಸುತ್ತಿದ್ದ ಮುಖ್ಯ ಆರೋಪಿಗಳ ಪತ್ತೆ ಕಾರ್ಯ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

ವಶಪಡಿಸಿಕೊಂಡ ಮಾದಕ ವಸ್ತು ಹಾಗೂ ಇ-ಸಿಗರೇಟ್‌ನ ಮಾರುಕಟ್ಟೆ ಮೌಲ್ಯ

ಪೊಲೀಸ್ ಠಾಣೆ	ಮಾದಕ ವಸ್ತು ಮೌಲ್ಯ
ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳ	₹23 ಕೋಟಿ
ಆರ್‌ಎಂಸಿ ಯಾರ್ಡ್	₹72.30 ಲಕ್ಷ
ಸುಬ್ರಹ್ಮಣ್ಯನಗರ	₹69.64 ಲಕ್ಷ
ಮಡಿವಾಳ	₹36 ಲಕ್ಷ
ರಾಜಾಜಿನಗರ	₹15.84 ಲಕ್ಷ
ತಿಲಕ್‌ನಗರ	₹20.20 ಲಕ್ಷ
ವೈಟ್‌ಫೀಲ್ಡ್	₹22 ಲಕ್ಷ
ಯಶವಂತಪುರ	₹8 ಲಕ್ಷ
ಇಂದಿರಾ ನಗರ	₹3.24 ಲಕ್ಷ

ಉತ್ತರ ವಿಭಾಗದ 13 ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ

₹33.50 ಲಕ್ಷ ಮೌಲ್ಯದ 176 ಮೊಬೈಲ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ವಿಭಾಗದ 13 ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಾರ್ವಜನಿಕರು ಕಳೆದುಕೊಂಡಿದ್ದ ಹಾಗೂ ಕಳ್ಳತನವಾಗಿದ್ದ 176 ಮೊಬೈಲ್ ಫೋನ್‌ಗಳನ್ನು 'ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್' (ಸಿಇಐಆರ್) ಪೋರ್ಟಲ್ ಸಹಾಯದಿಂದ ಪತ್ತೆಹಚ್ಚುವಲ್ಲಿ ಪೊಲೀಸರು ಯಶಸ್ವಿ ಆಗಿದ್ದಾರೆ.

ಏಪ್ರಿಲ್-ಮೇನಲ್ಲಿ ನಡೆದಿದ್ದ ವಿಶೇಷ ಕಾರ್ಯಾಚರಣೆಯಲ್ಲಿ ಕಳ್ಳರಿಂದ ₹33.50 ಲಕ್ಷ ಮೌಲ್ಯದ ವಿವಿಧ ಕಂಪನಿಗಳ ಮೊಬೈಲ್ ಫೋನ್‌ಗಳನ್ನು ಪೊಲೀಸರು ಜಪ್ತಿ ಮಾಡಿಕೊಂಡು ಮಾಲೀಕರಿಗೆ ಹಸ್ತಾಂತರಿಸಿದ್ದಾರೆ.

'ಮಲ್ಲೇಶ್ವರ ಠಾಣೆ ಪೊಲೀಸರು 15, ಶ್ರೀರಾಮಪುರ 12, ರಾಜಾಜಿನಗರ 15, ಸುಬ್ರಹ್ಮಣ್ಯಪುರ 14, ಮಹಾಲಕ್ಷ್ಮಿ ಲೇಔಟ್ 17, ಯಶವಂತಪುರ 12, ಜಾಲಹಳ್ಳಿ 14, ಆರ್.ಎಂ.ಸಿ ಯಾರ್ಡ್ 5, ನಂದಿನಿಲೇಔಟ್ 18, ಜೆ.ಸಿ ನಗರ 19, ಸಂಜಯನಗರ 11, ಆರ್.ಟಿ ನಗರ 16, ಹೆಬ್ಬಾಳ ಠಾಣೆಯ ಪೊಲೀಸರು 8 ಮೊಬೈಲ್ ಫೋನ್‌ಗಳನ್ನು ಜಪ್ತಿ ಮಾಡಿದ್ದಾರೆ' ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

ಕಳ್ಳತನವಾದ ಮೊಬೈಲ್‌ಗಳ ಮಾಹಿತಿಯನ್ನು 'ಇ-ಲಾಸ್ಟ್' ಆ್ಯಪ್ ಹಾಗೂ ಕೇಂದ್ರ ಸರ್ಕಾರ ರೂಪಿಸಿರುವ 'ಸಿಇಐಆರ್ ಪೋರ್ಟಲ್'ನಲ್ಲಿ ದಾಖಲು ಮಾಡಲಾಗುತ್ತದೆ. ಉತ್ತರ ವಿಭಾಗದ ಪೊಲೀಸರು ತಾಂತ್ರಿಕ ಸುಳಿವು ಆಧರಿಸಿ, ತನಿಖೆ ನಡೆಸಿ ಮೊಬೈಲ್ ಪತ್ತೆ ಮಾಡಿ, ಜಪ್ತಿ ಮಾಡಿಕೊಳ್ಳುವಲ್ಲಿ ಯಶಸ್ವಿ ಆಗಿದ್ದಾರೆ.

ಸಾರ್ವಜನಿಕರು ಕಳೆದುಕೊಂಡ ಮೊಬೈಲ್ ಫೋನ್‌ನ ವಿವರವನ್ನು 'ಸಿಇಐಆರ್ ಪೋರ್ಟಲ್'ನಲ್ಲಿ ದಾಖಲಿಸುವುದರಿಂದ ಅಥವಾ ಪೊಲೀಸ್ ಠಾಣೆಗಳಲ್ಲಿ ದೂರು ನೀಡುವುದರಿಂದ ಪತ್ತೆ ಮಾಡಲು ಅನುಕೂಲ ಆಗಲಿದೆ ಎಂದು ಪೊಲೀಸರು ಮನವಿ ಮಾಡಿದರು.

ಉತ್ತರ ವಿಭಾಗದ ಡಿಸಿಪಿ ಬಿ.ಎಸ್. ನೇಮಗೌಡ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

ಡಿ.ಡಿ: 562 ಮಂದಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಮದ್ಯಪಾನ ಮಾಡಿ ವಾಹನ ಚಾಲನೆ (ಡಿ.ಡಿ ಕೇಸ್) ಮಾಡುವವರ ವಿರುದ್ಧ ನಗರದ 53 ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗಿದ್ದು, 562 ಚಾಲಕರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ.

'ಜೂನ್ 22ರಿಂದ 28ರ ವರೆಗೆ ನಡೆದ ಕಾರ್ಯಾಚರಣೆಯಲ್ಲಿ 40,898 ವಿವಿಧ ಮಾದರಿಯ ವಾಹನಗಳನ್ನು ಪರಿಶೀಲನೆಗೆ ಒಳಪಡಿಸಲಾಯಿತು' ಎಂದು ಸಂಚಾರ ಪೊಲೀಸರು ಹೇಳಿದರು.

'ಇದೇ ವೇಳೆ ಅತಿವೇಗದಿಂದ ವಾಹನ ಚಲಾಯಿಸುವವರ ವಿರುದ್ಧವೂ ವಿಶೇಷ ಕಾರ್ಯಾಚರಣೆ ನಡೆಸಿ, 65 ಮಂದಿ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ. ಅಲ್ಲದೇ ₹65 ಸಾವಿರ ದಂಡ ಸಂಗ್ರಹ ಮಾಡಲಾಗಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

'ಮದ್ಯಪಾನ ಮಾಡಿ ವಾಹನ ಚಲಾಯಿಸುವ ಹಾಗೂ ಅತಿವೇಗದಿಂದ ವಾಹನ ಚಲಾಯಿಸುವವರ ಹಾವಳಿ ತಡೆಗಟ್ಟಲು, ರಸ್ತೆ ಸುರಕ್ಷತೆಗಾಗಿ ಇಂತಹ ಕಾರ್ಯಾಚರಣೆಯನ್ನು ಮುಂದುವರಿಸಲಾಗುವುದು' ಎಂದು ತಿಳಿಸಿದರು.

ವಿಚಾರಣೆ ನೆಪದಲ್ಲಿ ವಿಕೃತಿ: ಪಿಎಸ್‌ಐ ಸೆರೆ

ಬೆಂಗಳೂರು: ವಿಚಾರಣೆಯ ನೆಪದಲ್ಲಿ ಬಾಲಕರನ್ನು ಕರೆತಂದು ವಿಕೃತ ವರ್ತನೆ ತೋರಿದ ಆರೋಪದಡಿ ಅಮೃತಹಳ್ಳಿ ಠಾಣೆಯ ಪಿಎಸ್‌ಐ ಪ್ರವೀಣ್ ಅವರನ್ನು ಸೋಮವಾರ ಬಂಧಿಸಲಾಗಿದೆ.



ಪ್ರವೀಣ್

'ಕೊತ್ತನೂರು ಪೊಲೀಸ್ ಠಾಣೆಯಲ್ಲಿ ಪೋಕ್ಸೊ (ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ) ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ಪಿಎಸ್‌ಐ ವಿಚಾರಣೆ ನಡೆಸಲಾಗುತ್ತಿದೆ' ಎಂದು ಇಲಾಖೆಯ ಮೂಲಗಳು ತಿಳಿಸಿವೆ.

'ಕೆಲವು ತಿಂಗಳ ಹಿಂದೆ ಕೊಲೆ ಪ್ರಕರಣವೊಂದರ ಸಂಬಂಧ ಬಾಲಕರನ್ನು ಪಿಎಸ್‌ಐ ಪ್ರವೀಣ್ ಕರೆ ತಂದು ಸ್ಥಳವೊಂದರಲ್ಲಿ ಇರಿಸಿದ್ದರು. ಬಾಲಕರ ಮೇಲೆ ದೌರ್ಜನ್ಯ ಎಸಗುತ್ತಿರುವ ವಿಡಿಯೊವೊಂದು ಇದೀಗ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು, ಅದನ್ನು ಆಧರಿಸಿ ಪಿಎಸ್‌ಐ ಅವರನ್ನು ಬಂಧಿಸಲಾಗಿದೆ' ಎಂದು ಮೂಲಗಳು ಹೇಳಿವೆ.

'ಸ್ಥಳವೊಂದರಲ್ಲಿ ನಡೆದ ವಿಚಾರಣೆಯ ಸಂದರ್ಭದಲ್ಲಿ ಒಬ್ಬ ಆರೋಪಿಯ ಮರ್ಮಾಂಗವನ್ನು ಇನ್ನೊಬ್ಬ ಆರೋಪಿಯ ಬಾಯಿಗೆ ಇರಿಸಿ ವಿಕೃತ ವರ್ತನೆ ತೋರಿದ್ದರು. ಬೆಲ್ಟ್‌ನಿಂದ ಬಾಲಕರ ಮೇಲೆ ಹಲ್ಲೆ ನಡೆಸಲಾಗಿತ್ತು. ಅಲ್ಲದೇ, ಆ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದು ಸಂಗ್ರಹಿಸಿಕೊಂಡಿದ್ದರು ಎಂಬ ಆರೋಪ ಇದೆ. ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ವಿಡಿಯೊ ಹಿರಿಯ ಅಧಿಕಾರಿಗಳ ಗಮನಕ್ಕೆ ಬಂದಿತ್ತು. ತಕ್ಷಣವೇ ತನಿಖೆಗೆ ಆದೇಶಿಸಿದ್ದರು. ತನಿಖೆ ವೇಳೆ ಪ್ರವೀಣ್ ಕೃತ್ಯ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಚಿನ್ನದ ಸರ ಅಪಹರಣ: ಬಂಧನ

ಬೆಂಗಳೂರು: ರಸ್ತೆಯಲ್ಲಿ ಹೋಗುವ ಮಹಿಳೆಯರು ಹಾಗೂ ಯುವತಿಯರ ಚಿನ್ನದ ಸರ ಕಸಿದುಕೊಂಡು ಪರಾರಿಯಾಗುತ್ತಿದ್ದ ಇಬ್ಬರನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶಾಮಣ್ಣ ಗಾರ್ಡನ್‌ನ ನಹೀಂ ಪಾಷಾ ಅಲಿಯಾಸ್ ಪಿಂಟು (30) ಹಾಗೂ ಬ್ಯಾಟರಾಯನಪುರದ ನಿವಾಸಿ ಮುಬಾಶೀರ್ (25) ಬಂಧಿತರು.

ಬಂಧಿತರಿಂದ ₹23 ಲಕ್ಷ ಮೌಲ್ಯದ 155 ಗ್ರಾಂ ಚಿನ್ನದ ಆಭರಣ ಹಾಗೂ ಒಂದು ಬೈಕ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ವಿಜಯನಗರದ ರೇಣುಕಾ ನೀಡಿದ ದೂರಿನ ಮೇಲೆ ಕಾರ್ಯಾಚರಣೆ ನಡೆಸಿ ಇಬ್ಬರನ್ನು ಬಂಧಿಸಲಾಗಿದೆ ಎಂದರು.

ಬಿಸಿಯೂಟ ಸೇವಿಸಿದ 10 ಮಕ್ಕಳು ಅಸ್ವಸ್ಥ

ಕನಕಪುರ (ರಾಮನಗರ): ತಾಲ್ಲೂಕಿನ ಹುಲಿಬೆಲೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಮಧ್ಯಾಹ್ನ ಬಿಸಿಯೂಟ ಸೇವಿಸಿದ ಬಳಿಕ ಹತ್ತಕ್ಕೂ ಹೆಚ್ಚು ಮಕ್ಕಳಿಗೆ ಹೊಟ್ಟೆನೋವು ಉಂಟಾಗಿದೆ. ಕೂಡಲೇ ಶಿಕ್ಷಕರು ಹಾಗೂ ಸಿಬ್ಬಂದಿ ಮಕ್ಕಳನ್ನು ಕನಕಪುರದ ತಾಯಿ-ಮಗು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ.

'ಸದ್ಯ ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ. ಅವರ ಆರೋಗ್ಯ ಕುರಿತು ಯಾವುದೇ ಆತಂಕಪಡುವ ಅಗತ್ಯವಿಲ್ಲ' ಎಂದು ವೈದ್ಯರು ಹೇಳಿದ್ದಾರೆ.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮಕ್ಕಳು ಸೇವಿಸಿದ ಊಟ ಹಾಗೂ ಬಾಳೆಹಣ್ಣಿನ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

₹1.9 ಕೋಟಿ ದರೋಡೆ: ಐವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮೇನಹಳ್ಳಿಯಲ್ಲಿ ನೆಲಸಿದ್ದ ಉದ್ಯಮಿ ಆರ್.ಐ.ಶಿವಶಂಕರ್ ಎಂಬುವರನ್ನು ಅಪಹರಿಸಿ, ₹1.9 ಕೋಟಿ ದರೋಡೆ ಮಾಡಿದ್ದ ಆರೋಪಿಗಳ ಪೈಕಿ, ಐವರನ್ನು ಮಾದನಾಯಕನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರ್.ಐ.ಶಿವಶಂಕರ್ ಜೂನ್ 16ರಂದು ನೀಡಿದ ದೂರಿನ ಮೇಲೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಪೀಣ್ಯದ ನಿವಾಸಿ, ಕಾರು ಚಾಲಕ ಎಂ.ಚೇತನ್ (28), ಚಿಕ್ಕಸಂದ್ರ ನಿವಾಸಿ ಸೋಮಶೇಖರ್ ಅಲಿಯಾಸ್ 'ಡೆಡ್ಲಿ' ಸೋಮ (29), ಹಂಪಿನಗರದ ಆರ್‌ಪಿಸಿ ಲೇಔಟ್‌ನ ನಿವಾಸಿ, ಲಾರಿ ಚಾಲಕ ಸೂರ್ಯ ಅಲಿಯಾಸ್ ಸೂರಿ (25), ಚಿಕ್ಕಬಾಣಾವರದ ಗಣಪತಿ ನಗರದ ನಿವಾಸಿ ಬಸವನಗೌಡ ಅಲಿಯಾಸ್ ಬಸವ (28), ಮುನೇಶ್ವರ ಬಡಾವಣೆಯ ನಿವಾಸಿ, ಆಟೊ ಚಾಲಕ ವಿನಯ್ (26) ಬಂಧಿತರು.

ಚೇತನ್ ಡಿಪ್ಲೊಮಾ ಪಡೆದಿದ್ದರೆ, ಸೋಮಶೇಖರ್ ಬಿ.ಕಾಂ ಪದವೀಧರರು. ಸೂರ್ಯ ಬಿ.ಕಾಂ ಪೂರ್ಣಗೊಳಿಸಿ, ಲಾರಿ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಬಸವನಗೌಡ ಬಿ.ಇ ಪೂರ್ಣಗೊಳಿಸಿ ಗುತ್ತಿಗೆ ಕೆಲಸ ಮಾಡುತ್ತಿದ್ದರು. ಸೋಮಶೇಖರ್ ಸೋಲದೇವನಹಳ್ಳಿ ಹಾಗೂ ಬಾಗಲಗುಂಟೆ ಪೊಲೀಸ್ ಠಾಣೆಯ ರೌಡಿಶೀಟರ್ ಆಗಿದ್ದರೆ, ಸೂರ್ಯ ಅವರು ಕೆ.ಪಿ ಅಗ್ರಹಾರ ಠಾಣೆಯ ರೌಡಿಶೀಟರ್ ಎಂದು ಮೂಲಗಳು ಹೇಳಿವೆ.

'ಇದೇ ಪ್ರಕರಣದಲ್ಲಿ ಮಾದನಾಯಕನಹಳ್ಳಿಯ ಜಗದೀಶ್ ಅಲಿಯಾಸ್ 'ಜಗ್ಗ' ಹಾಗೂ ಸುಹಾಸ್, ಬಾಗಲಗುಂಟೆಯ ಮನು, ಮಂಜುನಾಥ್ ನಗರದ ಸಿದ್ದ (ರಾಜಗೋಪಾಲನಗರ ಠಾಣೆಯ ರೌಡಿಶೀಟರ್) ಹಾಗೂ ಮಂಜುನಾಥ್ ಸಹ ಭಾಗಿ ಆಗಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ. ನಾಲ್ವರು ತಲೆಮರೆಸಿಕೊಂಡಿದ್ದು, ಪತ್ತೆಗೆ ಹುಡುಕಾಟ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಬಂಧಿತರಿಂದ ₹85.50 ಲಕ್ಷ ನಗದು, ಕೃತ್ಯಕ್ಕೆ ಬಳಸಿದ ಎರಡು ಕಾರು ಹಾಗೂ ಮೂರು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಶಿವಶಂಕರ್ ತಮ್ಮ ಕಾರಿನಲ್ಲಿ ಜೂನ್ 15ರ ರಾತ್ರಿ ತೆರಳುತ್ತಿದ್ದರು. ಕುದುರೆಗೆರೆ ಗಣೇಶ ದೇವಸ್ಥಾನದ ಬಳಿ ಕಾರನ್ನು ಅಡ್ಡಗಟ್ಟಿ ಬಿಯರ್ ಬಾಟಲಿ ಹಾಗೂ ಚಾಕುವಿನಿಂದ ಹಲ್ಲೆ ನಡೆಸಿ ₹74 ಲಕ್ಷ ದೋಚಿದ್ದರು. ಅಲ್ಲದೇ, ಮನೆಯಲ್ಲಿದ್ದ ₹35 ಲಕ್ಷ ತರುವಂತೆ ಹೇಳಿ ಆ ಹಣವನ್ನೂ ದರೋಡೆ ಮಾಡಿಕೊಂಡಿದ್ದರು ಎಂದು ಪೊಲೀಸರು ಹೇಳಿದರು.

ಕಾರು ಚಾಲಕನೇ ಸೂತ್ರಧಾರ: ಕಾರು ಚಾಲಕ ಚೇತನ್, ದರೋಡೆ ಪ್ರಕರಣದ ಸೂತ್ರಧಾರ ಎಂಬುದು ತನಿಖೆಯ ವೇಳೆ ಪತ್ತೆ ಆಗಿದೆ. ಶಿವಶಂಕರ್ ಪತ್ನಿ ಹಾಗೂ ಮಕ್ಕಳ ಜತೆಗೆ ಮುನಿಸ್ವಾಮಿ ರೆಡ್ಡಿ ಲೇಔಟ್‌ನಲ್ಲಿ ನೆಲಸಿದ್ದಾರೆ. ಸ್ನೇಹಿತರಾದ ದೀಪಕ್, ಆಚಾರ್ಯ, ಚೇತನ್, ಮಾಗಡಿಯ ಮಂಜುನಾಥ್, ವಿಜಯನಗರದ ಮಂಜುನಾಥ್ ಅವರೊಂದಿಗೆ ಯಶವಂತಪುರದಲ್ಲಿ ಡಿ-36 ಹೆಸರಿನ ಸೆಕ್ಯೂರಿಟಿ ಏಜೆನ್ಸಿ ನಡೆಸುತ್ತಿದ್ದರು. ಶಿವಶಂಕರ್ ಬಳಿ ಹಣ ಇರುವುದು ಚಾಲಕ ಚೇತನ್‌ಗೆ ಗೊತ್ತಿತ್ತು. ತನ್ನ ಸಹಚರರ ಜತೆಗೆ ಸಂಚು ರೂಪಿಸಿ ಉದ್ಯಮಿಯನ್ನು ಅಪಹರಿಸಿ ದರೋಡೆ ನಡೆಸಿದ್ದರು. ದರೋಡೆ ನಡೆದ ದಿನ ಚೇತನ್ ಸಹ ಕಾರಿನಲ್ಲಿ ಇದ್ದರು. ಸಹಚರರು ಚೇತನ್ ಅವರನ್ನೂ ಅಪಹರಿಸಿದವರಂತೆ ನಾಟಕವಾಡಿದ್ದರು. ಚೇತನ್ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯ ಬಯಲಾಯಿತು ಎಂದು ಪೊಲೀಸರು ಹೇಳಿದರು.

ಪ್ರೇಯಸಿ ಕೊಲೆ: ಯುವಕ ಸೆರೆ

ಬೆಂಗಳೂರು: ಮದುವೆಗೆ ನಿರಾಕರಿಸಿದ ಕಾರಣಕ್ಕೆ ಪ್ರೇಯಸಿಯನ್ನು ಚಾಕುವಿನಿಂದ ಇರಿದು, ಕೊಲೆ ಮಾಡಿರುವ ಯುವಕನನ್ನು ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಂಜಲಿ (23) ಕೊಲೆಯಾದ ಯುವತಿ.



ಅಂಜಲಿ



ರಾಜೀವ್

ಆರೋಪಿ ರಾಜೀವ್‌ನನ್ನು ಮಹಾಲಕ್ಷ್ಮಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಠಾಣಾ ವ್ಯಾಪ್ತಿಯ ಪೈಪ್‌ಲೈನ್ ರಸ್ತೆಯಲ್ಲಿ ಭಾನುವಾರ ತಡರಾತ್ರಿ ಆರೋಪಿ ಕೃತ್ಯ ಎಸಗಿ ಪರಾರಿ ಆಗಿದ್ದ. ತಕ್ಷಣವೇ ಕಾರ್ಯಾಚರಣೆ ನಡೆಸಿ, ಕೃತ್ಯ ನಡೆದ ಎರಡು ತಾಸಿನ ಒಳಗಾಗಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಅಂಜಲಿ ಹಾಗೂ ರಾಜೀವ್ ಒಂದೇ ಸ್ಥಳದಲ್ಲಿ ಈ ಹಿಂದೆ ಕೆಲಸ ಮಾಡುತ್ತಿದ್ದರು. ಪರಸ್ಪರ ಪರಿಚಯ ಇದ್ದರು. ಬಳಿಕ ಪ್ರೀತಿಸುತ್ತಿದ್ದರು. ಎರಡು ಕುಟುಂಬಗಳಿಗೂ ಈ ವಿಚಾರ ತಿಳಿದಿತ್ತು. ಆದರೆ, ರಾಜೀವ್‌ಗೆ ಅಪರಾಧ ಹಿನ್ನೆಲೆಯಿದ್ದ ಕಾರಣಕ್ಕೆ ಅಂಜಲಿ ಕುಟುಂಬಸ್ಥರು ಮದುವೆಗೆ ಒಪ್ಪಿರಲಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಂಜಲಿ ಸಹ ತನ್ನ ಕುಟುಂಬದವರ ನಿರ್ಧಾರಕ್ಕೆ ಮಣಿದು, ಕೆಲವು ತಿಂಗಳಿಂದ ರಾಜೀವ್‌ನಿಂದ ಅಂತರ ಕಾಯ್ದುಕೊಂಡಿದ್ದರು. ಇದು ರಾಜೀವ್‌ಗೆ ಕೋಪ ತರಿಸಿತ್ತು' ಎಂದು ಪೊಲೀಸರು ಹೇಳಿದರು.

'ಭಾನುವಾರ ರಾತ್ರಿ ಅಂಜಲಿಗೆ ಕರೆ ಮಾಡಿದ್ದ ಆರೋಪಿ ಊಟಕ್ಕೆ ಬರುವಂತೆ ಕೋರಿದ್ದ. ಆರಂಭದಲ್ಲಿ ಯುವತಿ ಬರುವುದಿಲ್ಲ ಎಂದು ತಿಳಿಸಿದ್ದರು. ಪೈಪ್‌ಲೈನ್ ರಸ್ತೆಗೆ ಬರುವಂತೆ ಪರಿಪರಿಯಾಗಿ ಬೇಡಿಕೊಂಡಿದ್ದ. ಯುವಕನ ಒತ್ತಾಯಕ್ಕೆ ಮಣಿದಿದ್ದ ಅಂಜಲಿ, ಪೈಪ್‌ಲೈನ್ ರಸ್ತೆಯ ಹೋಟೆಲ್‌ಗೆ ಬಂದಿದ್ದರು. ಅಲ್ಲೂ ಆರೋಪಿ ಮದುವೆ ವಿಷಯ ಪ್ರಸ್ತಾಪಿಸಿದ್ದ. ಆದರೆ, ಅಂಜಲಿ ಮದುವೆಗೆ ಸಮ್ಮತಿಸಿರಲಿಲ್ಲ. ಅದೇ ವಿಚಾರವಾಗಿ ಇಬ್ಬರ ನಡುವೆ ಗಲಾಟೆಯಾಗಿತ್ತು. ಕೋಪಗೊಂಡ ರಾಜೀವ್, ಚಾಕುವಿನಿಂದ ಅಂಜಲಿ ಕುತ್ತಿಗೆಗೆ ಇರಿದಿದ್ದ. ತಕ್ಷಣವೇ ಸ್ಥಳೀಯರು ಅಂಜಲಿ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

ಎಂ.ಎಸ್. ರಾಮಯ್ಯ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ರೌಡಿ ರಾಜು ಕೊಲೆ: ನಾಲ್ವರ ಬಂಧನ

ಬೆಂಗಳೂರು: ರೌಡಿ ರಾಜುಬಾಯ್ ಕೊಲೆ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ಜೆ.ಪಿ. ನಗರ ಠಾಣೆ ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.

ಸಂತೋಷ್, ಮಾರಿಮುತ್ತು, ಅಭಿ ಮತ್ತು ಪ್ರಭು ಬಂಧಿತರು.

ತಲೆಮರೆಸಿಕೊಂಡಿರುವ ಇತರೆ ಆರೋಪಿಗಳ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಶನಿವಾರ ಸಂಜೆ 5.30ರ ವೇಳೆಗೆ ಜೆ.ಪಿ.ನಗರ ಮುಖ್ಯರಸ್ತೆಯಲ್ಲಿ ಟೀ ಕುಡಿದು ರಾಜುಬಾಯ್ ಹೋಗುತ್ತಿದ್ದರು. ಆಗ ದುಷ್ಕರ್ಮಿಗಳು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರು. ಹಲ್ಲೆಯಿಂದ ತಪ್ಪಿಸಿಕೊಳ್ಳಲು ರಾಜು ಯತ್ನಿಸಿದ್ದರು. ಅವರನ್ನು ಆರೋಪಿಗಳು ಅಟ್ಟಾಡಿಸಿ ಹಲ್ಲೆ ನಡೆಸಿ ಕೊಲೆ ಮಾಡಿ ಪರಾರಿ ಆಗಿದ್ದಾರೆ' ಎಂದು ತಿಳಿಸಿದರು.

'ರಾಜುಬಾಯ್ 10 ವರ್ಷಗಳ ಹಿಂದೆ ನಡೆದಿದ್ದ ಕೊಲೆ ಪ್ರಕರಣವೊಂದರಲ್ಲಿ ಭಾಗಿ ಆಗಿದ್ದರು. ಅದಾದ ಮೇಲೆ ರಾಜುಬಾಯ್ ಅವರನ್ನು ರೌಡಿಪಟ್ಟಿಗೆ ಪೊಲೀಸರು ಸೇರಿಸಿದ್ದರು. ಹಳೇ ದ್ವೇಷದ ಹಿನ್ನೆಲೆಯಲ್ಲಿ ಆರೋಪಿಗಳು ಸಂಚು ರೂಪಿಸಿ ಕೊಲೆ ಮಾಡಿರುವುದು ಪ್ರಾಥಮಿಕ ತನಿಖೆಯ ವೇಳೆ ಪತ್ತೆಯಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.



109 ವರ್ಷಗಳ ಇತಿಹಾಸ ಇರುವ 'ಸೆಂಚುರಿ ಕ್ಲಬ್'ನ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳ ಆಯ್ಕೆ ನಡೆಯಿತು. ಕುಳಿತವರು: ಎ.ಎಂ.ರಾಘವೇಂದ್ರನ್ (ಖಜಾಂಚಿ), ಎಸ್‌.ಬಾಲಸುಬ್ರಹಮಣ್ಯಂ (ಉಪಾಧ್ಯಕ್ಷ), ಕೆ.ಆರ್‌.ಪರಂಜ್ಯೋತಿ (ಅಧ್ಯಕ್ಷ), ಅಭಿಷೇಕ್ ಭೋಗರಾಮ್ ಅರುಣ್‌ಕುಮಾರ್ (ಕಾರ್ಯದರ್ಶಿ), ಸಿ.ಎನ್‌.ಗುರುಪ್ರಸನ್ನ (ಮಾಜಿ ಅಧ್ಯಕ್ಷ), ನಿಂತವರು: ಸದಸ್ಯರಾದ ಸಂಗೀತಾ ಶ್ರೀಕಿಷನ್, ಎಂ.ಎಸ್‌.ವಿ.ವಿನ್ ಕುಮಾರ್, ಕೆ.ಜಿ. ಪಾರಿತೋಷ್, ಗಿರೀಶ್ ಬಾಳಿಗ, ಪಿ.ವಿ.ಕಾರ್ತಿಕ್, ಸುರೇಶ್ ಎಲ್‌.ಅಹುಜಾ, ವಿಕ್ರಮಾದಿತ್ಯ ಎಂ.ಬಿಜ್ಜಹಳ್ಳಿ, ಬಾಲಾಜಿ ಕೋಟ, ನೇತ್ರಾವತಿ ರಾಜ್‌ಕುಮಾರ್

ಮಿದುಳು ನಿಷ್ಕ್ರಿಯ: ಅಂಗಾಂಗ ದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಅಪಘಾತದಲ್ಲಿ ತೀವ್ರ ಗಾಯಗೊಂಡು ಮಿದುಳು ನಿಷ್ಕ್ರಿಯಗೊಂಡಿದ್ದ 40 ವರ್ಷದ ಆರ್.ಅನಂತ್ ಕುಮಾರ್ ಅವರ ಕುಟುಂಬದವರು ಅಂಗಾಂಗ ದಾನಕ್ಕೆ ಸಮ್ಮತಿಸಿದ ಹಿನ್ನೆಲೆಯಲ್ಲಿ ಅನೇಕ ಮಂದಿಗೆ ಮರುಜೀವ ದೊರೆತಿದೆ.

ಡೆಲಿವರಿ ಬಾಯ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಅನಂತ್ ಕುಮಾರ್‌ಗೆ ಇಬ್ಬರು ಮಕ್ಕಳು ಇದ್ದಾರೆ. ಅಪಘಾತದಲ್ಲಿ ಗಾಯಗೊಂಡಿದ್ದ ಅವರಿಗೆ ಸಮೀಪದ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ವೈದ್ಯರು ನಿರಂತರ ಪ್ರಯತ್ನಪಟ್ಟರೂ ಮಿದುಳಿಗೆ ಉಂಟಾಗಿದ್ದ ತೀವ್ರ ಗಾಯಗಳಿಂದಾಗಿ ಅವರನ್ನು ಉಳಿಸಲು ಸಾಧ್ಯವಾಗಲಿಲ್ಲ. ಈ ದುಃಖದ ಕ್ಷಣದಲ್ಲೂ ಕುಟುಂಬದವರು ಮಹತ್ವದ ನಿರ್ಧಾರ ತೆಗೆದುಕೊಂಡು, ಅಂಗಾಂಗ ದಾನ ಮಾಡಲು ಒಪ್ಪಿದರು. ಇದಕ್ಕೂ ಮುನ್ನ ಆಸ್ಪತ್ರೆಯ ಅಂಗಾಂಗ ದಾನ ಸಮಾಲೋಚಕರು ಕುಟುಂಬದೊಂದಿಗೆ ಸಮಾಲೋಚನೆ ನಡೆಸಿದರು.

ದಾನಿಯ ಮೂತ್ರಪಿಂಡ, ಯಕೃತ್ತು, ಹೃದಯ, ಕಾರ್ನಿಯಾಗಳನ್ನು ಕಸಿಗಾಗಿ ಕಾಯುತ್ತಿದ್ದ ವಿವಿಧ ರೋಗಿಗಳಿಗೆ ಹಂಚಿಕೆ ಮಾಡಲಾಯಿತು. ಇದರಲ್ಲಿ ಮಣಿಪಾಲ್ ಆಸ್ಪತ್ರೆಯಲ್ಲಿ ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿದ್ದ ರೋಗಿಯೂ ಸೇರಿದ್ದಾರೆ.



ಅನಂತ ಕುಮಾರ್

ಅಂಗಾಂಗ ಲಭ್ಯವಾದ ತಕ್ಷಣವೇ ವೈದ್ಯಕೀಯ ತಂಡವು ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆ ನೆರವೇರಿಸಿತು. ಕಸಿ ಮಾಡಿದ ಮೂತ್ರಪಿಂಡವು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ರೋಗಿಯ ಆರೋಗ್ಯ ಸ್ಥಿರವಾಗಿದೆ.

ಸರ್ಜಾಪುರ ರಸ್ತೆಯ ಮಣಿಪಾಲ್ ಆಸ್ಪತ್ರೆ ವೈದ್ಯರಾದ ಮನೋಹರ್ ಭದ್ರಪ್ಪ, ಮಿತೇಶ್ ಮಕ್ವಾನಾ ಮಾತನಾಡಿ, 'ದಾನಿಗಳ ಕುಟುಂಬದ ಈ ನಿರ್ಧಾರವು ಕೇವಲ ಒಂದು ಜೀವವನ್ನು ಉಳಿಸಿಲ್ಲ, ಬದಲಾಗಿ ಅನೇಕ ಕುಟುಂಬಗಳಲ್ಲಿ ಹೊಸ ಭರವಸೆಯನ್ನು ಮೂಡಿಸಿದೆ' ಎಂದು ಹೇಳಿದರು.

'ದೇಶದಲ್ಲಿ ಸಾವಿರಾರು ರೋಗಿಗಳು ಅಂಗಾಂಗ ಕಸಿಗಾಗಿ ಕಾಯುತ್ತಿದ್ದರೂ ಮೃತ ದಾನಿಗಳಿಂದ ಅಂಗಾಂಗ ಪಡೆಯುವ ಪ್ರಮಾಣ ಇನ್ನೂ ಕಡಿಮೆಯಿದೆ. ಮೃತ ದಾನಿಯು ಹಲವಾರು ಜೀವಗಳನ್ನು ಉಳಿಸಬಲ್ಲರು ಅಥವಾ ಬದುಕಿನ ಗುಣಮಟ್ಟವನ್ನು ಸುಧಾರಿಸಬಲ್ಲರು. ಈ ನಿಟ್ಟಿನಲ್ಲಿ ಅಂಗಾಂಗ ದಾನದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಅವಶ್ಯಕವಾಗಿದೆ' ಎಂದು ತಿಳಿಸಿದರು.

ಹಲವರಿಗೆ ಜೀವದಾನ

ಬೆಂಗಳೂರು: ಮಿದುಳು ನಿಷ್ಕ್ರಿಯಗೊಂಡಿದ್ದ ಪತಿಯ ಅಂಗಾಂಗ ದಾನ ಮಾಡುವ ಮೂಲಕ ಪತ್ನಿ ಹಾಗೂ ಕುಟುಂಬದ ಸದಸ್ಯರು ಮಾನವೀಯತೆ ಮೆರೆದಿದ್ದಾರೆ.



ಅಶೋಕ್ ಸಿಂಗ್ ಬಿಸ್ಟ್

ಜೂನ್ 23ರಂದು ದೊಡ್ಡಬಳ್ಳಾಪುರಲ್ಲಿ ಕಟ್ಟಡದ ಚಾವಣಿಗೆ ಶೀಟ್‌ಗಳನ್ನು ಅಳವಡಿಸುವ ವೇಳೆ ಆಯತಪ್ಪಿ ಬಿದ್ದು ಗಾಯಗೊಂಡಿದ್ದ ಉತ್ತರಾಖಂಡದ ಅಶೋಕ್ ಸಿಂಗ್ ಬಿಸ್ಟ್ (38) ಅವರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಯಿತು. ಆದರೆ, ಮಿದುಳು ನಿಷ್ಕ್ರಿಯಗೊಂಡಿದೆ ಎಂದು ವೈದ್ಯರು ಘೋಷಿಸಿದರು.

ಅಶೋಕ್ ಅವರ ಪತ್ನಿ ಹಾಗೂ ಸಹೋದರರು ಅಂಗಾಂಗ ದಾನಕ್ಕೆ ಒಪ್ಪಿಗೆ ಸೂಚಿಸಿದರು. ಯಕೃತ್ತು, ಮೂತ್ರಪಿಂಡ, ಹೃದಯ ಕವಾಟಗಳು, ಕಾರ್ನಿಯಾಗಳನ್ನು ದಾನವಾಗಿ ಪಡೆಯಲಾಯಿತು. ಹಳೆಯ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಯಲ್ಲಿ ಅಂಗಾಂಗ ದಾನ ಪ್ರಕ್ರಿಯೆ ನಡೆಯಿತು.

ಕ್ರಿಟಿಕಲ್ ಕೇರ್ ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ. ಸುನಿಲ್ ಕಾರಂತ್ ಮಾತನಾಡಿ, 'ಅಶೋಕ್ ತಲೆಗೆ ಗಂಭೀರ ಗಾಯವಾಗಿತ್ತು. ಉತ್ತಮ ಚಿಕಿತ್ಸೆ ನೀಡಿದರೂ ಉಳಿಸಲು ಸಾಧ್ಯವಾಗಲಿಲ್ಲ' ಎಂದು ಹೇಳಿದರು.

ಅಶೋಕ್ ಸಿಂಗ್ ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಒಬ್ಬ ಪುತ್ರಿ ಇದ್ದಾರೆ.

ಸಾರ್ವಜನಿಕ ಸಾರಿಗೆಗೆ ಡಬಲ್ ಡೆಕರ್ ಕುತ್ತು

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯಕ್ಕೆ ಭಾರತೀಯ ವಿಜ್ಞಾನ ಸಂಸ್ಥೆ ಸಲ್ಲಿಸಿರುವ ವರದಿಯಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಬಲ್ ಡೆಕರ್ ಯೋಜನೆಯಿಂದಾಗಿ 2041ರ ಹೊತ್ತಿಗೆ ಕಾರು, ಆಟೊ, ದ್ವಿಚಕ್ರ ವಾಹನಗಳ ಬಳಕೆ ಹೆಚ್ಚಾಗಲಿದ್ದು, ಮೆಟ್ರೊ, ಬಸ್, ಉಪನಗರ ರೈಲು ಸೇರಿದಂತೆ ಸಾರ್ವಜನಿಕ ಸಾರಿಗೆಯಲ್ಲಿ ಸಂಚರಿಸುವವರ ಸಂಖ್ಯೆ ಕಡಿಮೆಯಾಗಲಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್‌ಸಿ) ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯಕ್ಕೆ ಸಲ್ಲಿಸಿರುವ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಐಐಎಸ್‌ಸಿಯ ಸುಸ್ಥಿರ ಸಾರಿಗೆ ಪ್ರಯೋಗಾಲಯದ ಆಶಿಶ್ ವರ್ಮಾ ನೇತೃತ್ವದಲ್ಲಿ 'ಬೆಂಗಳೂರಿನ ಚಲನಶೀಲತೆ ಮತ್ತು ಪರಿಸರದ ಮೇಲೆ ಮೆಟ್ರೊ ಡಬಲ್-ಡೆಕರ್ ಮತ್ತು ಎತ್ತರಿಸಿದ ಕಾರಿಡಾರ್‌ಗಳ ಪರಿಣಾಮಗಳು' ಎಂಬ ಅಧ್ಯಯನ ನಡೆಸಲಾಗಿತ್ತು. ಮೆಟ್ರೊ ಹಂತ-3 ಕಾರಿಡಾರ್‌ಗಳೊಂದಿಗೆ ಎತ್ತರಿಸಿದ ರಸ್ತೆಗಳನ್ನು ಸಂಯೋಜಿಸುವುದರಿಂದ ಮೆಟ್ರೊ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಲಿದೆ. ಇಂಧನ ಬಳಕೆ ಮತ್ತು ಯೋಜನಾ ವೆಚ್ಚಗಳು ಹೆಚ್ಚಾಗಲಿವೆ' ಎಂದು ಅಧ್ಯಯನದ ವರದಿ ತಿಳಿಸಿದೆ.



ಎಚ್‌ಎಸ್‌ಆರ್ ಲೇಔಟ್‌ನಿಂದ ರಾಗಿಗುಡ್ಡ ಕಡೆಗೆ ಡಬಲ್ ಡೆಕರ್ ಮೇಲ್ಸೇತುವೆ

ಹೆಚ್ಚುವರಿ ರಸ್ತೆ ಸಾಮರ್ಥ್ಯವು ಪ್ರಯಾಣಿಕರನ್ನು ಸಾರ್ವಜನಿಕ ಸಾರಿಗೆಯಿಂದ ಖಾಸಗಿ ವಾಹನಗಳತ್ತ ಮುಖಮಾಡುವಂತೆ ಪ್ರೇರೇಪಿಸುತ್ತದೆ, ಇದು ಸಾರ್ವಜನಿಕ ಕ್ಷಿಪ್ರ ಸಾರಿಗೆ ವ್ಯವಸ್ಥೆಗಳ ಉದ್ದೇಶಗಳಿಗೆ ತದ್ವಿರುದ್ಧವಾಗಲಿದೆ.

ಮೂರನೇ ಹಂತದಲ್ಲಿ ಜೆ.ಪಿ.ನಗರ 4ನೇ ಹಂತದಿಂದ ಹೆಬ್ಬಾಳವರೆಗೆ ಹಾಗೂ ಹೊಸಹಳ್ಳಿಯಿಂದ ಕಡಬಗೆರೆವರೆಗೆ ಮೆಟ್ರೊ ಮಾರ್ಗ ನಿರ್ಮಾಣಗೊಳ್ಳಲಿದೆ. ಅಲ್ಲದೇ ರಾಗಿಗುಡ್ಡದಿಂದ-ರೇಷ್ಮೆ ಮಂಡಳಿ (ಈಗಾಗಲೇ ಆಗಿದೆ) ಸರ್ಜಾಪುರದಿಂದ ಇಬ್ಬಲೂರು, ಅಗರದಿಂದ ಕೋರಮಂಗಲ ನಡುವೆ ಡಬಲ್ ಡೆಕರ್ ನಿರ್ಮಾಣಗೊಳ್ಳಲಿದೆ. ಮೂರನೇ ಹಂತದ ಮೆಟ್ರೊದಲ್ಲಿ 8.09 ಲಕ್ಷ ಪ್ರಯಾಣಿಕರು ನಿತ್ಯ ಸಂಚರಿಸಬಹುದು ಎಂಬ ನಿರೀಕ್ಷೆ ಇದೆ. ಆದರೆ, ಡಬಲ್ ಡೆಕರ್ ನಿರ್ಮಿಸಿದರೆ, ನಿತ್ಯ ಸಂಚರಿಸುವವರ ಸಂಖ್ಯೆ ಕನಿಷ್ಠ 10 ಸಾವಿರ ಕಡಿಮೆಯಾಗಲಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

3ನೇ ಹಂತದ ಯೋಜನೆಗೆ ಕೇಂದ್ರ ಸರ್ಕಾರ 2024ರಲ್ಲಿ ಅನುಮೋದನೆ ನೀಡುವಾಗ ಡಬಲ್ ಡೆಕರ್ ಸೇರಿರಲಿಲ್ಲ. ಆಗ ಆರ್ಥಿಕ ಆಂತರಿಕ ಲಾಭದ ದರವು (ಇಐಆರ್‌ಆರ್) ಶೇ 9.07 ಎಂದು ಹೇಳಲಾಗಿತ್ತು. ಡಬಲ್ ಡೆಕರ್ ಸೇರಿದ ಮೇಲೆ ಈ ದರವು ಶೇ 5.43ಕ್ಕೆ ಇಳಿದಿದೆ. ಡಬಲ್ ಡೆಕರ್‌ನಿಂದಾಗಿ ಇಂಧನ ಬಳಕೆಯು ದಿನಕ್ಕೆ 7,000 ಲೀಟರ್ ಹೆಚ್ಚಾಗುವ ಸಾಧ್ಯತೆ ಇದೆ ಎಂದು ವರದಿಯಲ್ಲಿದೆ.

ಪ್ರಸ್ತಾವಿತ ಡಬಲ್-ಡೆಕರ್ ಕಾರಿಡಾರ್‌ಗಳು ಪ್ರತಿದಿನ ಹೆಚ್ಚುವರಿಯಾಗಿ 85.9 ಕೆ.ಜಿ ಕಾರ್ಬನ್ ಮಾನಾಕ್ಸೈಡ್, 12.6 ಕೆ.ಜಿ ಸಾರಜನಕದ ಆಕ್ಸೈಡ್, 19.5 ಕೆ.ಜಿ ಹೈಡ್ರೋಕಾರ್ಬನ್ ಮತ್ತು 1.1 ಕೆ.ಜಿ ಪಿಎಂ 2.5 ಹೊರಸೂಸಲಿವೆ. ಜೊತೆಗೆ ಪ್ರತಿದಿನ 17,012 ಕೆ.ಜಿ ಕಾರ್ಬನ್ ಡೈಆಕ್ಸೈಡ್ (ಹೊಗೆ) ಉತ್ಪಾದನೆಯಾಗಲಿದೆ ಎಂದು ವರದಿ ಅಂದಾಜಿಸಿದೆ.

ಅಂಕಿ ಅಂಶ (2041ರ ವೇಳೆಗೆ)

- 3.8% ಕಾರು ಬಳಕೆ ಹೆಚ್ಚಳ
- 1.28% ದ್ವಿಚಕ್ರ ವಾಹನಗಳ ಬಳಕೆ ಹೆಚ್ಚಳ
- 2.8% ಆಟೊ/ಟ್ಯಾಕ್ಸಿ ಬಳಕೆ ಹೆಚ್ಚಳ
- 6.4% ಕಡಿಮೆಯಾಗಲಿರುವ ಬಸ್ ಬಳಕೆ ಪ್ರಮಾಣ
- 1.4% ಕಡಿಮೆಯಾಗಲಿರುವ ಮೆಟ್ರೊ ಬಳಕೆ ಪ್ರಮಾಣ

> ಪ್ರಸ್ತಾವಿತ ಡಬಲ್-ಡೆಕರ್ ಯೋಜನೆಯು ಮೆಟ್ರೊ ವಿಸ್ತರಣೆಯ ಉದ್ದೇಶವನ್ನು ಹಾಳುಗೆಡವಲಿದೆ. ತಾಂತ್ರಿಕ, ಆರ್ಥಿಕವಾಗಿ ಮತ್ತು ಪರಿಸರಕ್ಕೆ ಪೂರಕವಲ್ಲ
> **ಆಶಿಶ್ ವರ್ಮಾ,** ಐಐಎಸ್‌ಸಿ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ

ಸುರಂಗ ಯೋಜನೆ: 6ಕ್ಕೆ ವಿಚಾರಣೆ

ಬೆಂಗಳೂರು: 'ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೂ ಸುರಂಗ ರಸ್ತೆ ನಿರ್ಮಾಣ ಯೋಜನೆ ಪ್ರಶ್ನಿಸಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ಅಂತಿಮ ವಿಚಾರಣೆಯನ್ನು ಹೈಕೋರ್ಟ್ ಜುಲೈ 6ಕ್ಕೆ ನಿಗದಿಪಡಿಸಿದೆ.

'ಯೋಜನೆಗೆ ಸಂಬಂಧಿಸಿದ ಟೆಂಡರ್ ಅಧಿಸೂಚನೆ ರದ್ದುಪಡಿಸಬೇಕು' ಎಂದು ಕೋರಿ ಚಲನಚಿತ್ರ ನಟ ಪ್ರಕಾಶ್ ಬೆಳವಾಡಿ ಮತ್ತು ಡಾ.ಆದಿಕೇಶವುಲು ರವೀಂದ್ರ, ವಿನೋದ್ ವ್ಯಾಸುಲು ಹಾಗೂ ಎನ್.ಎಸ್.ಮುಕುಂದ ಸಲ್ಲಿಸಿರುವ ಎರಡು ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲರು, 'ಸುರಂಗ ಮಾರ್ಗಕ್ಕಾಗಿ ಲಾಲ್‌ಬಾಗ್‌ನ 5 ಎಕರೆ ಸ್ವಾಧೀನಕ್ಕೆ ಪಡೆಯಲು ಸರ್ಕಾರ ಉದ್ದೇಶಿಸಿದೆ. ಇದರಿಂದ ಪಾರಂಪರಿಕ ತಾಣ ಎನಿಸಿರುವ ಲಾಲ್‌ಬಾಗ್‌ಗೆ ಸರಿಪಡಿಸಲಾಗದ ಹಾನಿ ಉಂಟಾಗಲಿದೆ. ಹಾಗಾಗಿ, ಯೋಜನೆಗೆ ತಡೆ ನೀಡಬೇಕು' ಎಂದು ಮನವಿ ಮಾಡಿದರು. ಆದರೆ, ಪ್ರತಿವಾದಿ ವಕೀಲರು ಕಾಲಾವಕಾಶ ಕೋರಿದ ಕಾರಣ ನ್ಯಾಯಪೀಠ ವಿಚಾರಣೆಯನ್ನು ಜುಲೈ 6ಕ್ಕೆ ನಿಗದಿಪಡಿಸಿತು.

364 ದಿನವೂ ಉದ್ಯೋಗ ಖಾತರಿ ಕೊಡಿ: ಈಶ್ವರ ಖಂಡ್ರೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಉದ್ಯೋಗ ಖಾತರಿ ಯೋಜನೆಯಲ್ಲಿ ಮಹಾತ್ಮ ಗಾಂಧೀಜಿ ಹೆಸರನ್ನು ಕೇಂದ್ರ ಸರ್ಕಾರ ಕೈಬಿಟ್ಟಿರುವುದು ಸರಿಯಲ್ಲ. ಯೋಜನೆಯ ಹೆಸರನ್ನು 'ಮಹಾತ್ಮಾಗಾಂಧೀ ವಿಬಿ ಜಿ ರಾಮ್ ಜೀ' ಎಂದು ಮರುನಾಮಕರಣ ಮಾಡಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ಆಗ್ರಹಿಸಿದರು.

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ಸೋಮವಾರ ನಡೆದ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಸಮ್ಮೇಳನದಲ್ಲಿ ಅವರು ಮಾತನಾಡಿದರು.


ಈಶ್ವರ ಖಂಡ್ರೆ

'ಭಾರತ ಹಳ್ಳಿಗಳ ದೇಶವಾಗಿದ್ದು, ದೇಶದ ಆತ್ಮ ಇರುವುದೇ ಗ್ರಾಮಗಳಲ್ಲಿ ಎಂದು ಗಾಂಧೀಜಿ ಹೇಳಿದ್ದರು. ಗ್ರಾಮಗಳ ಅಭಿವೃದ್ಧಿ ಆಗದೆ ದೇಶದ ಅಭಿವೃದ್ಧಿಯಾಗದು ಎಂದು ಪ್ರತಿಪಾದಿಸಿದ್ದರು. ಇಂತಹ ಮಹಾಪುರುಷರ ಹೆಸರನ್ನು ಯೋಜನೆಯಿಂದ ಕೈಬಿಟ್ಟಿರುವುದು ಸರಿಯಲ್ಲ. ಜತೆಗೆ, ದೇಶದ 2.68 ಲಕ್ಷ ಗ್ರಾಮ ಪಂಚಾಯಿತಿಗಳಿಗೆ ಮಹಾತ್ಮಾ ಗಾಂಧೀಜಿ ಅವರ ಹೆಸರಿಡಬೇಕು' ಎಂದು ಅವರು ಒತ್ತಾಯಿಸಿದರು.

ಸುಗ್ಗಿಯ ಕಾಲದಲ್ಲಿ ಗ್ರಾಮೀಣ ಜನರಿಗೆ 60 ದಿನ ಉದ್ಯೋಗ ನೀಡುವುದಿಲ್ಲ ಎಂಬ ಷರತ್ತು ವಿಧಿಸಿರುವುದು ಸರಿಯಲ್ಲ. ಗ್ರಾಮೀಣ ಭಾಗದ ಕುಟುಂಬದ ಜನರು ಉದ್ಯೋಗಕ್ಕೆ ಬೇಡಿಕೆ ಇಟ್ಟಾಗ ಅವರಿಗೆ ಉದ್ಯೋಗ ನೀಡಬೇಕು. ವರ್ಷದ 364 ದಿನವೂ ಉದ್ಯೋಗದ ಖಾತರಿ ನೀಡಬೇಕು ಎಂದು ಅವರು ಸಲಹೆ ನೀಡಿದರು.

ಕೇಂದ್ರ ಸರ್ಕಾರವು ವಿಬಿಜಿ ರಾಮ್‌ಜಿಯಲ್ಲಿ 60:40ರ ಅನುಪಾತ ಮಾಡಿರುವುದರಿಂದ ರಾಜ್ಯ ಸರ್ಕಾರ ಗಳಿಗೆ ಅಧಿಕ ಹೊರೆಯಾಗುತ್ತಿದೆ. ಕೇಂದ್ರ ಸರ್ಕಾರವು ನರೇಗಾದಲ್ಲಿದ್ದಂತೆ 90:10ರ ಅನುಪಾತವನ್ನೇ ಮುಂದುವರಿಸಬೇಕು ಎಂದೂ ಆಗ್ರಹಿಸಿದರು.

15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ರಾಜ್ಯಕ್ಕೆ ₹2,186 ಕೋಟಿ ಬಾಕಿ ಬರಬೇಕಾಗಿದೆ. ಕೂಡಲೇ ಈ ಹಣವನ್ನು ಬಿಡುಗಡೆ ಮಾಡಬೇಕು ಎಂದು ಈಶ್ವರ ಖಂಡ್ರೆ ಒತ್ತಾಯಿಸಿದರು.

ಸಮ್ಮೇಳನದಲ್ಲಿ ಶಿವರಾಜ್ ಸಿಂಗ್ ಚೌಹಾಣ್ ಮಾತನಾಡಿ, 'ವಿಕಸಿತ ಭಾರತ-ವಿಬಿ-ಗ್ರಾಮ್-ಜಿ' ಯೋಜನೆ ಜುಲೈ 1ರಿಂದ ದೇಶದಾದ್ಯಂತ ಜಾರಿಗೆ ಬರಲಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಈಗಾಗಲೇ ₹95,682 ಕೋಟಿ ಬಿಡುಗಡೆಗೆ ಅನುಮೋದನೆ ನೀಡಲಾಗಿದೆ.

ವಿಪಕ್ಷ ನಾಯಕರಾಗಿ ಮಲ್ಲಿಕಾರ್ಜುನ ಖರ್ಗೆ ಮರು ನೇಮಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬಿಜೆಪಿಯ ಎಂ.ನಾಗರಾಜ ಸೇರಿದಂತೆ ಎಂಟು ಮಂದಿ ರಾಜ್ಯಸಭಾ ಸದಸ್ಯರಾಗಿ ಸೋಮವಾರ ಪ್ರಮಾಣವಚನ ಸ್ವೀಕರಿಸಿದರು.

ರಾಜ್ಯಸಭೆಯ ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಹೊಸ ಸದಸ್ಯರಿಗೆ ಪ್ರಮಾಣವಚನ ಬೋಧಿಸಿದರು.



ಜೂನ್ 26ರಿಂದ ಜಾರಿಗೆ ಬರುವಂತೆ ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾಗಿ ಖರ್ಗೆ ಅವರನ್ನು ಮರು ನೇಮಕ ಮಾಡಲಾಯಿತು.

ಕೈಯಲ್ಲಿ ಸಂವಿಧಾನದ ಪ್ರತಿ ಹಿಡಿದುಕೊಂಡು ಖರ್ಗೆ ಅವರು ರಾಧಾಕೃಷ್ಣನ್ ಅವರ ಕೊಠಡಿಯಲ್ಲಿ ಪ್ರತ್ಯೇಕವಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಸರ್ಕಾರವನ್ನು ಹೊಣೆಗಾರರನ್ನಾಗಿ ಮಾಡುವುದರ ಜೊತೆಗೆ, ಸದನದಲ್ಲಿ ಜನರ ಕಾಳಜಿ, ಆಕಾಂಕ್ಷೆಗಳು ಮತ್ತು ಧ್ವನಿಯನ್ನು ಪ್ರಾಮಾಣಿಕತೆ ಮತ್ತು ದೃಢನಿಶ್ಚಯದಿಂದ ಎತ್ತುವುದನ್ನು ಮುಂದುವರಿಸುವುದಾಗಿ ಖರ್ಗೆ ತಿಳಿಸಿದರು.

ಸಂಚಲನ ಸೃಷ್ಟಿಸಿದ 'ಡಿವಿಎಸ್' ಆಡಿಯೊ

ವಿಜಯೇಂದ್ರ ಇಳಿಸುವ ಬಗ್ಗೆ ಮಾತು • ಧ್ವನಿ ತಮ್ಮದಲ್ಲ: ಸದಾನಂದಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಕಿತ್ತುಹಾಕಬೇಕು ಎಂಬುದಾಗಿ ಪ್ರದೀಪ್ ಎಂಬುವರ ಜತೆ ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಮಾತನಾಡಿದ್ದಾರೆನ್ನಲಾದ ಆಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

'ಇದಕ್ಕೂ ನನಗೂ ಸಂಬಂಧವಿಲ್ಲ. ಆಡಿಯೊ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಆಡಿಯೊ ಯಾರದ್ದು ಎನ್ನುವುದನ್ನು ಮಾಧ್ಯಮಗಳೇ ಕಂಡುಹಿಡಿಯಲಿ' ಎಂದು ಸದಾನಂದಗೌಡ ಪ್ರತಿಕ್ರಿಯಿಸಿದ್ದಾರೆ.

ಆಡಿಯೊದಲ್ಲಿರುವ ಧ್ವನಿ ಸದಾನಂದಗೌಡರ ಧ್ವನಿಗೆ ಸಾಮ್ಯತೆ ಇದ್ದು, ಇಂಗ್ಲಿಷ್‌ನಲ್ಲಿ ಸಂಭಾಷಣೆ ನಡೆಸಲಾಗಿದೆ. ಈ ಆಡಿಯೊ ಬಿಜೆಪಿ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಆಡಿಯೊದಲ್ಲಿರುವ ಮಾತುಕತೆ ಸಾರಾಂಶ


ಸದಾನಂದಗೌಡ

ಡಿವಿಎಸ್– 'ವಿಜಯೇಂದ್ರ ಅವರ ಅವಧಿ ನವೆಂಬರ್‌ವರೆಗೆ ಇದ್ದು, ಅಲ್ಲಿಯವರೆಗೆ ಮುಂದುವರೆಯಲಿ. ಆ ಬಳಿಕ ಕಿತ್ತು ಹಾಕಬೇಕು (ಕಿಕ್ ಹಿಮ್ ಔಟ್). ಈಗಲೇ ತೆಗೆದರೆ ಬಿಜೆಪಿಯು ಲಿಂಗಾಯತ ವಿರೋಧಿ ಎಂಬ ಟೀಕೆಗೆ ಗುರಿ ಆಗುವ ಅಪಾಯವಿದೆ. ಇದರಿಂದ ಪಕ್ಷಕ್ಕೂ ಹಾನಿಯಾಗುತ್ತದೆ. ಅಕ್ಟೋಬರ್‌ವರೆಗೆ ಕಾಯಬೇಕು'.

ಡಿವಿಎಸ್–'ಅವರ ಅವಧಿ ಮುಗಿಯುವವರೆಗೆ ಗೊಂದಲ ಮಾಡಿಕೊಳ್ಳುವ ಅಗತ್ಯ ಇಲ್ಲ. ಯೋಜನಾ ಬದ್ಧವಾಗಿಯೇ ಇಳಿಸಬೇಕು. ನವೆಂಬರ್‌ನಲ್ಲಿ ಅವಧಿ ಮುಗಿಯುವುದರಿಂದ ಆಗ ಇಳಿಸಿದರೆ ಯಾರೂ ಪ್ರಶ್ನೆ ಮಾಡುವುದಿಲ್ಲ. ಲಿಂಗಾಯತರು ಸ್ವಲ್ಪ ವಿರೋಧ ಮಾಡಬಹುದು. ಒಳ್ಳೆಯ ವ್ಯಕ್ತಿಯನ್ನು ಆಯ್ಕೆ ಮಾಡಿದರೆ ವಿರೋಧಗಳು ಬರುವುದಿಲ್ಲ'.

ಡಿವಿಎಸ್– 'ಪಕ್ಷದ ಬಳಿ ಉತ್ತಮ ಆಯ್ಕೆಗಳಿದ್ದರೆ, ನಾನು ಆ ನಿರ್ಧಾರಕ್ಕೆ ಬದ್ಧನಾಗಿದ್ದೇನೆ. ನಾನು ಹೇಳುತ್ತಿರುವುದು ಸರಿಯಾಗಿದೆಯಲ್ಲವೇ?'

ಆಗ ಮಧ್ಯ ಪ್ರವೇಶಿಸಿ ಪ್ರದೀಪ್ ಮಾತನಾಡಿ, ಬಿ.ಎಲ್.ಎಸ್ (ಸಂತೋಷ್) ಆಟ ಆಡುತ್ತಿದ್ದಾರೆಯೇ ಎಂದು ಪ್ರಶ್ನಿಸಿದಾಗ, ಡಿವಿಎಸ್– 'ಅದು ಹಾಗಿರಲಿ' ಎನ್ನುತ್ತಾರೆ.

ಡಿವಿಎಸ್– 'ನನ್ನನ್ನು ಜನರು ಒಪ್ಪಿಕೊಂಡಿದ್ದಾರೆ. ಬಸ್ ನಿಲ್ದಾಣದಲ್ಲಿ ನಾನು ಕಾಣಿಸಿಕೊಂಡರೆ 25 ರಿಂದ 30 ಆಟೊ ಚಾಲಕರು ಸೆಲ್ಫಿ ತೆಗೆದುಕೊಳ್ಳಲು ಬರುತ್ತಾರೆ'.

'ಇದನ್ನು ಬಾಸ್‌ಗೆ ಹೇಳಲಾ' ಎಂದೂ ಪ್ರದೀಪ್ ಪ್ರಶ್ನಿಸುತ್ತಾರೆ.

ನಾನು ಉತ್ತರಿಸುವುದಿಲ್ಲ: 'ಇದು ನನ್ನ ಆಡಿಯೊ ಅಲ್ಲ. ನಾನು ಮಾತೇ ಆಡಿಲ್ಲದ ಕಾರಣ, ಉತ್ತರ ನೀಡುವ ಅಗತ್ಯ ಇಲ್ಲ' ಎಂದು ಸದಾನಂದಗೌಡ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ತಮ್ಮ ವಿರುದ್ಧ ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಟೀಕೆ ಮಾಡಿರುವುದಕ್ಕೆ ಪ್ರತಿಕ್ರಿಯಿಸಿದ ಗೌಡರು, 'ವಿಶ್ವನಾಥ್ ಮುತ್ತಪ್ಪ ರೈ ಕೈಕೆಳಗೆ ಲೂಟಿ ಹೊಡೆಯುತ್ತಿದ್ದ ವ್ಯಕ್ತಿ. ಗೂಂಡಾಗಿರಿ ಮಾಡುತ್ತಿದ್ದ ವ್ಯಕ್ತಿಯ ಬಗ್ಗೆ ನಾನೇನು ಮಾತನಾಡಲಿ. ಹಣ ಹೊಡೆಯೋದು, ಕೊಳ್ಳೆ ಹೊಡೆಯೋದೇ ಅವರ ಕೆಲಸ' ಎಂದರು.

'ನಾನು ಒಕ್ಕಲಿಗ ಅಲ್ಲ ಎನ್ನುತ್ತಾರೆ. ಈ ಬಗ್ಗೆ ದಕ್ಷಿಣಕನ್ನಡದಲ್ಲಿ ಪ್ರತಿಭಟನೆ ನಡೆದಿದೆ. ಈ ವಿಷಯವನ್ನು ಪಕ್ಷದ ವರಿಷ್ಠರಿಗೆ ತಿಳಿಸುತ್ತೇನೆ' ಎಂದರು.

ಬಿಜೆಪಿ ವಕ್ತಾರ ಮಹೇಶ್ ಉಚ್ಚಾಟನೆ

ಬೆಂಗಳೂರು: ಪಕ್ಷದ ಶಿಸ್ತು ಉಲ್ಲಂಘನೆಯ ಆರೋಪದ ಮೇಲೆ ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಅವರನ್ನು 6 ವರ್ಷಗಳ ಅವಧಿಗೆ ಪಕ್ಷದಿಂದ ಉಚ್ಚಾಟಿಸಲಾಗಿದೆ.

ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನದ ಕುರಿತು ಮಹೇಶ್ ಅವರು ಜೂನ್ 19 ರಂದು ನಡೆದ ಪಕ್ಷದ ಆಂತರಿಕ ಸಭೆಯಲ್ಲಿ ಕೆಲ ರಾಷ್ಟ್ರೀಯ ಮತ್ತು ರಾಜ್ಯ ನಾಯಕರ ಬಗ್ಗೆ ಅನಗತ್ಯ ಆರೋಪಗಳನ್ನು ಮಾಡಿದ್ದರು ಎಂದು ಮೂಲಗಳು ತಿಳಿಸಿವೆ.

ಪಕ್ಷದ ನಾಯಕರ ಕುರಿತು ಆರೋಪಗಳನ್ನು ಮಾಡಿದ ಬಗ್ಗೆ ಪರಿಶೀಲಿಸುವಂತೆ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸೂಚಿಸಿದ ಕಾರಣ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ ಪಾಟೀಲ ಅವರು ನೋಟಿಸ್ ನೀಡಿ ಸ್ಪಷ್ಟೀಕರಣ ಕೇಳಿದ್ದರು. ಆದರೆ, ಅವರು ನೀಡಿದ ಸ್ಪಷ್ಟೀಕರಣ ಸಮಾಧಾನಕರವಾಗಿಲ್ಲ ಎಂಬ ಕಾರಣಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ಎಲ್ಲ ಜವಾಬ್ದಾರಿಗಳಿಂದ ಮುಕ್ತಗೊಳಿಸಿ ಮಹೇಶ್ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿದ್ದಾರೆ.

ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್ ಅಗರವಾಲ್ ಮತ್ತು ವಿಧಾನಪರಿಷತ್ ಸದಸ್ಯ ರಘು ಕೌಟಿಲ್ಯ ವಿರುದ್ಧ ಮಹೇಶ್ ಮಾತನಾಡಿದ್ದರು ಎಂದು ಮೂಲಗಳು ಹೇಳಿವೆ.

'ಗೋವಾ: ಕನ್ನಡ ಶಾಲೆ ಉಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೋವಾ ರಾಜ್ಯದಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದ ನೆಪದಲ್ಲಿ ಮುಚ್ಚಲು ಅಲ್ಲಿನ ಸರ್ಕಾರ ಸಿದ್ಧತೆ ನಡೆಸುತ್ತಿದ್ದು, ಅದನ್ನು ಕೂಡಲೇ ತಡೆಯಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕೇಂದ್ರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಿಗೆ ಪತ್ರ ಬರೆದಿದ್ದಾರೆ.

'ವಿದ್ಯಾರ್ಥಿಗಳು ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳಬೇಕು ಎಂಬ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರ ಹೇಳಿಕೆ ಆಘಾತಕಾರಿ ಆಗಿದೆ. ಜೊತೆಗೆ, ಭಾರತ ಸಂವಿಧಾನವು ಪ್ರತಿಪಾದಿಸುವ ವೈವಿಧ್ಯತೆಯಲ್ಲಿ ಏಕತೆ ಆಶಯಕ್ಕೂ ವಿರುದ್ಧವಾಗಿದೆ. ಕೇಂದ್ರದ ರಾಷ್ಟ್ರೀಯ ಶಿಕ್ಷಣ ನೀತಿಯು ಭಾಷಾ ವೈವಿಧ್ಯ ಮತ್ತು ಸಹಬಾಳ್ವೆಯ ಮೌಲ್ಯಗಳಿಗೆ ಧಕ್ಕೆಯುಂಟು ಮಾಡಬಹುದು ಎಂಬುದಕ್ಕೂ ಉದಾಹರಣೆಯಾಗಿದೆ' ಎಂದು ಡಿ.ಕೆ.ಶಿವಕುಮಾರ್ ಅವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

'ಕರ್ನಾಟಕ ಸರ್ಕಾರದ ಸಚಿವರನ್ನೊಳಗೊಂಡ ನಿಯೋಗವೊಂದನ್ನು ತಕ್ಷಣವೇ ಗೋವಾಕ್ಕೆ ಕಳುಹಿಸಿ, ಅಲ್ಲಿನ ಮುಖ್ಯಮಂತ್ರಿ ಮತ್ತು ಶಿಕ್ಷಣ ಸಚಿವರೊಂದಿಗೆ ಮಾತುಕತೆ ನಡೆಸಿ, ಕನ್ನಡ ಶಾಲೆಗಳನ್ನು ಮುಚ್ಚದಂತೆ ತಡೆಯಬೇಕು. ಪ್ರಾದೇಶಿಕ ಭಾಷೆ ಅಥವಾ ಭಾಷಾ ಅಲ್ಪಸಂಖ್ಯಾತರ ಅಸ್ತಿತ್ವಕ್ಕೆ ಮಾರಕವಾಗದಂತೆ ಒತ್ತಡ ಹೇರಬೇಕು' ಎಂದು ಕೋರಿದ್ದಾರೆ.

ಕೂಡಲೇ ಧಾವಿಸಿ: 'ಮಾತೃಭಾಷೆಯಲ್ಲಿ ಕಲಿಯುವ ಅವಕಾಶವನ್ನು ಕಳೆದುಕೊಳ್ಳುತ್ತಿರುವ ಗೋವಾ ರಾಜ್ಯದ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಸಹಾಯಕ್ಕೆ ಕೂಡಲೇ ಧಾವಿಸಬೇಕು' ಎಂದು ಅವರು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಆಗ್ರಹಿಸಿದ್ದಾರೆ.

ಕೇಂದ್ರ–ರಾಜ್ಯ ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಟರ್ಫ್ ಕ್ಲಬ್

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ಅನ್ನು ಕುಣಿಗಲ್ ಸ್ಟಡ್ ಫಾರ್ಮ್‌ಗೆ ಸ್ಥಳಾಂತರಿಸುವ ರಾಜ್ಯ ಸರ್ಕಾರದ ಆದೇಶವನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಬೆಂಗಳೂರಿನ ಜಯನಗರದ ವಿಜಯ ನಿಶಾಂತ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ಕೆಲ ಕಾಲ ವಾದ ಆಲಿಸಿದ ನ್ಯಾಯಪೀಠ, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಕಾರ್ಯದರ್ಶಿ ಹಾಗೂ ರಾಜ್ಯ ಸರ್ಕಾರದ ಪಶು ಸಂಗೋಪನಾ ಇಲಾಖೆಯ ಕಾರ್ಯದರ್ಶಿ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಜುಲೈ 15ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: 'ಕುಣಿಗಲ್ ಸ್ಟಡ್ ಫಾರ್ಮ್ ಜಮೀನಿನಲ್ಲಿ 100ಕ್ಕೂ ಹೆಚ್ಚು ಎಕರೆ ಪ್ರದೇಶವನ್ನು, ಬೆಂಗಳೂರು ಟರ್ಫ್ ಕ್ಲಬ್‌ಗೆ 29 ವರ್ಷಗಳ ಗುತ್ತಿಗೆ ಆಧಾರದಲ್ಲಿ ನೀಡಲು ಅಗತ್ಯವಾದ ಎಲ್ಲಾ ಕಾನೂನಾತ್ಮಕ ಪ್ರಕ್ರಿಯೆ ಕೈಗೊಳ್ಳಿ' ಎಂದು ರಾಜ್ಯ ಸರ್ಕಾರ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಆಯುಕ್ತರಿಗೆ ಆದೇಶಿದೆ.

'ಕುಣಿಗಲ್ ಸ್ಟಡ್ ಫಾರ್ಮ್ ಸುಮಾರು 457.26 ಎಕರೆ ವಿಸ್ತೀರ್ಣದ ಐತಿಹಾಸಿಕ ಮತ್ತು ಜೀವವೈವಿಧ್ಯತೆ ಹೊಂದಿದ ಭೂ ಪ್ರದೇಶ. ಹಾಗಾಗಿ, ಈ ಸಮಗ್ರ ಪರಿಸರ ಮತ್ತು ಕುದುರೆ ಸಂಬಂಧಿತ ಪರಿಸರ ವ್ಯವಸ್ಥೆಯಾಗಿ ಸಂರಕ್ಷಿಸಲು ಮತ್ತು ರಕ್ಷಿಸಲು ಪ್ರತಿವಾದಿಗಳಿಗೆ ನಿರ್ದೇಶನ ನೀಡಬೇಕು. ಕುಣಿಗಲ್ ಸ್ಟಡ್ ಫಾರ್ಮ್ ಜಮೀನಿನ ಬಳಕೆಯನ್ನು ಬೆಂಗಳೂರು ಟರ್ಫ್ ಕ್ಲಬ್‌ಗೆ ಗುತ್ತಿಗೆ ನೀಡುವ ಸಂಬಂಧ ಸರ್ಕಾರ 2026ರ ಮಾರ್ಚ್ 6ರಂದು ಹೊರಡಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಯಾಸಿನ್ ಮುಖ್ಯ ಆರೋಪಿ

ಶ್ರೀನಗರ (ಪಿಟಿಐ): 1990ರಲ್ಲಿ ಕಾಶ್ಮೀರಿ ಪಂಡಿತೆ, ಶುಶ್ರೂಷಕಿ ಸರಳಾ ಭಟ್ ಅವರನ್ನು ಅಪಹರಿಸಿ, ಭೀಕರವಾಗಿ ಹತ್ಯೆಗೈದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ವಿಶೇಷ ತನಿಖಾ ಸಂಸ್ಥೆಯು (ಎಸ್‌ಐಎ) ಸೋಮವಾರ 700 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ್ದು, ಪ್ರತ್ಯೇಕತಾವಾದಿ ನಾಯಕ, ಜೆಕೆಎಲ್‌ಎಫ್ ಮುಖ್ಯಸ್ಥ ಯಾಸಿನ್ ಮಲಿಕ್‌ನನ್ನು ಮುಖ್ಯ ಆರೋಪಿ ಎಂದು ಉಲ್ಲೇಖಿಸಿದೆ.



ಭಯೋತ್ಪಾದನೆಯ ಬಲಿಪಶುಗಳಿಗೆ ನ್ಯಾಯ ಒದಗಿಸುವಲ್ಲಿ ಐತಿಹಾಸಿಕವಾಗಿ ಇದು ಮಹತ್ವದ ಹೆಜ್ಜೆ ಎಂದು ಎಸ್‌ಐಎ ಬಣ್ಣಿಸಿದೆ.

ಎಂಜಿನಿಯರಿಂಗ್ ಸೀಟು 6,003 ಹೆಚ್ಚಳ

ಬೆಂಗಳೂರು: ಎಂಜಿನಿಯರಿಂಗ್ ಸೀಟುಗಳ ಅಂತಿಮ ಸೀಟು ಲಭ್ಯತಾ ಪಟ್ಟಿಯನ್ನು (ಸೀಟ್ ಮ್ಯಾಟ್ರಿಕ್ಸ್) ಕೆಇಎ ಸೋಮವಾರ ಪ್ರಕಟಿಸಿದೆ.

ಪಟ್ಟಿ ಪ್ರಕಾರ ಸರ್ಕಾರಿ ಕೋಟಾದಲ್ಲಿ ಒಟ್ಟು 81,044 ಸೀಟುಗಳು ಲಭ್ಯವಾಗಿದ್ದು, ಹಿಂದಿನ ಶೈಕ್ಷಣಿಕ ವರ್ಷಕ್ಕೆ ಹೋಲಿಸಿದರೆ 6,003 ಸೀಟುಗಳು ಹೆಚ್ಚಳವಾಗಿವೆ. 2025-26ನೇ ಸಾಲಿನಲ್ಲಿ ಸರ್ಕಾರಿ ಕೋಟಾದ ಅಡಿಯಲ್ಲಿ 72,506 ಸೀಟುಗಳಿದ್ದರೆ, ಈ ಬಾರಿ ಆ ಸಂಖ್ಯೆ 81,044ಕ್ಕೆ ಏರಿಕೆಯಾಗಿದೆ. ಬಿ–ಫಾರ್ಮಾ, ಫಾರ್ಮಾ–ಡಿ, ಯೋಗ ಮತ್ತು ನ್ಯಾಚುರೋಪಥಿ ಸೀಟುಗಳ ಲಭ್ಯತಾ ಪಟ್ಟಿಯನ್ನು (ಸೀಟ್ ಮ್ಯಾಟ್ರಿಕ್ಸ್) ಆರೋಗ್ಯ ಇಲಾಖೆಯು ಕೆಇಎಗೆ ತಲುಪಿಸಿಲ್ಲ. ವೈದ್ಯಕೀಯ, ದಂತ ವೈದ್ಯಕೀಯ ಸೀಟುಗಳ ಲಭ್ಯತಾ ಪಟ್ಟಿಯನ್ನು ಸಲ್ಲಿಸುವಂತೆ ವೈದ್ಯಕೀಯ ಶಿಕ್ಷಣ ಇಲಾಖೆಗೆ ಪ್ರಾಧಿಕಾರ ಪತ್ರ ಬರೆದಿದೆ.

ಹಿರಿಯರಿಗಾಗಿ 'ಸ್ನೇಹ ಉಚಿತ ವಾಚನಾಲಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರಹಳ್ಳಿ ಬಳಿಯ ಚಿಕ್ಕಕಲ್ಲಸಂದ್ರದ ಕೆನರಾ ಬ್ಯಾಂಕ್ ಕಾಲೊನಿಯ ಬಾಡಿಗೆ ಕೊಠಡಿಯಲ್ಲಿ ಹಿರಿಯ ನಾಗರಿಕರಿಗಾಗಿ ಆರಂಭಿಸಿರುವ 'ಸ್ನೇಹ ಉಚಿತ ವಾಚನಾಲಯ' ಓದುಗರ ಮೆಚ್ಚುಗೆಗೆ ಪಾತ್ರವಾಗಿದೆ.

ದಿನಪತ್ರಿಕೆಗಳನ್ನು ಓದುವ ಅಭ್ಯಾಸವನ್ನು ಬೆಳೆಸಿಕೊಳ್ಳಲಿ ಎಂಬ ಉದ್ದೇಶದಿಂದ ನಿವೃತ್ತ ಎಂಜಿನಿಯರ್ ಎಂ.ಆರ್ ನರೇಂದ್ರ ಬಾಬು ಎಂಬುವವರು 1998ರಲ್ಲಿ ಕೊಠಡಿಯೊಂದನ್ನು ಬಾಡಿಗೆಗೆ ಪಡೆದು ವಾಚನಾಲಯ ಆರಂಭಿಸಿದ್ದಾರೆ.

ಆರಂಭದಲ್ಲಿ ಹತ್ತು–ಹದಿನೈದು ಜನರು ವಾಚನಾಲಯಕ್ಕೆ ಬರುತ್ತಿದ್ದರು. ಈಗ ಸುಮಾರು 40 ರಿಂದ 50 ಮಂದಿ ಬರುತ್ತಿದ್ದಾರೆ. ಅಲ್ಲದೇ 'ಸ್ನೇಹ ಉಚಿತ ವಾಚನಾಲಯ' ವತಿಯಿಂದ ವರ್ಷಕ್ಕೊಂದು ಬಾರಿ ರಕ್ತದಾನ ಶಿಬಿರ ಆಯೋಜಿಸಲಾಗುತ್ತದೆ. ವಾರಕ್ಕೆ ಮೂರು ದಿನ ಭಜನಾ ಕಾರ್ಯಕ್ರಮ, ಸ್ಪೋಕನ್ ಇಂಗ್ಲಿಷ್ ತರಗತಿ, ಆರೋಗ್ಯ ಶಿಬಿರ ಮತ್ತು ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಹಿರಿಯರು ಚಟುವಟಿಕೆಯಿಂದ ಇದ್ದಾರೆ.

ನರೇಂದ್ರ ಬಾಬು ಮಾತನಾಡಿ, 'ಆರಂಭದಲ್ಲಿ 15ಕ್ಕೂ ಹೆಚ್ಚು ದಿನಪತ್ರಿಕೆಗಳನ್ನು ತರಿಸುತ್ತಿದ್ದೆ. ಆದರೆ, ಕೋವಿಡ್ ನಂತರ ಆರ್ಥಿಕ ಸಮಸ್ಯೆಯಿಂದ 6 ಕನ್ನಡ ದಿನಪತ್ರಿಕೆ ಮತ್ತು ಒಂದು ಇಂಗ್ಲಿಷ್ ದಿನಪತ್ರಿಕೆ ತರಿಸುತ್ತಿದ್ದೇನೆ. ಪ್ರತಿ ದಿನವೂ ಬೆಳಿಗ್ಗೆ 7ರಿಂದ ಸಂಜೆ 6 ಗಂಟೆವರೆಗೆ ಕಾರ್ಯನಿರ್ವಹಿಸಲಿದೆ. ಈ ಭಾಗದಲ್ಲಿರುವ ಹಲವು ಹಿರಿಯ ನಾಗರಿಕರು ಗ್ರಂಥಾಲಯಕ್ಕೆ ಭೇಟಿ ನೀಡುತ್ತಾರೆ' ಎಂದು ಹೇಳಿದರು.

'ಅನಾರೋಗ್ಯದ ಕಾರಣದಿಂದ ಆರ್ಥಿಕ ತೊಂದರೆಗೆ ಸಿಲುಕಿದ್ದು, ಈ ಚಟುವಟಿಕೆಗಳನ್ನು ಮುಂದುವರಿಸಲು ದಾನಿಗಳ ನೆರವಿನ ಅವಶ್ಯಕತೆಯಿದೆ' ಎಂದರು.

'ಗ್ರಂಥಾಲಯದಲ್ಲಿ ಎಲ್ಲ ವರ್ಗದ ಹಿರಿಯ ನಾಗರಿಕರಿಗೂ ಮುಕ್ತ ಪ್ರವೇಶವಿದೆ. ಇಲ್ಲಿನ ಚಟುವಟಿಕೆಗಳಲ್ಲಿ ಸದಾಕಾಲವೂ ತೊಡಗಿಸಿಕೊಳ್ಳುತ್ತೇವೆ' ಎಂದು ಓದುಗರಾದ ಪದ್ಮಾ ಮಂಜುನಾಥ್, ವಿಮಲಾ, ಶೈಲಾ, ಇಂದಿರಾ ತಿಳಿಸಿದರು.


ಉತ್ತರಹಳ್ಳಿ ಬಳಿಯ ಚಿಕ್ಕಕಲ್ಲಸಂದ್ರದಲ್ಲಿರುವ 'ಸ್ನೇಹ ಉಚಿತ ವಾಚನಾಲಯ'ದಲ್ಲಿ ಪತ್ರಿಕೆಗಳನ್ನು ಓದುತ್ತಿರುವ ಹಿರಿಯ ನಾಗರಿಕರು
ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಸಂಪುಟ ಸಭೆಯ ನಂತರ ದೆಹಲಿಗೆ: ಸಿ.ಎಂ

ಬೆಂಗಳೂರು: ಸಚಿವ ಸಂಪುಟ ಸಭೆಯ (ಜುಲೈ 2) ನಂತರ ಸಂಪುಟ ವಿಸ್ತರಣೆ ಕುರಿತು ದೆಹಲಿಗೆ ತೆರಳಿ, ಚರ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಸಂಪುಟ ವಿಸ್ತರಣೆ ತ್ವರಿತವಾಗಿ ಆಗಬೇಕು. ವಿಳಂಬ ಆಗಬಾರದು ಎನ್ನುವುದು ನನಗೂ ಇದೆ. ಒಂದೊಂದು ದಿನವೂ ಮುಖ್ಯ. ನೋಡೋಣ' ಎಂದರು. ಶಿವಕುಮಾರ್ ಅವರು ಜೂನ್ 3 ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಅವರ ಜತೆಗೆ ಇತರೆ 13 ಶಾಸಕರು ಸಂಪುಟ ಸೇರಿದ್ದರು. 26 ದಿನಗಳು ಕಳೆದರೂ ಸಂಪುಟ ವಿಸ್ತರಣೆಯಾಗಿ ಸಚಿವ ಸ್ಥಾನಗಳು ಪೂರ್ಣಪ್ರಮಾಣದಲ್ಲಿ ಭರ್ತಿ ಮಾಡಲು ಸಾಧ್ಯವಾಗಿಲ್ಲ.

ನಗರದಲ್ಲಿ ಇಂದು

'ಷೇರು ಪೇಟೆ ಪದವಿವರಣ ಕೋಶ' ಮತ್ತು 41 ಕೃತಿಗಳ ಲೋಕಾರ್ಪಣೆ: ಅತಿಥಿ: ಮಲ್ಲೇಪುರಂ ಜಿ.ವೆಂಕಟೇಶ, ಅಧ್ಯಕ್ಷತೆ: ಬೆಂ.ಶ್ರೀ.ರವೀಂದ್ರ, ಆಯೋಜನೆ: ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ಸ್ನಾತಕಪೂರ್ವ ದೀಕ್ಷಾಂತ ಸಮಾರೋಪ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಎಸ್.ಅಹಲ್ಯಾ, ವಿರೂಪಾಕ್ಷ ವಿ.ಜಡ್ಡೀಪಾಲ್, ಆಯೋಜನೆ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೃಷ್ಣರಾಜೇಂದ್ರ ರಸ್ತೆ, ಬೆಳಿಗ್ಗೆ 10.30


ಸಿದ್ಧಲಿಂಗ ಸ್ವಾಮೀಜಿ

ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ, ಸಾಧನಾ ಪ್ರಶಸ್ತಿ ಪ್ರದಾನ: ಪುರಸ್ಕೃತರು: ಡಿ.ಕೆ.ಶಿವಕುಮಾರ್, ಅಧ್ಯಕ್ಷತೆ: ಎಸ್.ಎಂ.ಜಯಕರ, ಜಯಂತಿ ಕುರಿತ ನುಡಿ: ಗಾ.ನಂ.ಶ್ರೀಕಂಠಯ್ಯ, ಅತಿಥಿ: ಕೆ.ಟಿ.ಶಾಂತಲಾ, ಸಿ.ಎಸ್.ಕರಿಗಾರ್, ಆಯೋಜನೆ: ಪ್ರೊ.ಕೆ.ವೆಂಕಟಗಿರಿಗೌಡ ಸಭಾಂಗಣ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 11

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ 'ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು' ವಿಶೇಷ ಕಲಾ ಪ್ರದರ್ಶನ: ಆಯೋಜನೆ: 'ಸೀಗಲ್' ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಪ್ರೊ.ಎಂ.ಜೆ.ಕಮಲಾಕ್ಷಿ ಜನ್ಮದಿನದ ಸ್ಮರಣೋತ್ಸವ, ಜೀವನ ಮತ್ತು ಕೃತಿಗಳ ಕುರಿತು ಗೋಷ್ಠಿ: ಉದ್ಘಾಟನೆ: ಎಂ.ಎಸ್.ಮೂರ್ತಿ, ಮುಖ್ಯ ಅತಿಥಿ: ಎ.ರಾಮಕೃಷ್ಣಪ್ಪ, ಅಧ್ಯಕ್ಷತೆ: ಬಿ.ಎಲ್.ಶಂಕರ್, ಆಯೋಜನೆ ಮತ್ತು ಸ್ಥಳ: ಡಿ.ದೇವರಾಜ ಅರಸು ಗ್ಯಾಲರಿ, ಕರ್ನಾಟಕ ಚಿತ್ರಕಲಾ ಪರಿಷತ್, ಬೆಳಿಗ್ಗೆ 11.30


ಬಿಸಿಯು ಉತ್ಸವ: ಅತಿಥಿ: ವಿನಯ್ ರಾಜ್‌ಕುಮಾರ್, ಮೇಘಾ ಶೆಟ್ಟಿ, ಅಧ್ಯಕ್ಷತೆ: ಬಿ.ರಮೇಶ್, ಆಯೋಜನೆ ಮತ್ತು ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಡಾ.ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಡಾ.ಅಂಬೇಡ್ಕರ್ ವೀದಿ, ಮಧ್ಯಾಹ್ನ 2.30


ವಿನಯ್ ರಾಜ್‌ಕುಮಾರ್

'ಖಾಸಗಿ ಶಾಲೆಗಳಲ್ಲಿ ಕನ್ನಡ ಕಲಿಕೆ ಮತ್ತು ಸಮಗ್ರ ಕನ್ನಡ ಅನುಷ್ಠಾನ' ಕುರಿತು ಮುಖ್ಯಮಂತ್ರಿ ಭೇಟಿ ತಯಾರಿ ಸಭೆ: ಉಪಸ್ಥಿತಿ: ಹಂಪ ನಾಗರಾಜಯ್ಯ, ಪುರುಷೋತ್ತಮ ಬಿಳಿಮಲೆ, ಎಲ್.ಹನುಮಂತಯ್ಯ, ಬಿ.ಟಿ.ಲಲಿತಾ ನಾಯಕ್, ಎಲ್.ಎನ್.ಮುಕುಂದರಾಜ್, ಎಸ್.ಜಿ.ಸಿದ್ಧರಾಮಯ್ಯ, ವಸುಂಧರಾ ಭೂಪತಿ, ಮುಖ್ಯಮಂತ್ರಿ ಚಂದ್ರು, ನೇ.ಭ.ರಾಮಲಿಂಗಶೆಟ್ಟಿ, ಶ್ರೀಪಾಲನೇತ್ರ, ಕೆನಲಿ ಗೌಡ, ಭೀಮಶಂಕರ್ ಪಾಟೀಲ, ಆಯೋಜನೆ: ಕನ್ನಡ ಮೊದಲು ಸ್ನೇಹಿತರು ಮತ್ತು ಸಂಘಗಳ ಬಳಗ, ಸ್ಥಳ: ಕರ್ನಾಟಕ ಸಾಹಿತ್ಯ ಅಕಾಡೆಮಿ, ರವೀಂದ್ರ ಕಲಾಕ್ಷೇತ್ರ ಆವರಣ, ಮಧ್ಯಾಹ್ನ 2.45

'ಸದಾರಮೆ' ಜಾನಪದ ನಾಟಕ ಪ್ರದರ್ಶನ: ಉದ್ಘಾಟನೆ: ಬಿ.ಎಸ್.ಮಂಜುನಾಥಸ್ವಾಮಿ, ಅಧ್ಯಕ್ಷತೆ: ಕೆ.ವಿ.ನಾಗರಾಜಮೂರ್ತಿ, ನಿರ್ದೇಶನ: ಮಾ.ಭಾಸ್ಕರ್, ಸಂಗೀತ: ವಿ.ಎನ್.ಅಶ್ವಥ್, ಆಯೋಜನೆ: ಪರಸ್ಪರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸೇವಾ ಸಂಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 4

ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ವೇದಿಕೆ ಮತ್ತು 114ನೇ ಜನ್ಮದಿನೋತ್ಸವ ಸಮಾರಂಭ: ಉದ್ಘಾಟನೆ: ಕೃಷ್ಣಬೈರೇಗೌಡ, ಅಧ್ಯಕ್ಷತೆ: ಎಚ್.ಮಾರಪ್ಪ, ನಾಮಫಲಕ ಅನಾವರಣ: ಎಸ್.ಆರ್. ವಿಶ್ವನಾಥ್, ಅತಿಥಿ: ಕೆ.ಸುಧಾಕರ್, ಎಂ.ಆರ್.ಸೀತಾರಾಮ್, ಅಶ್ವಿನಿ ಪುನೀತ್‌ರಾಜ್‌ಕುಮಾರ್, ಕೆ.ಎಸ್.ಭಗವಾನ್, ಪಿ.ಎಸ್. ಕಾಂತರಾಜು, ಮಿಥುನ್ ಕುಮಾರ್, ಸ್ಥಳ: ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ವೃತ್ತ, ದಿ ನ್ಯೂ ಟೌನ್ ಕ್ಲಬ್ ಮುಂಭಾಗ, ಯಲಹಂಕ ಉಪನಗರ, ಸಂಜೆ 5


ಅಶ್ವಿನಿ

'ಧ್ಯೇಯಮೂರ್ತಿ' ಕೃತಿ ಲೋಕಾರ್ಪಣೆ: ಸಾನ್ನಿಧ್ಯ: ಶಿವರುದ್ರಸ್ವಾಮೀಜಿ, ಅತಿಥಿ: ಸುಧೀರ್, ಮಿಲಿಂದ್ ಪರಾಂಡೆ, ದೀಪಕ್ ರಾಜಗೋಪಾಲ್, ದು.ಗು.ಲಕ್ಷ್ಮಣ, ಆಯೋಜನೆ: ವಿಶ್ವ ಹಿಂದು ಪರಿಷತ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 6

'ನೀರಗನ್ನಡಿ' ನಾಟಕ ಪ್ರದರ್ಶನ: ರಚನೆ: ಕೆ.ವೈ. ನಾರಾಯಣಸ್ವಾಮಿ, ನಿರ್ದೇಶನ: ಬಿ.ಸುರೇಶ, ತಂಡ: ನಟರಂಗ, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಜೆ.ಪಿ.ನಗರ, ಸಂಜೆ 7.30

> ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
> nagaradalli_indu@prajavani.co.in

ನಗರದ ರೈಲು ನಿಲ್ದಾಣಗಳ ಮೇಲಿನ ಒತ್ತಡ ಕಡಿಮೆ ಮಾಡುವ ಗುರಿ: ಸೋಮಣ್ಣ

ಯಲಹಂಕ: ಮೆಗಾ ರೈಲ್ವೆ ಟರ್ಮಿನಲ್‌ಗೆ ಚಿಂತನೆ

ಪ್ರಜಾವಾಣಿ ವಾರ್ತೆ

ಯಲಹಂಕ: ನಗರದ ರೈಲು ನಿಲ್ದಾಣಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಯಲಹಂಕದಲ್ಲಿ ಹೊಸ ಮೆಗಾ ರೈಲ್ವೆ ಟರ್ಮಿನಲ್ ನಿರ್ಮಿಸಲು ಯೋಜಿಸಲಾಗಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ಯಲಹಂಕ ರೈಲು ನಿಲ್ದಾಣದಲ್ಲಿ ಕೊಯಮತ್ತೂರು- ಲೋಕಮಾನ್ಯ ತಿಲಕ್ ಟರ್ಮಿನಸ್ (ಮುಂಬೈ) ಎಕ್ಸ್‌ಪ್ರೆಸ್ ರೈಲಿನ ನಿಲುಗಡೆಗೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

ಯಲಹಂಕ ತ್ವರಿತ ಅಭಿವೃದ್ಧಿಯನ್ನು ಕಾಣುತ್ತಿದೆ. ಇಲ್ಲಿ ಮೆಗಾ ರೈಲ್ವೆ ಟರ್ಮಿನಲ್ ನಿರ್ಮಿಸಿದರೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣ, ಕಂಟೋನ್ಮೆಂಟ್ ನಿಲ್ದಾಣ, ಯಶವಂತಪುರ ನಿಲ್ದಾಣ ಸೇರಿ ನಗರದ ನಿಲ್ದಾಣಗಳಲ್ಲಿ ಒತ್ತಡ ಕಡಿಮೆಯಾಗಲಿದೆ ಎಂದರು.

ಬೆಂಗಳೂರು ಕಂಟೋನ್ಮೆಂಟ್ ಮತ್ತು ಯಶವಂತಪುರ ರೈಲು ನಿಲ್ದಾಣಗಳನ್ನು ವಿಶ್ವದರ್ಜೆಯ ಗುಣಮಟ್ಟಕ್ಕೆ ಅನುಗುಣವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಕಂಟೋನ್ಮೆಂಟ್-ವೈಟ್‌ಫೀಲ್ಡ್ ಚತುಷ್ಪಥ ಯೋಜನೆ ಪ್ರಗತಿಯಲ್ಲಿದೆ. ಸುರಕ್ಷತೆಯನ್ನು ಸುಧಾರಿಸಲು ಭಾರತೀಯ ರೈಲ್ವೆಯು ಎಲ್ಲ ಲೆವೆಲ್ ಕ್ರಾಸಿಂಗ್ ಗೇಟ್‌ಗಳನ್ನು ಹಂತಹಂತವಾಗಿ ತೆಗೆದುಹಾಕುವತ್ತ ಕೆಲಸ ಮಾಡುತ್ತಿದೆ. ವೈಟ್‌ಫೀಲ್ಡ್ ಮತ್ತು ಕೋಲಾರವನ್ನು ಹೊಸಕೋಟೆ ಮೂಲಕ ಸಂಪರ್ಕಿಸುವ ಹೊಸ ನೇರ ರೈಲು ಮಾರ್ಗವನ್ನು ಸಹ ಪ್ರಸ್ತಾಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಹಲವು ವಿಶೇಷ ರೈಲುಗಳನ್ನು ನಿಯಮಿತ ಸೇವೆಗಳಾಗಿ ಪರಿವರ್ತಿಸಲಾಗಿದೆ. ಇದು ಹೆಚ್ಚಿನ ಅನುಕೂಲವನ್ನು ಒದಗಿಸುತ್ತದೆ ಎಂದರು.

ಸಂಸದ ಕೆ. ಸುಧಾಕರ್ ಮಾತನಾಡಿ, 'ರೈಲಿಗೆ ಯಲಹಂಕದಲ್ಲಿ ನಿಲುಗಡೆ ನೀಡಿರುವುದರಿಂದ ವಿದ್ಯಾರ್ಥಿಗಳು, ಕಾರ್ಮಿಕರು, ವೃತ್ತಿಪರರು ಮತ್ತು ಈ ಪ್ರದೇಶದ ನಿವಾಸಿಗಳಿಗೆ ಹೆಚ್ಚಿನ ಪ್ರಯೋಜನವಾಗಲಿದೆ. ಇನ್ನಷ್ಟು ರೈಲುಗಳ ನಿಲುಗಡೆಗೆ ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿದರು.

ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯ, ಯಲಹಂಕದ ಶಾಸಕ ಎಸ್.ಆರ್. ವಿಶ್ವನಾಥ್, ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಪರೀಕ್ಷಿತ್ ಮೋಹನ್ ಪುರಿಯಾ ಪಾಲ್ಗೊಂಡಿದ್ದರು.




ಕೊಯಮತ್ತೂರು ಲೋಕಮಾನ್ಯ ತಿಲಕ್ ಟರ್ಮಿನಸ್ (ಮುಂಬೈ) ಎಕ್ಸ್‌ಪ್ರೆಸ್ ರೈಲಿಗೆ ಯಲಹಂಕ ರೈಲು ನಿಲ್ದಾಣದ ನಿಲುಗಡೆಗೆ ಸೋಮವಾರ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಎಸ್‌.ಆರ್. ವಿಶ್ವನಾಥ್, ವಿ. ಸೋಮಣ್ಣ, ಕೆ. ಸುಧಾಕರ್, ಲಹರ್ ಸಿಂಗ್ ಸಿರೋಯ ಭಾಗವಹಿಸಿದ್ದರು

ರೈಲು ಸಮಯ

ಕೊಯಮತ್ತೂರು–ಲೋಕಮಾನ್ಯ ತಿಲಕ್ ಟರ್ಮಿನಸ್ ಎಕ್ಸ್‌ಪ್ರೆಸ್ ರೈಲು ಕೊಯಮತ್ತೂರಿನಿಂದ ಯಲಹಂಕ ರೈಲು ನಿಲ್ದಾಣಕ್ಕೆ ಸಂಜೆ 4.41ಕ್ಕೆ ಬಂದು ಸಂಜೆ 4.43ಕ್ಕೆ ನಿರ್ಗಮಿಸಲಿದೆ. ಮುಂಬೈನಿಂದ ಬರುವಾಗ ಸಂಜೆ 7.28ಕ್ಕೆ ಯಲಹಂಕಕ್ಕೆ ತಲುಪಿ ಸಂಜೆ 7.30ಕ್ಕೆ ನಿರ್ಗಮಿಸಲಿದೆ.

ಅಳದಿದ್ದರೂ ಕಣ್ಣೀರು ಬರುವುದು ಏಕೆ?

• ಡಾ. ಲಕ್ಷ್ಮಿ ಕೆ.ಎಸ್.ಮೂರ್ತಿ



ನಿಮ್ಮ ಮನೆಯ ಪ್ಲಂಬಿಂಗ್ (ನೀರಿನ ಪೈಪ್‌ಗಳ ವ್ಯವಸ್ಥೆ) ಬಗ್ಗೆ ಒಮ್ಮೆ ಯೋಚಿಸಿ. ದಿನನಿತ್ಯ ನೀರನ್ನು ಸದ್ದಿಲ್ಲದೆ ಹೊರಗೆ ಸಾಗಿಸುವ ಆ ಪೈಪ್‌ಗಳನ್ನು ನೀವು ಒಂದು ಕ್ಷಣವೂ ಪ್ರಶಂಸಿಸಲು ಹೋಗುವುದಿಲ್ಲ. ಆದರೆ, ಅದೇ ಪೈಪ್ ಎಲ್ಲಾದರೂ 'ಬ್ಲಾಕ್' ಆಗಿ, ಸಿಂಕ್‌ನ ನೀರೆಲ್ಲಾ ಅಡುಗೆಮನೆಯ ನೆಲದ ಮೇಲೆ ಹರಿಯಲು ತೊಡಗಿದ ತಕ್ಷಣ, ಆ ವ್ಯವಸ್ಥೆಯೇ ಜಗತ್ತಿನ ಅತ್ಯಂತ ಪ್ರಮುಖವಾದ ವಿಷಯವಾಗಿಬಿಡುತ್ತದೆ. ನಮ್ಮ ಕಣ್ಣುಗಳಲ್ಲಿಯೂ ಕಾಣಲಾರದ ಕೊಳವೆ ವ್ಯವಸ್ಥೆಯೊಂದನ್ನು ಆ ಭಗವಂತ ನಿರ್ಮಿಸಿದ್ದಾನೆ. ಆ ವ್ಯವಸ್ಥೆಯಲ್ಲಿ ಏನಾದರೂ ದೋಷ ಕಾಣಿಸಿಕೊಂಡು, ಕಣ್ಣೀರು ಸತತವಾಗಿ ಮತ್ತು ಕಿರಿಕಿರಿ ಉಂಟುಮಾಡುವಂತೆ ಹೊರಚೆಲ್ಲಲು ಆರಂಭಿಸುತ್ತದೆಯೋ, ಆಗಷ್ಟೇ ನಮಗೆ ಕಣ್ಣಿನ ಸಾಮಾನ್ಯ ಮತ್ತು ಸಹಜವಾದ ತೇವಾಂಶದ ಮಹತ್ವ ಏನೆಂಬುದು ಅರಿವಾಗುತ್ತದೆ.

ಒಂದು ಹಳೆಯ ಕಟ್ಟಡದ ವಯಸ್ಸಿಗೆ ಅನುಗುಣವಾಗಿ ಅದರ ಪ್ಲಂಬಿಂಗ್ ಸಮಸ್ಯೆಗಳು ಹೇಗೆ ಬದಲಾಗುತ್ತವೆಯೋ, ಹಾಗೆಯೇ ನಮ್ಮ ವಯಸ್ಸಿನ ವಿವಿಧ ಹಂತಗಳಿಗನುಗುಣವಾಗಿ ಕಣ್ಣೀರು ತುಂಬಿಕೊಳ್ಳುತ್ತವೆ. ವಿವಿಧ ವಯೋಮಾನದವರಲ್ಲಿ ಸಾಮಾನ್ಯವಾಗಿ ಕಂಡುಬರುವ ಕಾರಣಗಳು ಇಲ್ಲಿವೆ:

ಶಿಶುಗಳು

ಪುಟ್ಟ ಪೈಪ್‌ನಲ್ಲಿನ ಬ್ಲಾಕ್: ಹಲವು ಮಕ್ಕಳು ಹುಟ್ಟುತ್ತಲೇ ಕಣ್ಣಿನಲ್ಲಿ ನೀರು ತುಂಬಿಕೊಳ್ಳುವ ಸಮಸ್ಯೆಯನ್ನು ಹೊಂದಿರುತ್ತಾರೆ. ಇದಕ್ಕೆ ಮುಖ್ಯ ಕಾರಣ ಕಣ್ಣೀರಿನ ನಾಳಗಳು (ಕಣ್ಣಿನಿಂದ ಮೂಗಿಗೆ ಕಣ್ಣೀರನ್ನು ಸಾಗಿಸುವ ಪುಟ್ಟ ಕೊಳವೆ) ಕಿರಿದಾಗಿರುವುದು ಅಥವಾ ಬ್ಲಾಕ್ ಆಗಿರುವುದು. ಹೆಚ್ಚಿನ ಮಕ್ಕಳಲ್ಲಿ, ಅವರು ಒಂದು ವರ್ಷ ತುಂಬುವಷ್ಟರಲ್ಲಿ ಈ ಪೈಪ್ ತಾನಾಗಿಯೇ ತೆರೆದುಕೊಂಡು ಸಮಸ್ಯೆ ಬಗೆಹರಿಯುತ್ತದೆ.

ಪೋಷಕರು ಏನು ಮಾಡಬಹುದು?: ಕಣ್ಣಿನ ವೈದ್ಯರು ಅಥವಾ ವಿಶೇಷವಾಗಿ ಮಕ್ಕಳ ಕಣ್ಣಿನತಜ್ಞರು (Pediatric Ophthalmologists) ಆ ಕಣ್ಣೀರಿನ ನಾಳದ ಕವಾಟವನ್ನು ತೆರೆಯಲು ಮಗುವಿನ ಮೂಗಿನ ಮೂಲೆಯ ಹತ್ತಿರ ಅತ್ಯಂತ ಮೃದುವಾಗಿ ಮಸಾಜ್ ಮಾಡಲು ಸಲಹೆ ನೀಡುತ್ತಾರೆ.

ಯಾವಾಗ ವೈದ್ಯರನ್ನು ಕಾಣಬೇಕು: ಮಗುವಿಗೆ ಒಂದು ವರ್ಷ ತುಂಬಿದ ಮೇಲೂ ಕಣ್ಣಿನಲ್ಲಿ ಸತತವಾಗಿ ನೀರು ಬರುತ್ತಿದ್ದರೆ, ಆ ಬ್ಲಾಕ್ ಅನ್ನು ತೆರವುಗೊಳಿಸಲು ತಜ್ಞರು ಒಂದು ಸಣ್ಣ ಶಸ್ತ್ರಚಿಕಿತ್ಸೆಯನ್ನು ಮಾಡಬೇಕಾಗಬಹುದು. ನಿಮ್ಮ ಮಗುವಿನ ಕಣ್ಣುಗಳು ಯಾವಾಗಲೂ ಒದ್ದೆಯಾಗಿದ್ದರೆ, ಹತ್ತಿರದ ಕಣ್ಣಿನ ವೈದ್ಯರನ್ನು ಭೇಟಿ ಮಾಡುವುದು ಸೂಕ್ತ.

ಹದಿಹರೆಯದವರು

ಋತುಮಾನದಲ್ಲಿ ಉಂಟಾಗುವ ಅಲರ್ಜಿ: ಹರೆಯದವರಲ್ಲಿ ಸುಖಾಸುಮ್ಮನೆ ಕಣ್ಣೀರು ಬರಲು ಅಲರ್ಜಿಯೂ ಕಾರಣವಾಗಿರುತ್ತದೆ. ಭಾರತದಂತಹ ದೇಶದಲ್ಲಿ ಚಳಿಗಾಲ ಮತ್ತು ವಸಂತಕಾಲಗಳು ಕಣ್ಣಿಗೆ ಕೊಂಚ ಕಷ್ಟಕರವಾಗಿರುತ್ತವೆ. ಈ ಸಮಯದಲ್ಲಿ ಮಳೆಯಾಗದ ಕಾರಣ ಗಾಳಿಯಲ್ಲಿರುವ ದೂಳು ಮತ್ತು ಪರಾಗದ ಕಣಗಳು ಕಣ್ಣಲ್ಲಿ ಹೊಕ್ಕು ಅಲರ್ಜಿ ಹೆಚ್ಚುತ್ತದೆ.

ಮನೆಮದ್ದು: ಹದಿಹರೆಯದ ಮಕ್ಕಳು ಕಣ್ಣಿನ ತುರಿಕೆ ಮತ್ತು ಕಣ್ಣೀರಿನ ಸಮಸ್ಯೆಯಿಂದ ಬಳಲುತ್ತಿದ್ದರೆ, ಅತ್ಯುತ್ತಮ ಮನೆಮದ್ದೆಂದರೆ 'ಕೋಲ್ಡ್ ಕಂಪ್ರೆಸ್' (ತಣ್ಣನೆಯ ಶಾಖ) ನೀಡಬೇಕು. ಒಂದು ಸ್ವಚ್ಛವಾದ ಬಟ್ಟೆಯನ್ನು ತಣ್ಣೀರಿನಲ್ಲಿ ಅದ್ದಿ ಮುಚ್ಚಿದ ಕಣ್ಣುಗಳ ಮೇಲಿಡಿ, ಅಥವಾ ಫ್ರಿಜ್‌ನಲ್ಲಿಟ್ಟ ತಣ್ಣನೆ ಸೌತೆಕಾಯಿತುಂಡುಗಳನ್ನು ಕಣ್ಣಿನ ಮೇಲಿಟ್ಟುಕೊಳ್ಳಿ. ಈ ತಂಪು ವಾತಾವರಣ ತಕ್ಷಣವೇ ತುರಿಕೆಯನ್ನು ಕಡಿಮೆ ಮಾಡುತ್ತದೆ ಮತ್ತು ರಕ್ತನಾಳಗಳನ್ನು ಕುಗ್ಗಿಸಿ ಕಣ್ಣೀರು ಸುರಿಯುವುದನ್ನು ತಡೆಯುತ್ತದೆ. ಡಿಜಿಟಲ್ ಸಾಧನಗಳ ಅತಿಯಾದ ಬಳಕೆಯೂ ಇದಕ್ಕೆ ಕಾರಣವಾಗಿರುತ್ತದೆ ಎಂಬುದನ್ನು ಮರೆಯುವಂತಿಲ್ಲ. ಯುವಕ-ಯುವತಿಯರಲ್ಲಿ ಈ ಸಮಸ್ಯೆಗೆ ಪ್ರಕೃತಿಯಲ್ಲ, ತಂತ್ರಜ್ಞಾನವೇ ಕಾರಣ! ಅತಿಯಾಗಿ ಮೊಬೈಲ್/ಲ್ಯಾಪ್‌ಟಾಪ್ ನೋಡುವುದರಿಂದ ಕಣ್ಣಿನಲ್ಲಿ ನೀರು ತುಂಬಿಕೊಳ್ಳುವ ಸಮಸ್ಯೆ ಭಾರಿ ಪ್ರಮಾಣದಲ್ಲಿ ಹೆಚ್ಚುತ್ತಿದೆ. ಸತತವಾಗಿ ಫೋನ್ ಅಥವಾ ಲ್ಯಾಪ್‌ಟಾಪ್ ವೀಕ್ಷಿಸುವಾಗ ಕಣ್ಣು ರೆಪ್ಪೆ ಬಡಿಯುವುದನ್ನು ಮರೆತುಬಿಡುತ್ತೇವೆ. ಇದರಿಂದ ಕಣ್ಣುಗಳು ಒಣಗುತ್ತವೆ (Dry Eye). ತಕ್ಷಣ ಮಿದುಳು ಗಾಬರಿಯಾಗಿ, ಆ ಒಣಗಿದ ಕಣ್ಣುಗಳನ್ನು ಸರಿಪಡಿಸಲು 'ರಿಫ್ಲೆಕ್ಸ್ ಆ್ಯಕ್ಷನ್' ಮೂಲಕ ಒಮ್ಮೆಗೆ ಭಾರಿ ಪ್ರಮಾಣದಲ್ಲಿ ಕಣ್ಣೀರನ್ನು ಉತ್ಪತ್ತಿ ಮಾಡುತ್ತದೆ. ಹೀಗಾಗಿ ಕಣ್ಣುಗಳು ಒಣಗಿದ್ದರೂ ಮೇಲ್ನೋಟಕ್ಕೆ ನೀರು ತುಂಬಿಕೊಳ್ಳುತ್ತದೆ.

ಸಂಪೂರ್ಣ ಕತ್ತಲಿರುವ ಕೋಣೆಯಲ್ಲಿ ಮೊಬೈಲ್ ಫೋನ್ ಹಾಗೂ ಲ್ಯಾಪ್‌ಟ್ಯಾಪ್‌ಗಳಲ್ಲಿ ವಿಡಿಯೊಗಳನ್ನು ನೋಡುವುದರಿಂದ ಕಣ್ಣುಗಳ ಮೇಲೆ ಹೆಚ್ಚು ಒತ್ತಡ ಬೀಳುತ್ತದೆ. ಇದು ತೀವ್ರವಾದ ಕಣ್ಣಿನ ಆಯಾಸ ಮತ್ತು ಕಣ್ಣೀರಿಗೆ ಕಾರಣವಾಗಬಹುದು.

ದೀರ್ಘಕಾಲದವರೆಗೆ ಸತತವಾಗಿ ಫೋನ್ ಬಳಸಬೇಡಿ. ಮತ್ತು ಸಂಪೂರ್ಣ ಕತ್ತಲೆಯಲ್ಲಿ ಫೋನ್ ಅಥವಾ ಲ್ಯಾಪ್ ಟ್ಯಾಪ್‌ಗಳನ್ನು ನೋಡಬೇಡಿ. ಕಣ್ಣುಗಳಿಗೆ ಆಯಾಸವಾಗದಂತೆ ತಡೆಯಲು ರೂಮ್‌ನಲ್ಲಿ ಕನಿಷ್ಠ ಪಕ್ಷ ಒಂದು ಸಣ್ಣ ದೀಪವಾದರೂ (Ambient Light) ಉರಿಯುತ್ತಿರಲಿ.

ಮಧ್ಯವಯಸ್ಸು

ನಿಮ್ಮ ವಯಸ್ಸು 40 ದಾಟಿದ್ದು, ಪುಸ್ತಕ ಓದುವಾಗ ಅಥವಾ ಫೋನ್ ನೋಡುವಾಗ ಮಾತ್ರ ಕಣ್ಣಿನಲ್ಲಿ ನೀರು ಬರುತ್ತಿದ್ದರೆ, ನಿಮ್ಮ ಕಣ್ಣುಗಳು ಸಹಾಯ ಕೇಳುತ್ತಿವೆ ಎಂದರ್ಥ. ಈ ವಯಸ್ಸಿನಲ್ಲಿ 'ಪ್ರೆಸ್ಬಯೋಪಿಯಾ' (Presbyopia) ಎಂಬ ನೈಸರ್ಗಿಕ ಬದಲಾವಣೆ ನಮ್ಮ ಕಣ್ಣಿನಲ್ಲಿ ಆಗುತ್ತದೆ. ಇದರರ್ಥ ಕಣ್ಣಿನ ಒಳಗಿನ ಲೆನ್ಸ್ ತನ್ನ ಸ್ಥಿತಿಸ್ಥಾಪಕತ್ವವನ್ನು (flexibility) ಕಳೆದುಕೊಳ್ಳುತ್ತದೆ. ಇದರಿಂದ ಹತ್ತಿರದ ವಸ್ತುಗಳ ಮೇಲೆ ಗಮನ ಕೇಂದ್ರೀಕರಿಸುವುದು ಕಷ್ಟವಾಗುತ್ತದೆ. ಕಣ್ಣುಗಳನ್ನು ಬಲವಂತವಾಗಿ ಕೇಂದ್ರೀಕರಿಸಲು ಪ್ರಯತ್ನಿಸಿದಾಗ ಉಂಟಾಗುವ ಒತ್ತಡದಿಂದ ಕಣ್ಣೀರು ಬರುತ್ತದೆ. ಕಣ್ಣಿನ ವೈದ್ಯರ ಸಲಹೆಯಂತೆ ಓದಲು ಬಳಸುವ ಕನ್ನಡಕ ಪಡೆದುಕೊಂಡರೆ ಈ ಸಮಸ್ಯೆ ತಕ್ಷಣವೇ ಮಾಯವಾಗುತ್ತದೆ.

ವೃದ್ಧಾಪ್ಯ

ವಯಸ್ಸಾದಂತೆ, ಕಣ್ಣಿನ ಸೂಕ್ಷ್ಮವಾದ ಪ್ಲಂಬಿಂಗ್ ವ್ಯವಸ್ಥೆಯು ಸ್ವಾಭಾವಿಕವಾಗಿಯೇ ಕಿರಿದಾಗಬಹುದು ಅಥವಾ ಶಾಶ್ವತವಾಗಿ ಬ್ಲಾಕ್ ಆಗಬಹುದು.

ಶಿಶುಗಳಿಗೆ ಮಾಡುವಂತೆ ಇಲ್ಲಿ ಕೇವಲ ಮಸಾಜ್ ಮಾಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಬ್ಲಾಕ್ ತೀವ್ರವಾಗಿದ್ದರೆ, ಅದಕ್ಕೆ 'ಡ್ಯಾಕ್ರಿಯೋಸಿಸ್ಟೋರೈನೋಸ್ಟಮಿ' (Dacryocystorhinostomy - DCR) ಎಂಬ ವಿಶೇಷ ಸರ್ಜರಿಯನ್ನು ಮಾಡುವ ಅಗತ್ಯವಿರುತ್ತದೆ. ಶಸ್ತ್ರಚಿಕಿತ್ಸಕರು ಕಣ್ಣೀರು ಸುಲಭವಾಗಿ ಮೂಗಿನ ಮೂಲಕ ಹೊರಹೋಗಲು ಒಂದು ಹೊಸ ಬೈಪಾಸ್ ದಾರಿಯನ್ನು ನಿರ್ಮಿಸುತ್ತಾರೆ. ಇದರಿಂದ ಕಣ್ಣೀರು ಹೊರಚೆಲ್ಲುವ ಸಮಸ್ಯೆ ಕಾಯಂ ಆಗಿ ನಿಲ್ಲುತ್ತದೆ.

ನೆನಪಿಡಿ. ನಿಮ್ಮ ವಯಸ್ಸು ಯಾವುದೇ ಇರಲಿ, ಸತತವಾಗಿ ಕಣ್ಣುಗಳಲ್ಲಿ ನೀರು ಹರಿಯುತ್ತಿದ್ದರೆ ಅದರ ಹಿಂದೆ ಒಂದು ನಿರ್ದಿಷ್ಟ ಕಾರಣವಿರುತ್ತದೆ. ಕೇವಲ ಕೋಲ್ಡ್ ಕಂಪ್ರೆಸ್ ಅಥವಾ ಸ್ಕ್ರೀನ್ ಬ್ರೇಕ್‌ನಿಂದ ಸಮಸ್ಯೆ ಕಡಿಮೆಯಾಗದಿದ್ದರೆ, ನೀವೇ ಅಂದಾಜು ಮಾಡಬೇಡಿ— ಕಣ್ಣಿನ ಯಾವ 'ಕೊಳವೆ' ದುರಸ್ತಿ ಆಗಬೇಕಿದೆ ಎಂಬುದನ್ನು ನಿಖರವಾಗಿ ತಿಳಿಯಲು ತಕ್ಷಣವೇ ಸ್ಥಳೀಯ ಕಣ್ಣಿನ ವೈದ್ಯರನ್ನು ಭೇಟಿ ಮಾಡುವುದು ಉಚಿತ.

❖



ಆರೋಗ್ಯಕ್ಕೆ ಸೃಜನಶೀಲ ಚಲನೆ

• ರಮ್ಯಾ ಶ್ರೀಹರಿ

ನಿಮ್ಮಿಷ್ಟದ ಸಂಗೀತ ಯಾವುದು? ಅದನ್ನು ಕೇಳುತ್ತಾ ನಿಮ್ಮ ದೇಹವೇ ಒಂದು 'ಪೇಂಟ್ ಬ್ರಶ್' ಎಂದುಕೊಳ್ಳಿ; ನಿಮ್ಮ ಅಕ್ಕಪಕ್ಕ ಮೇಲೆ ಕೆಳಗೆ, ನಿಮ್ಮ ದೇಹಕ್ಕೆಟುಕುವ ಜಾಗವನ್ನೆಲ್ಲಾ ಒಂದು ಕ್ಯಾನ್ವಾಸ್ ಎಂದುಕೊಳ್ಳಿ. ಈಗ ಒಂದೆರೆಡು ನಿಮಿಷ ಕಣ್ಣು ಮುಚ್ಚಿ ನಿಮ್ಮಿಷ್ಟದ ಪೇಂಟಿಂಗನ್ನು ಕಲ್ಪಿಸಿಕೊಳ್ಳಿ, ಆ ಪೇಂಟಿಂಗನ್ನು ನಿಮ್ಮ ದೇಹವೆಂಬ ಪೇಂಟ್ ಬ್ರಶ್ ಉಪಯೋಗಿಸಿ ನಿಮ್ಮ ಸುತ್ತಲ ಸ್ಪೇಸ್ ಎಂಬ ಕ್ಯಾನ್ವಾಸ್ ಮೇಲೆ ಪೇಂಟ್ ಮಾಡಿ. ಕಣ್ಣು ಮುಚ್ಚಿ ನಿಮ್ಮ ದೇಹವನ್ನು ಹೇಗಾದರೂ ಚಲಿಸಿ, ಕೈಯಿಂದ ಬೆಟ್ಟಗಳನ್ನು ಪೇಂಟ್ ಮಾಡಿ, ಕಾಲಿಂದ ನೀರಿನ ಹರಿವನ್ನು, ತಲೆಯಿಂದ ಸೂರ್ಯನನ್ನೋ ಚಂದ್ರನನ್ನೋ ಮನಬಂದಂತೆ ಪೇಂಟ್ ಮಾಡಿ. ನಿಮಗೆ ನಿಮ್ಮದೇ ಅನಿಸುವ ಚಲನೆಯ ಭಾಷೆ/ಡಾನ್ಸ್ ಸ್ಟೆಪ್ ಯಾವುದಾದರೂ ಇದೆಯೇ?

***

ನೆಲದ ಮೇಲೆ ಬೆನ್ನು ನೆಲಕ್ಕೆ ತಾಗುವಂತೆ ಮಲಗಿ. ನೆಲದಿಂದ ತಾನೇತಾನಾಗಿ ಮೇಲೇಳಲಾರದ ಚಿಕ್ಕ ಮಗು ನೀವು ಎಂದು ಕಲ್ಪಿಸಿಕೊಳ್ಳಿ, ಕಣ್ಣು ತೆರೆದಿರಲಿ, ನವಜಾತ ಶಿಶುವೊಂದು ಕೈಕಾಲುಗಳನ್ನಾಡಿಸುತ್ತಾ ಈಗಷ್ಟೇ ಚಲನೆ ಎಂದರೇನೆಂದು ಕಂಡುಹಿಡಿಯುತ್ತಿರುವಂತೆ ನಿಧಾನವಾಗಿ ನಿಮ್ಮ ದೇಹವನ್ನು ನೆಲದ ಮೇಲೆ ತೆವಳುತ್ತಾ ಚಲಿಸಿ. ಈಗ ನೀವು ನೆಲದ ಮೇಲಷ್ಟೇ ಅತಿ ನಿಧಾನವಾಗಿ ಚಲಿಸುವ ಜೀವಿ ಎಂದು ಕಲ್ಪಿಸಿಕೊಳ್ಳಿ. ಯಾವೆಲ್ಲಾ ಬಗೆಬಗೆಯ ಚಲನೆಗಳನ್ನು ನೀವು ಮಾಡಬಹುದು? ಆ ಎಲ್ಲಾ ಚಲನೆಗಳನ್ನು ಸೇರಿಸಿ 'ನೆಲದ ಮೇಲಿನ ಆ ಜೀವಿಯ ನೃತ್ಯ'ವನ್ನು ಸಂಯೋಜಿಸಿ ನಿಮ್ಮ ಆತ್ಮೀಯ ವ್ಯಕ್ತಿಗೆ ತೋರಿಸಿ ಅವರಿಗೇನನಿಸುತ್ತಿದೆ ಕೇಳಿ.

***

ನೃತ್ಯ ಮತ್ತು ಸೃಜನಶೀಲ ಚಲನೆಯ ಚಿಕಿತ್ಸಕಿ ತ್ರಿಪುರಾ ಕಶ್ಯಪ್ ಅವರು ತಾವೇ ಸಂಯೋಜಿಸಿರುವ ಇಂಥ ಸೃಜನಶೀಲ ಚಲನ ಚಟುವಟಿಕೆಗಳನ್ನು ಕಾರ್ಯಾಗಾರಗಳಲ್ಲಿ ಹೇಳಿಕೊಡುತ್ತಿರುತ್ತಾರೆ. ಪ್ರತಿ ಸಮಾಜದಲ್ಲೂ ಮೊದಲಿನಿಂದಲೂ ಅನೇಕ ಬಗೆಯ ನೃತ್ಯ ಮತ್ತು ನೃತ್ಯದಂತಹ ಚಲನೆಗಳು ಚಿಕಿತ್ಸೆಯಂತೆಯೇ ಕೆಲಸ ಮಾಡಿವೆ, ಕೆಲವು ಕಡೆ ಇನ್ನೂ ಮಾಡುತ್ತಿವೆ ಕೂಡ. ಕೃಷಿ ಚಟುವಟಿಕೆಗಳಲ್ಲಿ ನಿರತ ಮಹಿಳೆಯರು ಒಟ್ಟಾಗಿ ನೃತ್ಯ ಮಾಡುವುದನ್ನು ನೋಡಿದಾಗಂತೂ ನೋಡುಗರ ಒಳಗೂ ಒಂದು 'ಹೀಲಿಂಗ್' ಅನುಭವವಾಗುವುದು ಹೌದು. ಹಬ್ಬಗಳಲ್ಲಿ, ಧಾರ್ಮಿಕ ಸಂಸ್ಕಾರಗಳಲ್ಲಿ ನೃತ್ಯ ಹಾಸುಹೊಕ್ಕಾಗಿದೆ. ಇತ್ತೀಚೆಗೆ ಸಾಮುದಾಯಿಕ ಬದುಕು ಕಣ್ಮರೆಯಾಗುತ್ತಿರುವ ಕಾರಣ ಇಂತಹ ನೃತ್ಯ-ಚಲನೆ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಕಡಿಮೆಯಾಗುತ್ತಿರುವುದು ಮತ್ತು ನೃತ್ಯ-ಚಲನೆಯ ಸಹಜ ಚಿಕಿತ್ಸೆಯಿಂದ ವಂಚಿತರಾಗುವುದು ಸಾಮಾನ್ಯವಾಗಿದೆ.

ಆಲೋಚನೆ, ಚಿಂತನೆ, ಪ್ರಜ್ಞೆ, ಸಂವಾದ, ಅರಿವು - ಇವೆಲ್ಲಾ ಕೇವಲ ಮನಸ್ಸಿಗೆ ಮಾತ್ರ ಸಂಬಂಧಿಸಿದ್ದಲ್ಲ, ದೇಹಕ್ಕೂ ಅದರದೇ ಆದ ಪ್ರಜ್ಞೆ, ಆಲೋಚನೆ, ಭಾಷೆ, ಮಾತು ಎಲ್ಲವೂ ಇದೆ. ದೇಹ ತನ್ನ ಅನಿಸಿಕೆ, ಆಲೋಚನೆ, ಅರಿವನ್ನು ತನ್ನ ಚಲನೆಯ ಮೂಲಕ ಅಭಿವ್ಯಕ್ತಿಸುತ್ತದೆ ಮತ್ತು ಚಲನೆಯ ಮೂಲಕವೇ ತನ್ನ ಪ್ರಜ್ಞೆಯಲ್ಲಿ ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತಿರುತ್ತದೆ. ದೈನಿಕದಲ್ಲಿ ಸಾಧಾರಣವಾಗಿ ತೋರುವ ಎಷ್ಟೋ ಚಲನೆಗಳು, ಭಂಗಿಗಳಿಂದಲೇ ಪ್ರೇರಣೆ ಪಡೆದು ನೃತ್ಯ ಕಲಾವಿದರು ಅದ್ಭುತ ನೃತ್ಯ ಸಂಯೋಜನೆ ಮಾಡಿದ ಉದಾಹರಣೆಗಳು ಸಾಕಷ್ಟಿವೆ.

ನಮ್ಮ ದಿನನಿತ್ಯದ ಸಾಧಾರಣ ಚಲನೆಗಳಲ್ಲೂ ಹೇಗೆ ನೃತ್ಯ ಅಂತರ್ಗತವಾಗಿದೆ, ಹೇಗೆ ವಿವಿಧ ಚಲನೆಗಳು ವಿವಿಧ ಸಂವೇದನೆಗಳನ್ನು ಉಂಟುಮಾಡುತ್ತವೆ ಎನ್ನುವುದನ್ನು ತಿಳಿಯಬೇಕಾದರೆ ದಿನನಿತ್ಯದ ಚಲನೆಗಳನ್ನು ಗಮನವಿಟ್ಟು ಅನುಭವಿಸಿದರೆ ಸಾಕು ಚಲನೆಗಳ ಸುಂದರ ಲೋಕ ಅನಾವರಣಗೊಳ್ಳುತ್ತದೆ. ಬೆಳಿಗ್ಗೆ ಸೂರ್ಯೋದಯವನ್ನು ಕಂಡಾಗ ದೇಹ ಹಿಗ್ಗುತ್ತದೆ, ದೇಹವನ್ನು ವಿಸ್ತಾರವಾಗಿ ಚಾಚುತ್ತೇವೆ, ಮೈಮುರಿಯುತ್ತೇವೆ, ನಿದ್ರಿಸುತ್ತಿರುವಾಗ ಅಷ್ಟಾಗಿ ಚಲನವಿಲ್ಲದ ದೇಹಕ್ಕೆ ಚಲನೆಯಿಂದೊದಗುವ ಪ್ರೇರಣೆ ಹಿತವೆನಿಸುತ್ತದೆ. ನಂತರ ಎಷ್ಟೊಂದು ಚಲನೆಗಳು; ಮೆಟ್ಟಿಲು ಇಳಿಯುವಾಗ ಒಂದು ಬಗೆ, ಎತ್ತರದ ವಸ್ತುವಿಗೆ ಕೈಚಾಚುವಾಗ ಇನ್ನೊಂದು ಬಗೆ, ಒದ್ದೆ ನೆಲದ ಮೇಲೆ ನಡೆಯುವಾಗ, ಕಸ ಗುಡಿಸಲು ಮೈ ಬಗ್ಗಿಸಿ ಮಂಚ, ಕಪಾಟಿನಡಿಯಿರುವ ದೂಳು ತೆಗೆಯುವಾಗ, ನೆಲ ಒರೆಸುವಾಗ, ಅಡುಗೆ ಮಾಡುವಾಗ, ತರಾತುರಿಯಲ್ಲಿ ಆಫೀಸಿಗೆ ಓಡುವಾಗ - ಇನ್ನೂ ಹೀಗೆ ಸಾವಿರಾರು ಬಗೆಯ ಚಲನೆಗಳಿಲ್ಲದೆ ಜೀವನವೇ ಇಲ್ಲ. ಇನ್ನು ವಿಶೇಷ ಸಂದರ್ಭಗಳಲ್ಲಿ ಎಂದರೆ ಅತ್ಯಂತ ಸಂತೋಷವಾಗಿರುವಾಗ, ರಮಣೀಯ ಪ್ರಕೃತಿಯನ್ನು ಕಂಡಾಗ, ಪ್ರೀತಿಸುವ ವ್ಯಕ್ತಿಯ ಜೊತೆ ಇರುವಾಗ, ಮಳೆಯಲ್ಲೋ, ನದಿಯಲ್ಲೋ ಆಟವಾಡುವಾಗ ಮನಸ್ಸು ಚಿಕ್ಕ ಮಗುವಿನಂತೆ ಕುಣಿದು ಕುಪ್ಪಳಿಸುತ್ತದೆ.

ಭಾವನೆಗಳನ್ನು ನಾವು ಅನುಭವಿಸುವುದೂ, ಅಭಿವ್ಯಕ್ತಿಸುವುದೂ ದೇಹದ ಸಣ್ಣ ಚಲನೆಯೂ ಇಲ್ಲದೆ ಸಾಧ್ಯವೇ ಇಲ್ಲ. ಹಾಗೆಯೇ ಭಾವನೆಗಳು ಅತಿರೇಕಕ್ಕೆ ಹೋದಾಗ ಕೆಲವೊಮ್ಮೆ ನಾವು ದೇಹದಲ್ಲಿ ನೆಲೆಯಾಗಿ ಆ ಭಾವನೆಗಳನ್ನು ತೀವ್ರವಾಗಿ ಅನುಭವಿಸುವುದರಿಂದ ತಪ್ಪಿಸಿಕೊಳ್ಳುತ್ತೇವೆ, ಭಾವನೆಗಳನ್ನು ತೀವ್ರವಾಗಿ ಅನುಭವಿಸುತ್ತಾ ಆ ಭಾವನೆಗಳ ಹುಚ್ಚುಹೊಳೆಯಲ್ಲಿ ಕೊಚ್ಚಿಕೊಂಡು ಹೋಗಿ ನಮ್ಮನ್ನು ನಾವೇ ಕಳೆದುಕೊಂಡುಬಿಡುತ್ತೇವೆನ್ನುವ ಭಯದಿಂದ. ಆಗ ನಾವು ದೇಹದ ಸಂವೇದನೆಗಳನ್ನು ನಿರ್ಲಕ್ಷಿಸಿ ತಾರ್ಕಿಕ ಆಲೋಚನೆಗಳಲ್ಲಿ ಹೆಚ್ಚಾಗಿ ತೊಡಗಿಕೊಳ್ಳುತ್ತೇವೆ. ಉದ್ದೇಶಪೂರ್ವಕವಾಗಿ ಮಾಡುವ ಚಲನೆ ನಮ್ಮನ್ನು ಮತ್ತೆ ನಮ್ಮ ದೇಹದಲ್ಲಿ ಸ್ಥಿರವಾಗಿ ನೆಲೆಗೊಳಿಸುತ್ತದೆ (Being grounded in the body) ಮತ್ತು ಭಾವನೆಗಳನ್ನು ಸಂಪೂರ್ಣವಾಗಿ ಅನುಭವಿಸಲು ಪೋಷಕವಾಗುತ್ತದೆ. ಚಲನೆಯೆಂದರೆ ಅದು ನಮ್ಮ ದೇಹದೊಂದಿಗೆ ನಮಗಿರುವ ಸಂಬಂಧವನ್ನು ನವೀಕರಿಸಿಕೊಂಡಂತೆ; ನಮ್ಮ ಸಂವೇದನಾಶೀಲತೆಯನ್ನು, ಆರ್ದ್ರತೆಯನ್ನು, ಸೂಕ್ಷ್ಮತೆಯನ್ನು ಮತ್ತೆ ನಾವು ದಕ್ಕಿಸಿಕೊಂಡಂತೆ. ಚಲನೆ ಕೇವಲ ದೈನಿಕದ ಯಾಂತ್ರಿಕ ಚಲನೆಯಾಗಿರಬೇಕಿಲ್ಲ; ಅದರಲ್ಲಿ ನಾವೀನ್ಯ, ಲಾಲಿತ್ಯ, ಸೌಂದರ್ಯ, ಸೃಜನಶೀಲತೆಯನ್ನು ತರುವುದು ಸಾಧ್ಯವಿದೆ.

ಸೃಜನಶೀಲ ಸುಂದರ ಚಲನೆ ಎಂದರೆ ಅದು ಶಾಸ್ತ್ರೀಯ ನೃತ್ಯ ಎಂದು ಅರ್ಥಮಾಡಿಕೊಳ್ಳಬಾರದು. ಶಾಸ್ತ್ರೀಯ ನೃತ್ಯಗಳು ರಸಾನುಭವದ ಮೂಲಕವೇ ನೊಂದ ಮನಕ್ಕೆ ಸಾಂತ್ವನ ನೀಡುತ್ತದೆ. ಆದರೆ, ಅಲ್ಲಿ ಕಲಾವಿದ- ಪ್ರೇಕ್ಷಕನೆಂಬ ಅಂತರವು ಸಾಕಷ್ಟಿರುತ್ತದೆ; ಅದೂ ಅಲ್ಲದೆ, ಶಾಸ್ತ್ರೀಯ ನೃತ್ಯವನ್ನು ಎಲ್ಲರೂ ಕಲಿಯುವುದು ಸುಲಭವಲ್ಲ.

ನೃತ್ಯದ ಕೆಲವು ಅಂಶಗಳನ್ನು, ಎಂದರೆ ಲಾಲಿತ್ಯಪೂರ್ಣವಾಗಿ ಪುನರಾವರ್ತನೆಗೊಳ್ಳುವ ಚಲನೆಗಳನ್ನು, ಭಂಗಿಗಳನ್ನು, ಭಾವಾಭಿವ್ಯಕ್ತಿಯನ್ನು ಸಂಗೀತದ ಲಯಕ್ಕೆ ತಕ್ಕಂತೆ ಸಂಯೋಜಿಸುವುದು - ಹೀಗೆ ನೊಂದ ಮೈಮನಗಳನ್ನು ಸಮಾಧಾನಿಸಬಲ್ಲ ನೃತ್ಯದ ಗತಿ, ರೀತಿ ನೀತಿಗಳನ್ನು ಸೂಕ್ತವಾಗಿ ಆಯ್ಕೆಮಾಡಿಕೊಂಡು ಅದನ್ನು ಅಭ್ಯಾಸಮಾಡುವುದನ್ನು 'ಸೃಜನಶೀಲ ಚಲನೆ ಮತ್ತು ನೃತ್ಯ ಚಿಕಿತ್ಸೆ' (Creative movement and dance therapy) ಎಂದು ಕರೆಯುತ್ತಾರೆ. ಅನೇಕ ಬಗೆಯ ಚಲನೆಗಳನ್ನು ಮತ್ತು ನಮ್ಮ ಭಾವನೆಗಳನ್ನು ಸಾವಯವವಾಗಿ ಬೆಸೆಯುವುದೇ ಸೃಜನಶೀಲ ಚಿಕಿತ್ಸೆಯ ಮೂಲವಿಧಾನ.

ಸೃಜನಶೀಲ ಚಲನೆಯಲ್ಲಿ ನೃತ್ಯದಲ್ಲಿರುವಂತೆ ರಸಾನುಭವಕ್ಕೆ ಪ್ರಾಧಾನ್ಯವಿಲ್ಲ, ಬದಲಾಗಿ ವ್ಯಕ್ತಿಯ ಅಂತರಂಗದಲ್ಲಿ ನಡೆಯುವ ಕೋಲಾಹಲವನ್ನು ಚಲನೆಗಳ ಮೂಲಕ ಅರ್ಥಮಾಡಿಸುವುದಕ್ಕೆ ಮತ್ತು ಶಮನಗೊಳಿಸುವುದಕ್ಕೆ ಪ್ರಾಮುಖ್ಯವನ್ನು ನೀಡಲಾಗುತ್ತದೆ. ಸೃಜನಶೀಲ ಚಲನೆಯ ಚಿಕಿತ್ಸೆಯಲ್ಲಿ ನಮ್ಮನ್ನು ಕಾಡುವ ಪ್ರಶ್ನೆಗಳಿಗೆ ಬುದ್ಧಿಯಿಂದ ಆಲೋಚಿಸಿ ಉತ್ತರ ಪಡೆದುಕೊಳ್ಳುವುದನ್ನು ಪ್ರೋತ್ಸಾಹಿಸುವುದಿಲ್ಲ; ಬದಲಾಗಿ ದೇಹದ ಚಲನೆಯ ಮೂಲಕ ದೇಹದ ಮಾತನ್ನಾಲಿಸುವುದು ಇಲ್ಲಿಯ ಮೂಲ ಉದ್ದೇಶ.

ಚಲನೆಯ ಮೂಲಕ ನಾವು ಕಂಡುಕೊಂಡ ಉತ್ತರಗಳನ್ನು ಆತ್ಮೀಯರೊಂದಿಗೆ ಮತ್ತು ಚಲನೆಯ ಚಿಕಿತ್ಸೆ ಪಡೆಯುತ್ತಿರುವ ಸಹ ಪಯಣಿಗರೊಂದಿಗೆ ಹಂಚಿಕೊಂಡಾಗ ಚಿಕಿತ್ಸೆ ಹೆಚ್ಚು ಪರಿಣಾಮಕಾರಿ. ಚಡಪಡಿಕೆ, ಆತಂಕ, ಅತಿ ಕೋಪ, ದುಃಖ, ಭಾವನೆಗಳನ್ನು ಗ್ರಹಿಸುವುದರಲ್ಲಿ ಗೊಂದಲ - ಇವುಗಳ ನಿಯಂತ್ರಣವಷ್ಟೇ ಅಲ್ಲದೆ ಗುಂಪಾಗಿ ಸೃಜನಶೀಲ ಚಲನೆಯ ಚಿಕಿತ್ಸೆಯಲ್ಲಿ ತೊಡಗಿಕೊಂಡಾಗ ಸಾಮುದಾಯಿಕ ಬಾಂಧವ್ಯ ವೃದ್ಧಿಯಾಗಿ ವ್ಯಕ್ತಿಯಲ್ಲಿ ಸೌಖ್ಯಭಾವ ಆವರಿಸುತ್ತದೆ; ಉಲ್ಲಾಸ ದೊರಕುವುದರ ಜೊತೆಗೆ ನಮ್ಮ ದೇಹದ ಜೊತೆ ನಮಗಿರುವ ಸಂಬಂಧದ ಸ್ವರೂಪದ ಅರಿವೂ ನಮಗಾಗುತ್ತದೆ. ನಮ್ಮ ದೇಹದ ಬೇಕು-ಬೇಡಗಳನ್ನು ಅರಿಯುವುದು ನಮ್ಮ ಸ್ವಾಸ್ಥ್ಯಕ್ಕೆ ಅತ್ಯವಶ್ಯಕ.

❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

ಅಭ್ಯಾಸ 3.1

4. ಮುಂದೆ ನೀಡಿದವುಗಳಲ್ಲಿ ಯಾವ ರೇಖಾತ್ಮಕ ಸಮೀಕರಣಗಳ ಜೋಡಿಗಳು ಸ್ಥಿರವಾಗಿವೆ/ಅಸ್ಥಿರವಾಗಿವೆ? ಸ್ಥಿರವಾಗಿದ್ದರೆ, ನಕ್ಷಾಕ್ರಮದಿಂದ ಪರಿಹಾರವನ್ನು ಪಡೆಯಿರಿ

(i) $x + y = 5$, $2x + 2y = 10$
(ii) $x - y = 8$, $3x - 3y = 16$
(iii) $2x + y - 6 = 0$, $4x - 2y - 4 = 0$
(iv) $2x - 2y - 2 = 0$, $4x - 4y - 5 = 0$

ಪರಿಹಾರ:–

(i) $x + y = 5$ ಮತ್ತು $2x + 2y = 10$ ದತ್ತ

$(a_1/a_2) = 1/2$
$(b_1/b_2) = 1/2$
$(c_1/c_2) = 1/2$
$\therefore (a_1/a_2) = (b_1/b_2) = (c_1/c_2)$

ಆದ್ದರಿಂದ ದತ್ತ ಸಮೀಕರಣಗಳ ಜೋಡಿಗೆ ಅಪರಿಮಿತ ಸಂಖ್ಯೆಯ ಪರಿಹಾರಗಳಿವೆ, ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಯು ಸ್ಥಿರವಾಗಿದೆ.


$x + y = 5$ ಅಥವಾ $x = 5 - y$

x	4	3	2
y	1	2	3

$2x + 2y = 10$ ಅಥವಾ $x = (10-2y)/2$

x	4	3	2
y	1	2	3

ಸಮೀಕರಣಗಳನ್ನು ಜೋಡಿಗೆ ಈ ರೀತಿ ನಕ್ಷೆಯಲ್ಲಿ ತೋರಿಸಬಹುದಾಗಿದೆ



ಸಮೀಕರಣಗಳನ್ನು ಪ್ರತಿನಿಧಿಸುವ ಎರಡು ಸರಳರೇಖೆಗಳು ಐಕ್ಯಗೊಂಡಿವೆ ಎಂಬುದನ್ನು ನಕ್ಷೆಯಲ್ಲಿ ಕಾಣಬಹುದು ಆದ್ದರಿಂದ ದತ್ತ ಸಮೀಕರಣಗಳ ಜೋಡಿಗೆ ಅಪರಿಮಿತ ಪರಿಹಾರಗಳಿವೆ.

(ii) $x - y = 8$ ಮತ್ತು $3x - 3y = 16$ ದತ್ತ

$(a_1/a_2) = 1/3$
$(b_1/b_2) = -1/-3 = 1/3$
$(c_1/c_2) = 8/16 = 1/2$
$\therefore (a_1/a_2) = (b_1/b_2) \neq (c_1/c_2)$

ಆದ್ದರಿಂದ ದತ್ತ ಸಮೀಕರಣಗಳು ಪರಸ್ಪರ ಸಮಾಂತರವಾಗಿವೆ, ದತ್ತ ರೇಖಾತ್ಮಕ ಸಮೀಕರಣದ ಜೋಡಿಗೆ ಪರಿಹಾರವಿಲ್ಲ ಆದ್ದರಿಂದ ರೇಖಾತ್ಮಕ ಸಮೀಕರಣದ ಜೋಡಿಯು ಅಸ್ಥಿರವಾಗಿದೆ

(iii) $2x + y - 6 = 0$ ಮತ್ತು $4x - 2y - 4 = 0$ ದತ್ತ

$(a_1/a_2) = 2/4 = ½$
$(b_1/b_2) = 1/-2$
$(c_1/c_2) = -6/-4 = 3/2$
$\therefore (a_1/a_2) \neq (b_1/b_2)$

ಆದ್ದರಿಂದ ದತ್ತ ಸಮೀಕರಣದ ಜೋಡಿಗೆ ಒಂದೇ ಒಂದು ಪರಿಹಾರವಿದೆ. ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಯು ಸ್ಥಿರವಾಗಿದೆ.


$2x + y - 6 = 0$ ಅಥವಾ $y = 6 - 2x$

x	0	1	2
y	6	4	2

ಮತ್ತು **$4x - 2y - 4 = 0$ ಅಥವಾ $y = (4x-4)/2$**

x	1	2	3
y	0	2	4

ಸಮೀಕರಣಗಳನ್ನು ಜೋಡಿಗೆ ಈ ರೀತಿ ನಕ್ಷೆಯಲ್ಲಿ ತೋರಿಸಬಹುದಾಗಿದೆ



ಸಮೀಕರಣಗಳನ್ನು ಪ್ರತಿನಿಧಿಸುವ ಎರಡು ಸರಳರೇಖೆಗಳು (2, 2) ಬಿಂದುವಿನಲ್ಲಿ ಪರಸ್ಪರ ಛೇದಿಸುತ್ತವೆ. ಎಂದು ನಕ್ಷೆಯಿಂದ ನಾವು ಗಮನಿಸಬಹುದು. ಆದ್ದರಿಂದ ದತ್ತ ಸಮೀಕರಣಗಳ ಜೋಡಿಯ ಪರಿಹಾರ (2, 2) ಆಗಿದೆ.

(iv) $2x - 2y - 2 = 0$ ಮತ್ತು $4x - 4y - 5 = 0$ ದತ್ತ

$(a_1/a_2) = 2/4 = ½$
$(b_1/b_2) = -2/-4 = 1/2$
$(c_1/c_2) = 2/5$
$\therefore, a_1/a_2 = b_1/b_2 \neq c_1/c_2$

ಆದ್ದರಿಂದ ದತ್ತ ಸಮೀಕರಣಗಳು ಪರಸ್ಪರ ಸಮಾಂತರವಾಗಿವೆ, ದತ್ತ ರೇಖಾತ್ಮಕ ಸಮೀಕರಣದ ಜೋಡಿಗೆ ಪರಿಹಾರವಿಲ್ಲ ಆದ್ದರಿಂದ ರೇಖಾತ್ಮಕ ಸಮೀಕರಣದ ಜೋಡಿಯು ಅಸ್ಥಿರವಾಗಿದೆ

5. ಉದ್ದವು ಅಗಲಕ್ಕಿಂತ 4m ಹೆಚ್ಚಾಗಿರುವ ಆಯತಾಕಾರದ ಒಂದು ಹೂದೋಟದ ಸುತ್ತಳತೆಯ ಅರ್ಧವು 36m. ಹೂದೋಟದ ಅಳತೆಗಳನ್ನು ಕಂಡುಹಿಡಿಯಿರಿ

ಪರಿಹಾರ: ಹೂದೋಟದ ಉದ್ದವು x ಮತ್ತು ಅದರ ಅಗಲವು y ಆಗಿರಲಿ

ಆಗ ಆಯತಾಕರದ ಹೂದೋಟದ ಸುತ್ತಳತೆ=2(ಉದ್ದ+ಅಗಲ)=2(x+ y)

ಆದ್ದರಿಂದ ಸುತ್ತಳತೆಯ ಅರ್ಧ= (x + y)m

ಆದರೆ ಸುತ್ತಳತೆಯ ಅರ್ಧ= 36 m ದತ್ತ

$(x + y) = 36$ ……………………….(1)

ಹೂದೋಟದ ಉದ್ದ= 4+ ಹೂದೋಟದ ಅಗಲ

$x = y + 4 \Rightarrow x - y = 4$………(2)

ಈಗ

$y - x = 4$ ಮತ್ತು $y + x = 36$

ಮೊದಲಿಗೆ $y - x = 4$ ಅಥವಾ $y = x + 4$

x	0	8	12
y	4	12	16

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

MATHS

MATRICES

Problems:-

2. Given that $\begin{bmatrix}1 & 3\\5 & -2\end{bmatrix}\begin{bmatrix}x\\y\end{bmatrix}=\begin{bmatrix}-2 & 3\\0 & 1\end{bmatrix}\begin{bmatrix}2\\-1\end{bmatrix}$;

Find x & y.

Soln :– $\begin{bmatrix}1 & 3\\5 & -2\end{bmatrix}\begin{bmatrix}x\\y\end{bmatrix}=\begin{bmatrix}-2 & 3\\0 & 1\end{bmatrix}\begin{bmatrix}2\\-1\end{bmatrix}$

$\begin{bmatrix}x+3y\\5x-2y\end{bmatrix}=\begin{bmatrix}-7\\-1\end{bmatrix}$

$\Rightarrow x + 3y = -7$ ....(i)

& $5x - 2y = -1$ ....(ii)

Solving eqns (i) and (ii) we get,

$x = -1$ and $y = -2$

3. If $A=\begin{bmatrix}\cos\theta & \sin\theta\\-\sin\theta & \cos\theta\end{bmatrix}$ **prove that**

$A^2 = \begin{bmatrix}\cos 2\theta & \sin 2\theta\\-\sin 2\theta & \cos 2\theta\end{bmatrix}$

Soln:- $A^2 = A \times A$

$=\begin{bmatrix}\cos\theta & \sin\theta\\-\sin\theta & \cos\theta\end{bmatrix}\times\begin{bmatrix}\cos\theta & \sin\theta\\-\sin\theta & \cos\theta\end{bmatrix}$

$=\begin{bmatrix}\cos^2\theta-\sin^2\theta & \cos\theta\sin\theta+\sin\theta\cos\theta\\-\sin\theta\cos\theta-\sin\theta\cos\theta & -\sin^2\theta+\cos^2\theta\end{bmatrix}$

$=\begin{bmatrix}\cos 2\theta & 2\sin\theta\cos\theta\\-2\sin\theta\cos\theta & \cos 2\theta\end{bmatrix}$

$\therefore A^2 = \begin{bmatrix}\cos 2\theta & \sin 2\theta\\-\sin 2\theta & \cos 2\theta\end{bmatrix}$

4. If $A = \begin{bmatrix}5\\4\\3\end{bmatrix}$, $B = \begin{bmatrix}3\\-1\\2\end{bmatrix}$;

Show that $AB^T \neq A^TB$

Soln :– Given, $A = \begin{bmatrix}5\\4\\3\end{bmatrix}$ and $B = \begin{bmatrix}3\\-1\\2\end{bmatrix}$

$\therefore B^T = [3 \quad -1 \quad 2]$

$\Rightarrow AB^T = \begin{bmatrix}5\\4\\3\end{bmatrix}[3 \quad -1 \quad 2]\downarrow$

$=\begin{bmatrix}15 & -5 & 10\\12 & -4 & 8\\9 & -3 & 6\end{bmatrix}$

and $A^T = [5 \quad 4 \quad 3]$

$\Rightarrow A^TB = [5 \quad 4 \quad 3]\begin{bmatrix}3\\-1\\2\end{bmatrix}\downarrow$

$= [15 - 4 + 6] = [17]$

Hence, $AB^T \neq A^TB$

5. If $A=\begin{bmatrix}5 & -3\\-1 & 2\end{bmatrix}$ **and** $B=\begin{bmatrix}-2 & -1\\4 & 7\end{bmatrix}$;

Prove that $AB \neq BA$

Soln :– Given, $A=\begin{bmatrix}5 & -3\\-1 & 2\end{bmatrix}$ & $B=\begin{bmatrix}-2 & -1\\4 & 7\end{bmatrix}$

$\therefore AB=\begin{bmatrix}5 & -3\\-1 & 2\end{bmatrix}\times\begin{bmatrix}-2 & -1\\4 & 7\end{bmatrix}$

$AB=\begin{bmatrix}-10-12 & -5-21\\2+8 & 1+14\end{bmatrix}=\begin{bmatrix}-22 & -26\\10 & 15\end{bmatrix}$

$BA=\begin{bmatrix}-2 & -1\\4 & 7\end{bmatrix}\times\begin{bmatrix}5 & -3\\-1 & 2\end{bmatrix}$

$BA=\begin{bmatrix}-10+1 & 6-2\\20-7 & -12+14\end{bmatrix}=\begin{bmatrix}-9 & 4\\13 & 2\end{bmatrix}$

$\begin{bmatrix}-22 & -26\\10 & 15\end{bmatrix}\neq\begin{bmatrix}-9 & 4\\13 & 2\end{bmatrix}$

$\therefore AB \neq BA$

6. If $A=\begin{bmatrix}0 & c & -b\\-c & 0 & a\\b & -a & 0\end{bmatrix}$ & $B=\begin{bmatrix}a^2 & ab & ac\\ab & b^2 & bc\\ac & bc & c^2\end{bmatrix}$;

Show that AB is a zero matrix.

Soln :– $AB=\begin{bmatrix}0 & c & -b\\-c & 0 & a\\b & -a & 0\end{bmatrix}\times\begin{bmatrix}a^2 & ab & ac\\ab & b^2 & bc\\ac & bc & c^2\end{bmatrix}$

$\Rightarrow\begin{bmatrix}0+abc-abc & 0+b^2c-b^2c & 0+b^2c-b^2c\\-a^2c+0+a^2c & -abc+0+abc & -ac^2+0+ac^2\\a^2b-a^2b+0 & -ab^2-ab^2+0 & abc-abc+0\end{bmatrix}$

$\Rightarrow\begin{bmatrix}0 & 0 & 0\\0 & 0 & 0\\0 & 0 & 0\end{bmatrix}\Rightarrow$ zero matrix

7. If $A = \begin{bmatrix}3 & 1\\2 & 5\end{bmatrix}$ **prove that**

$A^2 - 8A + 13I = 0$

Soln :– Given, $A=\begin{bmatrix}3 & 1\\2 & 5\end{bmatrix}$

$A^2 = A \times A = \begin{bmatrix}3 & 1\\2 & 5\end{bmatrix}\begin{bmatrix}3 & 1\\2 & 5\end{bmatrix}$

$=\begin{bmatrix}9+2 & 3+5\\6+10 & 2+25\end{bmatrix}=\begin{bmatrix}11 & 8\\16 & 27\end{bmatrix}$

$8A = 8\begin{bmatrix}3 & 1\\2 & 5\end{bmatrix}=\begin{bmatrix}24 & 8\\16 & 40\end{bmatrix}$

$13I = 13\begin{bmatrix}1 & 0\\0 & 1\end{bmatrix}=\begin{bmatrix}13 & 0\\0 & 13\end{bmatrix}$

$\therefore A^2 - 8A + 13I$

$=\begin{bmatrix}11 & 8\\16 & 27\end{bmatrix}-\begin{bmatrix}24 & 8\\16 & 40\end{bmatrix}+\begin{bmatrix}13 & 0\\0 & 13\end{bmatrix}$

$=\begin{bmatrix}11-24+13 & 8-8+0\\16-16+0 & 27-40+13\end{bmatrix}=\begin{bmatrix}0 & 0\\0 & 0\end{bmatrix}$

Hence $A^2 - 8A + 13I = 0$

(Contd….)

ಎಸ್ಸೆಸ್ಸೆಲ್ಸಿ ಸಮಾಜವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

180 ಗ್ರಾಂ ಚಿನ್ನ ದರೋಡೆ ಕಾರಿನೊಂದಿಗೆ ಪರಾರಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಹಾರಾಷ್ಟ್ರದ ಸಾಂಗ್ಲಿಯಿಂದ ಕೇರಳಕ್ಕೆ ತೆರಳುತ್ತಿದ್ದ ಕಾರನ್ನು ನಗರದ ಪಣಂಬೂರು ಠಾಣಾ ವ್ಯಾಪ್ತಿಯಲ್ಲಿ ಸೋಮವಾರ ನಸುಕಿನಲ್ಲಿ ಅಡ್ಡಗಟ್ಟಿದ ಏಳು ಮಂದಿಯ ತಂಡ 180 ಗ್ರಾಂ ಚಿನ್ನಾಭರಣ ದರೋಡೆ ಮಾಡಿ, ಕಾರಿನೊಂದಿಗೆ ಪರಾರಿಯಾಗಿದೆ.



ಕಣ್ಣೂರು ಜಿಲ್ಲೆಯ ಪಯ್ಯನ್ನೂರು ನಿವಾಸಿ ವಿಕಾಸ್ ಅವರು ಪತ್ನಿ ಮತ್ತು ಪುತ್ರನ ಜೊತೆ ಬರುತ್ತಿದ್ದರು. ಕಾರಿನಲ್ಲಿ ಬಂದ ದುಷ್ಕರ್ಮಿಗಳು ನಸುಕಿನಲ್ಲಿ 2.30ರ ವೇಳೆ ನಗರದ ಹೊರವಲಯದ ಬೈಕಂಪಾಡಿ ಜಂಕ್ಷನ್ ಬಳಿ ವಿಕಾಸ್ ಅವರ ಕಾರನ್ನು ಅಡ್ಡಗಟ್ಟಿ, ಮೂವರನ್ನು ಕೆಳಗೆ ಇಳಿಸಿ ಆಭರಣಗಳು ಇದ್ದ ಬ್ಯಾಗ್ ಸಮೇತ ಕಾರನ್ನು ಅಪಹರಿಸಿಕೊಂಡು ಹೋಗಿದ್ದಾರೆ ಎಂದು ದೂರು ನೀಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸಾಂಗ್ಲಿಯವರಾದ ವಿಕಾಸ್ ಅವರ ಕುಟುಂಬ ಅನೇಕ ವರ್ಷಗಳಿಂದ ಕೇರಳದಲ್ಲಿ ವಾಸವಾಗಿದೆ. ಮದುವೆಗೆಂದು ಸ್ವಂತ ಊರಿಗೆ ಹೋಗಿ ಮರಳುವಾಗ ಘಟನೆ ನಡೆದಿದೆ.' ಆರೋಪಿಗಳ ಪತ್ತೆಗಾಗಿ ಹಲವು ತಂಡಗಳನ್ನು ರಚಿಸಲಾಗಿದೆ. ಒಂದಿಷ್ಟು ಮಾಹಿತಿಗಳು ಈಗಾಗಲೇ ಲಭ್ಯವಾಗಿದ್ದು ಅದರ ಆಧಾರದಲ್ಲಿ ಕಾರ್ಯಾಚರಣೆ ನಡೆಯುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ಪ್ರದೀಪ್ ಈಶ್ವರ್ ವಿರುದ್ಧ ಎಸ್‌ಪಿಗೆ ದೂರು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: 'ಶಾಸಕ ಪ್ರದೀಪ್ ಈಶ್ವರ್ ಪ್ರಚೋದನೆಯಿಂದಲೇ ಚಿಕ್ಕಬಳ್ಳಾಪುರದಲ್ಲಿ ನಡೆದ ಕೆಂಪೇಗೌಡ ಜಯಂತಿಯಲ್ಲಿ ಗಲಾಟೆ ಆಗಿದೆ. ಅವರ ವಿರುದ್ಧ ಪ್ರಕರಣ ದಾಖಲಿಸಬೇಕು' ಎಂದು ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ಸೋಮವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ ಅವರಿಗೆ ದೂರು ನೀಡಿದರು.

'ಶಾಸಕರು ಮೀಸೆ ತಿರುವಿ, ತೊಡೆ ತಟ್ಟಿದ್ದರಿಂದ ಜನರು ಪ್ರಚೋದನೆಗೆ ಒಳಗಾದರು. ಆದ್ದರಿಂದ ಅವರನ್ನು ಮೊದಲ ಆರೋಪಿಯನ್ನಾಗಿ ಮಾಡಬೇಕು' ಎಂದು ಕೋರಿದರು.



ಪ್ರದೀಪ್ ಈಶ್ವರ್

ನಿಖಿಲ್ ಭೇಟಿ: ಪ್ರಕರಣ ದಲ್ಲಿ ಬಂಧಿತರಾಗಿ ಜಿಲ್ಲಾ ಕಾರಾಗೃಹ ದಲ್ಲಿರುವ 9 ಮಂದಿಯನ್ನು ಜೆಡಿಎಸ್ ಯುವ ಘಟಕದ ರಾಜ್ಯ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭೇಟಿ ಮಾಡಿದರು. ನಂತರ ಅವರ ಮನೆಗಳಿಗೆ ತೆರಳಿ ಕುಟುಂಬಕ್ಕೆ ಸಾಂತ್ವನ ಹೇಳಿದರು.

'ಪೊಲೀಸರು ಅಮಾಯಕರನ್ನು ಬಂಧಿಸಿದ್ದಾರೆ. ಆದರೆ, ಪ್ರಚೋದನೆ ನೀಡಿರುವವರನ್ನು ಕೈಬಿಟ್ಟಿದ್ದಾರೆ. ಪ್ರಚೋದನೆ ಕೊಟ್ಟ ವ್ಯಕ್ತಿಯನ್ನು ಯಾರೂ ಪ್ರಶ್ನಿಸುತ್ತಿಲ್ಲ. ಅವರ ಮೇಲೂ ಪ್ರಕರಣ ದಾಖಲಿಸಬೇಕಾಗಿತ್ತು. ಜನಪ್ರತಿನಿಧಿಗಳ ಒತ್ತಡವೇ ಇದಕ್ಕೆ ಪ್ರಮುಖ ಕಾರಣ' ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದರು.

ಅಬಕಾರಿ ಕಚೇರಿಗಳಲ್ಲಿ ಶೋಧ

ಬೆಂಗಳೂರು: ಅಬಕಾರಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರಿಗೆ ಸೇರಿದ ಮನೆ ಮತ್ತು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಶೋಧ ನಡೆಸಿದ ಬೆನ್ನಲ್ಲೇ, ಲೋಕಾಯುಕ್ತ ಪೊಲೀಸರು ನಗರದ ಅಬಕಾರಿ ಕಚೇರಿಗಳಲ್ಲಿ ಶೋಧ ನಡೆಸಿದರು.

ನಗರದ ಎಂಟು ಉಪ ಆಯುಕ್ತ ಕಚೇರಿಗಳು ಮತ್ತು ಗ್ರಾಮಾಂತರದಲ್ಲಿರುವ ಒಂದು ಉಪ ಆಯುಕ್ತರ ವಿರುದ್ಧ ಹೊರಡಿಸಿದ ವಾರಂಟ್ ಮೇರೆಗೆ ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.

ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರು ದಾಖಲಿಸಿದ ಪ್ರಕರಣದ ನಂತರ ವಾರಂಟ್ ಜಾರಿಯಾಗಿದೆ.

'ಉಪ ಆಯುಕ್ತರ ಕಚೇರಿಗಳಲ್ಲಿ ನವೀಕರಣಕ್ಕಾಗಿ ಸ್ವೀಕರಿಸಿದ ಅರ್ಜಿಗಳು, ದಾಖಲಾಗಿರುವ ಉಲ್ಲಂಘನೆ ಪ್ರಕರಣಗಳ ಸಂಖ್ಯೆ, ಬಾಕಿ ಇರುವ ಕಡತಗಳು ಹಾಗೂ ಇತರೆ ಆಡಳಿತಾತ್ಮಕ ಕಾರ್ಯಗಳಲ್ಲಿ ನಿರ್ಲಕ್ಷ್ಯ ಮತ್ತು ಭ್ರಷ್ಟಾಚಾರ ನಡೆದಿದೆಯೇ ಎಂಬುದನ್ನು ಪರಿಶೀಲಿಸುವುದು ಶೋಧದ ಮುಖ್ಯ ಉದ್ದೇಶವಾಗಿದೆ. ವರದಿಯನ್ನು ಲೋಕಾಯುಕ್ತರಿಗೆ ಸಲ್ಲಿಸಲಾಗುವುದು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಖಾಸಗೀಕರಣ: ಶೀಘ್ರ ತೀರ್ಮಾನ'

ಸಂಪುಟ ಸಭೆಯಲ್ಲಿ ಚರ್ಚೆ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ರಾಜ್ಯದಲ್ಲಿ ವಿದ್ಯುತ್ ವಿತರಣೆಯನ್ನು ಖಾಸಗೀಕರಣ ಮಾಡಬಾರದು ಎಂಬ ಬೇಡಿಕೆಯ ಬಗ್ಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು. ನೌಕರರ ಬೇಡಿಕೆಗೆ ಆದ್ಯತೆ ನೀಡಲಾಗುವುದು' ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.



ಡಿ.ಕೆ. ಶಿವಕುಮಾರ್

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ ಮತ್ತು ಅಸೋಸಿಯೇಷನ್‌ಗಳ ಒಕ್ಕೂಟವು ಸೋಮವಾರ ಇಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, 'ಖಾಸಗೀಕರಣದ ಕುರಿತು ನಾನೊಬ್ಬನೇ ತೀರ್ಮಾನಿಸಲಾರೆ. ಎಸ್ಕಾಂಗಳ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಂಪುಟದ ಸಚಿವರು ಖಾಸಗೀಕರಣ ಮಾಡಬಾರದು ಎಂದು ಹೇಳಿದ್ದಾರೆ. ಸರ್ಕಾರ ನ್ಯಾಯಯುತವಾದ ತೀರ್ಮಾನ ಮಾಡಲಿದೆ' ಎಂದರು.

'ಖಾಸಗೀಕರಣದ ಪರವಾಗಿ 2003ರಲ್ಲಿ ಕಾನೂನು ರೂಪಿಸಿದ್ದು ಕೇಂದ್ರದಲ್ಲಿದ್ದ ಅಂದಿನ ಬಿಜೆಪಿ ಸರ್ಕಾರ. ಆದರೆ, ಆಗ ಇಂಧನ ಇಲಾಖೆಯ ನೌಕರರು, ಎಂಜಿನಿಯರ್‌ಗಳು, ಸಂಘದ ಪ್ರತಿನಿಧಿಗಳು ಅದನ್ನು ವಿರೋಧಿಸಿರಲಿಲ್ಲ. ಧಿಕ್ಕಾರ ಕೂಗಿರಲಿಲ್ಲ. ಈಗ ನನ್ನ ಬಳಿಗೆ ಬಂದು ಖಾಸಗೀಕರಣ ಮಾಡಬಾರದು ಎನ್ನುತ್ತಿದ್ದೀರಿ. ನೀವು ಸದಾ ನನ್ನ ಜೊತೆ ಇರುವುದಾಗಿ ಹೇಳುತ್ತೀರಿ. ಆದರೆ, ತಪ್ಪು ಮಾಡಿದವರ ವಿರುದ್ಧ ಧಿಕ್ಕಾರ, ಒಳ್ಳೆಯ ಕೆಲಸ ಮಾಡಿದವರಿಗೆ ಜೈಕಾರ ಹೇಳಿದರೆ ಮಾತ್ರ ಅದಕ್ಕೆ ಗೌರವ ಬರುತ್ತದೆ. ಆಗ ವಿರೋಧಿಸದೇ, ಈಗ ಡಿ.ಕೆ, ಡಿ.ಕೆ ಎಂದು ಕೂಗಿದರೆ ನಾನು ಸುಲಭವಾಗಿ ಬಗ್ಗುವವನಲ್ಲ' ಎಂದು ಆಕ್ಷೇಪಿಸಿದರು.

'ಬಿಜೆಪಿಯವರ ಟೀಕೆಗಳು ಸಾಯುತ್ತವೆ, ನಮ್ಮ ಕೆಲಸಗಳಷ್ಟೇ ಉಳಿಯುತ್ತವೆ. ನೀವೆಲ್ಲರೂ ಸರ್ಕಾರದ ಹೆಬ್ಬೆಟ್ಟು. ಮುಂಬೈ, ದೆಹಲಿ ಸೇರಿ ಅನೇಕ ನಗರಗಳಲ್ಲಿ ಖಾಸಗೀಕರಣ ಮಾಡಲಾಗಿದೆ. ನೂರಾರು ವರ್ಷಗಳಿಂದ ವಿದ್ಯುತ್ ಲೈನ್ ಎಳೆದವರು ನೀವು, ಬೆಂಬಲ ಕೊಟ್ಟಿದ್ದು ಸರ್ಕಾರ. ಈಗ ಖಾಸಗಿ ಕಂಪನಿಯವರು ದುಡ್ಡು ಮಾಡಲು, ವಿತರಣೆಯ ಅಧಿಕಾರ ನೀಡುವಂತೆ ಕೇಳುತ್ತಿದ್ದಾರೆ' ಎಂದರು.

'ನಿಮ್ಮ ಮೇಲೆ ನಂಬಿಕೆ ಇಟ್ಟು ಸಚಿವ ಸಂಪುಟದಲ್ಲಿ ತೀರ್ಮಾನಿಸುತ್ತೇನೆ. ನೀವು ಮೋಸ ಮಾಡಿದರೆ ವಾಜಪೇಯಿ ಅವರ ಸರ್ಕಾರದ ತೀರ್ಮಾನದ ಕಡೆ ಮುಖ ಮಾಡುತ್ತೇನೆ. ಅದಕ್ಕೆ ಅವಕಾಶ ಮಾಡಿಕೊಡಬೇಡಿ. ನಮ್ಮ ನಿಮ್ಮ ಸಂಬಂಧ ಗಟ್ಟಿಯಾಗಿರಬೇಕು' ಎಂದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಗಳ ನೌಕರರ ಸಂಘದ ಅಧ್ಯಕ್ಷ ಕೆ. ಬಲರಾಮ್, ಪ್ರಧಾನ ಕಾರ್ಯದರ್ಶಿ ಶಿವರಾಂ, ಖಜಾಂಚಿ ವರದರಾಜ್, ಎಂಜಿನಿಯರ್‌ಗಳ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ದೇಸಾಯಿ ವೇದಿಕೆಯಲ್ಲಿದ್ದರು. ವಿವಿಧ ಜಿಲ್ಲೆಗಳ ಸಾವಿರಾರು ನೌಕರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಖಾಸಗೀಕರಣ ಪ್ರಶ್ನೆಯೇ ಇಲ್ಲ: ಜಾರ್ಜ್



'ರಾಜ್ಯದ ಜನರಿಗೆ ವಿದ್ಯುತ್ ಪೂರೈಸಲು ಇಂಧನ ಇಲಾಖೆ ಬಲಿಷ್ಠವಾಗಿದ್ದು, ಖಾಸಗೀಕರಣಗೊಳಿಸುವ ಪ್ರಶ್ನೆಯೇ ಇಲ್ಲ' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಪ್ರತಿಪಾದಿಸಿದರು.

'ನಮ್ಮ ಸರ್ಕಾರ ನೌಕರರ ಪರವಾಗಿದೆ. ಖಾಸಗೀಕರಣದ ವಿರುದ್ಧ ಎಸ್ಕಾಂಗಳು ಈಗಾಗಲೇ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಆಕ್ಷೇಪಣೆ ಸಲ್ಲಿಸಿವೆ. ನಾವು ಯಾವುದೇ ಖಾಸಗಿ ಕಂಪನಿಗೆ ಕಡಿಮೆ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ಮುಂದಿನ 25 ವರ್ಷಗಳ ಅವಧಿಗೆ ವಿದ್ಯುತ್ ಭದ್ರತೆ ಒದಗಿಸಲು ಯೋಜನೆ ಸಿದ್ಧವಾಗಿದೆ. 10 ಸಾವಿರ ಎಕರೆಯಲ್ಲಿ ಸೌರ ವಿದ್ಯುತ್ ಉತ್ಪಾದಿಸಲಾಗುತ್ತಿದ್ದು, ರೈತರು ಇನ್ನೂ 10 ಸಾವಿರ ಎಕರೆ ಜಾಗ ನೀಡಲು ಮುಂದೆ ಬಂದಿದ್ದಾರೆ. ಬೇಡಿಕೆ ಅವಧಿಯಲ್ಲಿ ವಿದ್ಯುತ್ ಮಾರಾಟವನ್ನು ಹೆಚ್ಚಿಸಿರುವುದರಿಂದ ಇಲಾಖೆಗೆ ಲಾಭವಾಗಿದೆ. ವಿನಿಮಯ ಆಧಾರದ ಮೇಲೆ ವಿದ್ಯುತ್ ಪಡೆಯುವುದು ಮತ್ತು ದೀರ್ಘಾವಧಿ ಒಪ್ಪಂದಗಳ ಮೂಲಕ ವಿದ್ಯುತ್ ಖರೀದಿಸಿ, ಇಂಧನ ಭದ್ರತೆಗೆ ಕ್ರಮ ವಹಿಸಲಾಗಿದೆ' ಎಂದರು.

ಸುದ್ದಿ 2 ನಿಮಿಷ

'ಓಡಿ ರೈಲು ಹಿಡಿಯದಿದ್ದರೆ ಜನ ಮರೆತುಬಿಡುತ್ತಾರೆ'

ಬೆಂಗಳೂರು: 'ಒಬ್ಬರನ್ನು ಹಿಂದೆ ಹಾಕಿಯೇ ಮತ್ತೊಬ್ಬರು ಬರಬೇಕು. ಅದು ರಾಜಕೀಯ ಸಿದ್ಧಾಂತ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪ್ರತಿಪಾದಿಸಿದರು.

'ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಡೆಗಣಿಸಲಾಗುತ್ತಿದೆಯೇ' ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಇದು ವೇಗದ ಕಾಲ. ನಾವು ಕೂಡಾ ವೇಗವಾಗಿ ಓಡಬೇಕು. ವೇಗವಾಗಿ ಓಡದೇ ಇದ್ದರೆ ರೈಲು ತಪ್ಪಬಹುದು. ರೈಲು ತಪ್ಪಿದರೆ ತುಮಕೂರಿಗೊ, ಅರಸೀಕೆರೆಗೊ ಗಾಡಿಯಲ್ಲಿ ಹೋಗಿಯಾದರೂ ರೈಲು ಹಿಡಿಯಬೇಕು. ರೈಲು ಹಿಡಿಯದೇ ಇದ್ದರೆ ಜನ ಮರೆತುಬಿಡುತ್ತಾರೆ. ಇದು ನಾನು ಹೇಳುವುದಲ್ಲ. ಜನ ಹೇಳುವ ಮಾತು. ರಾಜಕಾರಣವೆಂದರೆ ಹಾಗೆಯೇ' ಎಂದರು.

'ನಾನು ದೊಡ್ಡ ನಾಯಕ ಅಂದುಕೊಂಡರೆ ರಾಜಕೀಯ ಕೇಳಲ್ಲ. ಬದಲಾವಣೆ ಆಗುತ್ತಲೇ ಹೋಗುತ್ತದೆ. ನಾನು 20 ವರ್ಷದಲ್ಲಿ ನೋಡಿರುವ ನಾಯಕ ಈಗ ಇಲ್ಲ. ಅವರು ಓಡಿ ಹೋಗಿ ಹತ್ತಿದ್ದರೆ, ಇನ್ನೂ ಇರುತ್ತಿದ್ದರು. ನಾನು ನಾಯಕ ಆಗಬೇಕು ಎನ್ನುವುದು ಎಲ್ಲರಿಗೂ ಇರುತ್ತದೆ. ಅವರು (ಸಿದ್ದರಾಮಯ್ಯ) ಮೈಸೂರಿನಲ್ಲಿಯೇ ಕುಳಿತು ರಾಜಕಾರಣ ಮಾಡಬಹುದು. ಜನರ ಸಂಪರ್ಕ ಎಲ್ಲಿಯವರೆಗೆ ಇರುತ್ತದೆಯೊ ಅಲ್ಲಿಯವರೆಗೆ ನಾಯಕ' ಎಂದು ಮಾರ್ಮಿಕವಾಗಿ ಹೇಳಿದರು.



'ಸಿದ್ದರಾಮಯ್ಯ ಅವರ ವೇಗ ಯಾಕೆ ಕಡಿಮೆ ಆಯಿತು' ಎಂಬ ಪ್ರಶ್ನೆಗೆ, 'ಅದನ್ನು ಅವರನ್ನೇ ಕೇಳಿ. ನಾವು ಅವರಿಗೆ ಓಡಬೇಕು ಎಂದು ಹೇಳುತ್ತೇವೆ. ಓಡದಿದ್ದರೆ ಕೆಲಸ ಆಗುವುದಿಲ್ಲ. ಯಾರು ಹೋರಾಟ ಮಾಡುತ್ತಾರೊ ಅವರು ಉಳಿಯುತ್ತಾರೆ. ಹೋರಾಟ ಮಾಡದೇ ಇದ್ದರೆ ಜನ ಮರೆಯುತ್ತಾರೆ. ನಾವು ಮುಂಚೂಣಿಯಲ್ಲಿ ನಿಲ್ಲದೇ ಇದ್ದರೆ ಜನರು ಹೊಸ ನಾಯಕನನ್ನು ಆಯ್ಕೆ ಮಾಡುತ್ತಾರೆ' ಎಂದರು.

'ಮೈಸೂರು ಸಾಹಿತ್ಯ ಸಂಭ್ರಮ'ಕ್ಕೆ ದಶಮಾನೋತ್ಸವ

ಮೈಸೂರು: 'ಮೈಸೂರು ಸಾಹಿತ್ಯ ಸಂಭ್ರಮ'ವು ದಶಮಾನೋತ್ಸವದ ಸಂಭ್ರಮದಲ್ಲಿದ್ದು, 10ನೇ ಆವೃತ್ತಿಯ ಕಾರ್ಯಕ್ರಮವು ಜುಲೈ 4 ಮತ್ತು 5ರಂದು ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ನಡೆಯಲಿದೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಏಕಕಾಲಕ್ಕೆ ವಿವಿಧ ಗೋಷ್ಠಿ–ಚರ್ಚೆಗಳು ಇರಲಿವೆ.

'ಮೈಸೂರು ಲಿಟರರಿ ಫೋರಂ ಮತ್ತು ಚಾರಿಟಬಲ್ ಟ್ರಸ್ಟ್, ಮೈಸೂರು ಬುಕ್ ಕ್ಲಬ್ ಚಾರಿಟಬಲ್ ಟ್ರಸ್ಟ್ ಆಯೋಜಿಸಿರುವ ಕಾರ್ಯಕ್ರಮದ ಎರಡೂ ದಿನ ಸಾಹಿತ್ಯದ ಜೊತೆಗೆ ಸಮಕಾಲೀನ ಸಮಾಜದ ವಿವಿಧ ವಿಚಾರಗಳ ಕುರಿತು ಆಸಕ್ತಿಕರ ಚರ್ಚೆ ಇರಲಿದೆ. 8 ಕೃತಿಗಳು ಬಿಡುಗಡೆ ಆಗುತ್ತಿವೆ. ದಶಮಾನೋತ್ಸವದ ನೆನಪಿಗೆ 'ಬರಹ ಬಾಗಿನ' ಎನ್ನುವ ಕೃತಿಯೂ ಅನಾವರಣಗೊಳ್ಳಲಿದೆ' ಎಂದು ಟ್ರಸ್ಟ್‌ನ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಜು. 4ರಂದು ಬೆಳಿಗ್ಗೆ 10ಕ್ಕೆ ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಲಿದ್ದು, ಲೇಖಕರಾದ ಅಮೇಶ್ ತ್ರಿಪಾಟಿ, ಅರುಣ್‌ರಾಮನ್, ಕಲಾವಿದ ಬಾದಲ್ ನಂಜುಂಡಸ್ವಾಮಿ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಪುಸ್ತಕ ಪ್ರೇಮಿ ಅಂಕೇಗೌಡರನ್ನು ಸನ್ಮಾನಿಸಲಾಗುವುದು. ನಾಡಿನ ಹಿರಿಯ–ಕಿರಿಯ ಸಾಹಿತಿಗಳು ಸಾಹಿತ್ಯಾಸಕ್ತರು ಪಾಲ್ಗೊಳ್ಳಲಿದ್ದಾರೆ' ಎಂದು ತಿಳಿಸಿದರು.

'ಸ್ವಇಚ್ಛೆಯಿಂದ ಭೂಮಿ ಕೊಟ್ಟರೆ ಪರಿಗಣನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭೂ ಸ್ವಾಧೀನ ಕಾನೂನು ಬಹಳ ಸ್ಪಷ್ಟವಾಗಿದೆ. ಯಾರೂ ಒತ್ತಾಯಪೂರ್ವಕವಾಗಿ ಭೂಮಿ ತೆಗೆದುಕೊಳ್ಳಲು ಆಗುವುದಿಲ್ಲ. ರೈತರು ಸ್ವಇಚ್ಛೆಯಿಂದ ಕೊಟ್ಟರೆ ಅದನ್ನು ಪರಿಗಣಿಸುತ್ತೇವೆ' ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

'ಬಿಡದಿ ಟೌನ್‌ಶಿಪ್‌ಗಾಗಿ ಭೂಮಿ ಸ್ವಾಧೀನ ಪಡಿಸಿಕೊಳ್ಳುವುದರಿಂದ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ' ಎನ್ನುವ ವಿಚಾರವಾಗಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್, 'ಸ್ವಇಚ್ಛೆಯಿಂದ ಭೂಮಿ ಕೊಡುವುದಿಲ್ಲವೆಂದರೆ ಸ್ವಾಧೀನಪಡಿಸಿಕೊಳ್ಳಲು ಅವಕಾಶ ಇಲ್ಲ. ಆದರೆ, ಶೇ 90ರಿಂದ 95ರಷ್ಟು ಭೂಸ್ವಾಧೀನ ಆಗಿದ್ದರೆ ಕಾನೂನು ಅನ್ವಯವಾಗುತ್ತದೆ. ಭೂಮಿ ಮಾರಾಟ ಮಾಡುವಂತೆ ರೈತರನ್ನು ಯಾರೂ ಒತ್ತಾಯಿಸಲು ಸಾಧ್ಯವಿಲ್ಲ. ನಾವು ಯಾವತ್ತೂ ಆತುರ ಮಾಡಿಲ್ಲ, ಮಾಡುವುದೂ ಇಲ್ಲ' ಎಂದರು.

ಕೆಕೆಆರ್‌ಡಿಬಿಗೆ ₹ 5 ಸಾವಿರ ಕೋಟಿ: ಕಲ್ಯಾಣ ಕರ್ನಾಟಕದ ಬಗ್ಗೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾಡಿರುವ ಆರೋಪಕ್ಕೆ ತಿರುಗೇಟು ನೀಡಿದ ಪ್ರಿಯಾಂಕ್, 'ಕಲ್ಯಾಣ ಕರ್ನಾಟಕದ ಬಗ್ಗೆ ವಿರೋಧ ಪಕ್ಷದಿಂದ ನಾವು ಕಲಿಯುವುದು ಏನೂ ಇಲ್ಲ. ಬಿಜೆಪಿಯವರು ಅಧಿಕಾರದಲ್ಲಿ ಇದ್ದಾಗ ಆ ಭಾಗಕ್ಕೆ ಎಷ್ಟು ಅನುದಾನ ಕೊಟ್ಟಿದ್ದರು? ಆರ್‌ಎಸ್‌ಎಸ್ ಮಾನವ ಸಂಪನ್ಮೂಲ ಸಂಸ್ಥೆ ಮಾಡಿ ₹ 200 ಕೋಟಿಯಿಂದ ₹ 300 ಕೋಟಿ ಲೂಟಿ ಹೊಡೆದರು. ಕೆಕೆಆರ್‌ಡಿಬಿಗೆ ನಾವು ₹ 5 ಸಾವಿರ ಕೋಟಿ ಕೊಟ್ಟಿದ್ದೇವೆ' ಎಂದರು.

ನನಗೂ ಗೊತ್ತಿದೆ: '2018ರಲ್ಲಿ ಯಾರೆಲ್ಲ ನಮ್ಮ ಮನೆ ಬಾಗಿಲಿಗೆ ಬಂದಿದ್ದರು' ಎಂಬ ಎಚ್‌.ಡಿ. ಕುಮಾರಸ್ವಾಮಿ ನೀಡಿದ್ದ ಹೇಳಿಕೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್, 'ಯಾರ್‍ಯಾರು, ಯಾರ ಮನೆ ಬಾಗಿಲಿಗೆ ಹೋಗಿದ್ದರು, ಬಂದಿದ್ದರು ಎಂದು ನನಗೂ ಗೊತ್ತಿದೆ' ಎಂದು ತಿರುಗೇಟು ನೀಡಿದರು.

'ಆಗ ಸರ್ಕಾರ ಯಾಕೆ ಪತನವಾಯಿತು ಎಂದು ಗೊತ್ತಿಲ್ಲವೇ? ಆಗ ತತ್ವ, ಸಿದ್ಧಾಂತ ಎಲ್ಲವೂ ಒಂದೇ ಎಂದು ಹೇಳಿದ್ದರು. ಈಗ ಎಲ್ಲ ಬೇರೆ, ಬೇರೆ ಆಗಿದೆ. ಈಗ ಅವರಿಗೆ ಬೇರೆ ಏನೊ ಅರಿವಾಗಿದೆ' ಎಂದು ಕುಟುಕಿದರು.

ಚನ್ನಪಟ್ಟಣದ ಎಲೆಕೇರಿಯಲ್ಲಿ ಮೇಲ್ಸೇತುವೆ ಉದ್ಘಾಟಿಸಿದ ಸಚಿವ ಸೋಮಣ್ಣ

ಬೆಂಗಳೂರು ಸುತ್ತ ಚತುಷ್ಪಥ ರೈಲು ಮಾರ್ಗ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: 'ಬೆಂಗಳೂರಿನಿಂದ 100 ಕಿ.ಮೀ ವ್ಯಾಪ್ತಿಯಲ್ಲಿರುವ ನಗರಗಳಿಗೆ ಚತುಷ್ಪಥ ರೈಲು ಮಾರ್ಗ ಅಭಿವೃದ್ಧಿಪಡಿಸಲಾಗುವುದು. ರಾಜಧಾನಿಯಿಂದ ಕರಾವಳಿ ಭಾಗದ ಮಂಗಳೂರಿಗೂ ಚತುಷ್ಪಥ ಮಾರ್ಗ ಅಭಿವೃದ್ಧಿಪಡಿಸುವ ಕುರಿತು ಚಿಂತನೆ ನಡೆಸಲಾಗುವುದು' ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ಪಟ್ಟಣದ ಎಲೆಕೇರಿ ಬಳಿ ರೈಲು ಹಳಿಗೆ ಅಡ್ಡವಾಗಿ ನಿರ್ಮಿಸಿರುವ ಮೇಲ್ಸೇತುವೆಯನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದ ಅವರು, 'ಬೆಂಗಳೂರು–ತುಮಕೂರು ಚತುಷ್ಪಥ ಮಾರ್ಗದ ಸರ್ವೆ ಕೆಲಸ ಮುಗಿದಿದೆ. ಶೀಘ್ರದಲ್ಲೇ ಟೆಂಡರ್ ಪ್ರಕ್ರಿಯೆ ಆರಂಭಿಸಿ, ಎರಡು ವರ್ಷಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು. ಬೆಂಗಳೂರು–ಮೈಸೂರು ಚತುಷ್ಪಥ ನಿರ್ಮಾಣಕ್ಕೆ ಸಮೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ' ಎಂದರು.

'ಬೆಂಗಳೂರು–ಕೋಲಾರ ನಡುವೆಯೂ ನೇರ ರೈಲು ಸಂಪರ್ಕ ಕಲ್ಪಿಸಲಾಗುವುದು. ಸದ್ಯಕ್ಕೆ ವೈಟ್‌ಫೀಲ್ಡ್ ತನಕ ಇರುವ ನಾಲ್ಕು ಪಥದ ಮಾರ್ಗವನ್ನು ಮುಂದಕ್ಕೆ ಕೊಂಡೊಯ್ಯಲಾಗುವುದು. ಇದಕ್ಕೆ ಬೇಕಾದ ಭೂಸ್ವಾಧೀನ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರವೇ ನಡೆಸುತ್ತದೆ' ಎಂದು ತಿಳಿಸಿದರು.

'ರಾಜಧಾನಿಯಿಂದ ಕರಾವಳಿಯ ಮಂಗಳೂರಿಗೆ ತ್ವರಿತ ರೈಲು ಸಂಚಾರ ವ್ಯವಸ್ಥೆ ಆಗಬೇಕಿದೆ. ಇದಕ್ಕಾಗಿ ಸಕಲೇಶಪುರ– ಗುಂಡ್ಯ ನಡುವೆ ಸಮಾನಾಂತರವಾಗಿ ರಸ್ತೆ ಮತ್ತು ರೈಲು ಮಾರ್ಗ ಆಗಬೇಕು' ಎಂದು ರಾಜ್ಯದ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಒತ್ತಾಯಿಸಿದರು.

ಇದಕ್ಕೆ ಸ್ಪಂದಿಸಿದ ಸೋಮಣ್ಣ, 'ಎರಡೂ ನಗರಗಳ ನಡುವೆ ಚತುಷ್ಪಥ ರೈಲು ಮಾರ್ಗ ಅಭಿವೃದ್ಧಿ ಅಗತ್ಯ ಇದೆ. ಬಂದರು ನಗರ ಮಂಗಳೂರಿಗೆ ಸಂಪರ್ಕ ಮಾಡುವುದರಿಂದ ಹೆಚ್ಚಿನ ಅನುಕೂಲವಾಗಲಿದೆ. ಇದಕ್ಕೆ ಆದ್ಯತೆ ನೀಡಲಾಗುವುದು' ಎಂದು ಭರವಸೆ ನೀಡಿದರು.



ಚನ್ನಪಟ್ಟಣದ ಎಲೆಕೇರಿ ಬಳಿ ರೈಲು ಹಳಿಗೆ ಅಡ್ಡವಾಗಿ ನಿರ್ಮಿಸಿರುವ ಮೇಲ್ಸೇತುವೆಯನ್ನು ಸೋಮವಾರ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಉದ್ಘಾಟಿಸಿದರು. ರಾಜ್ಯದ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ಸಂಸದ ಡಾ.ಸಿ.ಎನ್‌.ಮಂಜುನಾಥ್, ಶಾಸಕ ಸಿ.ಪಿ.ಯೋಗೇಶ್ವರ ಇದ್ದರು

'ವಿಜಯಪುರಕ್ಕೆ ವಂದೇ ಭಾರತ್ ಸ್ಲೀಪರ್ ರೈಲು'

'ಕಿತ್ತೂರು ಕರ್ನಾಟಕ ಭಾಗದ ವಿಜಯಪುರಕ್ಕೆ ವಂದೇ ಭಾರತ್ ಸ್ಲೀಪರ್ ರೈಲು ಸೇವೆಯು ಮೂರ್‍ನಾಲ್ಕು ತಿಂಗಳಲ್ಲಿ ನನಸಾಗಲಿದೆ. ಬೆಂಗಳೂರು–ವಿಜಯಪುರ ನಡುವೆ ವಾರಕ್ಕೆರಡು ಸಲ ಸಂಚರಿಸುತ್ತಿರುವ ವಿಶೇಷ ರೈಲನ್ನು ಕಾಯಂಗೊಳಿಸಲಾಗುವುದು' ಎಂದು ವಿ.ಸೋಮಣ್ಣ ಹೇಳಿದರು.

ಎಸ್‌ಐಆರ್: 49,320 ಸಹಾಯ ಕೇಂದ್ರ

ಪ್ರಜಾವಾಣಿವಾರ್ತೆ

ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣಾ (ಎಸ್‌ಐಆರ್) ಕಾರ್ಯದಲ್ಲಿ ನೆರವಾಗಲು ರಾಜ್ಯದಾದ್ಯಂತ ಜನರಿಗೆ 37,464 ಹಾಗೂ ಮತಗಟ್ಟೆ ಅಧಿಕಾರಿಗಳಿಗೆ 11,856 ಸೇರಿ ಒಟ್ಟು 49,320 ಸಹಾಯ ಕೇಂದ್ರಗಳನ್ನು ರಾಜ್ಯ ಸರ್ಕಾರ ತೆರೆಯಲಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, 'ಪ್ರತಿಯೊಬ್ಬ ಮತದಾರರೂ ಮತಗಟ್ಟೆ ಅಧಿಕಾರಿಗಳು ಮನೆ–ಮನೆಗೆ ತಲುಪಿಸುವ ಗಣತಿ ನಮೂನೆಯನ್ನು ಕಡ್ಡಾಯವಾಗಿ ಭರ್ತಿ ಮಾಡಬೇಕು. ಒಂದು ವೇಳೆ ಭರ್ತಿ ಮಾಡಲು ನಿರ್ಲಕ್ಷ್ಯ ಮಾಡಿದರೆ ಆ. 5 ರಂದು ಪ್ರಕಟವಾಗುವ ಕರಡು ಮತದಾರರ ಪಟ್ಟಿಯಲ್ಲಿ ಹೆಸರು ಇರುವುದಿಲ್ಲ. ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯವೂ ಸಿಗುವುದಿಲ್ಲ. ಪ್ರತಿ ಬೂತ್ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ತೆರೆಯುತ್ತಿರುವ ಸಹಾಯ ಕೇಂದ್ರಗಳನ್ನು ಬಳಸಿಕೊಂಡು ತಪ್ಪಿಲ್ಲದಂತೆ ನಮೂನೆ ಭರ್ತಿ ಮಾಡಬೇಕು. ಮತಗಟ್ಟೆ ಅಧಿಕಾರಿಗಳಿಗೆ ಮರಳಿಸಬೇಕು' ಎಂದು ಹೇಳಿದರು.

'ಸರ್ಕಾರ ಈಗಾಗಲೇ 5.50 ಕೋಟಿ ಜನರಿಗೆ ಜಾತಿ ಪ್ರಮಾಣಪತ್ರ ಅಧಿಕೃತವಾಗಿ ನೀಡಿದೆ. 2,54,95,767 ಹಿಂದುಳಿದ ವರ್ಗದ ಪ್ರಮಾಣಪತ್ರ, 2,94,51,027 ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಪ್ರಮಾಣಪತ್ರ ವಿತರಿಸಲಾಗಿದೆ. ಅವುಗಳನ್ನು ಡೌನ್ಲೋಡ್ ಮಾಡಿಕೊಳ್ಳಬೇಕು' ಎಂದು ಹೇಳಿದರು.

ಶಾಶ್ವತ ನಿವಾಸ ಪ್ರಮಾಣಪತ್ರ

ರಾಜ್ಯದಾದ್ಯಂತ 'ಶಾಶ್ವತ ನಿವಾಸ ಪ್ರಮಾಣಪತ್ರ' ನೀಡುವ ಕುರಿತು ಕಂದಾಯ ಇಲಾಖೆ ಮಾರ್ಗಸೂಚಿ ಹೊರಡಿಸಿದೆ.

ಪ್ರತಿಯೊಂದು ಗ್ರಾಮ ಪಂಚಾಯಿತಿ ಮತ್ತು ವಾರ್ಡ್ ಕಚೇರಿಗಳಲ್ಲಿ ಕಂಪ್ಯೂಟರ್, ಇಂಟರ್‌ನೆಟ್, ಮುದ್ರಣ ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳಿರುವ ಕೌಂಟರ್ ಸ್ಥಾಪಿಸಬೇಕು. ಗ್ರಾಮ ಪಂಚಾಯಿತಿಗಳಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಪಾಲಿಕೆಗಳಲ್ಲಿ ಆಯುಕ್ತರು ಹಾಗೂ ನಗರಸಭೆ, ಪುರಸಭೆಗಳಲ್ಲಿ ಮುಖ್ಯಾಧಿಕಾರಿಗಳು ಈ ಕೌಂಟರ್‌ಗಳನ್ನು ಸ್ಥಾಪಿಸಬೇಕು. ಅರ್ಹರು ಸೇವಾ ಸಿಂಧು ಪೋರ್ಟಲ್, ಅಟಲ್ ಜನಸ್ನೇಹಿ ಕೇಂದ್ರ ಅಥವಾ ಸರ್ಕಾರ ಸೂಚಿಸುವ ಪೋರ್ಟಲ್‌ಗಳ ಮೂಲಕ ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಸಕ್ರಮಗೊಳಿಸಲು ಕುಟುಂಬ, ಶೈಕ್ಷಣಿಕ ದತ್ತಾಂಶಗಳು, ನಿವಾಸ ದತ್ತಾಂಶಗಳು, ಮತದಾರರ ಪಟ್ಟಿಗಳು ಮತ್ತು ಕಾಲ ಕಾಲಕ್ಕೆ ಸೂಚಿಸಬಹುದಾದ ಸರ್ಕಾರಿ ದತ್ತಾಂಶಗಳು ಸೇರಿದಂತೆ ಅಧಿಕೃತ ದತ್ತಾಂಶಗಳನ್ನು ಬಳಸಿಕೊಂಡು ಪ್ರಮಾಣಪತ್ರ ನೀಡಬೇಕು ಎಂದು ಮಾರ್ಗಸೂಚಿಯಲ್ಲಿದೆ.

'ದೊಡ್ಡ ಮಟ್ಟದ ಆಂದೋಲನ ಅಗತ್ಯ'

'ಚುನಾವಣೆಯ ವೇಳೆಯಲ್ಲಿ ಎಲ್ಲೆಲ್ಲಿ ಅನುಕೂಲ ಇಲ್ಲವೊ ಅಲ್ಲಿ ಬಿಜೆಪಿಯವರು ಎಸ್‌ಐಆರ್ ಅಸ್ತ್ರ ಹಿಡಿದು ಲಕ್ಷಾಂತರ ಮತಗಳನ್ನು ರದ್ದುಪಡಿಸಿ ಸುಲಭವಾಗಿ ಗೆಲುವು ಸಾಧಿಸುತ್ತಿರುವುದು ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ಬಹಿರಂಗವಾಗಿ ನಡೆಯುತ್ತಿರುವ ವಂಚನೆ' ಎಂದು ಶಾಸಕ ಎಚ್‌.ಸಿ. ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

'ಎಸ್‌ಐಆರ್ ವಿರುದ್ಧ ದೊಡ್ಡ ಮಟ್ಟದಲ್ಲಿ ಆಂದೋಲನ ಆಗಬೇಕಿದ್ದು, ಆ ಹೋರಾಟವೇ ಪ್ರಜಾಪ್ರಭುತ್ವವನ್ನು ಉಳಿಸುವ ಶಕ್ತಿ. ಈ ಹಿಂದೆ ಸಿಎಎ ಮತ್ತು ಎನ್‌ಆರ್‌ಸಿ ಮೂಲಕ ಒಂದು ಧರ್ಮದ ಜನರಲ್ಲಿ ಭಯ ಉಂಟು ಮಾಡುವ ಕೆಲಸ ಮಾಡಿದ್ದ ಬಿಜೆಪಿಗರು, ದೇಶದಾದ್ಯಂತ ಪ್ರತಿಭಟನೆ ನಡೆದ ಕಾರಣಕ್ಕೆ ತಮ್ಮ ದ್ವೇಷಮಯ ನಡೆಯಿಂದ ಹಿಂದೆಸರಿದರು' ಎಂದಿದ್ದಾರೆ.

ಉದ್ಯಮಿ ರೊನಾಲ್ಡ್ ಕೊಲಾಸೊ ಇಚ್ಛಾಶಕ್ತಿ: ಸರ್ಕಾರಿ ಶಾಲೆಗೆ ಹೈಟೆಕ್ ಸ್ಪರ್ಶ

ಕೆಂಪತಿಮ್ಮನಹಳ್ಳಿ ಶಾಲೆಗೆ ಹೊಸ ರಂಗು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ತಾಲ್ಲೂಕಿನ ಕೆಂಪತಿಮ್ಮನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯು ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಕಂಗೊಳಿಸುತ್ತಿದೆ. ಸರ್ಕಾರ ಮಾತ್ರವಲ್ಲದೆ ಖಾಸಗಿ ಕಂಪನಿಗಳು ಹಾಗೂ ಇಚ್ಛಾಶಕ್ತಿ ಉಳ್ಳವರು ಮನಸ್ಸು ಮಾಡಿದರೆ ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳು ಕೂಡ ಖಾಸಗಿ ಕಾನ್ವೆಂಟ್‌ಗಳಿಗೆ ಸ್ಪರ್ಧೆ ನೀಡುತ್ತವೆ ಎಂಬುದಕ್ಕೆ ಈ ಹೈಟೆಕ್ ಶಾಲೆಯೇ ಉದಾಹರಣೆ.

ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಆಕರ್ಷಿಸಲು ಹಳೆ ಕಟ್ಟಡ ತೆರವುಗೊಳಿಸಿ ಸುಮಾರು ₹3.50 ಕೋಟಿ ವೆಚ್ಚದಲ್ಲಿ ಈ ಮಾದರಿ ಶಾಲೆ ನಿರ್ಮಾಣಗೊಂಡಿದೆ. ವಿದ್ಯಾರ್ಥಿಗಳ ಕಲಿಕೆ ಹಾಗೂ ಕ್ರೀಡೆಗೆ ಅನುಕೂಲ ಆಗುವಂತೆ ವಿವಿಧ ಸೌಲಭ್ಯ ಕಲ್ಪಿಸಲಾಗಿದೆ. ಇದಕ್ಕಾಗಿ ಉದ್ಯಮಿ ರೊನಾಲ್ಡ್ ಕೊಲಾಸೊ ಅವರು ₹2.45 ಕೋಟಿ, ಎಸ್‌ಎಲ್‌ಕೆ ಗ್ರೂಪ್ ₹1.05 ಕೋಟಿ ಆರ್ಥಿಕ ನೆರವು ಒದಗಿಸಿದೆ.

ವಿದ್ಯಾರ್ಥಿಗಳ ಕಲಿಕೆ ಮತ್ತು ದೈನಂದಿನ ಚಟುವಟಿಕೆ ಗಳಿಗಾಗಿಯೇ ನೂತನ ತರಗತಿ ಕೊಠಡಿಗಳ ವಿನ್ಯಾಸ ಗಮನ ಸೆಳೆಯುತ್ತದೆ. ಅಂಗನವಾಡಿ ಮಕ್ಕಳಿಗೂ ಹೊಸ ಕೊಠಡಿ ವ್ಯವಸ್ಥೆ ಮಾಡಲಾಗಿದೆ.

ಒಳ್ಳೆ ಸುದ್ದಿ

ಶುದ್ಧ ಕುಡಿಯುವ ನೀರಿನ ಘಟಕ, ಸಭಾಂಗಣ, ಸಿ.ಸಿ.ಟಿವಿ ಕ್ಯಾಮೆರಾ ಹಾಗೂ ಧ್ವನಿವರ್ಧಕ ಅಳವಡಿಸಲಾಗಿದೆ.

ನೆಲ ಮಹಡಿಯಲ್ಲಿ ತಯಾರಾಗುವ ಮಧ್ಯಾಹ್ನದ ಬಿಸಿಯೂಟ ಮೊದಲ ಮಹಡಿಯಲ್ಲಿರುವ ಊಟದ ಹಾಲ್‌ಗೆ ಸಾಗಿಸಲು ಲಿಫ್ಟ್ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಅಗತ್ಯ ಪೀಠೋಪಕರಣಗಳು ಇವೆ. ಕಾರ್ಯಕ್ರಮಗಳ ಆಯೋಜನೆಗಾಗಿ ಸಭಾಂಗಣ, ಎಲ್‌ಇಡಿ ವ್ಯವಸ್ಥೆ ಈ ಶಾಲೆಯ ವಿಶೇಷತೆ.

ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಾರ್ವಜನಿಕ ಕ್ಷೇತ್ರಗಳ ಮೂಲ ಸೌಕರ್ಯ ಅಭಿವೃದ್ಧಿಗೆ ರೊನಾಲ್ಡ್ ಅವರು ನಿರಂತರ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಸರ್ಕಾರಿ ಶಾಲೆಗಳ ಅಭಿವೃದ್ಧಿ ದೃಷ್ಟಿಯಿಂದ ದಾನಿಗಳ ಸೇವಾ ಕಾರ್ಯ ಮತ್ತು ದೂರದೃಷ್ಟಿ ನಡೆಯನ್ನು ಶಾಲೆ ಶಿಕ್ಷಕರು ಶ್ಲಾಘಿಸಿದ್ದಾರೆ.

ಈ ಮೊದಲು 2019ರಲ್ಲಿ ಬೆಂಗಳೂರು ನಗರದ ನವರತ್ನ ಅಗ್ರಹಾರದಲ್ಲಿರುವ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಆಧುನಿಕ ಕಟ್ಟಡ ನಿರ್ಮಾಣಕ್ಕೆ ರೊನಾಲ್ಡ್ ಕೊಲಾಸೊ ಅವರು ₹4 ಕೋಟಿ ದೇಣಿಗೆ ನೀಡಿದ್ದರು. ಆ ಶಾಲೆಯೂ ಅಭಿವೃದ್ಧಿಯಾಗಿ ರಾಜ್ಯದ ಜನರ ಗಮನವನ್ನು ಸೆಳೆದಿತ್ತು.

ಮುಖ್ಯಾಂಶಗಳು

- ₹3.50 ಕೋಟಿ ವೆಚ್ಚದಲ್ಲಿ ಮಾದರಿ ಶಾಲೆ
- ವಿದ್ಯಾರ್ಥಿ, ಪೋಷಕರಿಗೆ ಆಕರ್ಷಣೆ
- ಸುಸಜ್ಜಿತ ಕಟ್ಟಡದಲ್ಲಿ ಹಲವು ಸೌಲಭ್ಯ



ಪುನರ್ ನಿರ್ಮಾಣಗೊಂಡಿರುವ ದೇವನಹಳ್ಳಿ ತಾಲ್ಲೂಕಿನ ಕೆಂಪತಿಮ್ಮನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ನೋಟ

ಗ್ರಾಮೀಣರಿಗೂ ಗುಣಮಟ್ಟದ ಶಿಕ್ಷಣ



ಸರ್ಕಾರಿ ಶಾಲೆಯಲ್ಲಿ ಕಲಿಯುವ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಮತ್ತು ಉತ್ತಮ ಸೌಲಭ್ಯ ಸಿಗಬೇಕು. ವಿಶೇಷವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಯಾವುದೇ ಮೂಲ ಸೌಕರ್ಯ ಕೊರತೆಯಿಂದ ಹಿಂದುಳಿಯಬಾರದು ಎಂಬ ಉದ್ದೇಶದಿಂದ ಕೆಂಪತಿಮ್ಮನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಅಭಿವೃದ್ಧಿಗೊಳಿಸಲಾಗಿದೆ. ಪ್ರಾಥಮಿಕ ಹಂತದಲ್ಲೇ ಉತ್ತಮ ಕಲಿಕಾ ವಾತಾವರಣ ಸಿಕ್ಕರೆ ಮಕ್ಕಳ ಭವಿಷ್ಯಕ್ಕೆ ನೆರವಾಗಲಿದೆ.

ರೊನಾಲ್ಡ್ ಕೊಲಾಸೊ, ಉದ್ಯಮಿ

'ನಿಮ್ಮದು ಗೋಡ್ಸೆ ಸಂತತಿಯೋ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಮ್ಮದು ಗೋಡ್ಸೆ ಸಂತತಿ ಹೌದೊ, ಅಲ್ಲವೊ ಮೊದಲು ಸ್ಪಷ್ಟಪಡಿಸಿ. ಕನಿಷ್ಠ ಪಕ್ಷ ಗೋಡ್ಸೆ ಈ ದೇಶದ ಮೊಟ್ಟ ಮೊದಲ ಭಯೋತ್ಪಾದಕ ಎಂದು ಬಹಿರಂಗವಾಗಿ ಹೇಳುವ ಧೈರ್ಯವಾದರೂ ಇದೆಯೇ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿಯನ್ನು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಪ್ರಶ್ನಿಸಿದ್ದಾರೆ.



ಬಿ.ಕೆ. ಹರಿಪ್ರಸಾದ್

'ಎಕ್ಸ್' ಮಾಡಿರುವ ಅವರು, 'ಕೇಂದ್ರ ಸಚಿವ ಸ್ಥಾನ ಉಳಿಸಿಕೊಳ್ಳುವ ಒದ್ದಾಟ, ತೊಳಲಾಟದಲ್ಲಿ ಸಂಘವನ್ನೋ, ನರೇಂದ್ರ ಮೋದಿಯನ್ನೋ ಓಲೈಸುತ್ತಿರುವ ಪ್ರಲ್ಹಾದ ಜೋಶಿಯವರೇ, ಹೌದು ಕಾಂಗ್ರೆಸ್ ಪಕ್ಷ ಗಾಂಧಿಯ ತತ್ವಾದರ್ಶಗಳನ್ನು ನಂಬಿಯೇ ರಾಜಕೀಯ ಮಾಡಿದ್ದೇವೆ, ಮುಂದೆಯೂ ಮಾಡುತ್ತೇವೆ' ಎಂದಿದ್ದಾರೆ.

'ಗೋವು, ಪಾಕಿಸ್ತಾನ, ಧರ್ಮದ ಹೆಸರಿನ ಧ್ರುವೀಕರಣವಿಲ್ಲದೆ ಬಿಜೆಪಿ ಒಂದಾದರೂ ಸಾರ್ವತ್ರಿಕ ಚುನಾವಣೆಯನ್ನಾದರೂ ಗೆದ್ದ ಉದಾಹರಣೆ ತೋರಿಸಿ. ಚುನಾವಣೆ ಬಂದಾಗಲೆಲ್ಲಾ ಗೋವು, ಧರ್ಮ, ಪಾಕಿಸ್ತಾನ ನೆನಪಾಗುತ್ತದೆ. ಆದರೆ, ಗೋಮಾಂಸ ರಫ್ತಿನಲ್ಲಿ ಭಾರತ ವಿಶ್ವದಲ್ಲೇ ನಂಬರ್ ಒಂದು, ಎರಡರಲ್ಲಿ ಸ್ಪರ್ಧೆ ಮಾಡುತ್ತಿರುವುದರ ಬಗ್ಗೆ ಮಾತ್ರ ಮೌನ ಯಾಕೆ' ಎಂದು ಪ್ರಶ್ನಿಸಿದ್ದಾರೆ.

'ದನ ಕೊಂದವರು ಜೈಲಲ್ಲಿದ್ದಾರೆ, ಮನುಷ್ಯರನ್ನು ಕೊಂದವರು ಅಧಿಕಾರದಲ್ಲಿ ಇದ್ದಾರೆಂದು ನಾನು ಹೇಳಿದ್ದ ಮಾತಿಗೆ ನೀವು ಇಷ್ಟೊಂದು ತಲ್ಲಣಗೊಳ್ಳುವುದೇಕೆ? 2002ರ ಗೋಧ್ರಾ ಹಿಂಸಾಚಾರದ ಬಳಿಕ 'ರಾಜಧರ್ಮ ಪಾಲಿಸಿ' ಎಂದು ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಸಾರ್ವಜನಿಕವಾಗಿ ಹೇಳಿದ್ದು ಯಾರಿಗೆ? ಆ ನೆನಪು ಕಾಡುತ್ತಿದೆಯೇ? ಅಥವಾ ಸೋಹ್ರಾಬುದ್ದೀನ್ ಕೊಲೆ ಪ್ರಕರಣದಲ್ಲಿ ಇಂದಿನ ಗೃಹ ಸಚಿವ ಅಮಿತ್ ಶಾ ನ್ಯಾಯಾಲದಿಂದಲೇ ಗಡಿಪಾರದ ನೆನಪು ಕಾಡುತ್ತಿದ್ದೆಯೇ? ಅಥವಾ ಬಿಹಾರದ ಬಿಜೆಪಿ ಮುಖ್ಯಮಂತ್ರಿಯ ಮೇಲಿರುವ ಗಂಭೀರ ಕೊಲೆ ಪ್ರಕರಣಗಳು ಕಾಡುತ್ತಿದೆಯೇ' ಎಂದೂ ಕೇಳಿದ್ದಾರೆ.

ಆರ್‌ಎಸ್‌ಎಸ್ ವಿರುದ್ಧ ಆರೋಪ: ಕ್ರಿಮಿನಲ್ ಪ್ರಕರಣ ದಾಖಲಿಸಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಿರ್ದೇಶನ

ಪ್ರಿಯಾಂಕ್, ನಲಪಾಡ್‌ಗೆ ಸಮನ್ಸ್ ಜಾರಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಘನತೆಗೆ ಹಾನಿ ಉಂಟು ಮಾಡುವ ಮಾತುಗಳನ್ನು ಆಡಿದ ಆರೋಪಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಯುವ ಕಾಂಗ್ರೆಸ್ ಮುಖಂಡ ಮೊಹಮದ್ ನಲಪಾಡ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಈ ಸಂಬಂಧ ಆರ್‌ಎಸ್‌ಎಸ್‌ನ ಸ್ವಯಂಸೇವಕರೂ ಆದ ಬೆಂಗಳೂರಿನ ಎ. ತೇಜಸ್ ಸಲ್ಲಿಸಿದ್ದ ಖಾಸಗಿ ದೂರನ್ನು ಸಂಜ್ಞೇಯ ಅಪರಾಧಗಳಡಿ ಪರಿಗಣಿಸಿರುವ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನ್ಯಾಯಾಧೀಶ ಸಂದೀಪ್ ಪಾಟೀಲ್, ಇಬ್ಬರೂ ಆರೋಪಿಗಳ ವಿರುದ್ಧ ಕ್ರಿಮಿನಲ್ ಪ್ರಕರಣದ ಸಂಖ್ಯೆ ನಮೂದಿಸಿ ಸಮನ್ಸ್ ಜಾರಿಗೊಳಿಸಲು ತಮ್ಮ ಕಚೇರಿಗೆ ನಿರ್ದೇಶಿಸಿದೆ. ವಿಚಾರಣೆಯನ್ನು ಜುಲೈ 21ಕ್ಕೆ ಮುಂದೂಡಲಾಗಿದೆ.



ಪ್ರಿಯಾಂಕ್ ಖರ್ಗೆ



ಮೊಹಮದ್ ನಲಪಾಡ್

ದೂರಿನಲ್ಲಿ ಏನಿದೆ?: ಪ್ರಿಯಾಂಕ್ ಖರ್ಗೆ 2025ರ ಅಕ್ಟೋಬರ್ 4ರಂದು ಮುಖ್ಯಮಂತ್ರಿಗಳಿಗೆ ಪತ್ರವೊಂದನ್ನು ಬರೆದು, 'ಸಂಘದವರು ಸಮಾಜದಲ್ಲಿ ಭಯದ ವಾತಾವರಣ ಉಂಟು ಮಾಡುತ್ತಾರೆ. ಮಕ್ಕಳು ಮತ್ತು ಯುವಕರಲ್ಲಿ ನಕಾರಾತ್ಮಕ ಶಕ್ತಿ ತುಂಬುತ್ತಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಚಟುವಟಿಕೆಗಳ ಮೇಲೆ ನಿರ್ಬಂಧ ಹೇರಬೇಕು. ಸರ್ಕಾರಿ ಶಾಲೆ, ಸರ್ಕಾರಿ ಜಾಗ, ಮೈದಾನಗಳಲ್ಲಿ ಯಾವುದೇ ರೀತಿಯ ಸಂಘದ ಬೈಠಕ್ ಮತ್ತು ಇತರೆ ಚಟುವಟಿಕೆಗಳನ್ನು ಮಾಡದಂತೆ ನಿರ್ಬಂಧಿಸಬೇಕು ಎಂಬ ಒಕ್ಕಣೆಯ ಪತ್ರವನ್ನು ತಮ್ಮ ಅಧಿಕೃತ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿರುತ್ತಾರೆ' ಎಂದು ತೇಜಸ್ ದೂರಿನಲ್ಲಿ ಆರೋಪಿಸಿದ್ದಾರೆ.

ತಮ್ಮ ಟ್ವಿಟರ್ ಖಾತೆಯಲ್ಲಿ 2025ರ ಅಕ್ಟೋಬರ್ 13ರಂದು ಮತ್ತೊಂದು ಪೋಸ್ಟ್ ಹಂಚಿಕೊಂಡಿರುವ ಪ್ರಿಯಾಂಕ್, 'ನಿಮ್ಮ ಕುಟುಂಬದಲ್ಲಿನ ತಂದೆ, ಸಹೋದರ ಮತ್ತು ಮಗ ಯಾರೇ ಆಗಲಿ ಯಾವತ್ತೂ ಸ್ವಯಂಸೇವಕರ ಸ್ನೇಹಿತರಾಗಲು ಹೋಗಬೇಡಿ. ಯಾಕೆಂದರೆ, ಅವರು ನಿಮ್ಮನ್ನು ಲೈಂಗಿಕವಾಗಿ ಶೋಷಿಸಬಲ್ಲ ವಿಷಪೂರಿತ ಮತ್ತು ದುರುಪಯೋಗ ಮಾಡಿಕೊಳ್ಳುವ ಜನ' ಎಂದು ಹೇಳಿರುತ್ತಾರೆ.

ಪುನಃ 2025ರ ಅಕ್ಟೋಬರ್ 14ರಂದು ಮತ್ತೊಂದು ಪೋಸ್ಟ್ ಮಾಡಿ, 'ಗಾಂಧೀಜಿ ಮತ್ತು ಅಂಬೇಡ್ಕರ್ ಅವರನ್ನೇ ಸಹಿಸಿಕೊಳ್ಳದ ಆರ್‌ಎಸ್‌ಎಸ್‌ನವರು ನನ್ನನ್ನು ಬಿಟ್ಟಾರೆಯೇ? ಇದು ಕೇವಲ ಆರಂಭ ಮಾತ್ರ ಎಂದಿದ್ದರು' ಎಂದು ದೂರಿದ್ದಾರೆ.

ಯುವ ಕಾಂಗ್ರೆಸ್ ಮುಖಂಡ ಮೊಹಮದ್ ನಲಪಾಡ್ ಯೂ ಟ್ಯೂಬ್ ಚಾನಲ್‌ನಲ್ಲಿ ಮಾತನಾಡುತ್ತಾ, 'ಆರ್‌ಎಸ್‌ಎಸ್‌ನವರ ಚಡ್ಡಿ ಒಳಗಡೆ ಏನೂ ಇಲ್ಲ ಎಂದು ಹೇಳಿರುವ ವಿಡಿಯೋ ವೈರಲ್ ಆಗಿದೆ' ಎಂದು ತೇಜಸ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಶಾಸಕ ದಿನೇಶ್ ಗುಂಡೂರಾವ್ ತಮ್ಮ ಎಕ್ಸ್‌ನಲ್ಲಿ, 'ಆರ್‌ಎಸ್‌ಎಸ್‌ನವರು ಗಾಂಧಿ ಕೊಂದ ಗೋಡ್ಸೆ ಪರ ನಿಂತಿರುತ್ತಾರೆ. ಗೌರಿ ಲಂಕೇಶ್, ಗೋವಿಂದ ಪಾನ್ಸರೆ ಮತ್ತು ಎಂ.ಎಂ.ಕಲಬುರ್ಗಿ ಅವರ ಹತ್ಯೆಯಲ್ಲಿ ಏಕೆ ನೇರವಾಗಿ ಭಾಗಿಯಾಗುತ್ತಾರೆ? ಅವರದು ತಾಲಿಬಾನ್ ಮನಸ್ಥಿತಿ ಅಲ್ಲವೇ ಎಂದು ಪ್ರಶ್ನಿಸಿದ್ದರು' ಎಂದು ತೇಜಸ್ ದೂರಿನಲ್ಲಿ ವಿವರಿಸಿದ್ದರು.

'ಈ ಮೂವರೂ ಆರೋಪಿಗಳ ತಮ್ಮ ಮಾತು ಮತ್ತು ಹೇಳಿಕೆಯನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುವ ಮೂಲಕ ಲಕ್ಷಾಂತರ ಸ್ವಯಂಸೇವಕರ ಭಾವನೆಗಳಿಗೆ ಘಾಸಿ ಉಂಟು ಮಾಡಿದ್ದಾರೆ. ಆರ್‌ಎಸ್‌ಎಸ್‌ನ ಮಾನಹಾನಿ ಮಾಡಲಾಗಿದೆ. ಆದ್ದರಿಂದ, ಸೂಕ್ತ ಕಾನೂನು ಕ್ರಮ ಜರುಗಿಸಬೇಕು' ಎಂದು ಕೋರಿದ್ದರು.

ದೂರುದಾರರ ಆಪಾದನೆಗಳನ್ನು ವಿಚಾರಣೆಗೆ ಯೋಗ್ಯವಾಗಿವೆ ಎಂದು ತೀರ್ಮಾನಿಸಿರುವ ನ್ಯಾಯಾಲಯ ಪ್ರಿಯಾಂಕ್ ಖರ್ಗೆ ಮತ್ತು ಮೊಹಮದ್ ನಲಪಾಡ್ ವಿರುದ್ಧ; ಭಾರತೀಯ ನ್ಯಾಯ ಸಂಹಿತಾ–2023ರ ಕಲಂ 356 (ಕ್ರಿಮಿನಲ್ ಮಾನನಷ್ಟ) ಅಪರಾಧಿಕ ಕೃತ್ಯದ ಆರೋಪದಡಿ ಪ್ರಕರಣ ದಾಖಲಿಸಲು ತಮ್ಮ ಕೋರ್ಟ್ ಕಚೇರಿಗೆ ನಿರ್ದೇಶಿಸಿದೆ. ದಿನೇಶ್ ಗುಂಡೂರಾವ್ ಅವರನ್ನು ಆರೋಪಿಯನ್ನಾಗಿ ಪರಿಗಣಿಸದೆ ಕೈಬಿಡಲಾಗಿದೆ.

ಜೂನ್‌ನಲ್ಲಿ ಶೇ 42ರಷ್ಟು ಮಳೆ ಕೊರತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಜೂನ್ ತಿಂಗಳಲ್ಲಿ ಕೇವಲ 9.2 ಸೆಂ.ಮೀ. ಮಳೆ ಆಗಿದ್ದು, ಜೂನ್ 29ರವರೆಗೆ ಶೇ 42ರಷ್ಟು ಕೊರತೆ ಆಗಿದೆ. ಇದು ಕಳೆದ 126 ವರ್ಷಗಳಲ್ಲಿ ಮೂರನೇ ಅತ್ಯಂತ ಕನಿಷ್ಠ ಮಟ್ಟದ ಮಳೆ ಆಗಿದೆ ಎಂದು ಅಂದಾಜಿಸಲಾಗಿದೆ.

'1901ರಿಂದ ಈಚೆಗೆ ಜೂನ್ ತಿಂಗಳಲ್ಲಿ ಮಳೆ ಪ್ರಮಾಣವು 10 ಸೆಂ.ಮೀ.ಗಿಂತ ಕಡಿಮೆ ಆಗಿದ್ದುದು ನಾಲ್ಕು ವರ್ಷಗಳಲ್ಲಿ ಮಾತ್ರ. 2009ರಲ್ಲಿ ದೇಶದಲ್ಲಿ 8.7 ಸೆಂ.ಮೀ, 1905ರಲ್ಲಿ 9.2 ಸೆಂ.ಮೀ ಹಾಗೂ 2014ರಲ್ಲಿ 9.3 ಸೆಂ.ಮೀ. ಮಳೆ ಆಗಿದೆ. ದೀರ್ಘಾವಧಿಯಲ್ಲಿ ಜೂನ್‌ನಲ್ಲಿ ಸರಾಸರಿ 16.5 ಸೆಂ.ಮೀ. ವಾಡಿಕೆ ಮಳೆ ಇದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

ಈ ವರ್ಷ ನೈರುತ್ಯ ಮುಂಗಾರು ತಡವಾಗಿ ಪ್ರವೇಶಿಸಿದ್ದು, ಬಳಿಕ 11 ದಿನ ಸ್ಥಗಿತಗೊಂಡಿತ್ತು. ಕೃಷಿ ಭೂಮಿ ವ್ಯಾಪಕವಾಗಿರುವ ಉತ್ತರ ಪ್ರದೇಶ, ಮಧ್ಯ ಪ್ರದೇಶ ಮತ್ತು ಗುಜರಾತ್‌ನ ಹಲವು ಭಾಗಗಳಿಗೆ ಈವರೆಗೆ ನೈರುತ್ಯ ಮುಂಗಾರು ಪ್ರವೇಶಿಸಿಲ್ಲ. ಮಹಾರಾಷ್ಟ್ರ, ಒಡಿಶಾ, ಬಿಹಾರ, ಛತ್ತೀಸಗಢ ಮತ್ತು ತೆಲಂಗಾಣ ರಾಜ್ಯಗಳಿಗೆ ಮುಂಗಾರು ಪ್ರವೇಶಿಸಿದ್ದರೂ ಮಳೆ ಪ್ರಮಾಣ ತೀವ್ರ ಕಡಿಮೆ ಇದೆ.

'ದೇಶದ ರಾಜಧಾನಿ ದೆಹಲಿಗೆ ಜೂನ್ 27ಕ್ಕೆ ಮುಂಗಾರು ಪ್ರವೇಶಿಸಬೇಕಿತ್ತಾದರೂ, ಜುಲೈ ಮೊದಲ ವಾರಕ್ಕೆ ಪ್ರವೇಶಿಸಲಿದೆ ಎಂದು ಅಂದಾಜಿಸಲಾಗಿದೆ. ಹಾಗಿದ್ದರೂ ಅದು ಹೆಚ್ಚು ಕಾಲ ಇರುವುದಿಲ್ಲ' ಎಂದು ಹವಾಮಾನ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

'ಈಗಾಗಲೇ ಮುಂಗಾರು ಪ್ರವೇಶಿಸಿದ ರಾಜ್ಯಗಳಲ್ಲಿ ಮಳೆ ಪ್ರಮಾಣ ಚೆನ್ನಾಗಿಯೇ ಇದೆ. ಕಳೆದ ವರ್ಷ ಹೆಚ್ಚಿನ ಮಳೆ ಆದ ಪರಿಣಾಮ ಅಂತರ್ಜಲ ಮತ್ತು ಜಲಾಶಯಗಳ ನೀರಿನ ಮಟ್ಟದಲ್ಲಿ ತೀವ್ರ ಕುಸಿತವೂ ಕಂಡುಬಂದಿಲ್ಲ' ಎಂದು ಹವಾಮಾನ ಇಲಾಖೆ ಮಾಜಿ ಮಹಾನಿರ್ದೇಶಕ ಕೆ.ಜೆ. ರಮೇಶ ಅಭಿಪ್ರಾಯಪಟ್ಟಿದ್ದಾರೆ.

ಮಣಿಪುರ: ಅಗತ್ಯ ವಸ್ತುಗಳ ಮುಕ್ತ ಸಾಗಣೆಗೆ ಕ್ರಮ: ಒತ್ತಾಯ

ಮಣಿಪುರ(ಪಿಟಿಐ): ರಾಜ್ಯದಲ್ಲಿನ ರಾಷ್ಟ್ರೀಯ ಹೆದ್ದಾರಿಗಳಲ್ಲಿರುವ ಅನಧಿಕೃತ ತಪಾಸಣಾ ಕೇಂದ್ರಗಳ ತೆರವಿಗೆ ನೀಡಿದ್ದ 48 ಗಂಟೆಗಳ ಗಡುವು ಕೊನೆಗೊಂಡಿದೆ. ಅಗತ್ಯ ವಸ್ತುಗಳ ಸುಗಮ ಸಾಗಣೆ ಖಾತ್ರಿಪಡಿಸಲು ಪ್ರಯತ್ನ ನಡೆಸಿದ ವೇಳೆ ಏನಾದರೂ ಅಹಿತಕರ ಘಟನೆಗಳು ಸಂಭವಿಸಿದಲ್ಲಿ ತನ್ನನ್ನು ಹೊಣೆ ಮಾಡಬಾರದು ಎಂದು ಕಾಂಗ್‌ಪೋಕ್ಪಿ ಜಿಲ್ಲೆಯ ಕುಕಿ–ಜೋ ಸಂಘಟನೆಯೊಂದು ಸೋಮವಾರ ಎಚ್ಚರಿಸಿದೆ.

ಈ ಕುರಿತು 'ಕಮಿಟಿ ಆನ್ ಟ್ರೈಬಲ್ ಯುನಿಟಿ'(ಸಿಒಟಿಯು) ಪ್ರಕಟಣೆ ನೀಡಿದ್ದು,'ಗಡುವಿನ ಒಳಗಾಗಿ, ರಾಷ್ಟ್ರೀಯ ಹೆದ್ದಾರಿ–2ರ ಮೂಲಕ ವೈದ್ಯಕೀಯ ಸಾಮಗ್ರಿಗಳು ಸೇರಿ ಅಗತ್ಯ ವಸ್ತುಗಳ ಮುಕ್ತ ಸಾಗಾಣಿಕೆ ಪುನರ್ ಆರಂಭಗೊಳ್ಳುವುದನ್ನು ಖಾತ್ರಿಪಡಿಸುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ' ಎಂದು ದೂರಿದೆ. ರಾಷ್ಟ್ರೀಯ ಹೆದ್ದಾರಿ–2 ಹಾಗೂ ರಾಷ್ಟ್ರೀಯ ಹೆದ್ದಾರಿ–37ರಲ್ಲಿ ವಾಹನಗಳ ಸಂಚಾರಕ್ಕೆ ಉಂಟಾಗಿರುವ ಅಡ್ಡಿಯಿಂದಾಗಿ, ಕುಕಿ–ಜೋ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಜಿಲ್ಲೆಯಲ್ಲಿ ಅಗತ್ಯ ವಸ್ತುಗಳ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಅವುಗಳ ಬೆಲೆಯಲ್ಲಿ ಭಾರಿ ಹೆಚ್ಚಳವಾಗಿದೆ ಎಂದು ದೂರಿದ್ದ ಸಿಒಟಿಯು, ಅಗತ್ಯ ವಸ್ತುಗಳ ಸಾಗಣೆಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಜೂನ್ 27ರಂದು ಈ ಗಡುವು ನೀಡಿತ್ತು.

ಮೇ 13ರಂದು 6 ನಾಗಾ ಜನರನ್ನು ಅಪಹರಿಸಲಾಗಿತ್ತು. ಇದನ್ನು ಪ್ರತಿಭಟಿಸಿ, ನಾಗಾ ಸಂಘಟನೆಗಳು ಜಿಲ್ಲೆ ಮತ್ತು ಅದಕ್ಕೆ ಹೊಂದಿಕೊಂಡ ಪ್ರದೇಶಗಳಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸಿದ್ದವು.

ನಿವೃತ್ತ ರಾಜತಾಂತ್ರಿಕರ ಮಾತುಕತೆ ವಿಶೇಷವಲ್ಲ: ಮಿಸ್ರಿ

ನವದೆಹಲಿ (ಪಿಟಿಐ): 'ಭಾರತ ಹಾಗೂ ಪಾಕಿಸ್ತಾನ ನಡುವಿನ ಬಾಂಧವ್ಯದ ಕುರಿತು ಹೊರದೇಶಗಳಲ್ಲಿ ನಿವೃತ್ತ ರಾಜತಾಂತ್ರಿಕರು ಹಾಗೂ ಸೇನಾ ಅಧಿಕಾರಿಗಳ ಭಾಗವಹಿಸುವ ಸಭೆಯು ಅವರ ವೈಯಕ್ತಿಕ ಸಾಮರ್ಥ್ಯದಲ್ಲಿ ನಡೆಯುತ್ತವೆ. ಭಾರತವು ಇಂತಹ ಚರ್ಚೆಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ' ಎಂದು ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಹೇಳಿದ್ದಾರೆ.

ಪ್ರಾದೇಶಿಕ ಭದ್ರತೆ ಕುರಿತಂತೆ ಕೊಲಂಬೊದಲ್ಲಿ ಕಳೆದ ವಾರ ಎರಡನೇ ಹಂತದ ಮಾತುಕತೆ ನಡೆದಿತ್ತು, ಇದರಲ್ಲಿ ಭಾರತ– ಪಾಕಿಸ್ತಾನದ ನಿವೃತ್ತ ಸೇನಾಧಿಕಾರಿಗಳು, ರಾಜತಾಂತ್ರಿಕ ಅಧಿಕಾರಿಗಳು ಹಾಗೂ ರಾಜಕಾರಣಿಗಳು ಭಾಗವಹಿಸಿದ್ದರು.

'ವೈವಿಧ್ಯ ವಿಚಾರಗಳ ಕುರಿತಂತೆ ಜಗತ್ತಿನ ಹಲವು ಕಡೆಗಳಲ್ಲಿ ಡಜನ್‌ಗೂ ಅಧಿಕ ಸಭೆಗಳು ನಡೆಯುತ್ತಿರುತ್ತವೆ. ಭಾಗವಹಿಸುವ ನಿವೃತ್ತ ಅಧಿಕಾರಿಗಳು, ನಾಗರಿಕ ಸಂಘಟನೆಗಳ ಪ್ರತಿನಿಧಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇದರಲ್ಲಿ ಹೊಸತೇನೂ ಇಲ್ಲ, ವಿಶೇಷವೂ ಇಲ್ಲ' ಎಂದು ಸೆಷೆಲ್ಸ್‌ನ ವಿಕ್ಟೋರಿಯದಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ.

'ನಮಗೆ ತಿಳಿದ ಪ್ರಕಾರ ಖಾಸಗಿ ವ್ಯಕ್ತಿಗಳು ಸೇರಿ ಖಾಸಗಿ ಕಾರ್ಯಕ್ರಮ ನಡೆಸಿದ್ದಾರೆ. ಇದು ಅಧಿಕೃತ ಕಾರ್ಯಕ್ರಮವಲ್ಲ' ಎಂದು ಮಿಸ್ರಿ ಸ್ಪಷ್ಟನೆ ನೀಡಿದ್ದಾರೆ.

'ಪಾಕಿಸ್ತಾನಕ್ಕೆ ಸಂಬಂಧಿಸಿದಂತೆ ಸ್ಪಷ್ಟವಾಗಿ ನಾನು ಮಾತನಾಡಲು ಸಾಧ್ಯವಿಲ್ಲ. ಭಾರತದ ಪ್ರಕಾರ, ಇದರಲ್ಲಿ ಯಾರೂ ಅಧಿಕೃತವಾಗಿ ಭಾಗಿಯಾಗಿಲ್ಲ. ಇಂತಹ ಕಾರ್ಯಕ್ರಮಗಳಿಗೆ ಅಧಿಕೃತವಾಗಿ ಬೆಂಬಲ ನೀಡುವುದಿಲ್ಲ' ಎಂದು ಹೇಳಿದ್ದಾರೆ.

ಜಾರ್ಖಂಡ್: ಸಿಡಿಲು ಬಡಿದು ಆರು ಸಾವು

ರಾಂಚಿ (ಪಿಟಿಐ): 24 ಗಂಟೆಗಳಲ್ಲಿ ಜಾರ್ಖಂಡ್‌ನ ನಾಲ್ಕು ಜಿಲ್ಲೆಗಳಲ್ಲಿ ಸಿಡಿಲು ಬಡಿದು ಆರು ಮಂದಿ ಮೃತಪಟ್ಟಿದ್ದಾರೆ ಎಂದು ಸೋಮವಾರ ಪೊಲೀಸರು ತಿಳಿಸಿದ್ದಾರೆ. ರಾಂಚಿ ಮತ್ತು ಗಢ್ವಾ ಜಿಲ್ಲೆಗಳಲ್ಲಿ ಇಬ್ಬರು ಮೃತಪಟ್ಟಿದ್ದು, ಗುಮ್ಲಾ ಹಾಗೂ ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಗಳಲ್ಲಿ ಒಬ್ಬರು ಸಾವನ್ನಪ್ಪಿದ್ದಾರೆ.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_JEETO_X_7_16
YOM – 2023
Reg No – KA11C5574
2) CB_TIPPER_LPK_912_TATA
YOM – 2023
Reg No – KA19AE3386
3) CB_TATA_INTRA_V_20
YOM – -
Reg No – KA04AD5310
4) CB_TATA_INTRA_V50
YOM – 2023
Reg No – KA19AE4712
5) CB_TATA_ACE_GOLD
YOM – -
Reg No – KA19AE5487
6) TATA MOTORS LTD. – CB _LPT_3718
YOM – 2018
Reg No – KA52A6735
7) CB_BACKHOELOADER _770_NXE_CASE
YOM – -
Reg No – KA53ML7832
8) CB_Ashok Leyland Dost GOODS
YOM – 2023
Reg No – KA41D7856
9) CB_AL_UE2825T_TIPPER_BSVI
YOM – 2024
Reg No – KA32AB1048
10) CB_EICHER PRO 6037 S CAB AND CHASSIS BS3 EICHER VE
YOM – 2018
Reg No – KA29B6694

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 30.06.2026
(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD., 22, MG ROAD, BANGALORE KARNATAKA – 560001
OR
Contact: Arunlaxman Kokare
Kotak Mahindra Bank Ltd.
Contact / 080 - 61564249

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ
(ಕರ್ನಾಟಕ ಸರ್ಕಾರದ ಅಧೀನಕೊಳ್ಳಪಟ್ಟಿದೆ)
ಕೌಶಲ್ಯ ಭವನ, 3ನೇ ಮಹಡಿ, ಡೈರಿ ಸರ್ಕಲ್, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು–560 029.
ದೂ.ಸಂಖ್ಯೆ:080–29522222. e-mail ID: skilldev.2017@gmail.com
ಕೌಶಲ್ಯ ಕರ್ನಾಟಕ

File No. KSDC/CMKKY/ILC-FS/CR-008/2026-27 ದಿನಾಂಕ:29.06.2026

ಆಸಕ್ತಿ ವ್ಯಕ್ತಪಡಿಸುವಿಕೆ (EXPRESSION OF INTEREST)

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ಕರ್ನಾಟಕ ರಾಜ್ಯದಲ್ಲಿ 2026–27ನೇ ಸಾಲಿನಲ್ಲಿ CMKKY ಯೋಜನೆಯ ILC-Future Skills ಅಡಿಯಲ್ಲಿ ಲೆಟರ್ ಆಫ್ ಇಂಟೆಂಟ್ (LOI) ಆಧಾರಿತ ತರಬೇತಿ ಮತ್ತು ಉದ್ಯೋಗ ನಿಯುಕ್ತಿಗೊಳಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆಸಕ್ತಿವುಳ್ಳ ಕೈಗಾರಿಕೆಗಳು / ಕೈಗಾರಿಕಾ ಮಾನ್ಯತೆ ಹೊಂದಿರುವ ಸಂಸ್ಥೆಗಳು / ಕೈಗಾರಿಕಾ ಸಂಘಗಳಿಂದ Expression of Interest (EOI) ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ. ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 13.07.2026, ಸಮಯ 17:30 ಗಂಟೆ. ಆಸಕ್ತಿವುಳ್ಳ ಕೈಗಾರಿಕೆಗಳು / ಕೈಗಾರಿಕಾ ಮಾನ್ಯತೆ ಹೊಂದಿರುವ ಸಂಸ್ಥೆಗಳು / ಕೈಗಾರಿಕಾ ಸಂಘಗಳು ತಮ್ಮ ಪ್ರಸ್ತಾವನೆಗಳನ್ನು ಸರ್ಕಾರದ Karnataka Public Procurement Portal (KPP ಪೋರ್ಟಲ್)ನಲ್ಲಿ ಸಲ್ಲಿಸಬಹುದು. ಸ್ಪಷ್ಟೀಕರಣ ಅಥವಾ ಹೆಚ್ಚಿನ ಮಾಹಿತಿಗಾಗಿ ಕೆಎಸ್‌ಡಿಸಿ ದೂರವಾಣಿ ಸಂಖ್ಯೆ: 080–2952 2222 ಕರೆ ಮಾಡಿ ಅಥವಾ **www.skillmission.karnataka.gov.in** ವೆಬ್‌ಸೈಟ್‌ಗೆ ಭೇಟಿ ನೀಡಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು–2
ಕೆ.ಎಸ್.ಡಿ.ಸಿ

ಡಿಐಪಿಆರ್/ಸಿಪಿ/1383/ಸಿಸಿಎಲ್/2026–27

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ ಸಾಮಾಜಿಕ ಅರಣ್ಯ ವಿಭಾಗ, ರಾಯಚೂರು

ಸಂಖ್ಯೆ:ಸಅಸಂ–ಸಾಅವಿರಾ– KPPP.ಪೋ.ಟೆಂಡರ– ಸಿಆರ್– /2026–27 ದಿನಾಂಕಃ 24–06–2026

ಸಂಕ್ಷಿಪ್ತ ಅಲ್ಪಾವಧಿ ಟೆಂಡರ ಪ್ರಕಟಣೆ

(KPPP ಎರಡನೇ ಆವೃತ್ತಿಯಲ್ಲಿನ ಪೋರ್ಟಲ್ ಮೂಲಕ)(ಮೂರನೇಯ ಬಾರಿಗೆ)

2026–27 ನೇ ಸಾಲಿನಲ್ಲಿ ರಾಯಚೂರು ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಗೆ ಒಳಪಡುವ ಎಲ್ಲಾ ವಲಯಗಳಲ್ಲಿ 2026–27 ನೇ ಸಾಲಿನಲ್ಲಿ ಪ್ರಾದೇಶಿಕ ಅರಣ್ಯ ವಿಭಾಗದಲ್ಲಿ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಕೆ.ಎಫ್.ಡಿ.ಎಫ್ ಫ್ಲೆಕ್ಸಿ ಫಂಡ್–132, ಯೋಜನೆಯಡಿಯ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಅರಣ್ಯೀಕರಣ ಕಾಮಗಾರಿಗಳಿಗಾಗಿ :http://kppp.karnataka.gov.in) ಪೋರ್ಟಲ್ ನಲ್ಲಿ ದಿನಾಂಕ:24–06–2026 ರಿಂದ ದಿನಾಂಕ:04–07–2026 ರವರೆಗೆ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ ಕರೆಯಲಾಗಿದೆ. ದಿನಾಂಕ:06–07–2026 ರಂದು ತಾಂತ್ರಿಕ ಬಿಡ್. ಆರ್ಥಿಕ ಬಿಡ್ ದಿನಾಂಕ:07–07–2026 ರಂದು ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕಛೇರಿಯ ನಾಮಫಲಕಕ್ಕೆ ಲಗತ್ತಿಸಿರುವ ಟೆಂಡರ ಪ್ರಕಟಣೆಯನ್ನು ಕಛೇರಿ ಸಮಯದಲ್ಲಿ ನೋಡಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಸಾಮಾಜಿಕ ಅರಣ್ಯ ವಿಭಾಗ, ರಾಯಚೂರು

DIP/RCR/136/KSMC&A/138/2026-27

ಕಲಬುರಗಿ ಮಹಾನಗರ ಪಾಲಿಕೆ
Fax No.08472/260776, Phone: 08472/ 278675 Email Id: itstaff_ulb_gulbarga@yahoo.com

ಸಂಖ್ಯೆಃಕಮಪಾ/ಆಶಾ/ಎಸ್.ಡಬ್ಲ್ಯೂ.ಎಂ./2026–27 ದಿನಾಂಕಃ 25.06.2026

:: ಟೆಂಡರ ಪ್ರಕಟಣೆ ::

ವಿಷಯ ಃ ಕಲಬುರಗಿ ಮಹಾನಗರ ಪಾಲಿಕೆ ಕಲಬುರಗಿಯಲ್ಲಿ ಈ ಕೆಳಗಿನ ಕಾಮಗಾರಿಗಳ ಟೆಂಡರ ಆಹ್ವಾನಿಸಲಾಗಿರುತ್ತದೆ.

1) **ಕಾಮಗಾರಿ ವಿವರ** : 1. ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ವಲಯ–1 ರಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ 2026–27ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಲೋಡರ್, ಚಾಲಕರು, ಚಾಲಕ ಕಮ್ ಆಪರೇಟರ್ ಮತ್ತು ಕ್ಲೀನರ್‌ಗಳ ಪೂರೈಸುವದು. ಇಂಡೆಂಟ ಸಂಖ್ಯೆಃ **DMA/2026-27/SE7626/CALL-2**, ಟೆಂಡರ್ ಮೊತ್ತ : **448.80 ಲಕ್ಷಗಳು**, ಇ.ಎಂ.ಡಿ. ಃ ರೂ. **6,73,198/-**

2. ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ವಲಯ–2 ರಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ 2026–27ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಲೋಡರ್, ಚಾಲಕರು, ಚಾಲಕ ಕಮ್ ಆಪರೇಟರ್ ಮತ್ತು ಕ್ಲೀನರ್‌ಗಳ ಪೂರೈಸುವದು. ಇಂಡೆಂಟ ಸಂಖ್ಯೆಃ **DMA/2026-27/SE7644/CALL-2**, ಟೆಂಡರ್ ಮೊತ್ತ : **431.26** ಲಕ್ಷಗಳು, ಇ.ಎಂ.ಡಿ. ಃ ರೂ. **6,46,881/-**

3. ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ವಲಯ–3 ರಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ 2026–27ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಲೋಡರ್, ಚಾಲಕರು, ಚಾಲಕ ಕಮ್ ಆಪರೇಟರ್ ಮತ್ತು ಕ್ಲೀನರ್‌ಗಳ ಪೂರೈಸುವದು. ಇಂಡೆಂಟ ಸಂಖ್ಯೆಃ **DMA/2026-27/SE7645/CALL-2,** ಟೆಂಡರ್ ಮೊತ್ತ : **431.66 ಲಕ್ಷಗಳು**, ಇ.ಎಂ.ಡಿ. ಃ ರೂ. **6,47,486/-**

4. ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಇನ್ನಿತರ ವಾಹನಗಳಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ 2026–27ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಲೋಡರ್, ಚಾಲಕರು, ಚಾಲಕ ಕಮ್ ಆಪರೇಟರ್ ಮತ್ತು ಕ್ಲೀನರ್‌ಗಳ ಪೂರೈಸುವದು. ಇಂಡೆಂಟ ಸಂಖ್ಯೆಃ **DMA/2026-27/SE7647/CALL-2,** ಟೆಂಡರ್ ಮೊತ್ತ : **312.96 ಲಕ್ಷಗಳು**, ಇ.ಎಂ.ಡಿ. ಃ ರೂ. **4,69,434/-,**

2) ಟೆಂಡರ ಸ್ಪಷ್ಟೀಕರಣ ಅಂತಿಮ ದಿನಾಂಕಃ **13.07.2026 ಸಮಯ ಃ ಮುಂಜಾನೆ 11:00 ಗಂಟೆಗೆ**, 3) ಟೆಂಡರ ಸಲ್ಲಿಸಲು ಅಂತಿಮ ದಿನಾಂಕಃ **14.07.2026 ಸಮಯ ಃ ಸಾಯಂಕಾಲ 4.00 ಗಂಟೆಗೆ**, 4) ತಾಂತ್ರಿಕ್ ಬಿಡ್ ತೆರೆಯುವ ದಿನಾಂಕ ಃ **15.07.2026 ಸಮಯ ಃ ಸಾಯಂಕಾಲ ಃ 4.30 ಗಂಟೆಗೆ**, 5) ಆರ್ಥಿಕ ಬಿಡ್ ತರೆಯುವ ದಿನಾಂಕಃ **16.07.2026 ಸಮಯ ಃ ಸಾಯಂಕಾಲ ಃ 5.00 ಗಂಟೆಗೆ**, 6) ಪ್ರಿ ಬಿಡ್ ಸಭೆ ವಿವರ ದಿನಾಂಕ ಃ **13.07.2026 ಸಮಯ ಃ ಬೆಳಿಗ್ಗೆ 11.00 ಗಂಟೆಗೆ** ಸ್ಥಳ ಃ ಕೋಣೆ ಸಂಖ್ಯೆಃ 28 ಕಲಬುರಗಿ ಮಹಾನಗರ ಪಾಲಿಕೆ ಕಲಬುರಗಿ ಟ್ಯಾಂಕ ಬಂಡ್ ರೋಡ, ಜಗತ್ತ ಕಲಬುರಗಿ–585101, 7) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ: ಸಹಾಯಕ ಕಾರ್ಯಪಾಲಕ ಅಭಿಯಂತರರು, (ಪರಿಸರ), ಕಲಬುರಗಿ ಮಹಾನಗರ ಪಾಲಿಕೆ ಕಲಬುರಗಿ. 8) ಅಂತರಜಾಲ ತಾಣದ ವಿಳಾಸ: **http://kppp.karnataka.gov.in**

ಸಹಿ/– ಕಾರ್ಯಪಾಲಕ ಅಭಿಯಂತರರು, (ಘ.ವ.ನಿ.)
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/270/ಕೆ.ಎಸ್.ಎಂ.ಸಿ.&ಎ/2026–27

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ, ದೂರವಾಣಿ : 08354–235042,
ಇ–ಮೇಲ್ : bgkeezpe@yahoo.com

ಸಂಖ್ಯೆ : ಪಂ.ರಾ.ಇಂ.ಇ./ಬಾಕೋ/ಹೊರ ಗುತ್ತಿಗೆ/2026–27/1096 ದಿನಾಂಕ : 29–06–2026

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
(ದ್ವಿ-ಲಕೋಟೆ ಪದ್ಧತಿಯಲ್ಲಿ)

2026–27ನೇ ಸಾಲಿಗೆ **ಬಾಗಲಕೋಟೆ ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ ಬಾಗಲಕೋಟೆ ಮತ್ತು ಉಪ ವಿಭಾಗ ಕಛೇರಿಗಳಲ್ಲಿ ಖಾಲಿ ಇರುವ (ವಾಹನ ಚಾಲಕ – 06 ಹಾಗೂ ಗ್ರೂಪ್ "ಡಿ" – 10 ಹುದ್ದೆಗಳು) ಹುದ್ದೆಗಳನ್ನು ಹೊರಸಂಪನ್ಮೂಲ ದಿಂದ ಪಡೆಯಲು ಸಂಸ್ಥೆಯನ್ನು ಆಯ್ಕೆ ಮಾಡಲು** ಕರ್ನಾಟಕ ಪಾರದರ್ಶಕ ಅಧಿನಿಯಮ 1999 ನಿಯಮಗಳು 2000 ರ ಮೇರೆಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ **ವಿಳಾಸ : http://kppp.karnataka.gov.in** ರಲ್ಲಿ ಪರಿಶೀಲಿಸಿ ಸೂಕ್ತ ದಾಖಲೆಗಳೊಂದಿಗೆ ಇ–ಟೆಂಡರ್ ಸಲ್ಲಿಸಬಹುದು. ಪೋರ್ಟಲ್‌ನಲ್ಲಿ ಕಾಣಿಸಿದ ನಿಬಂಧನೆಗಳು ಟೆಂಡರ್ ಇ.ಎಂ.ಡಿ. ಮೊತ್ತ ಹಾಗೂ ಇತರೆ ವಿವರಗಳನ್ನು ಗಮನಿಸಿ ಕ್ರಮವಹಿಸುವುದು. ವಿವರ ಈ ಕೆಳಕಂಡತೆ ಇರುತ್ತದೆ.

ಕ್ರ ಸಂ.	ವಿಷಯ	ದಿನಾಂಕ
01	ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ/ ದಸ್ತಾವೇಜನ್ನು ಡೌನ್‌ಲೋಡ್ ದಿನಾಂಕ	29–06–2026
02	ಇ–ಟೆಂಡರ್ ಮೊತ್ತ	ರೂ. 65,00,277/–, (ರೂಪಾಯಿ ಅರವತ್ತೈದು ಲಕ್ಷ ಎರಡು ನೂರ ಎಪ್ಪತ್ತೇಳು ಮಾತ್ರ).
03	ಇ–ಟೆಂಡರ್ ದಸ್ತಾವೇಜನ್ನು (ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲ ಮುಖಾಂತರ) ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	15–07–2026 ರ ಸಂಜೆ 5.30 ಗಂಟೆಗೆ.
04	ಮೊದಲನೇ ತಾಂತ್ರಿಕ ಬಿಡ್ ಎಲೆಕ್ಟ್ರಾನಿಕ್ ದಾಖಲೆ ತೆರೆಯುವ ದಿನಾಂಕ ಮತ್ತು ಸಮಯ	17–07–2026 ರ ಬೆಳಿಗ್ಗೆ 11.00 ಗಂಟೆಗೆ.
05	ಎರಡನೇ ಆರ್ಥಿಕ ಬಿಡ್ ಎಲೆಕ್ಟ್ರಾನಿಕ್ ದಾಖಲೆ ತೆರೆಯುವ ದಿನಾಂಕ ಮತ್ತು ಸಮಯ	21–07–2026 ರ ಬೆಳಿಗ್ಗೆ 11.00 ಗಂಟೆಗೆ.
06	ಟೆಂಡರ್ ಡಾಕ್ಯೂಮೆಂಟ್ ತೆರೆಯುವ ಸ್ಥಳ ಮತ್ತು ವಿಳಾಸ	ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ, ಬಾಗಲಕೋಟೆ.
07	ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)	ರೂ. 130005/–, (ರೂಪಾಯಿ ಒಂದು ಲಕ್ಷ ಮೂವತ್ತು ಸಾವಿರದ ಐದು ಮಾತ್ರ).

ಷರತ್ತುಗಳು : ಹೆಚ್ಚಿನ ಮಾಹಿತಿಯನ್ನು **ವೆಬ್‌ಸೈಟ್ : http://kppp.karnataka.gov.in** ಯಲ್ಲಿ ಲಾಗ್‌ಆನ್ ಮಾಡಿ ನೋಡಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಪಂಚಾಯತ ರಾಜ್ (ಇಂ) ವಿಭಾಗ, ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟ/111/ಮಣಿಪಾಲ್/2026–27

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ
ಸಂ:ಕಾಇಂ/ಗ್ರಾಕುನೀ&ನೈವಿ/ಟೆಂಡರ್ ಪ್ರಕಟಣೆ ನಂ. 02/2026–27/392,
ದಿನಾಂಕ: 23.06.2026

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ ಉಡುಪಿ ಜಿಲ್ಲೆಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಮತ್ತು ಉಪ ವಿಭಾಗಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆ ಒದಗಿಸಲು, KPP ಪೋರ್ಟಲ್‌ನಲ್ಲಿ ನೊಂದಾಯಿಸಿದ ಅರ್ಹ ದರ್ಜೆಯ ಸೇವೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ.

1. ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕ: 23.06.2026 ರಿಂದ 22.07.2026ರ ಸಂಜೆ 4.00 ವರೆಗೆ. 2. ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 23.07.2026 4.30 PM. 3. ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 24.07.2026 11.00AM. ಇನ್ನಿತರೆ ನಿಬಂಧನೆಗಳು, ಇಎಂಡಿ ವಿವರ, ಗುತ್ತಿಗೆದಾರರ ದರ್ಜೆ ಮತ್ತು ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ವೆಬ್‌ಸೈಟ್: https://www.kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಛೇರಿಯವರಿಂದ ಪಡೆಯಬಹುದಾಗಿದೆ. KPP portal helpdesk: 080-22371090/22373788, Hphelpdesk.blr@intarvo.com.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ

ಕರ್ನಾಟಕ ಸರಕಾರ
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ-580 022

ಇ–ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ)

1) **KMCRI/SUP(1)/D/58/2026-27 Dated 22-06-2026 (DME/2026-27/IND2488)**
2) **KMCRI/SUP(1)/D/50/2026-27 Dated 17-06-2026 (DME/2026-27/IND2450)**
3) **KMCRI/SUP(1)/S/170/2026-27 Dated 19-06-2026 (DME/2026-27/IND2423)**

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ ಇವರು ಅರ್ಹ ಟೆಂಡರ್‌ದಾರರಾದ ಉತ್ಪಾದಕರು, ಅಧಿಕೃತ ಏಜೆಂಟರು ಮತ್ತು ಅಧಿಕೃತ ವಿತರಕರಿಂದ ಕೆ.ಎಂ.ಸಿ. & ಆರ್.ಐ. ಆಸ್ಪತ್ರೆಯ ದೈನಂದಿನ ಚಿಕಿತ್ಸೆಗಾಗಿ ಅವಶ್ಯವಿರುವ ಔಷಧ/ರಾಸಾಯನಿಕ/ಸರ್ಜಿಕಲ್ಸ್ ಮತ್ತು ಡಿಸ್ಪೋಸೇಬಲ್ಸ್ ಹಾಗೂ ಇತರೆ ಸಾಮಗ್ರಿಗಳನ್ನು ಪೂರೈಸುವುದಕ್ಕಾಗಿ ಕರ್ನಾಟಕ ಪಾರದರ್ಶಕ ಸಾರ್ವಜನಿಕ ಸಂಗ್ರಹಣೆ ಕಾಯ್ದೆ 1999 ಶಾಸನ 2000 ಅನ್ವಯ ಇ–ಟೆಂಡರ್ ಮೂಲಕ ಟೆಂಡರ್ ಪ್ರಕಟಣೆ ಆಹ್ವಾನಿಸಲಾಗಿದೆ. ಈ ದಾಖಲೆಗಳನ್ನು, ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿರುವ ಕಚೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– (ನಿರ್ದೇಶಕರು), ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ವಿದ್ಯುತ್ ವಿಭಾಗ, ಬೆಂದನಪಾ
9ನೇ ಮೇನ್, 9ನೇ ಕ್ರಾಸ್, ಜಯನಗರ 2ನೇ ಬ್ಲಾಕ್, ಬೆಂಗಳೂರು–560011.

ನಂ. ಕಾಅ/ವಿದ್ಯುತ್/ಬೆಂದನಪಾ/ಟೆಂಡರ್/02/2026–2027 ದಿನಾಂಕ : 29.06.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ದ್ವಿ ಲಕೋಟೆ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಬೆಂಗಳೂರು ದಕ್ಷಿಣ ನಗರ ಪಾಲಿಕೆಯವರು ಕೆಟಿಪಿಪಿ ನಿಯಮಗಳು 2000 ರ ಪ್ರಕಾರ, ಕೆಪಿಡಬ್ಲ್ಯೂಡಿ/ ಸಿಪಿಡಬ್ಲ್ಯೂಡಿ/ ರೈಲ್ವೆ/ ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ಇತರ ಸಮಾನ ಕೇಂದ್ರ/ರಾಜ್ಯ ಸರ್ಕಾರಿ ಸಂಸ್ಥೆಗಳ ಕೆಲಸದಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕೆಳಗಿನ ಕೋಷ್ಟಕದಲ್ಲಿ ನೀಡಲಾದ ಕೆಲಸಗಳಿಗೆ ಬಿಡ್ಡರ್‌ಗಳು ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು
1.	ಬನಶಂಕರಿ 6ನೇ ಹಂತ, ಅಂಜನಾಪುರ ಟೌನ್ ಶಿಪ್, ಜೆಪಿ ನಗರ 8ನೇ ಮತ್ತು 9ನೇ ಹಂತದ ವಿವಿಧ ಬ್ಲಾಕ್‌ಗಳಲ್ಲಿ ಬೀದಿ ದೀಪ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಮತ್ತು ಬಿಡಿಎಯಿಂದ ಬೆಂಗಳೂರು ದಕ್ಷಿಣ ನಗರ ಪಾಲಿಕೆಗೆ ಹಸ್ತಾಂತರಿಸಲಾದ ಮತ್ತಷ್ಟು ವಿಸ್ತರಣೆ. (ಅವಧಿ 12 ತಿಂಗಳುಗಳು.). **ಅಂದಾಜು ಮೊತ್ತ : ರೂ. 140.00 ಲಕ್ಷಗಳು, ಇಎಂಡಿ: ರೂ. 2,10,000.00. ವರ್ಗ: Class I & Above**

ಟೆಂಡರ್‌ನ ಕಾರ್ಯಸೂಚಿ: (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ ಮತ್ತು ಸಮಯ: 01.07.2026 ರಿಂದ (2) ಪೂರ್ವ–ಬಿಡ್ ಸಭೆಯು ನಡೆಯುವ ದಿನಾಂಕ: ಸಮಯ ಮತ್ತು ಸ್ಥಳ : 04.07.2026 ರಂದು ಮಧ್ಯಾಹ್ನ 3.00 ಗಂಟೆಗೆ, ಮುಖ್ಯ ಇಂಜಿನಿಯರ್ (ವಲಯ–1), ಬೆಂದನಪಾ, ವಲಯ ಕಚೇರಿ ಕಟ್ಟಡ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು–560011. (3) ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸುವ ದಿನಾಂಕ ಮತ್ತು ಸಮಯ : **08.07.2026 ರಂದು ಅಥವಾ ಅದಕ್ಕೂ ಮೊದಲು 16:00 ಗಂಟೆಯೊಳಗೆ** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : **09.07.2026 ರಂದು 16:30 ಗಂಟೆಗೆ** (5) ಹಣಕಾಸಿನ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : **10.07.2026 ರಂದು 16:00 ಗಂಟೆಗೆ ತೆರೆಯಲಾಗುತ್ತದೆ.**

ಸಹಿ/– ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಬೆಂದನಪಾ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ

ನಂ. ಕಾ.ನಿ.ಅ/ಗ್ರಾ.ಕು.ನೀ& ನೈ /ಬೆಳಗಾವಿ/ಪಿಬಿ–1,2,3&4/ಕು.ನೀ.ಸ.ಯೋ/ ಕೆಡಬ್ಲ್ಯು–3/ಟೆಂಡರ್–3/2026–27/548 ದಿ:29/06/2026

ಇ–ಪ್ರೊಕ್ಯೂರಮೆಂಟ್‌ರೀತ್ಯಾ ಏಕಲಕೋಟೆ &ದ್ವಿ–ಲಕೋಟೆ ಮಾದರಿಯಹೊಸ ಟೆಂಡರ್ ಪ್ರಕಟಣೆ ಸಂಖ್ಯೆ :3/2026–27

ಈ ಕೆಳಕಂಡ ಹೊಸ ಕಾಮಗಾರಿಗಳು Standard Tender Document KW-1,2,3&4 ರ ನಿಬಂಧನೆಗೊಳಪಟ್ಟಂತೆ ಏಕಲಕೋಟೆ & ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರಿನಲ್ಲಿ ಇ–ಪ್ರೊಕ್ಯೂರಮೆಂಟ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಟೆಂಡರ ತೆರೆಯುವ ದಿನಾಂಕಗಳು ಈ ಕೆಳಗಿನಂತಿದೆ.

ಅನುಸೂಚಿತ ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು :–, ಅನುಸೂಚಿತ ಪರಿಶಿಷ್ಟ ಜಾತಿಗೆ ಮೀಸಲಿಟ್ಟ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:10154, ಸಾಮಾನ್ಯ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:10153, 9846, 10207, 10240, SE0904, SE0914, SE0913, SE0910, 9816/CALL-6, 9782/CALL-7, 9226/CALL-2, 9228/CALL2,CAT-II(A)ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:–,CAT-Iಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು: –,

1)ಇ–ಪ್ರೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:09–07–2026 ಸಾಯಂಕಾಲ 17:00 ಘಂಟೆವರೆಗೆ 2)ಇ–ಪ್ರೊಕ್ಯೂರಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:10–07–2026 ಸಾಯಂಕಾಲ 17:30 ಘಂಟೆ ನಂತರ 3)ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ:ತಾಂತ್ರಿಕ ಬಿಡ್ ಅನುಮೋದಿಸಿದ ನಂತರ, ಕಾಮಗಾರಿ ಮುಕ್ತಾಯಗೊಳಿಸಬೇಕಾದ ಅವಧಿಯು ಮಳೆಗಾಲವನ್ನು ಒಳಗೊಂಡಿರುತ್ತದೆ.

ಸೂಚನೆ:–ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ https://kppp.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ. ಕು. ನೀ. & ನೈ. ವಿಭಾಗ, ಬೆಳಗಾವಿ.

DIPR/BGM/RO-NO-506/KSMCA/2026-27

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ರಾಜಾಜಿನಗರ ವಿಭಾಗ,
ಬಿಡಬ್ಲ್ಯೂಸಿಸಿ ಕಟ್ಟಡ, # 161, 1ನೇ ಮಹಡಿ, 19ನೇ ಮುಖ್ಯ, 2ನೇ ಬ್ಲಾಕ್,
ಹಳೆಯ ನವರಂಗ ಬಸ್ ನಿಲ್ದಾಣದ ಹತ್ತಿರ. ರಾಜಾಜಿನಗರ, ಬೆಂಗಳೂರು–560010

ನಂ.: ಬೆಂಪನಪಾ/ಕಾಅ/ಕೆಪಿಪಿಪಿ/ಆರ್‌ಎನ್‌ಆರ್/ಟೆಂಡರ್/04/2026–27 ದಿನಾಂಕ : 29.06.2026

ಟೆಂಡರ್‌ಗಾಗಿ ಆಹ್ವಾನ (ಅಲ್ಪಾವಧಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಾಜಾಜಿನಗರ ವಿಭಾಗ, ರವರು ಅರ್ಹ ಟೆಂಡರ್‌ದಾರರಿಂದ ಕೆಳಗೆ ನೀಡಲಾದ ಕೋಷ್ಟಕದಲ್ಲಿನ ಕೆಲಸದ ವಿವರಗಳಿಗಾಗಿ ಐಟಂ ದರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಬಿಡ್‌ದಾರರು /ಸಿಪಿಡಬ್ಲ್ಯೂಡಿ/ ಕೆಪಿಡಬ್ಲ್ಯೂಡಿ/ರೈಲ್ವೆಗಳು/ಎಂಇಎಸ್/ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಯಲ್ಲಿ ನೋಂದಾಯಿತರಾಗಿರಬೇಕು.

ಕ್ರ. ಸಂ.	ವಿವರಣೆ
1.	ವಾರ್ಡ್ ಸಂಖ್ಯೆ 58, 59, 60, 61, 62, 63, 64, 65, 66, 67, 68 ರಲ್ಲಿ ಜಂಕ್ಷನ್‌ಗಳು, ಅಂಡರ್ ಪಾಸ್‌ಗಳ ಸುಧಾರಣೆ ಮತ್ತು ರಸ್ತೆಗಳು, ಚರಂಡಿಗಳು, ಪಾದಚಾರಿ ಮಾರ್ಗಗಳು ಮತ್ತು ಇತರ ಸಂಬಂಧಿತ ಕಾಮಗಾರಿಗಳ ಸಮಗ್ರ ಅಭಿವೃದ್ಧಿ ಮತ್ತು ರಾಜಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಗಟ್ಟಿಮುಟ್ಟಾದ ಪಾದಚಾರಿ ರಸ್ತೆಗಳನ್ನು ಒದಗಿಸುವುದು. (ಅನುಬಂಧ–03 ಕ್ರಮ ಸಂಖ್ಯೆ 60 ರಿಂದ 78) ಪ್ಯಾಕೇಜ್ ಸಂಖ್ಯೆ.01–ಆರ್‌ಎನ್‌ಆರ್–2026–27. ಟೆಂಡರ್‌ಗಿಟ್ಟ ಮೊತ್ತ : **ರೂ. 3088.00 ಲಕ್ಷಗಳು, ಇಎಂಡಿ : ರೂ. 31,00,000.00**

ಟೆಂಡರ್‌ನ ಕಾರ್ಯಸೂಚಿ: (1) ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿದ **ದಿನಾಂಕ: 01.07.2026** (2) ಮಾಹಿತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **: 04.07.2026 ಮಧ್ಯಾಹ್ನ 3.00 ಗಂಟೆಯೊಳಗೆ** (3) ಪೂರ್ವ ಬಿಡ್ ಸಭೆಯ ದಿನಾಂಕ ಮತ್ತು ಸಮಯ: **04.07.2026 ಸಂಜೆ 4.00 ಗಂಟೆಗೆ** (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **08.07.2026 ಸಂಜೆ 4:00 ಗಂಟೆಯವರೆಗೆ** (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **09.07.2026 ಸಂಜೆ 4.30 ಗಂಟೆಗೆ** (6) ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **10.07.2026 ಸಂಜೆ 4.00 ಗಂಟೆಯ ನಂತರ.**

ಸಹಿ/– ಕಾರ್ಯಪಾಲಕ ಅಭಿಯಂತರರು, ರಾಜಾಜಿನಗರ ವಿಭಾಗ, ಬೆಂಪನಪಾ

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಚೇರಿ, ಹೆಬ್ಬಾಳ ವಿಭಾಗ, ಬಿಎನ್‌ಸಿಸಿ, ವಲಯ–2, 2ನೇ ಮಹಡಿ, ಬಿಎನ್‌ಸಿಸಿ (ಹಳೇ ಬಿಬಿಎಂಪಿ) ಕಟ್ಟಡ, ಇಂದಿರಾ ಕ್ಯಾಂಟೀನ್ ಎದುರು, ಜೆ.ಸಿ. ನಗರ ಮುಖ್ಯರಸ್ತೆ, ಮುನಿರೆಡ್ಡಿ ಪಾಳ್ಯ, ಬೆಂಗಳೂರು–560006.

ಸಂಖ್ಯೆ: ಬೆಂಉನಪಾ–ವ2/ಕಾಪಾಅ/ಹೆಬ್ಬಾಳ/ಪಿಆರ್/05/2026–27 ದಿನಾಂಕ: 29–06–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಜಿಓಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಹೆಬ್ಬಾಳ ವಿಭಾಗ, ವಲಯ–2, ಬಿಎನ್‌ಸಿಸಿ ಬೆಂಗಳೂರು ಇವರು ಆಯುಕ್ತರು, ಬಿಎನ್‌ಸಿಸಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಜಿಬಿಎ ಅಥವಾ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತಗೊಂಡ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ವಾರ್ಡ್ ಸಂಖ್ಯೆ 49, ಜೆ.ಸಿ. ನಗರದ 1ನೇ ಬ್ಲಾಕ್ ಆರ್.ಟಿ. ನಗರ, ತಿಮ್ಮಯ್ಯ ಉದ್ಯಾನ, ಮೋತಿ ನಗರ, ಎ.ಕೆ. ಆಶ್ರಮ, ಮಠದಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. ವಾರ್ಡ್ ಸಂಖ್ಯೆ 50, ದಿಣ್ಣೂರಿನ ಮಾಜಿ ಸೈನಿಕರ ಕಾಲೋನಿ, ನಂದಿ ವ್ಯೂ ಲೇಔಟ್, ಅಜಪ್ಪ ಬ್ಲಾಕ್, ಮುನಿನಂಜಪ್ಪ ಬ್ಲಾಕ್, ಧರ್ಮಣ್ಣ ಉದ್ಯಾನ, ದಿಣ್ಣೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. **ಪ್ಯಾಕೇಜ್–01 ವಾರ್ಡ್ ನಂ. 49–ಜೆ.ಸಿ.ನಗರ, ವಾರ್ಡ್ ನಂ.50–ದಿಣ್ಣೂರು. ಅಂದಾಜು ಮೊತ್ತ: ರೂ. 2000.00 ಲಕ್ಷಗಳು.**
2	ವಾರ್ಡ್ ಸಂಖ್ಯೆ 52 ವಿಶ್ವನಾಥ ನಾಗೇನಹಳ್ಳಿಯ ಸಿಐಎಲ್ ಲೇಔಟ್, ಕೆಂಪಯ್ಯ ಲೇಔಟ್, ಗಂಗಮ್ಮ ಲೇಔಟ್, ಗುಡ್ಡದಹಳ್ಳಿ, ಪಟೇಲ್ ಮುನಿಯಪ್ಪ ಲೇಔಟ್, ಕನಕನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. ವಾರ್ಡ್ ಸಂಖ್ಯೆ 54 ಗಂಗೇನಹಳ್ಳಿಯ ಕೆಎಚ್‌ಎಂ ಬ್ಲಾಕ್, ಗಂಗೇನಹಳ್ಳಿ ಬಡಾವಣೆ, ದೇನಾ ಬ್ಯಾಂಕ್ ಕಾಲೋನಿ, ಗಿಡ್ಡಪ್ಪ ಬ್ಲಾಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. **ಪ್ಯಾಕೇಜ್–02 ವಾರ್ಡ್ ನಂ. 52–ವಿಶ್ವನಾಥ ನಾಗೇನಹಳ್ಳಿ, ವಾರ್ಡ್ ನಂ.54–ಗಂಗೇನಹಳ್ಳಿ. ಅಂದಾಜು ಮೊತ್ತ: ರೂ. 2000.00 ಲಕ್ಷಗಳು.**
3	ವಾರ್ಡ್ ನಂ 51 ರಲ್ಲಿ ಮನೋರಾಯನಪಾಳ್ಯದ ವಿನಾಯಕ ಲೇಔಟ್, ಹನುಮಂತಪ್ಪ ಲೇಔಟ್ ಭುವನೇಶ್ವರಿ ನಗರ, ಪೂವಣ್ಣ ಲೇಔಟ್, ಮನೋರಾಯನಪಾಳ್ಯ, ದೊಡ್ಡಮ್ಮ ಲೇಔಟ್, ಸೀತಪ್ಪ ಲೇಔಟ್ ಮತ್ತು ನಂಜಮ್ಮ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. **ಪ್ಯಾಕೇಜ್–03 ವಾರ್ಡ್ ನಂ. 51–ಮನೋರಾಯನಪಾಳ್ಯ. ಅಂದಾಜು ಮೊತ್ತ: ರೂ. 900.00 ಲಕ್ಷಗಳು.**
4	ವಾರ್ಡ್ ಸಂಖ್ಯೆ 53, ಆರ್ ಟಿ ನಗರದ ಚಾಮುಂಡಿ ನಗರ, ಅವಳಪ್ಪ ಬ್ಲಾಕ್, ಕೌಸರ್ ನಗರ, 1ನೇ ಬ್ಲಾಕ್ ಆರ್ ಟಿ ನಗರ, ರಹಮತ್ ನಗರ, ಪಿ & ಟಿ ಕಾಲೋನಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. ವಾರ್ಡ್ ಸಂಖ್ಯೆ 55 ಗಂಗಾನಗರದ ವಸಂತಪ್ಪ ಬ್ಲಾಕ್, ಲಕ್ಷ್ಮಯ್ಯ ಬ್ಲಾಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. **ಪ್ಯಾಕೇಜ್–04 ವಾರ್ಡ್ ನಂ. 53–ಆರ್.ಟಿ.ನಗರ, ವಾರ್ಡ್ ನಂ. 55–ಗಂಗಾನಗರ ಅಂದಾಜು ಮೊತ್ತ: ರೂ. 1100.00 ಲಕ್ಷಗಳು.**
5	ವಾರ್ಡ್ ಸಂಖ್ಯೆ 55 ರಲ್ಲಿರುವ ಹೆಚ್.ಜಿ.ಹೆಚ್. ಲೇಔಟ್, ಹೆಚ್.ಎಂ.ಟಿ. ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. ವಾರ್ಡ್ ಸಂಖ್ಯೆ 56ರಲ್ಲಿರುವ ಸುಬ್ರಮಣಿ ಕಾಲೋನಿ, ಅಮರ ಜ್ಯೋತಿ ಲೇಔಟ್, ಹೆಬ್ಬಾಳ ಹಳೆಯ ಗ್ರಾಮ, ಚೋಳನಾಯಕನಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. **ಪ್ಯಾಕೇಜ್–05 ವಾರ್ಡ್ ನಂ. 55–ಗಂಗಾನಗರ, ವಾರ್ಡ್ ನಂ. 56–ಹೆಬ್ಬಾಳ ಅಂದಾಜು ಮೊತ್ತ: ರೂ. 1000.00 ಲಕ್ಷಗಳು.**
6	ವಾರ್ಡ್ ಸಂಖ್ಯೆ 57 ಭೂಪಸಂದ್ರದಲ್ಲಿರುವ ಬಸವೇಶ್ವರ ಬಡಾವಣೆ, ಹೊಸ ಭೂಪಸಂದ್ರ, ಭೂಪಸಂದ್ರ, ಪೋಸ್ಟಲ್ ಕಾಲೋನಿ, ಕೆಇಬಿ ಬಡಾವಣೆ, ಕೇಂದ್ರ ಅಬಕಾರಿ ಬಡಾವಣೆ, ಎಇಸಿಎಸ್ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿನ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. **ಪ್ಯಾಕೇಜ್–06 ವಾರ್ಡ್ ನಂ. 57–ಭೂಪಸಂದ್ರ. ಅಂದಾಜು ಮೊತ್ತ: ರೂ. 900.00 ಲಕ್ಷಗಳು.**
7	ವಾರ್ಡ್ 58, ನಾಗಶೆಟ್ಟಿಹಳ್ಳಿಯಲ್ಲಿನ ಬಸವೇಶ್ವರ ಬಡಾವಣೆ, ಭೋವಿ ಕಾಲೋನಿ, ಮಾರುತಿ ಬಡಾವಣೆ, ನಾರಾಯಣಪ್ಪ ಬಡಾವಣೆ, ಅಮರಜ್ಯೋತಿ ಬಡಾವಣೆ, ಕೃಷ್ಣಪ್ಪ ಬಡಾವಣೆ, ಶಿಕ್ಷಕರ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿನ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. **ಪ್ಯಾಕೇಜ್–07 ವಾರ್ಡ್ ನಂ. 58–ನಾಗಶೆಟ್ಟಿಹಳ್ಳಿ. ಅಂದಾಜು ಮೊತ್ತ: ರೂ. 1000.00 ಲಕ್ಷಗಳು.**
8	ವಾರ್ಡ್ ಸಂಖ್ಯೆ 59 ಗೆದ್ದಲಹಳ್ಳಿಯಲ್ಲಿನ ಹೆಚ್‌ಐಜಿ ಕಾಲೋನಿ, ಎಇಸಿಎಸ್ ಲೇಔಟ್ 3ನೇ ಬ್ಲಾಕ್, ಹೆಚ್‌ಐಜಿ ಕಾಲೋನಿ, ಜಲದರ್ಶಿನಿ ಲೇಔಟ್, ಕೆಜಿಇ ಲೇಔಟ್, ಎಂಎಲ್ಎ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. **ಪ್ಯಾಕೇಜ್–08 ವಾರ್ಡ್ ನಂ. 59–ಗೆದ್ದಲಹಳ್ಳಿ ಅಂದಾಜು ಮೊತ್ತ: ರೂ. 1000.00 ಲಕ್ಷಗಳು.**


ಇಎಂಡಿ ಮೊತ್ತ: **ಕ್ರ.ಸಂ. 1&2ಕ್ಕೆ : ರೂ. 20,00,000/–** (ರೂ. 1.00 ಲಕ್ಷ ಇ–ಪಾವತಿ (ಎನ್‌ಇಎಫ್‌ಟಿ) ಮೂಲಕ, ಉಳಿಕೆ ರೂ. 19,00,000/– ಬಿಜಿ/ಎಫ್‌ಡಿಆರ್ ಮೂಲಕ. ಇದನ್ನು ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು). ಇಎಂಡಿ ಮೊತ್ತ: **ಕ್ರ.ಸಂ. 3&6ಕ್ಕೆ : ರೂ. 13,50,000/–** (ರೂ. 1.00 ಲಕ್ಷ ಇ–ಪಾವತಿ (ಎನ್‌ಇಎಫ್‌ಟಿ) ಮೂಲಕ, ಉಳಿಕೆ ರೂ. 12,50,000/– ಬಿಜಿ/ಎಫ್‌ಡಿಆರ್ ಮೂಲಕ. ಇದನ್ನು ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು.). ಇಎಂಡಿ ಮೊತ್ತ: **ಕ್ರ.ಸಂ. 4, 5, 7 & 8ಕ್ಕೆ : ರೂ. 15,00,000/–** (ರೂ. 1.00 ಲಕ್ಷ ಇ–ಪಾವತಿ (ಎನ್‌ಇಎಫ್‌ಟಿ) ಮೂಲಕ, ಉಳಿಕೆ ರೂ. 14,00,000/– ಬಿಜಿ/ಎಫ್‌ಡಿಆರ್ ಮೂಲಕ. ಇದನ್ನು ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು).

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in**ನಿಂದ ದಿನಾಂಕ: **29–06–2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವ–ಬಿಡ್ ಸಭೆಯ ದಿನಾಂಕ: **02–07–2026ರಂದು ಮಧ್ಯಾಹ್ನ 3.00 ಗಂಟೆಗೆ– ಮೇಲ್ಕಂಡ ಕಛೇರಿಯಲ್ಲಿ.** (3) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **08–07–2026ರ ಸಂಜೆ 4.00 ಗಂಟೆವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **09–07–2026ರಂದು ಸಂಜೆ 4.30 ಗಂಟೆಗೆ.** (5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಹೆಬ್ಬಾಳ ವಿಭಾಗ, ವಲಯ–2, ಬಿಎನ್‌ಸಿಸಿ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ತಿಳಿದಿರುವುದಕ್ಕಿಂತ ಕಡಿಮೆ ಮಾತನಾಡುವುದು ಬುದ್ಧಿವಂತಿಕೆಯ ಲಕ್ಷಣ.

–ವಿಲಿಯಂ ಷೇಕ್ಸ್‌ಪಿಯರ್

ಸಂಪಾದಕೀಯ

ಪೂರ್ವಸಿದ್ಧತೆ ಕೊರತೆ ಬಹಿರಂಗ 'ಮೆಟ್ರೊ' ವಿಶ್ವಾಸಾರ್ಹತೆಗೆ ಭಂಗ

ಬೆಂಗಳೂರು ಮಹಾನಗರದ 'ನಮ್ಮ ಮೆಟ್ರೊ' ನೇರಳೆ ಮಾರ್ಗದಲ್ಲಿ ಕಳೆದ ವಾರ ಸೇವಾ ವ್ಯತ್ಯಯದ ಎರಡು ಘಟನೆಗಳು ಸಂಭವಿಸಿವೆ. ಎರಡು ದಿನಗಳ ಅಂತರದಲ್ಲಿ ಸಂಭವಿಸಿದ ಈ ಅಡಚಣೆಗಳು, ರಾಜಧಾನಿಯ ಅತ್ಯಂತ ಪ್ರಮುಖ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ದೌರ್ಬಲ್ಯವನ್ನು ಅನಾವರಣಗೊಳಿಸಿವೆ. ಸಮಸ್ಯೆಗಳು ಎದುರಾಗಿವೆ ಎನ್ನುವುದಕ್ಕಿಂತಲೂ, ಅನಿರೀಕ್ಷಿತ ಬಿಕ್ಕಟ್ಟನ್ನು ನಿರ್ವಹಿಸುವಲ್ಲಿ ಯಾವುದೇ ಪರಿಣಾಮಕಾರಿ ಪರ್ಯಾಯ ಯೋಜನೆ ಇರಲಿಲ್ಲ ಎನ್ನುವುದು ಕಳವಳದ ಸಂಗತಿ. ತಾಂತ್ರಿಕ ದೋಷದಿಂದಾಗಿ ಸಂಭವಿಸಿದ ಸೇವಾ ವ್ಯತ್ಯಯದ ಮೊದಲ ಘಟನೆಯಲ್ಲಿ, ಕಬ್ಬನ್ ಪಾರ್ಕ್ ನಿಲ್ದಾಣದಲ್ಲಿ ಮೆಟ್ರೊ ರೈಲೊಂದು ಸ್ಥಗಿತಗೊಂಡಿತು. ಗರಿಷ್ಠ ಸಂಚಾರ ದಟ್ಟಣೆಯ ಸಂಜೆಯ ಸಮಯದಲ್ಲಿ ಸಂಭವಿಸಿದ ಆ ಘಟನೆಯಿಂದಾಗಿ, ಸಾವಿರಾರು ಪ್ರಯಾಣಿಕರು ಪರದಾಡುವಂತಾಯಿತು. ಎರಡು ದಿನಗಳ ನಂತರ ನಡೆದ ಮತ್ತೊಂದು ಘಟನೆಯಲ್ಲಿ, ಚಲ್ಲಘಟ್ಟಕ್ಕೆ ತೆರಳುತ್ತಿದ್ದ ರೈಲು ಕಬ್ಬನ್ ಪಾರ್ಕ್ ನಿಲ್ದಾಣದಲ್ಲಿಯೇ ಸ್ಥಗಿತಗೊಂಡಿತು. ಪ್ರಯಾಣಿಕರೊಬ್ಬರ ಲೋಹದ ಸರ ಬಾಗಿಲಿಗೆ ಸಿಲುಕಿದ್ದರಿಂದ ಸಮಸ್ಯೆ ಎದುರಾಯಿತು. ಎರಡನೇ ಘಟನೆಗೆ ತಾಂತ್ರಿಕ ವೈಫಲ್ಯ ಕಾರಣವಲ್ಲದೆ ಹೋದರೂ, ಸುರಕ್ಷತಾ ನಿಯಮಗಳ ಅನುಸಾರ ಪ್ರಯಾಣಿಕರನ್ನು ಹೊರಗೆ ಕಳುಹಿಸಬೇಕಾದುದರಿಂದ ನಂತರದ ರೈಲುಗಳ ಸಂಚಾರ ವಿಳಂಬವಾಯಿತು.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರ ಅಂದಾಜಿನ ಪ್ರಕಾರ, 2024ರಿಂದ ಇಲ್ಲಿಯವರೆಗೆ ಮೆಟ್ರೊ ರೈಲುಗಳ ಸೇವಾ ವ್ಯತ್ಯಯದ 21 ಘಟನೆಗಳು ವರದಿಯಾಗಿವೆ. ಅವುಗಳಲ್ಲಿ ಬಹುತೇಕ ಘಟನೆಗಳು ನೇರಳೆ ಮಾರ್ಗಕ್ಕೆ ಸಂಬಂಧಿಸಿವೆ. ಈ ಹಿನ್ನೆಲೆಯಲ್ಲಿ ಸ್ವತಂತ್ರವಾದ ಸುರಕ್ಷತಾ ಲೆಕ್ಕಪರಿಶೋಧನೆ ನಡೆಯುವುದು ಅಗತ್ಯವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದ ಸಂಸ್ಥೆ. ಹಾಗಾಗಿ, ಅದರ ಹೊಣೆಗಾರಿಕೆ ಉಭಯ ಸರ್ಕಾರಗಳದ್ದೂ ಆಗಿದೆ. ಉತ್ತಮ ಕಾರ್ಯನಿರ್ವಹಣೆಯುಳ್ಳ ಯಾವುದೇ ಮೆಟ್ರೊ ವ್ಯವಸ್ಥೆಯ ವೈಶಿಷ್ಟ್ಯ ಇರುವುದು ದೋಷಗಳು ಸಂಭವಿಸದೆ ಇರುವುದರಲ್ಲಿ ಅಲ್ಲ; ಬಿಕ್ಕಟ್ಟಿನ ಸಂದರ್ಭದಲ್ಲಿ ಎಷ್ಟು ತ್ವರಿತವಾಗಿ ಹಾಗೂ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸುತ್ತದೆ ಎನ್ನುವುದರಲ್ಲಿ. ಈ ವಿಚಾರದಲ್ಲಿ ಬಿಎಂಆರ್‌ಸಿಎಲ್ ಕಾರ್ಯನಿರ್ವಹಣೆ ತೃಪ್ತಿಕರವಾಗಿಲ್ಲ. ಸೇವಾ ವ್ಯತ್ಯಯ ಉಂಟಾದಾಗ ಪ್ರಯಾಣಿಕರಿಗೆ ಉಪಯುಕ್ತ ಮಾಹಿತಿ ದೊರೆಯಲಿಲ್ಲ. ಸುರಂಗ ಮಾರ್ಗದಲ್ಲಿನ ನಿಲ್ದಾಣಗಳಲ್ಲಿ ಅನೇಕ ಪ್ರಯಾಣಿಕರು ಪರ್ಯಾಯ ವ್ಯವಸ್ಥೆಗಳ ಬಗ್ಗೆ ಮಾಹಿತಿ ತಿಳಿಯದೆ ಗೊಂದಲಕ್ಕೊಳಗಾದರು. ನಿಲ್ದಾಣದ ಹೊರಗೆ ಪ್ರಯಾಣಿಕರ ಅನಿವಾರ್ಯತೆಯನ್ನು ಆಟೊ ಚಾಲಕರು ದುರುಪಯೋಗಪಡಿಸಿಕೊಂಡರು. ಕ್ಯಾಬ್ ಸೇವಾಸಂಸ್ಥೆಗಳು ಹೆಚ್ಚುವರಿ ದರ ವಿಧಿಸುವ ಮೂಲಕ ಪರಿಸ್ಥಿತಿಯ ಲಾಭ ಪಡೆದುಕೊಂಡವು. ತಕ್ಷಣವೇ ಬಸ್‌ಗಳನ್ನು ನಿಯೋಜಿಸುವಲ್ಲಿ ಬಿಎಂಟಿಸಿಯೂ ಯಶಸ್ವಿಯಾಗಲಿಲ್ಲ. ಕ್ಯಾಬ್ ಸೇವಾಸಂಸ್ಥೆಗಳು ಹೆಚ್ಚುವರಿ ದರ ವಿಧಿಸುವುದಕ್ಕೆ ಮಿತಿ ವಿಧಿಸುವ ಹಾಗೂ ನಿಗದಿತ ಆಟೊ ದರಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಮೂಲಕ ಸಾರ್ವಜನಿಕರ ಶೋಷಣೆಯನ್ನು ಸರ್ಕಾರ ತಡೆಗಟ್ಟಬೇಕಾಗಿದೆ.



ತುರ್ತು ಸಂದರ್ಭಗಳನ್ನು ನಿರ್ವಹಿಸುವಲ್ಲಿ ಬಿಎಂಆರ್‌ಸಿಎಲ್ ಯಾವುದೇ ಪೂರ್ವಸಿದ್ಧತೆ ನಡೆಸದಿರುವುದು ಕಳವಳದ ಸಂಗತಿ. ಸಮಸ್ಯೆಗಳ ಪುನರಾವರ್ತನೆಯಿಂದ ಸಂಸ್ಥೆಯ ವಿಶ್ವಾಸಾರ್ಹತೆಗೆ ಧಕ್ಕೆ ಉಂಟಾಗುತ್ತದೆ.

ತುರ್ತು ಸಂದರ್ಭಗಳಲ್ಲಿ ಪ್ರಯಾಣಿಕರಿಗೆ ನೆರವಾಗುವ ರೀತಿಯಲ್ಲಿ ನಿಲ್ದಾಣದ ಸಿಬ್ಬಂದಿಗೆ ಪ್ರಮಾಣಿತ ಕಾರ್ಯಾಚರಣೆ ವಿಧಾನಗಳ ಮೂಲಕ ತರಬೇತಿ ನೀಡುವುದು ಅಗತ್ಯವಾಗಿದೆ. ಪ್ರಯಾಣಿಕರಿಗೆ ಸೂಕ್ತ ಮಾಹಿತಿ ನೀಡುವುದು, ಸಾರ್ವಜನಿಕ ಪ್ರಕಟಣೆಗಳನ್ನು ಬಿತ್ತರಿಸುವುದು, ಸಂಚಾರ ಪೊಲೀಸರು ಮತ್ತು ನಾಗರಿಕ ಸಂಸ್ಥೆಗಳೊಂದಿಗೆ ಸಂವಹನ ಸಾಧಿಸುವುದು ಸಾಧ್ಯವಾಗಬೇಕು. ಇದಾವುದೂ ಇತ್ತೀಚಿನ ಘಟನೆಗಳಲ್ಲಿ ಕಾಣಿಸಲಿಲ್ಲ. ಇಂತಹ ಕಾರ್ಯ ವಿಧಾನಗಳನ್ನು ತುರ್ತು ಪರಿಸ್ಥಿತಿ ಸಂದರ್ಭಗಳಲ್ಲಿ ಸ್ಥಳದಲ್ಲೇ ಅನುಷ್ಠಾನಕ್ಕೆ ತರುವ ಬದಲು, ನಿಯಮಿತ ಅಣಕು ಅಭ್ಯಾಸಗಳ ಮೂಲಕ ಪರೀಕ್ಷೆಗೊಡ್ಡಿ ಸಿದ್ಧತೆ ನಡೆಸಬೇಕು. ಬೆಂಗಳೂರಿನ ರೀತಿಯಲ್ಲಿಯೇ ಮುಂಬೈ ಮೆಟ್ರೊ ವ್ಯವಸ್ಥೆ ಕೂಡ ತಾಂತ್ರಿಕ ವೈಫಲ್ಯದ ಕಾರಣದಿಂದಾಗಿ ಇತ್ತೀಚೆಗೆ ಟೀಕೆಗೊಳಗಾಗಿತ್ತು. ಈ ಘಟನೆಗಳು, ಭಾರತದ ಮೆಟ್ರೊ ಜಾಲಗಳು ವಿಸ್ತರಣೆಯ ಜೊತೆಜೊತೆಗೇ ತುರ್ತು ಪರಿಸ್ಥಿತಿ ಎದುರಿಸಲು ಸಮರ್ಥವಾಗಬೇಕಾದುದನ್ನು ಹಾಗೂ ಸೇವಾ ವ್ಯವಸ್ಥೆಗೆ ಸಂಬಂಧಿಸಿದಂತೆ ತಾಂತ್ರಿಕ ಗುಣಮಟ್ಟ ಹೆಚ್ಚಿಸಿಕೊಳ್ಳಬೇಕಾದುದನ್ನು ಸೂಚಿಸುವಂತಿವೆ. ಬಿಎಂಆರ್‌ಸಿಎಲ್‌ನ ನೇರಳೆ ಮಾರ್ಗದಲ್ಲಿ ಪುನರಾವರ್ತನೆಗೊಳ್ಳುತ್ತಿರುವ ತಾಂತ್ರಿಕ ಸಮಸ್ಯೆಗಳು, ಆ ಮಾರ್ಗದ ರಚನಾತ್ಮಕ ಸಾಮರ್ಥ್ಯದ ಪರಾಮರ್ಶೆಯ ಅಗತ್ಯವನ್ನು ಸೂಚಿಸುವಂತಿದೆ. ನಿಯಮಿತ ನಿರ್ವಹಣೆಯ ಜೊತೆಗೆ ತಾಂತ್ರಿಕ ಲೆಕ್ಕಪರಿಶೋಧನೆಗಳು ಮತ್ತು ಮುನ್ನೆಚ್ಚರಿಕೆಯ ಮೇಲ್ವಿಚಾರಣೆ ವ್ಯವಸ್ಥೆಯನ್ನು ರೂಪಿಸಬೇಕಾಗಿದೆ. ಗಂಭೀರ ಸ್ವರೂಪ ಪಡೆಯುವ ಮೊದಲೇ ಸಮಸ್ಯೆಗಳನ್ನು ಗುರ್ತಿಸಬೇಕಾಗಿದೆ. ಪ್ರತಿಕ್ರಿಯಾತ್ಮಕ ವ್ಯವಸ್ಥೆ ಆಗುವುದನ್ನು ಬಿಟ್ಟು, ಮುನ್ನೆಚ್ಚರಿಕೆಯ ವ್ಯವಸ್ಥೆ ಆಗುವತ್ತ ಬಿಎಂಆರ್‌ಸಿಎಲ್ ಗಮನಹರಿಸಬೇಕಾಗಿದೆ. ಅನಿರೀಕ್ಷಿತ ಸಂದರ್ಭಗಳಲ್ಲಿ ಪ್ರಯಾಣಿಕರನ್ನು ಎಷ್ಟು ಸುರಕ್ಷಿತವಾಗಿ ಮುನ್ನಡೆಸಲಾಗುತ್ತದೆ ಎನ್ನುವುದರ ಮಾನದಂಡದಲ್ಲಿ ವಿಶ್ವದರ್ಜೆಯ ಮೆಟ್ರೊದ ವಿಶ್ವಾಸಾರ್ಹತೆಯನ್ನು ಗುರ್ತಿಸಲಾಗುತ್ತದೆ.

ವೋಜಿನಾ: ಪುಟ್ಟ ದೇಶದ ದಿಟ್ಟ ತಾರೆ



ವಿಶ್ಲೇಷಣೆ

ಗಿರೀಶ ದೊಡ್ಡಮನಿ

> ಕೇಪ್ ವರ್ಡ್ ಎನ್ನುವ ಪುಟ್ಟ ದೇಶದ ದೊಡ್ಡ ಆಟಗಾರ ವೋಜಿನಾ ಈ ಬಾರಿಯ ಫಿಫಾ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಹೊರಹೊಮ್ಮಿರುವ ಹೊಸ ತಾರೆ. ಆಟದ ಮೂಲಕ ದೇಶದ ಕೀರ್ತಿಯನ್ನು ಎತ್ತಿಹಿಡಿಯುವುದರ ಜೊತೆಗೆ, ವರ್ಣ ತಾರತಮ್ಯ ನೀತಿಯ ವಿರುದ್ಧದ ಸಂದೇಶದ ರೂಪದಲ್ಲೂ ವೋಜಿನಾ ಅವರ ಸಾಧನೆಗೆ ಮಹತ್ವವಿದೆ.

ನಲ್ವತ್ತು ವರ್ಷದ ವೋಜಿನಾ ಅವತ್ತು ಅಟ್ಲಾಂಟಾದ ಕ್ರೀಡಾಂಗಣದಲ್ಲಿ ಗಳಗಳನೆ ಅತ್ತುಬಿಟ್ಟರು. ಆ ಕಣ್ಣೀರಿನಲ್ಲಿ ಜೀವನದುದ್ದಕ್ಕೂ ಅನುಭವಿಸಿದ್ದ ಅವಮಾನಗಳ ಬಿಸಿ, ಎಲ್ಲಕ್ಕೂ ತಕ್ಕ ಉತ್ತರ ಕೊಟ್ಟ ಖುಷಿ ಮೇಳೈಸಿದ್ದವು. ಅಷ್ಟೇ ಅಲ್ಲ; ಕನಸು ನನಸಾದ ತೃಪ್ತಿಯ ಆರ್ದ್ರತೆ ಮತ್ತು ತನ್ನ ಸಾಧನೆಯನ್ನು ನೋಡಲು ಆ ಕ್ರೀಡಾಂಗಣದಲ್ಲಿ ಹೆತ್ತಮ್ಮ ಇರಲಿಲ್ಲ ಎಂಬ ಸಂಕಟದ ಬಿಕ್ಕಳಿಕೆಯೂ ಜೊತೆಯಾಗಿತ್ತು. ಆ ದಿನ ಅವರ ತವರು ಪಶ್ಚಿಮ ಆಫ್ರಿಕಾದ ಕರಾವಳಿಯ ಪುಟ್ಟ ದೇಶ ಕೇಪ್ ವರ್ಡ್‌ನಲ್ಲಿ ಭಾವುಕತೆಯ ಸುನಾಮಿ ಉಕ್ಕಿತ್ತು.

ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮೊದಲ ಬಾರಿಗೆ ಆಡುವ ಅರ್ಹತೆ ಪಡೆದ ದೇಶ ಕೇಪ್ ವರ್ಡ್ ಜನಸಂಖ್ಯೆ ಹೆಚ್ಚೆಂದರೆ ಐದೂಮುಕ್ಕಾಲು ಲಕ್ಷ ಇರಬಹುದಷ್ಟೇ. ಒಂದು ಸಮಯದಲ್ಲಿ ಪೋರ್ಚುಗೀಸರ ವಸಾಹತು ಇದಾಗಿತ್ತು. ಇಲ್ಲಿಯ ಮೂಲನಿವಾಸಿ ಕಪ್ಪು ಜನರು ಯುರೋಪಿಯನ್ನರ ಅಡಿಯಲ್ಲಿ ನೌಕರರಾಗಿದ್ದರು. ಇಂತಹ ಪುಟ್ಟ ದೇಶ ಕೇಪ್ ವರ್ಡ್, ಯುರೋಪಿನ ಪ್ರಮುಖ ದೇಶ ಮತ್ತು ಫುಟ್‌ಬಾಲ್ ಕ್ರೀಡೆಯಲ್ಲಿ ಮುಂಚೂಣಿಯಲ್ಲಿರುವ ಸ್ಪೇನ್ ತಂಡದ ಎದುರು ಪಂದ್ಯ ಡ್ರಾ ಮಾಡಿಕೊಳ್ಳಲು ಇದೇ ವೋಜಿನಾ ಕಾರಣರಾಗಿದ್ದರು. ಗೋಲ್‌ಪೋಸ್ಟ್ ಮುಂದೆ 'ಬಂಡೆ'ಯಂತೆ ನಿಂತರು. ಸ್ಪೇನ್ ದಾಳಿಗಾರರ ಏಳು ನೇರ ಶೂಟ್‌ಗಳನ್ನು ವಿಫಲಗೊಳಿಸಿದರು. 40ರ ಹರೆಯದಲ್ಲಿಯೂ ಅತ್ತಿಂದಿತ್ತ ಚಿರತೆಯಂತೆ ಜಿಗಿದಾಡಿದ ವೋಜಿನಾ ಪಂದ್ಯಶ್ರೇಷ್ಠ ಗೌರವ ಗಳಿಸಿದರು. ಪಂದ್ಯದ ನಂತರ ಮಾಧ್ಯಮದವರ ಮುಂದೆ ಮಗುವಿನಂತೆ ಅತ್ತರು. 'ನನ್ನ ಆಟ ನೋಡಲು ಅಮ್ಮ ಇಲ್ಲಿರಬೇಕಿತ್ತು' ಎಂದರು.

ಅಮೆರಿಕದಲ್ಲಿ ವೀಸಾ ನೀಡುವುದಕ್ಕಾಗಿ ಇರುವ ಕಠಿಣ ನಿಯಮಗಳು ಮತ್ತು ದುಬಾರಿ ಮೊತ್ತದ ಭದ್ರತಾ ಬಾಂಡ್ ನೀಡಲು ಸಾಧ್ಯವಾಗದ ಕಾರಣ ವೋಜಿನಾ ಅವರ ತಾಯಿ (ಅನಾ ಕ್ಯಾಂಡಿಡಾ ಇವೊರಾ ಅವರು ಈಗಲೂ ತಮ್ಮ ತವರು ದೇಶದಲ್ಲಿ ಮನೆಯೊಂದರ ಕ್ಲೀನರ್ ಆಗಿದ್ದಾರೆ) ಫಿಫಾ ವಿಶ್ವಕಪ್ ನೋಡಲು ಬಂದಿರಲಿಲ್ಲ. ಈ ಸುದ್ದಿ ಕಾಳ್ಗಿಚ್ಚಿನಂತೆ ಹರಡಿತು. ಅಲ್ಲಿಯವರೆಗೂ ಸಾಮಾಜಿಕ ಜಾಲತಾಣಗಳಲ್ಲಿ ಅವರಿಗಿದ್ದ 45 ಸಾವಿರ ಫಾಲೋವರ್ಸ್‌ಗಳ ಸಂಖ್ಯೆಯು ರಾಕೆಟ್ ವೇಗದಲ್ಲಿ 35 ಲಕ್ಷ ದಾಟಿತು.

'ಫಿಫಾಗೆ ಅವರ ಅಮ್ಮನನ್ನು ಕರೆ ತನ್ನಿ...' ಎಂದು ವೀಕ್ಷಕ ವಿವರಣೆಗಾರರೊಬ್ಬರು ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಾಕಿದರು. ಮತ್ತೊಬ್ಬರು, 'ಮಕ್ಕಳು ಸಾಧನೆ ಮಾಡುವುದನ್ನು ಕಣ್ತುಂಬಿಕೊಳ್ಳುವ ಹಕ್ಕು ಪ್ರತಿಯೊಬ್ಬ ಅಮ್ಮನಿಗೂ ಇದೆ. ಎಷ್ಟು ಸಾಧ್ಯವೋ ಅಷ್ಟು ಬೇಗ ಅಮ್ಮನನ್ನು ಕರೆತನ್ನಿ' ಎಂದು ಸಂದೇಶ ಹಾಕಿದರು. ಬೆಂಬಲ ಮಹಾಪೂರವಾಯಿತು. ಇದಾಗಿ ಆರು ದಿನಗಳ ನಂತರ ಮಿಯಾಮಿಯಲ್ಲಿ ನಡೆದ ಕೇಪ್ ವರ್ಡ್ ಮತ್ತು ಉರುಗ್ವೆಯ ಪಂದ್ಯಕ್ಕೆ ವೋಜಿನಾ ಅವರ ಅಮ್ಮ ಹಾಜರಾಗಿದ್ದರು. ಅಮೆರಿಕ ಸರ್ಕಾರವು ಭದ್ರತಾ ಬಾಂಡ್ ಮನ್ನಾ ಮಾಡಿ ವೀಸಾ ನೀಡಿ ಕರೆತಂದಿತ್ತು.

ವೋಜಿನಾ ಅವರು ಬಾಲ್ಯದಲ್ಲಿ ಫುಟ್‌ಬಾಲ್ ಆಡುತ್ತಿದ್ದರು. ಆದರೆ, ವೃತ್ತಿಪರ ಆಟಗಾರನಾಗಿ ಆಡಲು ಶುರು ಮಾಡಿದ್ದು 25ನೇ ವಯಸ್ಸಿನಲ್ಲಿ. ಆಗ ಅವರು ಬ್ಯಾಂಕ್ ಉದ್ಯೋಗಿಯಾಗಿದ್ದರು. ಸ್ಥಳೀಯ ಕ್ಲಬ್‌ಗಳು ವಯಸ್ಸಿನ ಕಾರಣಕ್ಕೆ ಅವರಿಗೆ ಹೆಚ್ಚು ಅವಕಾಶ ನೀಡುತ್ತಿರಲಿಲ್ಲ. ಅವಕಾಶಕ್ಕಾಗಿ ಪೋರ್ಚುಗಲ್‌ಗೆ ಹೋಗಿ ಆಡಿದರು. ಗೋಲ್‌ಕೀಪರ್ ಆಗಿ ರೂಪುಗೊಂಡರು. 'ಈ ವಯಸ್ಸಿನಲ್ಲಿ ಇದೆಲ್ಲಾ ಬೇಕಾ?' ಎಂದು ಪ್ರಶ್ನಿಸಿದವರಿಗೆ ಮುಗುಳ್ನಗೆಯ ಉತ್ತರ ಕೊಡುತ್ತ ಮುನ್ನುಗ್ಗಿದರು. ತಮ್ಮ ದೇಶದ ತಂಡವು ಮೊದಲ ಬಾರಿಗೆ ವಿಶ್ವಕಪ್‌ಗೆ ಅರ್ಹತೆ ಪಡೆದಾಗ ಹಿರಿಹಿರಿ ಹಿಗ್ಗಿದರು. ಅವರು ಸ್ಪೇನ್ ಎದುರು ತೋರಿದ ಕೆಚ್ಚೆದೆಯ ಆಟವು ಕೇಪ್ ವರ್ಡ್‌ನ ಉಳಿದ ಆಟಗಾರರ ಹುರುಪು ಹೆಚ್ಚಿಸಿತು. ಅದರ ಫಲ ಎರಡನೇ ಪಂದ್ಯದಲ್ಲಿ ಉರುಗ್ವೆ ಎದುರು ಡ್ರಾ ಸಾಧಿಸಿತು.

ಈ ಬಾರಿಯ ಫಿಫಾ ವಿಶ್ವಕಪ್ ಟೂರ್ನಿ ಇಲ್ಲಿಯವರೆಗೆ ಸೃಷ್ಟಿಸಿರುವ ಉಜ್ವಲ ಕ್ಷಣಗಳಲ್ಲಿ ವೋಜಿನಾ ಅವರ ಆಟವೂ ಒಂದು. ಲಯೊನೆಲ್ ಮೆಸ್ಸಿ, ಕ್ರಿಸ್ಟಿಯಾನೊ ರೊನಾಲ್ಡೊ, ಕೈಲಿಯನ್ ಎಂಬಾಪೆ, ನೇಮರ್ ಹೆಸರುಗಳ ಜೊತೆಗೆ ಈಗ ವೋಜಿನಾ ಅವರ ಹೆಸರು ರಾರಾಜಿಸತೊಡಗಿದೆ. ಫುಟ್‌ಬಾಲ್ ಅಂಗಳದ ಇತಿಹಾಸದ ಪುಸ್ತಕದಲ್ಲಿ ಅಮೋಘ ಸಾಧನೆ ಮಾಡಿರುವ ಕಪ್ಪುವರ್ಣೀಯ ಆಟಗಾರರ ಪಟ್ಟಿಗೆ ಅವರ ಹೆಸರೂ ಸೇರಿಕೊಂಡಿದೆ. ಫಿಫಾ ವಿಶ್ವಕಪ್ ಚರಿತ್ರೆಯ ಪುಟಗಳನ್ನು ತಿರುವಿ ಹಾಕಿದರೆ ಈ ಆಟದ ಹೊಳಪನ್ನು ಹೆಚ್ಚಿಸಿದ ಕಪ್ಪುವರ್ಣೀಯ ಆಟಗಾರರ ಸಂಖ್ಯೆ ದೊಡ್ಡದು. ಬ್ರೆಜಿಲ್ ದಿಗ್ಗಜ ಪೆಲೆ ಅವರ ಸಾಧನೆಯು ಈಗಿನ ಪೀಳಿಗೆಯನ್ನೂ ಪ್ರಭಾವಿಸುತ್ತಿರುವುದು ಸುಳ್ಳಲ್ಲ.

ಅಮೆರಿಕದಲ್ಲಿ ಶ್ವೇತ ಮತ್ತು ಕಪ್ಪುವರ್ಣೀಯರ ನಡುವಿನ ಸಂಘರ್ಷಗಳು ಹೆಚ್ಚು. ಇದರ ಪರಿಣಾಮವು ಇಲ್ಲಿ ನಡೆಯುತ್ತಿರುವ ಫಿಫಾ ವಿಶ್ವಕಪ್ ಟೂರ್ನಿಯ ಮೇಲೆ ಆಗದಿರಲಿ ಎಂಬ ಕಾರಣಕ್ಕೆ ವರ್ಣ ತಾರತಮ್ಯ ತಡೆಗೆ ಕಠಿಣ ನಿಯಮಗಳನ್ನು ಫಿಫಾ ಜಾರಿಗೊಳಿಸಿದೆ.

ಈ ಹಿಂದಿನಿಂದಲೂ ಫುಟ್‌ಬಾಲ್ ಅಂಗಳದಲ್ಲಿ ಕಪ್ಪುವರ್ಣೀಯ ಆಟಗಾರರ ಪಾರಮ್ಯ ದೊಡ್ಡದು. ಈ ಸಲದ ಟೂರ್ನಿಯಲ್ಲಿಯಂತೂ ಬಹುತೇಕ ತಂಡಗಳಲ್ಲಿ ಆಫ್ರಿಕನ್ ಆಟಗಾರರು ಇದ್ದಾರೆ. ಅವರ ಚುರುಕಾದ ಆಟವು ಜನಮನ ಸೆಳೆಯುತ್ತಿದೆ. ಇತ್ತೀಚೆಗೆ ಸೌದಿ ಅರೇಬಿಯಾ ಎದುರು ಗೋಲು ಗಳಿಸಿದ ಸ್ಪೇನ್‌ನ 18 ವರ್ಷದ ಲೇಮಿನ್ ಯಮಾಲ್ ಹೊಸ ಭರವಸೆ ಮೂಡಿಸಿದ್ದಾರೆ. ಫ್ರಾನ್ಸ್ ತಂಡದ 'ದಂತಕಥೆ' ಕೈಲಿಯನ್ ಎಂಬಾಪೆ ಅವರು ವಿಶ್ವಕಪ್ ಗೋಲು ಗಳಿಸಿದವರ ಪಟ್ಟಿಯ ಅಗ್ರಸ್ಥಾನದಲ್ಲಿರುವ ಲಯೊನೆಲ್ ಮೆಸ್ಸಿಯನ್ನು ಸರಿಗಟ್ಟುವ ಉತ್ಸಾಹದಲ್ಲಿದ್ದಾರೆ. ಅಷ್ಟೇ ಏಕೆ, ಇಂಗ್ಲೆಂಡ್ ತಂಡದಲ್ಲಿನ 26 ಆಟಗಾರರ ಪೈಕಿ 15 ಮಂದಿ ಕಪ್ಪುವರ್ಣೀಯ ಮತ್ತು ಮಿಶ್ರವರ್ಣೀಯ ಆಟಗಾರರು ಇರುವುದು ವಿಶೇಷ. ಆತಿಥೇಯ ಅಮೆರಿಕ ತಂಡದಲ್ಲಿಯೂ ಇದ್ದಾರೆ. ಯುರೋಪ್ ದೇಶಗಳು ಮತ್ತು ಅಮೆರಿಕಕ್ಕೆ ಒಲಿಂಪಿಕ್ಸ್, ಫಿಫಾ ಸೇರಿದಂತೆ ಪ್ರತಿಷ್ಠಿತ ಸ್ಪರ್ಧೆಗಳಲ್ಲಿ ಪ್ರಶಸ್ತಿ ತಂದುಕೊಡುವಲ್ಲಿ ಕಪ್ಪುವರ್ಣೀಯ ಆಟಗಾರರದ್ದೇ ಸಿಂಹಪಾಲು. ಇಷ್ಟಾದರೂ ಅವರ ಮೇಲಿನ ದೌರ್ಜನ್ಯ ಮತ್ತು ದ್ವೇಷದ ನಡವಳಿಕೆಗಳು ಇಂದಿಗೂ ನಡೆಯುತ್ತಲೇ ಇವೆ.

ನಾಗರಿಕ ಸಮಾಜಕ್ಕೆ ಕಪ್ಪು ಚುಕ್ಕೆಯಂತಹ ವರ್ಣ ತಾರತಮ್ಯ ಪಿಡುಗಿಗೆ ತಡೆಯೊಡ್ಡಲು ಫಿಫಾ ಶ್ರಮಿಸುತ್ತಿದೆ. 2022ರ ವಿಶ್ವಕಪ್ ಟೂರ್ನಿಯಿಂದ ಇಲ್ಲಿಯವರೆಗೆ 50 ಭಾಷೆಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹಾಕಿದ್ದ ಜನಾಂಗೀಯ ನಿಂದನೆಯ ಅಂದಾಜು 3 ಕೋಟಿ ಪೋಸ್ಟ್‌ಗಳನ್ನು ಕಿತ್ತುಹಾಕಲಾಗಿದೆ ಎಂದು ಫಿಫಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಇಷ್ಟಾದರೂ, ಜನಾಂಗೀಯ ನಿಂದನೆ ಮತ್ತು ದ್ವೇಷದ ಹೇಳಿಕೆಗಳು ಹೋದ ಬಾರಿಗಿಂತ ಈ ಸಲ ಐದು ಪಟ್ಟು ಹೆಚ್ಚುವ ಆತಂಕವಿದೆ. ಇವುಗಳಿಗೆ ತಡೆಯೊಡ್ಡಲು ತಂತ್ರಜ್ಞಾನ ಬಳಸಿಕೊಳ್ಳುವತ್ತ ಫಿಫಾ ಹೆಜ್ಜೆ ಇಟ್ಟಿದೆ.

ಈಚೆಗೆ ನಡೆದ ಪರಗ್ವೆ ಮತ್ತು ಟರ್ಕಿ ಪಂದ್ಯದಲ್ಲಿ ಪರಗ್ವೆಯ ಮಿಗೇಲ್ ಅಲ್ಮಿರಾನ್ ಅವರು ಬಾಯಿಗೆ ಪಟ್ಟಿ ಕಟ್ಟಿಕೊಂಡಿದ್ದರು. ಈ ರೀತಿ ಪಟ್ಟಿ ಕಟ್ಟಿಕೊಂಡು ಎದುರಾಳಿ ಆಟಗಾರರನ್ನು ಜನಾಂಗೀಯ ನಿಂದನೆ ಅಥವಾ ಅವಾಚ್ಯ ಪದಗಳಿಂದ ನಿಂದಿಸಿದರೆ ವಿಡಿಯೊ ವಿಶ್ಲೇಷಣೆಯಲ್ಲಿ (ವಿ.ಎಆರ್.ನಲ್ಲಿ) ತುಟಿಗಳ ಚಲನೆ ದಾಖಲಾಗುವುದಿಲ್ಲ. ಶಬ್ದವೂ ಅಸ್ಪಷ್ಟವಾಗಿರುತ್ತದೆ. ಆದ್ದರಿಂದ ಬಾಯಿಗೆ ಪಟ್ಟಿ ಕಟ್ಟಿಕೊಳ್ಳುವಂತಿಲ್ಲ ಎಂಬ ನಿಯಮ ಈ ಬಾರಿ ಮಾಡಲಾಗಿದೆ. ಆದರೂ, ಮಿಗೇಲ್ ನಿಯಮ ಉಲ್ಲಂಘಿಸಿದ್ದರು. ಅವರಿಗೆ ರೆಡ್ ಕಾರ್ಡ್ ದರ್ಶನ ಮಾಡಿಸಿ ಹೊರಕಳಿಸಲಾಯಿತು. ಸ್ವಯಂಸೇವಾ ಕಾರ್ಯಕರ್ತರೂ ನಿಯಮಗಳ ಅರಿವು ಮೂಡಿಸಲು ಟೂರ್ನಿಯಲ್ಲಿ ಶ್ರಮಪಟ್ಟು ಕಾರ್ಯನಿರ್ವಹಿಸುತ್ತಿದ್ದಾರೆ. ವಿಶೇಷವಾಗಿ ಪ್ರೇಕ್ಷಕರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸುತ್ತಿದ್ದಾರೆ. ಫಿಫಾ ಅಧ್ಯಕ್ಷ ಜಿಯಾನಿ ಇನ್ಫಾಂಟಿನೊ, 'ವರ್ಣ ತಾರತಮ್ಯ ಸಹಿಸುವುದಿಲ್ಲ. ಅನುಚಿತವಾಗಿ ವರ್ತಿಸಿದವರನ್ನು ಸುಮ್ಮನೆ ಬಿಡುವುದಿಲ್ಲ' ಎಂದು ಘೋಷಿಸಿದ್ದಾರೆ.

ಕಾನೂನು, ಕಟ್ಟಳೆಗಳು ಏನೇ ಇರಲಿ; ಅವುಗಳನ್ನು ಪೂರ್ಣ ಜಾರಿ ಮಾಡುವುದು ಕಷ್ಟಸಾಧ್ಯ. ಜನರಲ್ಲಿ ಅರಿವು ಮೂಡಬೇಕು. ಆಟಗಾರರು ಅಥವಾ ಪ್ರೇಕ್ಷಕರು ಯಾರೇ ಆಗಲಿ; ಅವರನ್ನು ಬಣ್ಣದ ಹಿನ್ನೆಲೆಯಲ್ಲಿ ನೋಡುವುದರ ಬದಲು ಸಾಧನೆಯ ನೆಲೆಗಟ್ಟಿನಲ್ಲಿ ಗುರ್ತಿಸಬೇಕು. ಕ್ರೀಡಾರತ್ನಗಳ ಹೊಳಪನ್ನು ಪ್ರಾಂಜಲವಾಗಿ ನೋಡಬೇಕು. ಅವರ ಸಾಧನೆಗಳಿಂದ ಕ್ರೀಡೆಯೆಂಬ ಭುವನದ ಬೆಡಗು ಹೆಚ್ಚುವುದನ್ನು ಮನಗಾಣಬೇಕು. ಇನ್ನೆರಡು ವರ್ಷಗಳ ನಂತರ ಅಮೆರಿಕದಲ್ಲಿ ಒಲಿಂಪಿಕ್ಸ್ ನಡೆಯಲಿದೆ. ಆ ಹಿನ್ನೆಲೆಯಲ್ಲಿ ಫಿಫಾ ವಿಶ್ವಕಪ್ ಟೂರ್ನಿಯನ್ನು ಅರ್ಥಪೂರ್ಣವಾಗಿ ನಡೆಸುವ ಗುರಿ ಆಯೋಜಕರದ್ದು. ಈ ನಡೆಯು ವಿಶ್ವಕ್ಕೆ ಮಾದರಿಯಾಗಿ ಸಮಾನತೆಯ ಜ್ಯೋತಿ ಬೆಳಗಿದರೆ ಫುಟ್‌ಬಾಲ್ ಕ್ರೀಡೆ ಗೆದ್ದಂತೆ.

'ಕ್ರೀಡೆಗೆ ಎಲ್ಲರನ್ನೂ ಒಗ್ಗೂಡಿಸುವ ಸಾಮರ್ಥ್ಯ ಇದೆ. ಯುವಜನರಿಗೆ ಅವರ ಮನಮುಟ್ಟುವ ಭಾಷೆಯಲ್ಲಿ ಅರಿವು ಮೂಡಿಸುವ ಮಾಧ್ಯಮವೂ ಕ್ರೀಡೆ. ಯಾವುದೇ ಸರ್ಕಾರಕ್ಕಿಂತ ಪರಿಣಾಮಕಾರಿಯಾಗಿ ಆಟದ ಮೂಲಕ ಸಮಾನತೆ, ಸಹೋದರತ್ವದ ಸಂದೇಶವನ್ನು ನೀಡಲು ಸಾಧ್ಯವಿದೆ' ಎಂದು ನೆಲ್ಸನ್ ಮಂಡೇಲಾ ಹೇಳಿದ್ದ ಮಾತು ಇಂದಿಗೂ ಪ್ರಸ್ತುತ.

ಸಾಮಾಜಿಕ ಸೌಹಾರ್ದವನ್ನು ಕಾಪಾಡುವ ಹಿನ್ನೆಲೆಯಲ್ಲಿ, ವಿಶ್ವಶಾಂತಿಯನ್ನು ರೂಪಿಸುವ ನೆಲೆಗಟ್ಟಿನಲ್ಲಿ ಕ್ರೀಡಾಕೂಟಗಳಿಗೆ ವಿಶೇಷ ಮಹತ್ವವಿದೆ ಹಾಗೂ ವೋಜಿನಾ ಅವರಂತಹ ಕ್ರೀಡಾಪಟುಗಳನ್ನು ಸೌಹಾರ್ದದ ರಾಯಭಾರಿಗಳಾಗಿ ಗುರ್ತಿಸಲಾಗುತ್ತದೆ.



ವಾಚಕರ ವಾಣಿ

ಕಾಣಿಕೆಗೆ ಕನ್ನ ಮತ್ತು ಬುಲ್ಡೋಜರ್ ನ್ಯಾಯ

ಉತ್ತರ ಪ್ರದೇಶದಲ್ಲಿ ಕೋಮುಗಲಭೆ, ಸಾರ್ವಜನಿಕ ಆಸ್ತಿ ನಾಶ ಇತ್ಯಾದಿ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿಗಳ ಮನೆಗಳನ್ನು ಬುಲ್ಡೋಜರ್ ಮೂಲಕ ಧ್ವಂಸಗೊಳಿಸಲಾಗುತ್ತಿತ್ತು. ಇದನ್ನು 'ತ್ವರಿತ ನ್ಯಾಯ'ವೆಂದು ಅನೇಕರು ಪ್ರಶಂಸಿಸುತ್ತಿದ್ದರು. ಇದೇ ತರ್ಕದನ್ವಯ ಅಯೋಧ್ಯೆಯ ರಾಮಮಂದಿರದ ಕಾಣಿಕೆ ಕಳವು ಪ್ರಕರಣದ ಆರೋಪಿಗಳ ಮನೆಗಳನ್ನೂ ಧ್ವಂಸಗೊಳಿಸಬೇಕಲ್ಲವೆ?

ಕೋಟ್ಯಂತರ ಜನರ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ತಂದಿರುವ ಈ ಪ್ರಕರಣವನ್ನು ದೇಶದ್ರೋಹದ ಅಪರಾಧಕ್ಕೆ ಸಮನಾಗಿ ಪರಿಗಣಿಸಿ 'ತ್ವರಿತ ನ್ಯಾಯ' ದೊರಕಿಸಬೇಕು. ಆಗಷ್ಟೇ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು, ತಮ್ಮ ಬುಲ್ಡೋಜರ್ ನ್ಯಾಯ ಒಂದು ಧರ್ಮದವರಿಗಷ್ಟೇ ಸೀಮಿತ ಎಂಬ ಅಪವಾದದಿಂದ ಮುಕ್ತರಾಗಿ ವಾಜಪೇಯಿಯವರು ಪ್ರತಿಪಾದಿಸುತ್ತಿದ್ದ 'ರಾಜಧರ್ಮ'ವನ್ನು ಪಾಲಿಸಿದಂತಾಗುತ್ತದೆ.

ಟಿ. ಜಯರಾಂ, ಕೋಲಾರ

'ಪ್ಯಾಕೇಜ್' ಪ್ರಾಬಲ್ಯ: ಗುಣ ನಡತೆ ಗೌಣ

ತನ್ನ ಎಂಜಿನಿಯರ್ ಮಗನಿಗೆ ಹುಡುಗಿ ಹುಡುಕುತ್ತಿದ್ದ ಆಪ್ತ ಗೆಳತಿಯೊಬ್ಬಳು ಮೊನ್ನೆ ಪೇಟೆಯಲ್ಲಿ ಸಿಕ್ಕಿದ್ದಳು. 'ಮಗನಿಗೆ ಹುಡುಗಿ ಆಯಿತಾ?' ಎಂದೆ. 'ಎಲ್ಲಿಂದ ಆಗುವುದು? ಹುಡುಗಿ ಕಡೆಯವರು ನೇರವಾಗಿ ಹುಡುಗನಿಗೆ ಪ್ಯಾಕೇಜ್ ಎಷ್ಟು' ಎಂದು ಕೇಳುತ್ತಿದ್ದಾರೆ. 'ಅವರು ಮದುವೆಯಾಗುವುದು ಹುಡುಗನನ್ನೋ, ಪ್ಯಾಕೇಜನ್ನೋ? ನನ್ನ ಮಗನಿಗೇನೋ ಒಳ್ಳೆಯ ಸಂಬಳವಿದೆ. ಹಾಗೆಂದು ಹೀಗೆ ಪ್ರಶ್ನಿಸುವ ಮನೋಭಾವ ನನಗಿಷ್ಟವಾಗಲಿಲ್ಲ. ಹುಡುಗನ ಗುಣ-ನಡತೆ ಬಗ್ಗೆ ತಿಳಿಯುವುದು ಬಿಟ್ಟು ಪ್ಯಾಕೇಜನ್ನು ಪ್ರಶ್ನಿಸುತ್ತಿದ್ದಾರಲ್ಲ? ಹಾಗಾಗಿ, ಒಲ್ಲೆ ಅಂದುಬಿಟ್ಟೆ' ಎಂದಳು. ಅವಳು ಹೇಳಿದ್ದು ಸರಿ. ಇಂದು ಹಣ ಗಳಿಕೆಯೇ ಜೀವನದ ಪರಮೋಚ್ಚ ಗುರಿ ಎನ್ನುವಂತಾಗಿದೆ. ಜೀವನದ ಮೌಲ್ಯಗಳು ಕಣ್ಮರೆಯಾಗಿವೆ. ಸಮಾಜ ಎತ್ತ ಸಾಗುತ್ತಿದೆ?

ಸಹನಾ ಕಾಂತಬೈಲು, ಮಡಿಕೇರಿ

ತಾರ್ಕಿಕ ಲೋಪ: ಜನರ ಹೊಣೆ ಬೇಡ

ರಾಜ್ಯದಲ್ಲಿ ಜೂನ್ 30ರಿಂದ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ ಆರಂಭವಾಗಲಿದೆ. ಬೂತ್ ಮಟ್ಟದ ಅಧಿಕಾರಿಗಳು ಮನೆಗಳಿಗೆ ತೆರಳಿ ಮತದಾರರ ವಿವರ ದಾಖಲಿಸಲಿದ್ದಾರೆ. ಈ ದಾಖಲೆಯಲ್ಲಿ 2002ರ ಮತದಾರರ ಪಟ್ಟಿಯಲ್ಲಿ ಇರುವ ಹೆಸರುಗಳು ದಾಖಲಾಗಲಿವೆ. ಆ ಹೆಸರುಗಳನ್ನು 2025ರ ಮತದಾರರ ಪಟ್ಟಿಯಲ್ಲಿ ಇರುವ ಹೆಸರುಗಳಿಗೆ ಹೋಲಿಸಿದಾಗ ಕಾಗುಣಿತದ ವ್ಯತ್ಯಾಸಗಳಿದ್ದರೆ, ಅದು ಮುಂದೆ 'ತಾರ್ಕಿಕ ಲೋಪ' ಆಗಲಿದೆ. ತಮ್ಮದಲ್ಲದ ಇಂತಹ ಲೋಪಗಳಿಗೆ ಮತದಾರರನ್ನು ಹೊಣೆಯಾಗಿಸುವುದು ಅನ್ಯಾಯ. ದಾಖಲೀಕರಣದ ಮೊದಲ ಹಂತದಲ್ಲೇ ಈ ಲೋಪ ಸರಿಪಡಿಸಿ ಕರಡು ಪಟ್ಟಿ ತಯಾರಿಸಿದ್ದರೆ ಲಕ್ಷಾಂತರ ಮತದಾರರು ಮುಂದಿನ ಹಂತದಲ್ಲಿ ತನಿಖೆ ಎದುರಿಸುವುದು, ಮತದಾರರ ಪಟ್ಟಿಯಿಂದ ಹೊರಗುಳಿಯುವುದು ತಪ್ಪುತ್ತಿತ್ತು. ಚುನಾವಣಾಧಿಕಾರಿಗಳು ಮೊದಲ ಹಂತದಲ್ಲೇ ಇದನ್ನು ಸರಿಪಡಿಸಬೇಕಿದೆ. ಇಲ್ಲದಿದ್ದರೆ ಅನಾಹುತ ತಪ್ಪದು.

ಕೆ. ಫಣಿರಾಜ್, ಉಡುಪಿ

ಐಪಿಎಲ್ ಜಪ: ಟೆಸ್ಟ್ ಕ್ರಿಕೆಟ್‌ಗೆ ಉರುಳು

ಭಾರತ ಕ್ರಿಕೆಟ್ ತಂಡದ ಇತ್ತೀಚಿನ ಸೋಲುಗಳು ಆತ್ಮಾವಲೋಕನಕ್ಕೆ ಕನ್ನಡಿ ಹಿಡಿದಿವೆ. ಐಪಿಎಲ್‌ಗೆ ಅತಿಯಾದ ಮಹತ್ವ ನೀಡುತ್ತಿರುವ ಪರಿಣಾಮ, ಆಟಗಾರರು ಕ್ರಿಕೆಟ್‌ನ ಮೂಲಭೂತ ಕೌಶಲಗಳಿಂದ ದೂರ ಸರಿಯುತ್ತಿದ್ದಾರೆ. ಹಲವು ಆಟಗಾರರು ಬೌಂಡರಿ ಮತ್ತು ಸಿಕ್ಸರ್‌ಗಳನ್ನೇ ಯಶಸ್ಸಿನ ಮಾನದಂಡ ಎಂದು ಭಾವಿಸುತ್ತಿದ್ದಾರೆ. ಆದರೆ, ಕ್ರಿಕೆಟ್ ಎಂದರೆ ಬರೀ ಬೌಂಡರಿಗಳ ಆಟವಲ್ಲ. ತಾಳ್ಮೆ, ತಾಂತ್ರಿಕ ಕೌಶಲ, ಉತ್ತಮ ಫೀಲ್ಡಿಂಗ್, ವಿಕೆಟ್‌ನ ಮೌಲ್ಯ ಮತ್ತು ಎದುರಾಳಿಗೆ ಗೌರವ ನೀಡುವುದೇ ನಿಜವಾದ ಕ್ರಿಕೆಟ್. ಈ ಗುಣಗಳನ್ನು ಬೆಳೆಸುವುದು ಟೆಸ್ಟ್ ಕ್ರಿಕೆಟ್. ಐಪಿಎಲ್ ಉತ್ತಮ ವೇದಿಕೆಯೇನೋ ಸರಿ. ಆದರೆ, ಟೆಸ್ಟ್ ಪಂದ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಈ ಮಾದರಿಯಲ್ಲಿ ಆಡಿದ ಆಟಗಾರರು ಯಾವುದೇ ಮಾದರಿಯ ಕ್ರಿಕೆಟ್‌ನಲ್ಲಿ ಯಶಸ್ವಿಯಾಗಬಹುದು.

ಕದ್ರೇಶ್ ಕುಮಾರ್ ವಿ.ಎನ್., ಮಳವಳ್ಳಿ

ಕುರ್ಚಿ ಕಸರತ್ತು: ಮತದಾರ ಅಸಹಾಯಕ

'ನಂಬಿ ಕೆಟ್ಟವರೇ ಎಲ್ಲರೂ..!' ಲೇಖನವು (ಲೇ: ರವೀಂದ್ರ ಭಟ್ಟ, ಪ್ರ.ವಾ., ಜೂನ್ 29) ಸಕಾಲಿಕ ಬರಹ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರನಷ್ಟು ಅಸಹಾಯಕ ಬೇರೊಬ್ಬರಿಲ್ಲ. ರಾಜ್ಯದಲ್ಲಿ ಮುಖ್ಯಮಂತ್ರಿ ಸೇರಿದಂತೆ ಸಚಿವರು, ಶಾಸಕರು ತಮ್ಮ ಕುರ್ಚಿ ಉಳಿಸಿಕೊಳ್ಳಲಷ್ಟೆ ಒತ್ತು ನೀಡುತ್ತಿರುವುದು ಪ್ರಜೆಗಳಿಗೆ ಬೇಸರ ತರಿಸಿದೆ. ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ. ಸದ್ಯದ ರಾಜಕೀಯ ಪರಿಸ್ಥಿತಿ ನೋಡಿದರೆ ಕರ್ನಾಟಕದ ಮತದಾರರ ಸ್ಥಿತಿ ಇಂಗು ತಿಂದ ಮಂಗನಂತಾಗಿದೆ. ಗ್ಯಾರಂಟಿ ಪರಾಮರ್ಶೆಯ ನೆಪದಲ್ಲಿ ಅರ್ಹರು ಸೌಲಭ್ಯದಿಂದ ವಂಚಿತರಾಗಬಾರದು.

ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ

ಫಲಭರಿತ ಮರಗಳ ಕಡಿಯಲು ಹಗ್ಗಜಗ್ಗಾಟ

ಬಿಡದಿ ಟೌನ್‌ಶಿಪ್‌ಗೆ ಸಂಬಂಧಿಸಿದಂತೆ ಸರ್ಕಾರ ಮತ್ತು ರೈತರ ನಡುವೆ ಸಂಘರ್ಷ ತಲೆದೋರಿದೆ. ಪೀಳಿಗೆಯಿಂದ ಪೀಳಿಗೆಗೆ ಉಳಿದುಬಂದಿರುವ ಭೂಮಿಯು ರೈತರ ಆಸ್ತಿ ಮಾತ್ರವಲ್ಲ; ಅವರ ಬದುಕಿನ ಉಸಿರು-ಆತ್ಮಸಾಕ್ಷಿಯ ಪ್ರತಿಬಿಂಬ. ಅದನ್ನು ಉಳಿಸಿಕೊಳ್ಳಲು ರೈತರು 'ಅಪ್ಪಿಕೋ' ಚಳವಳಿ ನಡೆಸುತ್ತಿರುವುದು ಪ್ರಜಾಸತ್ತಾತ್ಮಕ ಮೌಲ್ಯಗಳ ಜೀವಂತ ಉದಾಹರಣೆಯಾಗಿದೆ. ಇದರಲ್ಲಿ ರೈತರ ಮಕ್ಕಳು ಭಾಗವಹಿಸಿದ್ದಾರೆ. ಇದು ಮಣ್ಣಿನ ಮೇಲೆ ಅವರಿಗಿರುವ ಆಳವಾದ ಪ್ರೀತಿಯನ್ನು ತೋರಿಸುತ್ತದೆ. ಆದರೆ, ಸರ್ಕಾರದ ಜಾಣಮೌನವು ಸಂವಿಧಾನದ ಆಶಯಗಳಿಗೆ ವಿರುದ್ಧವಾದುದು. ಮುಖ್ಯಮಂತ್ರಿ ಅವರು ಬಂಡವಾಳಶಾಹಿಗಳ ಒತ್ತಡಕ್ಕೆ ಮಣಿಯದೆ ರೈತರ ಭೂಮಿ ಉಳಿಸಿ, ಅವರ ಹಿತಾಸಕ್ತಿಯನ್ನು ಕಾಪಾಡಬೇಕಿದೆ.

ಹನುಮಂತ ಎನ್.ಬಿ., ಧಾರವಾಡ



ಏನಿದು ವೈರುಧ್ಯ?

ಒಂದು ಕಡೆ 'ಬಿಜೆಪಿಗೆ ಓಟು ಹಾಕದವರ ಹೆಸರು ಡಿಲಿಟ್ ಮಾಡುವುದೇ ಎಸ್‌ಐಆರ್' ಎನ್ನುವ ಕಾಂಗ್ರೆಸ್, ಇನ್ನೊಂದು ಕಡೆ 'ಓಟರ್ ಐಡಿಯಲ್ಲಿ ಹೆಸರು ಡಿಲಿಟ್ ಆದವರಿಗೆ ಗ್ಯಾರಂಟಿ ಇಲ್ಲ' ಅನ್ನುತ್ತಿದೆ! ಏನಿದು ವೈರುಧ್ಯ?

ಪ್ರಕಾಶ್ ರಾಜ್ ಮೇಹು, ಚಲನಚಿತ್ರ ನಿರ್ದೇಶಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರೇ, ಕಲ್ಯಾಣ ಕರ್ನಾಟಕದ ಶಾಲೆಗಳ ದುರಸ್ತಿ ಬಗ್ಗೆ ಮುಖ್ಯಮಂತ್ರಿ ಅವರಿಗೆ ಯಾವಾಗ ಪತ್ರ ಬರೆಯುತ್ತೀರಿ? ಕೆಲಸದಲ್ಲಿ ಜೀರೊ, ವಿವಾದದಲ್ಲಿ ಹೀರೊ ಎನ್ನುವಂತಾಗಿದೆ ನಿಮ್ಮ ಪರಿಸ್ಥಿತಿ.

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 30-6-2001

• ತೆಲುಗು ಗಂಗಾ ಯೋಜನೆ ತಡೆಗೆ ರಾಜ್ಯದ ಮನವಿ

ನವದೆಹಲಿ (ಪ್ರಜಾವಾಣಿ ವಾರ್ತೆ) ಜೂನ್ 29 – ತೆಲುಗು ಗಂಗಾ ಮತ್ತು ಶ್ರೀಶೈಲಂ ಎಡದಂಡೆ ಕಾಲುವೆ ಯೋಜನೆ ತಡೆಹಿಡಿಯುವಂತೆ ಆಂಧ್ರಕ್ಕೆ ಆದೇಶಿಸಲು ಕೇಂದ್ರಕ್ಕೆ ನಿರ್ದೇಶಿಸುವಂತೆ ಕೋರಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದೆ.

ರಾಜ್ಯವನ್ನು ಪ್ರತಿನಿಧಿಸುವ ವಕೀಲರ ತಂಡದಲ್ಲೊಬ್ಬರಾದ ಸಂಜಯ ಹೆಗಡೆ ಅವರು ರಾಜ್ಯ ಸರ್ಕಾರದ ಪರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಇಂದು ಮನವಿ ಸಲ್ಲಿಸಿದರು. ಅನುಮತಿ ಇಲ್ಲದ ಈ ಯೋಜನೆಗಳನ್ನು ಆಂಧ್ರ ಕೈಗೆತ್ತಿಕೊಂಡಿದ್ದನ್ನು ರಾಜ್ಯ ಸರ್ಕಾರ ತೀವ್ರವಾಗಿ ಆಕ್ಷೇಪಿಸಿದೆ.

75 ವರ್ಷಗಳ ಹಿಂದೆ

ಶನಿವಾರ, 30-6-1951

• 'ಬಟ್ಟೆ ಪರಿಸ್ಥಿತಿ ಸುಧಾರಿಸುವ ಸೂಚನೆಗಳು ಕಂಡುಬಂದಿವೆ'

ಬೆಂಗಳೂರು, ಜೂನ್ 29– ಬಟ್ಟೆ ಪರಿಸ್ಥಿತಿಯು ಉತ್ತಮವಾಗುವ ಚಿಹ್ನೆಗಳು ಕಂಡುಬರುತ್ತಿವೆ ಎಂದು ಸಂಸ್ಥಾನದ ನೂಲು ಮತ್ತು ಬಟ್ಟೆ ಪರಿಸ್ಥಿತಿಯ ಬಗ್ಗೆ ಸರಬರಾಜು ಇಲಾಖೆಯ ಡೈರೆಕ್ಟರಾದ ಎಂ.ಕೆ. ಅಪ್ಪಾಜಪ್ಪನವರು ಇಂದು ತಿಳಿಸಿದರು.

ಮುಂದುವರಿದು ಅಪ್ಪಾಜಪ್ಪನವರು, '1949ನೇ ಸಾಲಿನ ಅಂತ್ಯದವರೆವಿಗೂ ಬಟ್ಟೆ ಮತ್ತು ನೂಲಿನ ಸ್ಥಿತಿ ಸಮಾಧಾನಕರವಾಗಿತ್ತು. ಆಗ ಸಂಸ್ಥಾನಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಪದಾರ್ಥಗಳು ಬರುತ್ತಿದ್ದವು. ಆದರೆ, ನೂಲಿನ ಮತ್ತು ಬಟ್ಟೆಯ ರಫ್ತಿನ ಬಗ್ಗೆ ಕೇಂದ್ರ ಸರ್ಕಾರದ ನೂತನ ತತ್ವದ ಪರಿಣಾಮವಾಗಿ, 1949ರ ನವೆಂಬರ್ ತಿಂಗಳಿಂದೀಚೆಗೆ ಕ್ರಮೇಣವಾಗಿ ಬಟ್ಟೆಯ ಅಭಾವ ಹೆಚ್ಚಾಗುತ್ತಾ ಬಂದು, 1951ನೇ ಫೆಬ್ರುವರಿ ಮಾಹೆಯ ವೇಳೆಗೆ ಬಟ್ಟೆ ಮತ್ತು ನೂಲಿನ ಅಭಾವ ವಿಪರೀತವಾಯಿತು' ಎಂದರು.

ಚುರುಮುರಿ



ಸಾಕ್ಷಿಗುಡ್ಡೆ

• ಡಿ.ಎಸ್. ಲಿಂಗರಾಜು

'ನಾನು ಅಯೋಧ್ಯೆಗೆ ಓಗಿದ್ದಾಗ ಹುಂಡಿಗೆ ಐನೂರು ರೂಪಾಯಿ ಕಾಸಾಕಿ ಬಂದುದ್ದೆ. ಅಲ್ಲಿದ್ದ ಮಾನಗೆಟ್ಟವು ಮರ್ಯಾದಾ ಪುರುಸ ರಾಮನ ಹುಂಡಿಗೆ ಕನ್ನ ಹಾಕಿ ದುಡ್ಡು ಕದ್ದವಂತಲ್ಲೋ?' ಎಂದು ಯಂಟಪಣ್ಣ ರಾಮನ ದುಡ್ಡಿನ ಚಿಂತೆಗೆ ಬಿದ್ದಿತ್ತು.

'ಯಂಟಪ್ಪಣ್ಣೆ, ನೀನು ಹುಂಡಿಗೆ ಹಾಕಿದ ಕಾಸಿನ ಮ್ಯಾಲೆ ನಿನ್ನ ಹೆಸರು, ಗುರುತು ಇತ್ತಾ? ಯಾರದೋ ಖಾತೇಲಿ ನಿನ್ನ ಕಾಸು ಕೊರಗ್ತಾ ಕುಂತಿರಬಕು' ಎಂದು ತಿಪ್ಪಣ್ಣ ಜೋಕು ಮಾಡಿದ.

'ಈಗ ಗುರುತಿನ ರಾಜಕಾರಣ ಸುರುವಾಗ್ಯದೆ. ಜನಗಣತೀಲಿ ನಾವು ಭಾರತದ ಪ್ರಜೆಗಳೇ ಅನ್ನದು ಊರ್ಜಿತಾಗಬೇಕು ಕನಿರ್ಲಾ. ಇಲ್ಲದೇ ಹೋದ್ರೆ ಯಾರೂ ಕ್ಯಾರೆ ಅನ್ನಕುಲ್ಲ' ಎಂದು ತುರೇಮಣೆ ಹೆದರಿಸಿದರು.

'ದಿಟವೇನ್ಲಾ? ರೇಶನ್ ಕಾರ್ಡು, ಡ್ರೈವಿಂಗ್ ಲೈಸೆನ್ಸ್, ಆಧಾರ್ ಅದಲ್ಲೋ' ಯಂಟಪ್ಪಣ್ಣನಿಗೆ ಐಡೆಂಟಿಟಿ ಕ್ರೈಸಿಸ್ ಸುರುವಾಗಿತ್ತು.

'ಅಣೈ ಆಧಾರೂ ನಿರಾಧಾರವಂತೆ. ಪ್ಯಾನ್ ಕಾರ್ಡು, ಪಾಸ್‌ಪೋರ್ಟೂ ಫೇಲಂತೆ. ಜನಗಣತೀಲಿ ಹೆಸರಿಲ್ಲದಿದ್ರೆ ಮತದಾರರ ಚೀಟಿನೂ ದಿಟವಲ್ಲವಂತೆ. ರೇಶನ್ ಕಾರ್ಡು ಬೋಗಸ್ಸಂತೆ, ಡ್ರೈವಿಂಗ್ ಲೈಸೆನ್ಸ್ ಲೆಕ್ಕಕ್ಕಿಲ್ಲವಂತೆ. ಹಂಗಾದ್ರೆ ನಮ್ಮ ಗುರುತು ಎಲ್ಲದೆ?' ನನಗೆ ವ್ಯಥೆಯಾಯಿತು.

'ಅಣ್ತಮ್ಮ ನಾವು ನಾವೇಯ ಅನ್ನಕ್ಕೆ ಸಾಕ್ಷಿಗುಡ್ಡೆ ಎಲ್ಲಿ ಮಾಡಮು' ತಿಪ್ಪಣ್ಣ ಜೋಕು ಮಾಡಿದ.

'ಕ್ಯಾಮೆ ಇಲ್ಲದಿರೋ ರಾಜಕಾರಣಿಗಳು 'ನನ್ನ ಕ್ಷೇತ್ರ, ನನ್ನ ಖಾತೆ. ಅಲ್ಲಿ ನನ್ನ ಗುರುತದೆ' ಅಂತ ಹೊಯ್ಕತರಲ್ಲ, ಅದೇನು ಇವರ ಚಪಗೋಡೇನ್ರೋ? ಅಲ್ಲೇನು ಇವರು ಶಾಸನ ಕೆತ್ತಿ ಮಡಗವ್ರ?' ಯಂಟಪ್ಪಣ್ಣ ಸಿಟ್ಟಾಯ್ತು.

'ಸತ್ತ ಮ್ಯಾಲೆ ಯಮಧರ್ಮಪ್ಪನ ಮುಂದೆ ನಿಂತುಕಂದಾಗ ಚಿತ್ರಗುಪ್ತನ ಖಿರ್ದೀಲಿ ಮಾತ್ರ ದಿಟವಾದ ಗುರುತು ಕಾಣ್ತದೆ ಬುಡು' ಅಂತ ಸಮಾಧಾನ ಮಾಡಿದೆ.

'ಗುರುತು, ಸೌಲಭ್ಯ ಕಳಕಂದು ಸರ್ಕಾರದ ಚರುಪಿಗೆ ಕಾಯ್ಕಂದು ನಿಲ್ಲೋರು ಜನಸಾಮಾನ್ಯರು ಮಾತ್ರ. ಅದ ತಿಳಕಂದು ನಿಮ್ಮ ಸಾಕ್ಷಿಗುಡ್ಡೆ ರೆಡಿ ಮಾಡ್ಕಳಿ' ಎಂದು ತುರೇಮಣೆ ಅಂತಿಮ ಸತ್ಯ ನುಡಿದರು.

ಸಂಗತ

ಅರ್ಥಪೂರ್ಣ ಪ್ರವಾಸಕ್ಕೆ 'ಪರಿಸರ ಸಂಹಿತೆ'


ಮನರಂಜನೆ ಮಾತ್ರವಲ್ಲ, ಮನೋವಿಕಾಸವೂ ಪ್ರವಾಸದ ಭಾಗವಾಗಿದೆ. ಪರಿಸರ ಕಾಳಜಿಯ ಉತ್ತರದಾಯಿತ್ವವೂ ಪ್ರವಾಸವನ್ನು ಅರ್ಥಪೂರ್ಣಗೊಳಿಸುತ್ತದೆ.

• ಪ್ರಸಾದ ಶೆಣೈ ಆರ್.ಕೆ.

ಕಾಡಂಚಿನ ಮನಮೋಹಕ ದಾರಿ. ರಸ್ತೆಯ ಪಕ್ಕದಲ್ಲಿ ಕಣ್ಣಿಗೆ ಸುಲಭಕ್ಕೆ ಬೀಳದಂತಹ ಪುಟ್ಟದೊಂದು ಜಲಪಾತ! ನೀರಧಾರೆಯ ಹಿನ್ನೆಲೆಯಲ್ಲಿ ಬೆಟ್ಟಗಳ ಭಿತ್ತಿ. ಮನುಷ್ಯನ ಅತಿಯಾದ ಹಸ್ತಕ್ಷೇಪವಿಲ್ಲದ ಶುದ್ಧ ಜಲಪಾತವದು. ಕಸ, ಮಾಲಿನ್ಯಗಳಿಂದ ಮುಕ್ತವಾದ ಸಹಜ ಚೆಲುವು. ಆ ಜಾಗಕ್ಕೆ ಒಮ್ಮೆ ಎಲ್ಲಿಂದಲೋ ಬಂದ ಪ್ರವಾಸಿ ಜೋಡಿಗಳು ಅಲ್ಲಿನ ಅದ್ಭುತ ದೃಶ್ಯಕ್ಕೆ ಮರುಳಾಗಿ ಫೋಟೊ ಶೂಟ್ ಮಾಡಿದರು. ಅಲ್ಲಿಂದ ಮುಂದೆ ಬೇರೆಯದೇ ಕಥೆ.

ಜಲಪಾತ ಮತ್ತು ಕಾಡಿನ ರೀಲ್ಸ್‌ಗಳನ್ನು ಮಾಡಿ, 'ಇದು ಯಾರ ಕಣ್ಣಿಗೂ ಬೀಳದ ಅಜ್ಞಾತತಾಣ' ಎಂದು ಬಣ್ಣಿಸಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದರು. ಆ ಸ್ಥಳದ ಗೂಗಲ್ ಲೊಕೇಶನ್ ಕೊಂಡಿಯನ್ನೂ ಹಾಕಿ, 'ನೀವು ನೋಡಲೇಬೇಕಾದ ತಾಣವಿದು' ಎಂದು ಶಿಫಾರಸು ಮಾಡಿದರು. ಅವರ ಫೋಟೊ, ರೀಲ್ಸ್‌ಗಳು ವೈರಲ್ ಆದವು. ಆ ಚೆಂದದ ಸ್ಥಳದ ಲೊಕೇಶನ್ ಹಿಡಿದು ರಾಶಿ ರಾಶಿ ಪ್ರವಾಸಿಗರು ಅಲ್ಲಿಗೆ ಧಾವಿಸಿ ಬರತೊಡಗಿದರು. ಮತ್ತೊಂದಷ್ಟು ರೀಲ್ಸ್, ವಿಡಿಯೊಗಳು ಜಾಲತಾಣಗಳ ತುಂಬೆಲ್ಲಾ ಹರಡಿ, ಆ ತಾಣ ಜನಪ್ರಿಯವಾಯಿತು.

ಪ್ಲಾಸ್ಟಿಕ್ ಕಸದ ಸುಳಿವೇ ಇಲ್ಲದಿದ್ದ ಆ ಕಾಡಿನಲ್ಲಿ, ನಿಷ್ಕಲ್ಮಶವಾಗಿ ಹರಿಯುತ್ತಿದ್ದ ಜಲಪಾತದಲ್ಲಿ ಪ್ಲಾಸ್ಟಿಕ್ ಕಸಗಳು, ಬಾಟಲಿಗಳು ಕೆಲವೇ ತಿಂಗಳುಗಳಲ್ಲಿ ಸೇರಿಕೊಂಡವು. ಹಸುರಿನ ನಡುವೆಯೊಂದು ಪ್ಲಾಸ್ಟಿಕ್ ತಿಪ್ಪೆ ಸೃಷ್ಟಿಯಾಯಿತು. ಅಲ್ಲಿಯವರೆಗೆ ಪ್ರಾಕೃತಿಕ ಪರಿಮಳದಿಂದ, ಸೌಂದರ್ಯದಿಂದ ತುಂಬಿಕೊಂಡಿದ್ದ ಆ ತಾಣದಲ್ಲಿ, ಮಾನವ ಕಸಗಳು ದುರ್ಗಂಧ ಬೀರತೊಡಗಿದವು.



ಒಂದು ಅಜ್ಞಾತ ಪ್ರಾಕೃತಿಕ ತಾಣ ಪ್ರಸಿದ್ಧಿಗೆ ಬಂದರೆ ಏನೆಲ್ಲಾ ದುರಂತಗಳಾಗುತ್ತವೆ ಎನ್ನುವುದಕ್ಕೆ ಮೇಲಿನ ಪ್ರಸಂಗ ಉದಾಹರಣೆಯಂತಿದೆ. ಇದು ಬರೀ ಒಂದು ಊರಿನ ಕತೆಯಲ್ಲ; ಮಲೆನಾಡು ಹಾಗೂ ಕರಾವಳಿಯ ಇಂತಹ ಎಷ್ಟೋ ಅಜ್ಞಾತ ತಾಣಗಳು ಸಾಮಾಜಿಕ ಜಾಲತಾಣಗಳ ರೀಲ್ಸ್, ವೀವ್ಸ್, ವೈರಲ್ ಹುಚ್ಚಿನಲ್ಲಿ ಅಪ್ಪಚ್ಚಿಯಾಗಿವೆ. ಪ್ರವಾಸಿಗರ ಹುಚ್ಚಾಟಕ್ಕೆ ನಲುಗಿವೆ. ಯಾರೂ ನೋಡದ ಸ್ಥಳವನ್ನು ಮುನ್ನೆಲೆಗೆ ತಂದಿದ್ದೇವೆ ಎಂದು ರೀಲ್ಸ್ ಮಾಡುವವರು ಬೀಗುತ್ತಾರೆ. ಆದರೆ, ತನ್ನ ಪಾಡಿಗಿದ್ದ ಸುಂದರ ಪ್ರಾಕೃತಿಕ ತಾಣಕ್ಕೆ ಅನಗತ್ಯ ಪ್ರಚಾರ ಕೊಟ್ಟರೆ ಏನಾಗುತ್ತದೆ? ಪ್ರಕೃತಿಯನ್ನು ಸಂರಕ್ಷಿಸುವುದು ಹೇಗೆ? ಸೂಕ್ಷ್ಮವಾಗಿರುವ ಪ್ರಕೃತಿಯನ್ನು ಅರ್ಥ ಮಾಡಿಕೊಳ್ಳಲು ನಮಗೆಂಥ ಸಂವೇದನೆ ಅಗತ್ಯ ಎನ್ನುವ ವಿವೇಚನೆ ಮರೆತಾಗ ಅಪಾಯ ಸಂಭವಿಸುತ್ತದೆ. ಒಂದು ತಾಣವನ್ನು ಮುನ್ನೆಲೆಗೆ ತಂದದ್ದೇ ದೊಡ್ಡ ಸಮಾಜಸೇವೆ ಎಂದು ಮೆರೆಯುವವರು, ಮತ್ತೊಮ್ಮೆ ಅಂತಹ ತಾಣಗಳಿಗೆ ಹೋಗಿ ಕಸ, ತ್ಯಾಜ್ಯಗಳಿಂದ ಅಲ್ಲಿ ಆಗಿರುವ ಸಮಸ್ಯೆಗಳು ಹಾಗೂ ಆ ಸಮಸ್ಯೆಗೆ ತಮ್ಮ ಕೊಡುಗೆಯೆಷ್ಟು ಎನ್ನುವುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು.

ಪ್ರವಾಸೋದ್ಯಮ ಹಾಗೂ ಅರಣ್ಯ ಇಲಾಖೆಗಳ ನಿಯಂತ್ರಣದಲ್ಲಿ ಇರುವ ಪ್ರವಾಸಿತಾಣಗಳಲ್ಲೂ ಕಸದ ರಾಡಿ ಎಬ್ಬಿಸುವಲ್ಲಿ, ಬುಟ್ಟಿಗಳಿದ್ದರೂ ಕಸ ಹಾಕದೆ ಮನ ಬಂದಲ್ಲಿ ಕಸ ಎಸೆಯುವುದರಲ್ಲಿ ಕೆಲವರಿಗೆ ವಿಶೇಷ ಸುಖ. ಪ್ರಾಕೃತಿಕ ತಾಣದಲ್ಲಿ ಕೊಂಚವೂ ಲಜ್ಜೆಯಿಲ್ಲದೆ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಎಸೆಯುವವರಿದ್ದಾರೆ. ಹೀಗೆ ಪ್ಲಾಸ್ಟಿಕ್ ತುಂಬುವ ಮೂಲಕ ಆ ಕಾಡಿನ ಜೀವಸಂಕುಲ ಹಾಗೂ ಸ್ಥಳೀಯರ ಬದುಕಿನ ಸ್ವಾಸ್ಥ್ಯವನ್ನು ಹಾಳುಮಾಡುತ್ತಿದ್ದೇವೆ ಎನ್ನುವುದರ ಬಗ್ಗೆ ಪ್ರವಾಸಿಗರು ಯೋಚಿಸಬೇಕಾಗಿದೆ.

ನಮಗೆ ಶಾಂತಿ-ನೆಮ್ಮದಿ ಕೊಡುವ ಪ್ರಕೃತಿಯೂ ನೆಮ್ಮದಿಯಿಂದ ಇರಲಿ ಎನ್ನುವ ಸಹಜ ವಿವೇಕ ನಮ್ಮಲ್ಲಿ ಅನೇಕರಿಗೆ ಇಲ್ಲ. ಇದೀಗ ಮುಂಗಾರಿನ ಕಣ್ಣಾಮುಚ್ಚಾಲೆ ಶುರುವಾಗಿದೆ. ಮಳೆ ಇಲ್ಲದಿದ್ದರೂ, ಸಾಮಾಜಿಕ ಜಾಲತಾಣಗಳಲ್ಲಿ ಪ್ರವಾಸಿಗರನ್ನು ಸೆಳೆಯುವ ಪೋಸ್ಟ್‌ಗಳು ಕಾಣಿಸುತ್ತಿವೆ. 'ಪ್ರಕೃತಿ ನೋಡಲು, ನೆಮ್ಮದಿ ಪಡೆಯಲು ಇಂತಹ ತಾಣಗಳಿಗೆ ಬನ್ನಿ, ಮಲೆನಾಡಿನ ಸ್ವರ್ಗ ಆನಂದಿಸಿ' ಎನ್ನುವ ಪೋಸ್ಟ್‌ಗಳು, ವಿಡಿಯೊಗಳು ಮುಂಗಾರು ಮಳೆಗಿಂತಲೂ ಜೋರಾಗಿ ಸುರಿಯುತ್ತಿವೆ.

ನಗರಗಳ ಒತ್ತಡದ ದಿನಚರಿಯಿಂದ ಹೊರಬರುವ ಉದ್ದೇಶದಿಂದ, ಮಲೆನಾಡು ಅಥವಾ ಕರಾವಳಿಯ ಪ್ರಾಕೃತಿಕ ತಾಣಗಳಿಗೆ ಪ್ರವಾಸಿಗರು ಬರುವುದು ಖುಷಿಯೇ. ಆದರೆ, ಹೀಗೆ ಬರುವ ಬಹುತೇಕ ಜನರು ಪ್ರಾಕೃತಿಕ ತಾಣಗಳನ್ನು ಪ್ರಾಂಜಲವಾಗಿ ಅನುಭವಿಸುವ ಬದಲು ರೀಲ್ಸ್, ಫೋಟೊ ಶೂಟ್‌ನಲ್ಲೇ ಹೆಚ್ಚಿನ ಸಮಯ ಕಳೆಯುತ್ತಾರೆ. ಪರಿಸರ ಮತ್ತು ಸ್ಥಳೀಯರ ಬಗ್ಗೆ ಕಾಳಜಿಯಿಲ್ಲದವರಂತೆ ನಿರ್ಲಕ್ಷ್ಯದಿಂದ ನಡೆದುಕೊಳ್ಳುವವರೂ ಇದ್ದಾರೆ.

ಪ್ರವಾಸಿಗರಿಗೆ ಇರಬೇಕಾದ ಮುಖ್ಯವಾದ ಲಕ್ಷಣಗಳಲ್ಲಿ ಸ್ಥಳೀಯರನ್ನು ಹಾಗೂ ಅಲ್ಲಿನ ಪರಿಸರವನ್ನು ಗೌರವದಿಂದ ಕಾಣುವುದಾಗಿದೆ. ಪ್ರವಾಸ ಎನ್ನುವುದು ಉತ್ತರದಾಯಿತ್ವ ಇಲ್ಲದ ಸ್ವಚ್ಛಂದತೆಯಲ್ಲ. ಅರಿವು ಮತ್ತು ಜವಾಬ್ದಾರಿ ಎರಡೂ ಅರ್ಥಪೂರ್ಣ ಪ್ರವಾಸಕ್ಕೆ ಅಗತ್ಯ.

ಪ್ರವಾಸ ಮನರಂಜನೆಗೆ ಮಾತ್ರ ಸೀಮಿತವಾದುದಲ್ಲ. ಸ್ಥಳೀಯರ ಬದುಕಿನ ತವಕತಲ್ಲಣಗಳನ್ನು ಅರಿಯುವ ಹಾಗೂ ಜೀವವೈವಿಧ್ಯವನ್ನು ಗಮನಿಸುವ, ಪರಿಸರದ ಬಗೆಗಿನ ಅರಿವು ವಿಸ್ತರಿಸಿಕೊಳ್ಳುವ ಪ್ರಕ್ರಿಯೆಯೂ ಹೌದು. ಭೂಮಿ, ಹಸುರು, ನೀರನ್ನು ಗೌರವಿಸುವುದು ಮಾನವೀಯತೆಯ ಲಕ್ಷಣವೂ ಹೌದು.

ನಾಡಿನಲ್ಲಿ ಪ್ರವಾಸೋದ್ಯಮ ಬೆಳೆಯಬೇಕು. ಆ ಬೆಳವಣಿಗೆಯು ಪರಿಸರಕ್ಕೆ ಮಾರಕ ಆಗುವಂತಿರಬಾರದು. ಪರಿಸರ ಪ್ರಜ್ಞೆ ಒಳಗೊಳ್ಳದ ಪ್ರವಾಸೋದ್ಯಮದಿಂದ ಹಾನಿಯೇ ಹೆಚ್ಚು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಭಾರಿ ಚರ್ಚೆಯ ನಡುವೆಯೇ ಎಸ್‌ಐಆರ್ ಪ್ರಕ್ರಿಯೆ ಕರ್ನಾಟಕದಲ್ಲಿ ಆರಂಭವಾಗಿದೆ. ಮತದಾರರ ಪಟ್ಟಿಯಿಂದ ಹೆಸರು ಕೈಬಿಡದಂತಿರಲು ಮತದಾರರು ಕೆಲವು ಅಗತ್ಯಗಳನ್ನು ಪೂರೈಸಬೇಕಿದೆ. ಗಣತಿ ನಮೂನೆಯನ್ನು ಕಡ್ಡಾಯವಾಗಿ ಭರ್ತಿ ಮಾಡಿಕೊಡಬೇಕು. ನಂತರದ ಹಂತದಲ್ಲಿ ಅಗತ್ಯ ದಾಖಲೆಗಳನ್ನು ಒದಗಿಸಬೇಕು. ಮತಗಟ್ಟೆ ಅಧಿಕಾರಿಗಳು (ಬಿಎಲ್‌ಒ) ಈ ವಿಷಯದಲ್ಲಿ ಮತದಾರರಿಗೆ ಮಾರ್ಗದರ್ಶನ, ನೆರವು ನೀಡಬೇಕು ಎಂದು ಚುನಾವಣಾ ಆಯೋಗ ತಿಳಿಸಿದೆ. ಗಣತಿ ನಮೂನೆ ವಿತರಣೆ, ಭರ್ತಿ ಮಾಡುವುದು ಮತ್ತು ಅವುಗಳ ಸಂಗ್ರಹ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎನ್ನುವುದರ ಮಾಹಿತಿ ಇಲ್ಲಿದೆ

ಇಂದಿನಿಂದ ಮನೆ ಮನೆಗೆ ಬರಲಿದ್ದಾರೆ ಮತಗಟ್ಟೆ ಅಧಿಕಾರಿಗಳು

ಎಸ್‌ಐಆರ್: ಗಣತಿ ನಮೂನೆ ಭರ್ತಿ ಮಾಡುವುದು ಹೇಗೆ?

ಪ್ರಜಾವಾಣಿ ವಾರ್ತೆ

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಭಾಗವಾಗಿ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮಂಗಳವಾರದಿಂದ (ಜೂನ್ 30) ಮತದಾರರ ಮನೆ ಮನೆಗೆ ಭೇಟಿ ನೀಡಿ ಗಣತಿ ನಮೂನೆ (ಎನ್ಯುಮರೇಷನ್ ಫಾರ್ಮ್) ವಿತರಿಸಿ, ಅದರ ಮೂಲಕ ಮತದಾರರ ಮಾಹಿತಿಗಳನ್ನು ಕಲೆ ಹಾಕಲಿದ್ದಾರೆ. ಜುಲೈ 29ರವರೆಗೂ ಈ ಪ್ರಕ್ರಿಯೆ ನಡೆಯಲಿದೆ.

ಮನೆ ಮನೆಗೆ ಭೇಟಿ ನೀಡುವ ಪ್ರಕ್ರಿಯೆಯಲ್ಲಿ ಮತಗಟ್ಟೆ ಅಧಿಕಾರಿಗಳು ಮತದಾರರಿಂದ ವೈಯಕ್ತಿಕ ಮಾಹಿತಿಗಳನ್ನಷ್ಟೇ ಸಂಗ್ರಹಿಸಲಿದ್ದು, ಮತದಾರರು ಈ ವೇಳೆ ಯಾವುದೇ ದಾಖಲೆಗಳನ್ನು ನೀಡಬೇಕಾಗಿಲ್ಲ ಎಂದು ಚುನಾವಣಾ ಆಯೋಗ ಹೇಳಿದೆ.

ಜೂನ್ 16ಕ್ಕೆ ಅನ್ವಯವಾದಂತೆ ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಎಲ್ಲರೂ (5,54,32,314 ಮತದಾರರು) ಎಸ್‌ಐಆರ್ ವ್ಯಾಪ್ತಿಗೆ ಒಳಪಡಲಿದ್ದಾರೆ. ಮನೆಗೆ ಭೇಟಿ ನೀಡುವ ಸಂದರ್ಭದಲ್ಲಿ ಪ್ರತಿ ಮತದಾರರಿಗೂ ಗಣತಿ ನಮೂನೆಯ ಎರಡು ಪ್ರತಿಗಳನ್ನು ಅಧಿಕಾರಿಗಳು ವಿತರಿಸಲಿದ್ದಾರೆ.

ಗಣತಿ ನಮೂನೆಯಲ್ಲಿ ಮೂರು ಭಾಗಗಳು

ಭಾಗ–1 ನಮೂನೆಯ ಮೇಲ್ಭಾಗದಲ್ಲಿ ಆಯಾ ಮತಗಟ್ಟೆ ಅಧಿಕಾರಿಯ ಹೆಸರು ಮತ್ತು ಮೊಬೈಲ್ ಸಂಖ್ಯೆಯನ್ನು ಮುದ್ರಿಸಲಾಗಿರುತ್ತದೆ. ಅದರ ಕೆಳಭಾಗದಲ್ಲಿ ಮತದಾರರ ವಿವರಗಳನ್ನೂ ಮುದ್ರಿಸಲಾಗಿರುತ್ತದೆ.

ಹೆಸರು, ಮತದಾರರ ಗುರುತಿನ ಚೀಟಿ (ಎಪಿಕ್) ಸಂಖ್ಯೆ, ವಿಳಾಸ, ಕ್ರಮ ಸಂಖ್ಯೆ (ಸೀರಿಯಲ್ ನಂಬರ್), ಭಾಗ ಸಂಖ್ಯೆ (ಪಾರ್ಟ್ ನಂಬರ್) ಮತ್ತು ಹೆಸರು, ವಿಧಾನಸಭಾ ಮತ್ತು ಲೋಕಸಭಾ ಕ್ಷೇತ್ರದ ಹೆಸರು, ಕ್ಯುಆರ್ ಕೋಡ್, ಹಳೆಯ ಭಾವಚಿತ್ರವನ್ನೂ ಮುದ್ರಿಸಲಾಗಿರುತ್ತದೆ. ಭಾವಚಿತ್ರ ಹಳೆಯದಾಗಿದ್ದರೆ, ಹೊಸ ಭಾವಚಿತ್ರವನ್ನು ಅಂಟಿಸಲೂ ಜಾಗ ಇದೆ.

ಭಾಗ–2 ಇದರಲ್ಲಿ ಮತದಾರರಿಗೆ ಎರಡು ಆಯ್ಕೆಗಳಿರುತ್ತವೆ.

ಆಯ್ಕೆ–1: ಕಳೆದ ಎಸ್‌ಐಆರ್‌ನ ಅಂದರೆ, 2002ರಲ್ಲಿ ನಡೆದಿದ್ದ ವಿಶೇಷ ಸಮಗ್ರ ಪರಿಷ್ಕರಣೆಯ ಮತದಾರರ ಪಟ್ಟಿಯಲ್ಲಿದ್ದಂತೆ ವಿವರಗಳನ್ನು ಭರ್ತಿ ಮಾಡುವುದು. ಇದನ್ನು ಸೆಲ್ಫ್ ಮ್ಯಾಪಿಂಗ್ ಎಂದು ಕರೆಯಲಾಗುತ್ತದೆ

ಆಯ್ಕೆ 2: ಒಂದು ವೇಳೆ ಮತದಾರರ ಹೆಸರು 2002ರಲ್ಲಿ ನೋಂದಣಿಯಾಗದಿದ್ದರೆ, ಅವರು ತಂದೆ/ತಾಯಿ, ಅಜ್ಜ/ಅಜ್ಜಿಯ (ಸಂಬಂಧಿಕರು) 2002ರ ಮತದಾರರ ಪಟ್ಟಿಯ ವಿವರಗಳನ್ನು ಒದಗಿಸಬೇಕಾಗುತ್ತದೆ


ಆಯ್ಕೆ–1ರಲ್ಲಿ ಹಿಂದಿನ ಎಸ್‌ಐಆರ್ ಮತದಾರರ ಪಟ್ಟಿಯಲ್ಲಿದ್ದಂತೆ (2002) ಮತದಾರರ ಹೆಸರು, ಎಪಿಕ್ ಸಂಖ್ಯೆ (ಲಭ್ಯವಿದ್ದರೆ), ಆಗಿನ ಗುರುತಿನ ಚೀಟಿಯಲ್ಲಿ ಉಲ್ಲೇಖಿಸಲಾಗಿದ್ದ ಸಂಬಂಧಿಕರ ಹೆಸರು, ಅವರೊಂದಿಗಿನ ಸಂಬಂಧ, ಜಿಲ್ಲೆ, ರಾಜ್ಯ, ವಿಧಾನಸಭಾ ಕ್ಷೇತ್ರದ ಹೆಸರು, ಕ್ಷೇತ್ರದ ಸಂಖ್ಯೆ, ಭಾಗದ ಸಂಖ್ಯೆ, ಕ್ರಮ ಸಂಖ್ಯೆ ನಮೂದು ಮಾಡಬೇಕು.

ಆಯ್ಕೆ–2ರಲ್ಲಿ, 2002ರ ಪಟ್ಟಿಯಲ್ಲಿ ಹೆಸರು ಇರುವ ಸಂಬಂಧಿಕರ (ತಂದೆ/ತಾಯಿ ಇತ್ಯಾದಿ) ವಿವರಗಳನ್ನು ನೀಡಬೇಕಾಗುತ್ತದೆ. ಹೆಸರು, ಎಪಿಕ್ ಸಂಖ್ಯೆ (ಲಭ್ಯವಿದ್ದರೆ), ಸಂಬಂಧಿಕರ ಹೆಸರು, ಸಂಬಂಧ, ಜಿಲ್ಲೆ, ರಾಜ್ಯ, ವಿಧಾನಸಭಾ ಕ್ಷೇತ್ರದ ಹೆಸರು, ಕ್ಷೇತ್ರದ ಸಂಖ್ಯೆ, ಭಾಗದ ಸಂಖ್ಯೆ ಮತ್ತು ಕ್ರಮ ಸಂಖ್ಯೆಗಳನ್ನು ನಮೂದಿಸಬೇಕು.

ಭಾಗ 3 ಮತದಾರರ ಈಗಿನ ವಿವರಗಳನ್ನು ನೀಡುವುದು

ಈ ಭಾಗದಲ್ಲಿ ಜನ್ಮದಿನಾಂಕವನ್ನು ಕಡ್ಡಾಯವಾಗಿ ನಮೂದಿಸಬೇಕು. ಆಧಾರ್ ಸಂಖ್ಯೆ ನೀಡುವುದು ಐಚ್ಛಿಕ, ಮೊಬೈಲ್ ಸಂಖ್ಯೆ, ತಂದೆ/ಪೋಷಕರ ಹೆಸರು, ಅವರ ಎಪಿಕ್ ಸಂಖ್ಯೆ (ಲಭ್ಯವಿದ್ದರೆ), ತಾಯಿಯ ಹೆಸರು, ಅವರ ಎಪಿಕ್ ಸಂಖ್ಯೆ (ಲಭ್ಯವಿದ್ದರೆ), ಸಂಗಾತಿಯ ಹೆಸರು (ಅನ್ವಯವಾಗುತ್ತಿದ್ದಲ್ಲಿ), ಅವರ ಎಪಿಕ್ ಸಂಖ್ಯೆ (ಲಭ್ಯವಿದ್ದರೆ) ನೀಡಬೇಕು.

ಈ ಮಾಹಿತಿಗಳನ್ನು ಗಣತಿ ನಮೂನೆಯ ಎರಡೂ ಪ್ರತಿಗಳಲ್ಲಿ ಭರ್ತಿ ಮಾಡಿ, ನಂತರ ಮತದಾರರು ಅಥವಾ ಕುಟುಂಬದ ಯಾವುದೇ ವಯಸ್ಕರು ದಿನಾಂಕದೊಂದಿಗೆ ಸಹಿ ಹಾಕಬೇಕು ಅಥವಾ ಹೆಬ್ಬೆಟ್ಟು ಒತ್ತಬೇಕು. ಎರಡೂ ಪ್ರತಿಗಳಿಗೆ ಬಿಎಲ್‌ಒ ಕೂಡ ಸಹಿ ಹಾಕುತ್ತಾರೆ. ಒಂದು ಪ್ರತಿಯನ್ನು ಮತದಾರರರು ಇಟ್ಟುಕೊಂಡರೆ, ಇನ್ನೊಂದು ಪ್ರತಿಯನ್ನು ಮತಗಟ್ಟೆ ಅಧಿಕಾರಿಗಳು ತೆಗೆದುಕೊಳ್ಳುತ್ತಾರೆ.



• ಮತದಾರರು ಭರ್ತಿ ಮಾಡಿ ಸಹಿ ಮಾಡಿದ ನಮೂನೆ ಪ್ರತಿಯನ್ನು ನಂತರ ಸ್ಕ್ಯಾನ್ ಮಾಡಲಾಗುತ್ತದೆ. ಪ್ರತಿಯೊಬ್ಬರಿಗೂ ಎಸ್‌ಐಆರ್‌ನಲ್ಲಿ ಭಾಗವಹಿಸಲು ಬೇಕಾದಷ್ಟು ಅವಕಾಶ ನೀಡುವುದಕ್ಕಾಗಿ ಭರ್ತಿ ಮಾಡಿದ ಗಣತಿ ನಮೂನೆಗಳನ್ನು ಸಂಗ್ರಹಿಸಲು, ಅಗತ್ಯ ಬಿದ್ದರೆ ಬೂತ್ ಮಟ್ಟದ ಅಧಿಕಾರಿಗಳು ಕನಿಷ್ಠ ಮೂರು ಬಾರಿ ಭೇಟಿ ನೀಡಲಿದ್ದಾರೆ ಎಂದು ಆಯೋಗ ಹೇಳಿದೆ.

• ಗಣತಿ ನಮೂನೆ ಭರ್ತಿ ಮಾಡಲು ಮಾರ್ಗದರ್ಶನ ನೀಡುವ ವಿಡಿಯೊ ಕರ್ನಾಟಕದ ಮುಖ್ಯ ಚುನಾವಣಾಧಿಕಾರಿಯ ವೆಬ್‌ಸೈಟ್‌ನಲ್ಲಿ (ಲಿಂಕ್ https://ceo.karnataka.gov.in/uploads/87821782119995.mp4) ಲಭ್ಯವಿದೆ.

2002ರ ಪಟ್ಟಿಯ ವಿವರ ಪಡೆಯುವುದು ಹೇಗೆ?

ಗಣತಿ ನಮೂನೆ ಭರ್ತಿ ಮಾಡುವಾಗ 2002ರಲ್ಲಿ ನಡೆದಿದ್ದ ಎಸ್‌ಐಆರ್‌ನ ಮತದಾರರ ಪಟ್ಟಿಯಲ್ಲಿನ ವಿವರಗಳನ್ನು ನಮೂದಿಸುವುದು ಕಡ್ಡಾಯ. 2002ರ ಎಸ್‌ಐಆರ್‌ನ ಭಾಗವಾಗಿದ್ದ ಮತದಾರರು ಆಗಿನ ಮತದಾರರ ಪಟ್ಟಿಯ ವಿವರಗಳನ್ನು ಸಂಗ್ರಹಿಸಿಟ್ಟುಕೊಳ್ಳಬೇಕು. ಮೊದಲೇ ಸಂಗ್ರಹಿಸಿಟ್ಟುಕೊಂಡರೆ ಗಣತಿ ನಮೂನೆ ಭರ್ತಿ ಮಾಡುವ ಸಂದರ್ಭದಲ್ಲಿ ಅನುಕೂಲವಾಗುತ್ತದೆ.

ಕ್ಷೇತ್ರದ ಸಂಖ್ಯೆ, ಕ್ರಮ ಸಂಖ್ಯೆ, ಭಾಗ ಸಂಖ್ಯೆ ಇತ್ಯಾದಿ ಮಾಹಿತಿಗಳನ್ನು ನೀಡಬೇಕಾಗುತ್ತದೆ. ಮೊದಲು ಮತದಾರರು 2002ರ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇತ್ತೇ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು.

2002ರಿಂದ ಇಲ್ಲಿಯವರೆಗೆ, 24 ವರ್ಷಗಳಲ್ಲಿ ಮತದಾರರ ಪಟ್ಟಿಯಲ್ಲಿ ಹಲವು ಬದಲಾವಣೆಗಳು ಆಗಿವೆ. ಜತೆಗೆ, 2008ರಲ್ಲಿ ಕ್ಷೇತ್ರ ಮರುವಿಂಗಡಣೆ ಆಗಿದೆ. ರಾಜ್ಯದಲ್ಲಿರುವ ಒಟ್ಟು ಕ್ಷೇತ್ರಗಳ ಸಂಖ್ಯೆಯಲ್ಲಿ ವ್ಯತ್ಯಾಸ ಆಗಿಲ್ಲವಾದರೂ, ಹಲವು ಕ್ಷೇತ್ರಗಳ ಗಡಿಗಳು ಬದಲಾಗಿವೆ. ಒಂದು ಕ್ಷೇತ್ರದಲ್ಲಿದ್ದ ಮತಗಟ್ಟೆಯು ಮತ್ತೊಂದು ಕ್ಷೇತ್ರದ ಪಾಲಾಗಿದೆ. ಜತೆಗೆ, ಜಿಲ್ಲೆ, ತಾಲ್ಲೂಕುಗಳ ವಿಂಗಡಣೆಯಿಂದಲೂ ಕೆಲವೊಂದು ಗೊಂದಲಗಳು ಉಂಟಾಗುವ ಸಾಧ್ಯತೆ ಇದೆ. ಅಂಥ ಸಂದರ್ಭದಲ್ಲಿ ಮತದಾರರು ಬಿಎಲ್‌ಒಗಳ ನೆರವು ಪಡೆಯಬಹುದು. ಬಿಎಲ್‌ಒಗಳಿಗೆ ಈ ಬಗ್ಗೆ ತರಬೇತಿಯನ್ನೂ ನೀಡಲಾಗಿದೆ.

ಆಗಿನ ಮತದಾರರ ಪಟ್ಟಿಯ ವಿವರಗಳು ಬಿಎಲ್‌ಒ ಅವರ ಬಳಿ ಇರುತ್ತವೆ. ಅವರ ಮೂಲಕ ವಿವರಗಳನ್ನು ಸಂಗ್ರಹಿಸಬಹುದು. ಇದಲ್ಲದೆ, ಕರ್ನಾಟಕದ ಮುಖ್ಯ ಚುನಾವಣಾಧಿಕಾರಿಯ ವೆಬ್‌ಸೈಟ್‌ನಲ್ಲಿ (https://ceo.karnataka.gov.in/en) ಲಭ್ಯವಿದೆ. ಈ ವೆಬ್‌ಸೈಟ್‌ನಲ್ಲಿ ಮತದಾರರ ಪಟ್ಟಿ–2002ರ ಎಂಬ ಆಯ್ಕೆ ಇದ್ದು, ಅದನ್ನು ಕ್ಲಿಕ್ ಮಾಡಿ ಹೆಸರು, ಸಂಬಂಧಿಕರ ಹೆಸರು, ಅಥವಾ ಎಪಿಕ್ ಸಂಖ್ಯೆ ಇನ್ನಿತರ ಮಾಹಿತಿಗಳನ್ನು ನಮೂದಿಸಿ ಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಕ್ಷೇತ್ರ ಸಂಖ್ಯೆ, ಪಾರ್ಟ್ ನಂಬರ್ ತಿಳಿದಿದ್ದರೆ, ಆ ವಿವರಗಳನ್ನು ನೀಡಿಯೂ ಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಜೊತೆಗೆ, ಭಾರತೀಯ ಚುನಾವಣಾ ಆಯೋಗದ ವೆಬ್‌ಸೈಟ್, ಇಸಿಐನೆಟ್ (ECINET) ಮೊಬೈಲ್ ಆ್ಯಪ್ ಮೂಲಕವೂ ಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಹೊಸ ನೋಂದಣಿಗೂ ಅವಕಾಶ

ಒಂದನೇ ಪುಟದಿಂದ...

ಮನೆಗೆ ಬೀಗ ಹಾಕಿದ್ದರೆ ಕೆಂಪು ಬಣ್ಣದ ವೃತ್ತಾಕಾರದ ಸಿಕ್ಟರ್ ಅಂಟಿಸಲಾಗುತ್ತದೆ. 1.88 ಕೋಟಿ ಮನೆಗಳಿಗೆ ಇಂತಹ ಚೀಟುಗಳನ್ನು ಅಂಟಿಸಲಾಗುತ್ತದೆ. ಈ ಸ್ಟಿಕರ್‌ಗಳಲ್ಲಿ ಮನೆಗೆ ಭೇಟಿ ನೀಡಿದ್ದ ಮತಗಟ್ಟೆ ಅಧಿಕಾರಿಗಳ ಹೆಸರು, ಫೋನ್ ನಂಬರ್ ಹಾಗೂ ಮುಂದಿನ ಬಾರಿ ಮತ್ತೆ ಅವರು ಭೇಟಿ ನೀಡುವ ದಿನಾಂಕ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಅವರ ಮೊಬೈಲ್ ನಂಬರ್‌ಗೆ ಕರೆ ಮಾಡಬಹುದು. ಸ್ಪಂದಿಸದಿದ್ದರೆ ಸಹಾಯವಾಣಿ ಅಥವಾ ಸ್ಥಳೀಯ ಚುನಾವಣಾ ಕಚೇರಿಗಳಿಗೆ ಭೇಟಿ ನೀಡಿ, ದೂರು ಸಲ್ಲಿಸಬಹುದು. ಒಂದು ಮನೆಗೆ ಒಟ್ಟು ಮೂರು ಬಾರಿ ಭೇಟಿ ನೀಡುವುದುನ್ನು ಆಯೋಗ ಕಡ್ಡಾಯಗೊಳಿಸಿದೆ.

2026ರ ಜೂನ್ 16ರವರೆಗಿನ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗದೆ, ಅಂತಹ ಮತದಾರರ ಕುಟುಂಬದ ಸದಸ್ಯರ ಮಾಹಿತಿ 2002ರ ಮತದಾರರ ಪಟ್ಟಿಯಲ್ಲಿ ಲಭ್ಯವಿಲ್ಲದಿದ್ದರೆ ಕರಡು ಮತದಾರರ ಪಟ್ಟಿ ಪ್ರಕಟಿಸಿದ ನಂತರ ಅಂಥವರಿಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುತ್ತದೆ.

ಮತದಾರರ ಪರವಾಗಿ ಸಹಿಗೆ ಅವಕಾಶ

ಒಂದನೇ ಪುಟದಿಂದ...

ಕರಡು ಮತದಾರರ ಪಟ್ಟಿ ಪ್ರಕಟಿಸಿದ ನಂತರ ತಿದ್ದುಪಡಿಗೂ ಮೊದಲು ಮತದಾರರಿಗೆ ನೋಟಿಸ್ ನೀಡಿ, ಅವರ ಗಮನಕ್ಕೆ ತಂದು ತಿದ್ದುಪಡಿಗೆ ಅವಕಾಶ ನೀಡಲಾಗುತ್ತದೆ. ಅನಕ್ಷರಸ್ಥರು, ವೃದ್ಧರು ಮತ್ತಿತರರಿಗೆ ಗಣತಿ ನಮೂನೆ ಭರ್ತಿ ಮಾಡಲು ಸಹಾಯಕ್ಕಾಗಿ ಪದವಿ ಕಾಲೇಜುಗಳ ಎನ್‌ಸಿಸಿ, ಎನ್‌ಎಸ್‌ಎಸ್ ಸೇರಿದಂತೆ ವಿವಿಧ ಸೇವಾ ವಲಯಗಳ ವಿದ್ಯಾರ್ಥಿಗಳು, ಸ್ವಯಂ ಸೇವಕರನ್ನು ಬಳಸಿಕೊಳ್ಳುವ ಚಿಂತನೆ ಇದೆ. ಈಗಾಗಲೇ 5.54 ಕೋಟಿ ಮತದಾರರಲ್ಲಿ 5.07 ಕೋಟಿ ಮತದಾರರ ಮ್ಯಾಪಿಂಗ್ ಸಿದ್ಧವಾಗಿದೆ. ಉಳಿದ 46.52 ಲಕ್ಷ ಮತದಾರರ ಮ್ಯಾಪಿಂಗ್ ಕಾರ್ಯ ಮುಂದುವರಿದಿದೆ ಎಂದು ಅನ್ಬುಕುಮಾರ್ ಹೇಳಿದರು.

‘ಪ್ರಶ್ನೆಗಳಿಗೆ ಉತ್ತರಿಸಿ ಎಸ್‌ಐಆರ್ ಮಾಡಲಿ’

ಒಂದನೇ ಪುಟದಿಂದ...

‘ಮುಖ್ಯ ಚುನಾವಣಾಧಿಕಾರಿಗೂ ಆಕ್ಷೇಪಗಳನ್ನು ಸಲ್ಲಿಸಲಾಗಿದೆ. ಯಾವ ಆಧಾರದಲ್ಲಿ ಜನರನ್ನು ಮತದಾರರ ಪಟ್ಟಿಯಿಂದ ಹೊರಗಿಡುತ್ತಾರೆ? ಅದರ ಹಿಂದಿನ ತರ್ಕ ಏನು ಎಂದು ಆಯೋಗಕ್ಕೆ ಕೇಳಿದ್ದೇವೆ’ ಎಂದರು.

‘ಗೊಂದಲ ಇದ್ದರೆ ನ್ಯಾಯಮಂಡಳಿಯಲ್ಲಿ ಪ್ರಶ್ನಿಸಲು ಅವಕಾಶ ಮಾಡಿಕೊಡಬೇಕು. ದಾಖಲೆಗಳಲ್ಲಿ ಕಾಗುಣಿತ (ಸ್ಪೆಲ್ಲಿಂಗ್) ತಪ್ಪಾದ ಮಾತ್ರಕ್ಕೆ ಮತದಾರರ ಹಕ್ಕು ಕಿತ್ತುಕೊಳ್ಳಲು ಸಾಧ್ಯವಿಲ್ಲ. ನಮ್ಮ ಆಕ್ಷೇಪಗಳಿಗೆ ಆಯೋಗದಿಂದ ಇನ್ನೂ ಉತ್ತರ ಸಿಕ್ಕಿಲ್ಲ. ಎಸ್‌ಐಆರ್ ಮಾಡಬೇಡಿ ಎಂದು ನಾವು ಹೇಳಿಲ್ಲ. ಉತ್ತಮವಾದ ಮತದಾರರ ಪಟ್ಟಿ ಕೊಡಲಿ. ಪಾರದರ್ಶಕವಾಗಿ ಮಾಡಲಿ’ ಎಂದರು.

‘ತಮಿಳುನಾಡು, ಪಶ್ಚಿಮ ಬಂಗಾಳದಲ್ಲಿ ಬಡವರ ಹಕ್ಕು ಕಿತ್ತುಕೊಳ್ಳಲಾಗಿದೆ. ನಾವು ಜಾಗೃತಿ ಅಭಿಯಾನ ಮಾಡುತ್ತಿದ್ದೇವೆ. ಕಾನೂನಾತ್ಮಕವಾಗಿ ಅದನ್ನು ಪರಿಗಣಿಸಬೇಕಾಗುತ್ತದೆ. ಪಶ್ಚಿಮ ಬಂಗಾಳದಲ್ಲಿ 89 ಲಕ್ಷ ಜನರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ. ನ್ಯಾಯಮಂಡಳಿಯಲ್ಲಿ ಕೇಳಲು ಅವಕಾಶ ಕೊಡುವುದಿಲ್ಲ. ಅವಕಾಶ ಕೇಳಿದರೆ ಆ ರೀತಿ ಮಾಡಲು ಆಗುವುದಿಲ್ಲ, ನಾಲ್ಕು ವರ್ಷಬೇಕು ಎಂದು ನ್ಯಾಯಮಂಡಳಿಯ ನ್ಯಾಯಮೂರ್ತಿ ರಾಜೀನಾಮೆ ಕೊಡುತ್ತಾರೆ’ ಎಂದರು.

ಆಯೋಗಕ್ಕೆ ಕಾಂಗ್ರೆಸ್ ಕೇಳಿದ ಪ್ರಶ್ನೆಗಳು

1. ಎಸ್‌ಐಆರ್ ಅನ್ನು ಈಗಲೇ ಏಕೆ ನಡೆಸಲಾಗುತ್ತಿದೆ? ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ಇದರ ಅಗತ್ಯವೇನು?
2. ಮತದಾರರ ಪಟ್ಟಿಯಿಂದ ಎಷ್ಟು ಹೆಸರುಗಳನ್ನು ತೆಗೆದುಹಾಕಲಾಗಿದೆ? ಅದರ ಸ್ಪಷ್ಟ ಮಾಹಿತಿ ಮತ್ತು ಕಾರಣಗಳನ್ನು ಬಹಿರಂಗಪಡಿಸಲಾಗಿದೆಯೇ?
3. ಯಾವ ಮಾನದಂಡದ ಆಧಾರದ ಮೇಲೆ ಮತದಾರರ ಹೆಸರುಗಳನ್ನು ತೆಗೆದುಹಾಕಲಾಗುತ್ತಿದೆ?
4. ಮತದಾರರಿಗೆ ಮುಂಚಿತವಾಗಿ ನೋಟಿಸ್ ನೀಡಿ ತಮ್ಮ ಅಭಿಪ್ರಾಯ ಹೇಳಲು ಅವಕಾಶ ನೀಡಲಾಗಿದೆಯೇ?
5. ಬಡವರು, ವಲಸೆ ಕಾರ್ಮಿಕರು, ಹಿರಿಯ ನಾಗರಿಕರು ಹಾಗೂ ದುರ್ಬಲ ವರ್ಗದ ಮತದಾರರಿಗೆ ಅನಗತ್ಯ ತೊಂದರೆಯಾಗುತ್ತಿದೆಯೇ?
6. ಎಸ್‌ಐಆರ್ ಪ್ರಕ್ರಿಯೆ ಎಲ್ಲ ರಾಜಕೀಯ ಪಕ್ಷಗಳಿಗೂ ಸಮಾನವಾಗಿ ಮತ್ತು ಪಾರದರ್ಶಕವಾಗಿ ನಡೆಯುತ್ತಿದೆಯೇ?
7. ಮತದಾರರ ಪಟ್ಟಿಯಿಂದ ಹೆಸರು ಕೈಬಿಟ್ಟವರ ಸಂಪೂರ್ಣ ಪಟ್ಟಿ ಸಾರ್ವಜನಿಕರಿಗೆ ಲಭ್ಯವಿದೆಯೇ?
8. ತಪ್ಪಾಗಿ ಹೆಸರು ಕೈಬಿಟ್ಟಿದ್ದರೆ ಅದನ್ನು ಸರಿಪಡಿಸುವ ವ್ಯವಸ್ಥೆ ಎಷ್ಟು ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ?
9. ಈ ಪ್ರಕ್ರಿಯೆಯಿಂದ ಯಾರ ಮತದಾನದ ಹಕ್ಕಿಗೂ ಧಕ್ಕೆಯಾಗುವುದಿಲ್ಲ ಎಂಬ ಭರವಸೆಯನ್ನು ಚುನಾವಣಾ ಆಯೋಗ ನೀಡುತ್ತದೆಯೇ?
10. ಬಿಜೆಪಿ ಈ ಪ್ರಕ್ರಿಯೆಯನ್ನು ಬೆಂಬಲಿಸುತ್ತಿದ್ದರೆ, ಯಾವುದೇ ಅರ್ಹ ಮತದಾರರ ಹೆಸರು ತಪ್ಪಾಗಿ ಕೈಬಿಡುವುದಿಲ್ಲ ಎಂದು ಸಾರ್ವಜನಿಕವಾಗಿ ಭರವಸೆ ನೀಡುತ್ತದೆಯೇ?

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಫ್ರಾನ್ಸ್‌ನಲ್ಲಿ ಇತ್ತೀಚೆಗೆ ಜಿ7 ಶೃಂಗಸಭೆ ನಡೆಯಿತು. ಈ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದರು. ಇದನ್ನೇ ಆಧಾರವಾಗಿಟ್ಟುಕೊಂಡು ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಒಂದು ವಿಡಿಯೊವನ್ನು ಹಂಚಿಕೊಳ್ಳುತ್ತಿದ್ದಾರೆ. ಅದರಲ್ಲಿ ಟ್ರಂಪ್ ಅವರು ಮೋದಿ ಅವರನ್ನು ‘ಕೊಲೆಗಾರ’ ಎಂದು ಕರೆದಿರುವುದಾಗಿ, ‘2002ರಲ್ಲಿ ಗುಜರಾತ್‌ನಲ್ಲಿ ಲಕ್ಷಾಂತರ ಮಂದಿಯನ್ನು ಮೋದಿ ಕೊಂದಿದ್ದಾರೆ’ ಎಂದು ಆರೋಪಿಸಿದ್ದಾರೆ ಎಂಬುದಾಗಿ ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು.

ಗೂಗಲ್‌ನಲ್ಲಿ ನಿರ್ದಿಷ್ಟ ಪದದ ಮೂಲಕ ಹುಡುಕಾಡಿದಾಗ ಡೊನಾಲ್ಡ್ ಟ್ರಂಪ್ ಅವರು ನರೇಂದ್ರ ಮೋದಿ ಅವರನ್ನು ಗುಜರಾತ್ ಗಲಭೆಗಳ ಸಂಬಂಧ ಕೊಲೆಗಾರ ಎಂದು ಕರೆದ ಬಗ್ಗೆ ಯಾವುದೇ ವರದಿ ಕಾಣಲಿಲ್ಲ. ಈ ಹುಡುಕಾಟವು ಪಿಟಿಐ ತನ್ನ ಅಧಿಕೃತ ಯೂಟ್ಯೂಬ್ ವಾಹಿನಿಯಲ್ಲಿ ಅಪ್‌ಲೋಡ್ ಮಾಡಿದ್ದ ಟ್ರಂಪ್ ಅವರ ವಿಡಿಯೊಗೆ ಸಂಪರ್ಕ ಕಲ್ಪಿಸಿತು. ಅದರಲ್ಲಿ ಟ್ರಂಪ್ ಅವರು ಮೋದಿ ಅವರನ್ನು ‘ದೇವದೂತ’, ‘ದೃಢ ಸಂಧಾನಕಾರ’ ಎಂದು ಬಣ್ಣಿಸಿರುವುದು ಕಂಡಿತು. ಮುಂದುವರಿದು ‘ಮೋದಿ ಅತ್ಯಂತ ಸುಂದರವಾದ ವ್ಯಕ್ತಿ. ಅವರೊಬ್ಬ ಉತ್ತಮ ವ್ಯಕ್ತಿ. ಆದರೆ, ಅವರು ದೃಢವಾದವರು.. ಅವರೆಷ್ಟು ದೃಢ ಎಂದರೆ..’ ಎಂದು ಬಣ್ಣಿಸುತ್ತಾ ‘He is a killer’ ಎಂದಿದ್ದಾರೆ. ಅದರ ಅರ್ಥ ಅವರು ಕೊಲೆಗಡುಕ ಎಂದಲ್ಲ. ಜತೆಗೆ, ವಿಡಿಯೊದಲ್ಲಿ ಎಲ್ಲಿಯೂ ಗುಜರಾತ್ ಪ್ರಸ್ತಾಪ ಬರುವುದಿಲ್ಲ. ರಿಸೆಂಬಲ್ ಎಐ ಸಾಧನದ ಮೂಲಕ ಆಡಿಯೊ ಅನ್ನು ಪರಿಶೀಲಿಸಿದಾಗ, ಅದನ್ನು ಡಿಜಿಟಲ್ ಆಗಿ ಮಾರ್ಪಡಿಸಿರುವುದು ಕಂಡಿತು. ಧ್ವನಿ ಮಾರ್ಪಡಿಸಿದ ವಿಡಿಯೊ ಅನ್ನು ಹಂಚಿಕೊಂಡು ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು



ದೀಪಾ ಹಿರೇಗುತ್ತಿ

ನಿಜವಾದ ಗೌರವ

ಒಂದೂರಿನಲ್ಲಿ ಕ್ರೂರಿಯಾದ ರಾಜನೊಬ್ಬನಿದ್ದ. ತನ್ನನ್ನು ವಿರೋಧಿಸಿದವರಿಗೆ ಹಣ ಮತ್ತು ಅಧಿಕಾರದ ಬಲದಿಂದ ತೊಂದರೆ ಕೊಡುತ್ತಿದ್ದ. ಈ ಮೂರ್ಖನ ಸಹವಾಸ ಯಾರಿಗೆ ಬೇಕೆಂದು ಜನರು ಅವನನ್ನು ಎದುರು ಹಾಕಿಕೊಳ್ಳಲು ಹೋಗುತ್ತಿರಲಿಲ್ಲ. ಅದನ್ನೇ ಆ ರಾಜ ತಪ್ಪಾಗಿ ತಿಳಿದುಕೊಂಡು ಎಲ್ಲರೂ ತನ್ನನ್ನು ಬಹಳ ಗೌರವಿಸುತ್ತಾರೆಂದು ಗರ್ವ ಪಡುತ್ತಿದ್ದ.

ಆ ರಾಜನ ಹತ್ತಿರ ಒಂದು ನಾಯಿಯಿತ್ತು. ಅದನ್ನು ಕಂಡರೆ ಆತನಿಗೆ ತುಂಬಾ ಪ್ರೀತಿ. ವಿಹಾರಕ್ಕೆ ಹೋಗುವಾಗ ಆ ನಾಯಿಯನ್ನು ಕರೆದುಕೊಂಡು ಹೋಗುತ್ತಿದ್ದ. ಊಟ ಮಾಡುವಾಗಲೂ ಪಕ್ಕದಲ್ಲೇ, ದರ್ಬಾರು ನಡೆಸಬೇಕಾದರೂ ಜತೆಯಲ್ಲೇ. ಜನರಿಗೂ ಸಿಕ್ಕದ ವೈಭವ ಆ ನಾಯಿಯದಾಗಿತ್ತು. ಒಂದು ದಿನ ಇದ್ದಕ್ಕಿದ್ದಂತೆ ಕಾಯಿಲೆ ಬಿದ್ದು ಆ ನಾಯಿ ಸತ್ತುಹೋಯಿತು. ದುಃಖಿತನಾದ ರಾಜ ನಾಯಿಯ ಶವಸಂಸ್ಕಾರಕ್ಕೆ ಭರ್ಜರಿ ಏರ್ಪಾಡು ಮಾಡಿದ. ರಾಜಧಾನಿಯ ಎಲ್ಲ ಜನರೂ ಶವಸಂಸ್ಕಾರಕ್ಕೆ ಬಂದರು. ಅದನ್ನು ನೋಡಿ ರಾಜ, ‘ಅಬ್ಬಾ, ಜನರೆಲ್ಲ ನನ್ನನ್ನು ಎಷ್ಟು ಪ್ರೀತಿಸುತ್ತಾರೆ, ನಾನೆಷ್ಟು ಜನಪ್ರಿಯ ಅರಸ’ ಎಂದು ಒಳಗೊಳಗೇ ಹೆಮ್ಮೆಪಟ್ಟ.

ಕೆಲವು ದಿನಗಳ ನಂತರ ಆ ರಾಜನೂ ಅಕಾಸ್ಮಾತ್ ಆಗಿ ಮೃತಪಟ್ಟ. ಆದರೆ ಆ ಊರಿನ ಯಾರೂ ರಾಜನ ಅಂತಿಮ ಸಂಸ್ಕಾರಕ್ಕೆ ಹೋಗಲಿಲ್ಲ.

ಕಥೆ ಇಷ್ಟೇ. ಆದರೆ ಅದರ ಅರ್ಥ, ಅದು ತಿಳಿಸುವ ನೀತಿ ಮಾತ್ರ ಮಿದುಳಿನ ಆಳದಲ್ಲಿ ಜಾಗ್ರತೆಯಿಂದ ಇಟ್ಟುಕೊಳ್ಳಬೇಕಾದದ್ದು. ಗೌರವವೆನ್ನುವುದು ಗಳಿಸಬೇಕಾದುದು. ಅದನ್ನು ಅಧಿಕಾರದಿಂದಲೋ, ಒತ್ತಾಯದಿಂದಲೋ ಅಥವಾ ಹಿಂಸೆಯಿಂದಲೋ ಪಡೆಯಲಾಗದು. ಇತರರನ್ನು ಭಯಪಡಿಸುವುದು ಬಹು ಸುಲಭವಾದ ಕೆಲಸ. ಯಾಕೆಂದರೆ, ಮನುಷ್ಯರಾದ ನಾವೆಲ್ಲರೂ ಯಾವಾಗಲೂ ಒಂದಲ್ಲ ಒಂದು ಆತಂಕದಲ್ಲಿರುತ್ತೇವೆ. ಮನುಷ್ಯನ ಈ ಹೆದರಿಕೆಯೇ ಎಷ್ಟೋ ಜನರ ಬದುಕಿನ ಅನ್ನದ ಮೂಲ. ಇತರರನ್ನು ಹೆದರಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ, ಶೋಷಣೆ ನಡೆಸುವ, ಸಂಪತ್ತನ್ನು ಸಂಗ್ರಹಿಸುವ ಮೋಸಗಾರರು ಎಲ್ಲೆಡೆಯೂ ಇದ್ದಾರೆ. ಹೆದರಿಕೆಯಿಂದ ಜನರು ತೋರುವ ಸುಳ್ಳು ಗೌರವವನ್ನೇ ತಪ್ಪಾಗಿ ಅರ್ಥ ಮಾಡಿಕೊಂಡು ತಮ್ಮನ್ನು ತಾವು ಮಹಾನ್ ಎಂದುಕೊಳ್ಳುವ ಮೂರ್ಖ ರಾಜನ ಪಾಡು ಬಹಳ ಮಂದಿ ‘ಗೌರವಾನ್ವಿತ’ರದ್ದು.

‘ನೀವು ನನ್ನನ್ನು ಇಷ್ಟಪಡುತ್ತೀರೋ ಇಲ್ಲವೋ ಎಂಬುದರ ಬಗ್ಗೆ ನನಗೆ ತಲೆಬಿಸಿ ಇಲ್ಲ, ನಾನು ಕೇಳುವುದು ಒಬ್ಬ ಮನುಷ್ಯನಾಗಿ ನನ್ನನ್ನು ಗೌರವಿಸುವುದರ ಬಗ್ಗೆ’ ಎನ್ನುತ್ತಾರೆ ಬೇಸ್‌ಬಾಲ್ ಆಟಗಾರ ಜಾಕಿ ರಾಬಿನ್ಸನ್. ಪರಸ್ಪರ ಗೌರವ ಸಂಬಂಧಗಳ ತಳಹದಿ. ಒಬ್ಬ ವ್ಯಕ್ತಿ ಯಾರೇ ಆಗಲಿ, ಅವರಿಗೆ ಗೌರವ ಪಡೆಯುವ ಎಲ್ಲಾ ಹಕ್ಕೂ ಇದೆ. ಜಾತಿ, ಲಿಂಗ, ಧರ್ಮ, ಅಂತಸ್ತಿನ ಆಧಾರದಲ್ಲಿ ವ್ಯಕ್ತಿಯ ಗೌರವವನ್ನು ನಿರ್ಧರಿಸುವುದು ಸಂವಿಧಾನಕ್ಕೆ ಮಾತ್ರವಲ್ಲ, ಮನುಷ್ಯತ್ವಕ್ಕೇ ನಾವು ಮಾಡುವ ಅಪಚಾರ.

ಜತೆಗೆ ನಮ್ಮನ್ನು ನಾವು ಗೌರವಿಸಿಕೊಳ್ಳುವುದು ಕೂಡ ಮುಖ್ಯ. ಸ್ವಗೌರವ ಆತ್ಮಾಭಿಮಾನವನ್ನು ಹೆಚ್ಚಿಸುತ್ತದೆ. ನಮ್ಮ ಪ್ರಯತ್ನಗಳಿಗೆ ಬಲ ತುಂಬುತ್ತದೆ. ನಮ್ಮ ಬಗ್ಗೆ ನಮಗೆ ಗೌರವ ಇಲ್ಲದೇ ಹೋದರೆ ನಮ್ಮ ಪ್ರಯತ್ನಗಳ ಬಗ್ಗೆ ಅನುಮಾನ ಪ್ರಾರಂಭವಾಗುತ್ತದೆ, ಅಲ್ಲಿ ವೈಫಲ್ಯದ ಭಯ ಕಾಡುತ್ತದೆ. ಆತ್ಮಗೌರವವಿಲ್ಲದಿದ್ದರೆ ಕೀಳರಿಮೆಯಿಂದ ನರಳುತ್ತೇವೆ, ಆತ್ಮರತಿ ಹೆಚ್ಚಾದರೆ ಮೇಲರಿಮೆಯ ಗುಲಾಮರಾಗುತ್ತೇವೆ. ಗೌರವ ಮತ್ತು ಭಯ ಇವೆರಡರ ನಡುವಿನ ರೇಖೆ ಬಹಳ ತೆಳುವಾದದ್ದು. ಅದನ್ನು ಅರ್ಥ ಮಾಡಿಕೊಂಡು ನಮ್ಮ ನಡವಳಿಕೆಯಲ್ಲಿ ಬದಲಾವಣೆ ತಂದುಕೊಳ್ಳಲು ಪ್ರಯತ್ನಿಸುವುದು ವ್ಯಕ್ತಿತ್ವ ನಿರ್ಮಾಣದ ಪ್ರಮುಖ ಹೆಜ್ಜೆ.

ಗುಂಡಣ್ಣ



ಪದಬಂಧ 6449

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಕಂಪನವಾದಾಗ ತೋರಿದ ಸಹಾನುಭೂತಿ! (4)
3. ಸಂಭವಿಸಲು ಸಾಧ್ಯವಿಲ್ಲದ್ದು (4)
6. ಕತ್ತು ಮೇಲೆತ್ತಿ ಮಾಡುತ್ತಿರುವ ವ್ಯಾಯಾಮ (4)
8. ಗೆಲುವು ಇಲ್ಲಿ ಉಲ್ಟಾಪಲ್ಟಾ ಕಾಣುತಿದೆ (2)
9. ಕ್ಷಾರವನ್ನು ತಂದಮೇಲೆ ಮಾಡಿಸಿಕೊಂಡಿರುವ ವಪನ (2)
10. ಪ್ರತ್ಯಕ್ಷದಲ್ಲಿಯೇ ಪಂಗಡ ಕಾಣುತ್ತಿದೆಯಲ್ಲ! (2)
11. ಪದ್ಯದ ನಿಯತಸ್ಥಳದಲ್ಲಿ ಬರುವ ನಿಯತಾಕ್ಷರ (2)
13. ನಸುಕಿನಲ್ಲಿ ತುಸುವೇ ಬೀರಿದ ಮಂದಹಾಸ (4)
15. ಊಟದ ಎಲೆ ಇಲ್ಲಿದೆ (4)
16. ಪಗಾರ ಪಡೆದು ಗ್ರಂಥಗಳನ್ನು ಪ್ರತಿಮಾಡುವವನು (4)

ಮೇಲಿಂದ ಕೆಳಕ್ಕೆ

1. ಉಪಾಯದಿಂದ ಹಾಕಿರುವ ಬುನಾದಿ (4)
2. ಪದ ಹೇಳಿ ಪಡೆದಿರುವ ಬಿಲ್ಲೆ (3)
4. ಆಪತ್ತು ಬಂದಾಗ ವ್ಯಯಿಸಿದ ಐಶ್ವರ್ಯ (3)
5. ಖಚರವನ್ನು ಹಿಡಿಯುತ್ತಿರುವ ಬೇಡ (4)
7. ಗತಿಸಿದ ಪತಿಯೊಡನೆ ಚಿತೆಯೇರುವುದು (5)
10. ತಾಪತ್ರಯವಿರುವುದಕ್ಕೇ ಈ ಪರಿ ಇಷ್ಟೊಂದು ದುಃಖ (4)
12. ಸರ ತಂದಿರುವ ಚಾರನದು ಒಳ್ಳೆಯ ನಡತೆ (4)
13. ತಿರುಗಿದ ಮುಖ (3)
14. ನೆಲವನ್ನು ಅಗೆಯುವ ಕಬ್ಬಿಣದ ಸಾಧನ (3)



6448ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಿಚ್ಛೇದ 3.ಪರಾಕ್ರಮ 5.ರಮಣ 6.ರಥಿಕ 8.ಕಬ್ಬಿಣ 9.ಪಾನೀಯ 10.ಕವಲು 11.ಒರತೆ 12.ಕೆಲಸ 14.ಲಾಲನೆ 16.ಮೆಲುನುಡಿ 17.ಪರಭಾರೆ

ಮೇಲಿಂದ ಕೆಳಕ್ಕೆ: 1.ಪಗಾರ 2.ದರ 3.ಪಣ 4.ಮರಣ 7.ಕಮನೀಯತೆ 8.ಕನವರಿಕೆ 11.ಒಲುಮೆ 13.ಸಕ್ಕರೆ 14.ಲಾಡಿ 15.ನೆಪ

ಸುಡೊಕು 6832

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6		4	9		7			8
	1				6			
		8	2			4		6
7					8		6	
	8		4			7		5
		5		7				
4	9		3	8		6		1
				9		5		
8		7			4			3

6831 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

30 ಜೂನ್ 2026 ಮಂಗಳವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಶುಕ್ಲ ಪೂರ್ಣಿಮ ಗಂ. 5-27 ನಕ್ಷತ್ರ: ಪೂರ್ವಾಷಾಢ ಅಹೋರಾತ್ರ ಯೋಗ: ಬ್ರಹ್ಮ ಗಂ. 15-19 ಕರಣ: ಬವ ಗಂ. 5-27, ಮಿಥುನ ಮಾಸದ 15 ನೇ ದಿನ. ಮಳೆ ನಕ್ಷತ್ರ : ಆರ್ದ್ರಾ 3 ನೇ ಪಾದ. **ರಾಹುಕಾಲ :** ಮಧ್ಯಾಹ್ನ 03-00 - 04-30 , ಸೂರ್ಯೋದಯ : 06-11 ಸೂರ್ಯಾಸ್ತ : 06-57 ಮುಸ್ಲಿಂ ದಿನಾಂಕ : 14 ಮೊಹರಂ , ಅದೃಷ್ಟ ಸಂಖ್ಯೆ : 5, 3

ಮೇಷ: ಮಕ್ಕಳ ವಿಷಯದಲ್ಲಿ ಕಾಳಜಿ ತೋರಿ ವ್ಯವಸ್ಥಿತ ತೀರ್ಮಾನವನ್ನು ತೆಗೆದುಕೊಂಡಲ್ಲಿ ಅವರ ಭವಿಷ್ಯ ಉತ್ತಮವಾಗಲಿದೆ. ಪಾಕಪ್ರವೀಣರಿಗೆ ವೃತ್ತಿಯಲ್ಲಿ ಹೆಸರು ಸಂಪಾದನೆ ಮಾಡುವ ಕಾಲ ಬರಲಿದೆ.

ವೃಷಭ: ಬೇಸರದ ಸಂಗತಿಗಳನ್ನು ಮರೆತು ಹೊಸ ಜೀವನ ಶುರು ಮಾಡುವಲ್ಲಿ ದಿನಚರಿಯನ್ನು ಹಾಕಿಕೊಳ್ಳಿ. ಮನೋಭಿಲಾಷೆಗೆ ಕುಟುಂಬ ವರ್ಗದವರು ಅಭಿವೃದ್ಧಿ ದಾರಿ ಕಲ್ಪಿಸುವರು.

ಮಿಥುನ: ಪೋಷಕರು ಹಾಗೂ ಗುರುವಿನ ಮಾರ್ಗದರ್ಶನ ತಳಮಳವನ್ನು ದೂರ ಮಾಡಲಿದೆ. ಯೋಜನೆಗಳು ಕಾರ್ಯಗತಗೊಳ್ಳುವುದರ ಬಗ್ಗೆ ಶನೈಶ್ಚರನಲ್ಲಿ ಪ್ರಾರ್ಥನೆ ನಡೆಸಿ.

ಕರ್ಕಾಟಕ: ಸಹಾಯಕ ದರ್ಜೆಯವರಲ್ಲಿ ಕೆಲಸ ಮಾಡಿಸಿಕೊಳ್ಳುವ ಬದಲು ಸ್ವಂತವಾಗಿ ಕೆಲಸ ಮಾಡುವುದು ಉತ್ತಮ. ಮಂಜುನಾಥನ ಸೇವೆಯನ್ನು ಮಾಡುವುದರಿಂದ ಕೋರ್ಟು ವ್ಯವಹಾರಗಳಲ್ಲಿ ಜಯ ಸಿಗಲಿದೆ.

ಸಿಂಹ: ಸಾಮಾಜಿಕ ಸಮಾರಂಭದಲ್ಲಿ ಭಾಗವಹಿಸುವುದರಿಂದ ಮಗನ ಮದುವೆಯ ವಿಚಾರದಲ್ಲಿ ಅನುಕೂಲವಾಗುವುದು. ಬಾಳೆ ಮತ್ತು ಕಾಫೀ ಬೆಳೆಗಾರರಿಗೆ ಒಳ್ಳೆಯ ಆದಾಯ. ಶುಭವಾರ್ತೆಗಳು ಸಿಗಲಿವೆ.

ಕನ್ಯಾ: ಹೊರದೇಶದಲ್ಲಿರುವ ಮಕ್ಕಳು ಮನೆಗೆ ಬರಲಿದ್ದಾರೆ. ಮನೆಯ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ಸಮರ್ಥರಾಗಿದ್ದರೂ ಇಬ್ಬಂದಿಯ ಪರಿಸ್ಥಿತಿಗೆ ತಲುಪುವಿರಿ.

ತುಲಾ: ಕೆಲವು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಬರಬಹುದು. ಇದಕ್ಕಾಗಿ ವಿಚಲಿತರಾಗಬೇಕಾಗಿಲ್ಲ. ಪಾಲಕರಾಗುವ ಸುದ್ದಿ ತಿಳಿದು ಅತೀವ ಸಂತಸ ಮೂಡಲಿದೆ. ಕಷ್ಟವನ್ನು ಅನುಭವಿಸುವಿರಿ.

ವೃಶ್ಚಿಕ: ಸಾಮರ್ಥ್ಯವನ್ನು ಅರಿತುಕೊಳ್ಳಿ. ನಿಮ್ಮ ಮೇಲಿನ ವಿಶ್ವಾಸದಿಂದ ಎದುರಿಗಿನ ವ್ಯಕ್ತಿ ಅಂತರಂಗದ ಮಾತುಗಳನ್ನು ಬಿಚ್ಚಿಡಲಿದ್ದಾರೆ. ಶ್ವಾಸಕೋಶಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ನಿಗಾ ಇರಲಿ.


ಧನು: ಮಾದರಿಯಾಗುವಂತೆ ಬದುಕುವಿರಿ. ಕಾನೂನುಗಳಿಗೆ ಬೆಲೆ ಕೊಡುವ ಮನೋಭಾವವನ್ನು ಬೆಳೆಸಿಕೊಳ್ಳಿ. ಶ್ರಮದ ದುಡಿಮೆ ಧ್ಯೇಯವಾಗಿರುವುದರಿಂದ ಶತ್ರುಗಳು ಮಿತ್ರರಾಗುವರು.

ಮಕರ: ದಾಖಲೆಗಳಿಗೆ ಸಂಬಂಧಿಸಿದಂತೆ ಬಾಕಿ ಉಳಿಸಿಕೊಂಡಿರುವ ಕೆಲಸಗಳನ್ನು ಬೇಗ ಮುಗಿಸಿಕೊಳ್ಳಿ. ಮನೆಯಲ್ಲಿ ಶಾಂತ ವಾತಾವರಣ ಇರಲಿದೆ. ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗಲಿದೆ.

ಕುಂಭ: ಗುರಿ ಸಾಧಿಸಬೇಕು ಅಥವಾ ಗೆಲುವು ಬೇಕೆಂಬ ಛಲವನ್ನು ಇಟ್ಟುಕೊಳ್ಳಿ. ಹಾಗೆಂದು ಇತರರೊಂದಿಗೆ ಹೋಲಿಕೆ ಸಲ್ಲ. ಚಿನ್ನ–ಬೆಳ್ಳಿ ವ್ಯಾಪಾರಿಗಳಿಗೆ ಲಾಭ ಹೆಚ್ಚುವುದು.

ಮೀನ: ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ತಯಾರಿ ನಡೆಸುವುದರಿಂದ ಮನೋಲ್ಲಾಸ ಸಿಗುತ್ತದೆ. ಕಾರ್ಮಿಕ ವರ್ಗದವರಿಗೆ ಆದಾಯ ಉಂಟಾಗಲಿದೆ. ತೊಂದರೆ ಕೊಡುತ್ತಿದ್ದ ಶೀತಪ್ರಕೃತಿ ನಿವಾರಣೆಯಾಗಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,056
ಇಂದಿನ ಅಂತ್ಯ: 23,946
ದಿನದ ಕನಿಷ್ಠ: 23,924
109

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹710
12 ಕ್ಕೆ ₹94
ಮೈಸೂರು: 100 ಕ್ಕೆ ₹725

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹262
ಆರ್‌ಎಸ್‌ಎಸ್-5 ₹257
ಗುಡ್ ಲಾಟ್ ₹223

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ)₹460-690
ದ್ವಿತಳಿ (ಬಿ.ವಿ) ₹533-828

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1580 (1575)
ಸೋಯಾ (ರಿಫೈನ್ಡ್) ₹1465 (1465)
ಸೂರ್ಯಕಾಂತಿ (ರಿಫೈನ್ಡ್) ₹1655 (1650)
ಪಾಮೋಲಿನ್ ₹1455 (1455)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹32600-33000
ತಿಪಟೂರು ₹30000-32605
ತುರುವೇಕೆರೆ ₹31000-32000

ಪೆಟ್ರೋಲ್, ಡೀಸೆಲ್ ಮಾರಾಟ ನಿರ್ಬಂಧ ರದ್ದು

ನವದೆಹಲಿ (ಪಿಟಿಐ): ವಾಣಿಜ್ಯ ಹಾಗೂ ಕೈಗಾರಿಕಾ ಗ್ರಾಹಕರಿಗೆ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟದ ವಿಚಾರವಾಗಿ ವಿಧಿಸಿದ್ದ ನಿರ್ಬಂಧಗಳನ್ನು ಕೇಂದ್ರ ಸರ್ಕಾರವು ಬುಧವಾರದಿಂದ ಅನ್ವಯವಾಗುವಂತೆ ತೆರವು ಮಾಡಲಿದೆ.

ಒಂದು ವಾಹನಕ್ಕೆ ಒಂದು ದಿನದಲ್ಲಿ ಭರ್ತಿ ಮಾಡಬಹುದಾದ ಡೀಸೆಲ್ ಮಿತಿಯನ್ನು ಕೂಡ ತೆರವುಗೊಳಿಸಲಾಗುತ್ತದೆ. ಇದು ಇಂಧನ ಪೂರೈಕೆ ಸುಧಾರಣೆ ಕಂಡಿದೆ ಎಂಬುದನ್ನು ಸೂಚಿಸುತ್ತಿದೆ.

ಇಂಧನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದರಿಂದ ಸ್ಥಳೀಯ ಮಟ್ಟದಲ್ಲಿ ಇಂಧನ ಕೊರತೆ ಎದುರಾಗಬಾರದು ಎಂಬ ಉದ್ದೇಶದಿಂದ ಕೇಂದ್ರವು ಈ ನಿರ್ಬಂಧಗಳನ್ನು ಜಾರಿಗೆ ತಂದಿತ್ತು.

ಇ.ವಿ.ಗಳಿಗೆ ರಸ್ತೆ ತೆರಿಗೆ ಮನ್ನಾ

ಇ.ವಿ ಆಟೊರಿಕ್ಷಾ ಖರೀದಿಗೆ ಪ್ರೋತ್ಸಾಹಧನ ನೀಡಿದ ದೆಹಲಿ ಸರ್ಕಾರ

ನವದೆಹಲಿ (ಪಿಟಿಐ): ₹30 ಲಕ್ಷಕ್ಕಿಂತ ಕಡಿಮೆ ಬೆಲೆ ಇರುವ (ಎಕ್ಸ್‌-ಶೋರೂಂ) ಎಲ್ಲ ವಿದ್ಯುತ್ ಚಾಲಿತ ವಾಹನಗಳ (ಇ.ವಿ) ಮೇಲಿನ ರಸ್ತೆ ತೆರಿಗೆ ಹಾಗೂ ನೋಂದಣಿ ಶುಲ್ಕವನ್ನು ಸಂಪೂರ್ಣವಾಗಿ ಮನ್ನಾ ಮಾಡಲಾಗುವುದು ಎಂದು ದೆಹಲಿ ಸರ್ಕಾರ ಪ್ರಕಟಿಸಿದೆ.

ಈ ಅಂಶ ಇರುವ ಹೊಸ ಇ.ವಿ. ನೀತಿಗೆ ದೆಹಲಿ ಸರ್ಕಾರವು ಸೋಮವಾರ ಒಪ್ಪಿಗೆ ನೀಡಿದೆ. ಹೊಸ ನೀತಿಯ ಜಾರಿ ನಂತರದಲ್ಲಿ ದ್ವಿಚಕ್ರ ಇ.ವಿ. ಖರೀದಿಸುವವರಿಗೆ ಮೊದಲ ವರ್ಷದಲ್ಲಿ ₹30 ಸಾವಿರ ಸಬ್ಸಿಡಿ ಸಿಗಲಿದೆ. ಎರಡನೆಯ ವರ್ಷದಲ್ಲಿ ₹20 ಸಾವಿರ ಹಾಗೂ ಮೂರನೆಯ ವರ್ಷದಲ್ಲಿ ₹10 ಸಾವಿರ ಸಬ್ಸಿಡಿ ಇರಲಿದೆ.



ಇ.ವಿ ತ್ರಿಚಕ್ರ ವಾಹನ ಖರೀದಿಸುವವರು ಮೊದಲ, ಎರಡನೇ, ಮೂರನೆಯ ವರ್ಷದಲ್ಲಿ ಕ್ರಮವಾಗಿ ₹50 ಸಾವಿರ, ₹40 ಸಾವಿರ ಹಾಗೂ ₹30 ಸಾವಿರ ಸಬ್ಸಿಡಿ ಪಡೆಯಲು ಅರ್ಹರಾಗಲಿದ್ದಾರೆ
ರೇಖಾ ಗುಪ್ತಾ, ದೆಹಲಿ ಮುಖ್ಯಮಂತ್ರಿ

2027ರ ಜನವರಿ 1ರಿಂದ ದೆಹಲಿಯಲ್ಲಿ ತ್ರಿಚಕ್ರ (ಆಟೊರಿಕ್ಷಾ) ವಾಹನಗಳ ವರ್ಗದಲ್ಲಿ ಇ.ವಿ.ಗಳ ನೋಂದಣಿಗೆ ಮಾತ್ರ ಅವಕಾಶ ಇರಲಿದೆ. ಪೆಟ್ರೋಲ್ ಹಾಗೂ ಸಿಎನ್‌ಜಿ ಚಾಲಿತ ಹೊಸ ದ್ವಿಚಕ್ರ ವಾಹನಗಳ ನೋಂದಣಿಯನ್ನು ಹಂತ ಹಂತವಾಗಿ ಕೊನೆಗೊಳಿಸಲಾಗುತ್ತದೆ. 2028ರ ಏಪ್ರಿಲ್ 1ರಿಂದ ದ್ವಿಚಕ್ರ ವಾಹನಗಳ ವರ್ಗದಲ್ಲಿ ಇ.ವಿ.ಗಳ ನೋಂದಣಿಗೆ ಮಾತ್ರ ಅವಕಾಶ ಇರಲಿದೆ.

ರಾಷ್ಟ್ರ ರಾಜಧಾನಿಯಲ್ಲಿ ಇ.ವಿ ವಾಹನಗಳ ಬಳಕೆಗೆ ಉತ್ತೇಜನ ನೀಡಲು, ವಾಹನಗಳಿಂದ ಉಂಟಾಗುವ ಮಾಲಿನ್ಯವನ್ನು ಕಡಿಮೆ ಮಾಡಲು ಮುಂದಿನ ನಾಲ್ಕು ವರ್ಷಗಳಲ್ಲಿ ₹15 ಸಾವಿರ ಕೋಟಿ ಹೂಡಿಕೆ ಮಾಡಲಾಗುತ್ತದೆ ಎಂದು ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ತಿಳಿಸಿದ್ದಾರೆ. ಸಂಪುಟದ ಒಪ್ಪಿಗೆ ಪಡೆದಿರುವ ಇ.ವಿ. ನೀತಿಯು ಜುಲೈ 1ರಿಂದ ಜಾರಿಗೊಳ್ಳಲಿದೆ.

ನೀತಿಯ ಪ್ರಮುಖಾಂಶಗಳು

- ಎನ್ 1 ವರ್ಗದ ಇ.ವಿ ಟ್ರಕ್ ಖರೀದಿಸುವವರು ₹1 ಲಕ್ಷದವರೆಗೆ ಸಬ್ಸಿಡಿ ಪಡೆಯಬಹುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ
- ಬಿಎಸ್-4 ಅಥವಾ ಅದಕ್ಕಿಂತ ಹಿಂದಿನ ಮಾನದಂಡದ ನಾಲ್ಕು ಚಕ್ರಗಳ ವಾಹನವನ್ನು ಗುಜರಿಗೆ ಹಾಕಿ ಇ.ವಿ ಖರೀದಿಸುವವರಿಗೆ ₹1 ಲಕ್ಷದವರೆಗೆ ಪ್ರೋತ್ಸಾಹಧನ ನೀಡುವ ಅವಕಾಶವನ್ನು ನೀತಿಯು ಒಳಗೊಂಡಿದೆ
- ಹೈಬ್ರಿಡ್ ವಾಹನಗಳಿಗೆ ಯಾವುದೇ ಸಬ್ಸಿಡಿ ಇಲ್ಲ
- ನೀತಿಯು 2030ರ ಮಾರ್ಚ್ 31ರವರೆಗೆ ಜಾರಿಯಲ್ಲಿ ಇರಲಿದ್ದು ಈ ಅವಧಿಯಲ್ಲಿ ದೆಹಲಿಯಲ್ಲಿ 30 ಸಾವಿರ ಚಾರ್ಜಿಂಗ್ ಕೇಂದ್ರ ನಿರ್ಮಿಸಲಾಗುತ್ತದೆ

ಸುದ್ದಿ 2 ನಿಮಿಷ

ಭಾರತದ ಬಾಹ್ಯಸಾಲ ₹72 ಲಕ್ಷ ಕೋಟಿಗೆ ಏರಿಕೆ

ಮುಂಬೈ (ಪಿಟಿಐ): 2025-26ರ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ದೇಶದ ಒಟ್ಟು ಬಾಹ್ಯ ಸಾಲವು ₹72.11 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಿಳಿಸಿದೆ.

2024-25ರ ಆರ್ಥಿಕ ವರ್ಷದಲ್ಲಿ ದೇಶದ ಬಾಹ್ಯ ಸಾಲವು ₹69.60 ಲಕ್ಷ ಕೋಟಿಯಷ್ಟಿತ್ತು. ಇದಕ್ಕೆ ಹೋಲಿಸಿದರೆ ಅಂದಾಜು ₹2.51 ಲಕ್ಷ ಕೋಟಿ ಹೆಚ್ಚಳವಾಗಿದೆ. ರೂಪಾಯಿ ಮತ್ತು ಇತರ ಪ್ರಮುಖ ಕರೆನ್ಸಿಗಳ ಎದುರು ಡಾಲರ್ ಮೌಲ್ಯದಲ್ಲಿನ ಏರಿಕೆಯಿಂದ ಸಾಲದ ಪ್ರಮಾಣವು ಏರಿಕೆಯಾಗಿದೆ ಎಂದು ಹೇಳಿದೆ.

ಬಾಹ್ಯಸಾಲ ಮತ್ತು ಜಿಡಿಪಿ ನಡುವಿನ ಅನುಪಾತವು ಕಳೆದ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಶೇ 19.8ರಿಂದ ಶೇ 20.8ಕ್ಕೆ ಏರಿಕೆಯಾಗಿದೆ. ದೀರ್ಘಾವಧಿ ಸಾಲವು (ಒಂದು ವರ್ಷದ ಮೇಲ್ಪಟ್ಟು) ₹58 ಲಕ್ಷ ಕೋಟಿಯಷ್ಟಾಗಿದೆ. ಒಟ್ಟು ಬಾಹ್ಯಸಾಲದಲ್ಲಿ ಅಲ್ಪಾವಧಿ ಸಾಲದ ಪಾಲು (ಒಂದು ವರ್ಷದೊಳಗಿನ ಸಾಲವು) ಶೇ 19.6ರಷ್ಟಾಗಿದೆ.



ಇದೇ ವೇಳೆ ವಿದೇಶಿ ವಿನಿಮಯ ಮೀಸಲು ಮತ್ತು ಅಲ್ಪಾವಧಿ ಸಾಲದ ನಡುವಿನ ಅನುಪಾತವು ಶೇ 21.6ಕ್ಕೆ ಹೆಚ್ಚಳವಾಗಿದೆ.

ಐಐಪಿ ಶೇ 5.1ಕ್ಕೆ ಏರಿಕೆ: ಕೇಂದ್ರ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನಾ ಸೂಚ್ಯಂಕವು (ಐಐಪಿ) ಮೇ ತಿಂಗಳಿನಲ್ಲಿ ಶೇ 5.1ಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ. ಈ ಸೂಚ್ಯಂಕವು ಏಪ್ರಿಲ್‌ನಲ್ಲಿ ಶೇ 4.9ರಷ್ಟಿತ್ತು.

ತಯಾರಿಕಾ ವಲಯದ ಬೆಳವಣಿಗೆ ಶೇ 5.5 ಮತ್ತು ವಿದ್ಯುತ್ ಉತ್ಪಾದನೆಯು ಶೇ 9.9ರಷ್ಟಕ್ಕೆ ಏರಿಕೆಯಾಗಿದೆ. ಇದು ಸೂಚ್ಯಂಕ ಏರಿಕೆಗೆ ಕಾರಣ ಎಂದು ತಿಳಿಸಿದೆ. ಗಣಿಗಾರಿಕೆ ವಲಯದ ಶೇ (–)1.6ರಷ್ಟು ಕುಸಿತ ಕಂಡುಬಂದಿದೆ.

ಮುಂಬೈ ಧಾರಣೆ (ಶೇಂಗಾ)

29-06-2026	
ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1590 (1585)
ಒಂದು ವಾರದ ಡೆಲಿವರಿ	1585 (1580)
ಪಾಮ್ ವಾರದ ಡೆಲಿವರಿ	1453 (1453)
ಸೂರ್ಯಕಾಂತಿ ಎಣ್ಣೆ ಕಚ್ಚಾ	1580 (1575)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,40,500 (1,42,700)
ಬೆಳ್ಳಿ ಕೆ.ಜಿಗೆ	2,20,500 (2,24,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಸ್ತೆ ಅಪಘಾತದಲ್ಲಿ ದೇಶದಲ್ಲೇ ಬೆಂಗಳೂರು 2ನೇ ಸ್ಥಾನದಲ್ಲಿದೆ. ರಸ್ತೆ ಅಪಘಾತಗಳನ್ನು ತಡೆಗಟ್ಟುವಲ್ಲಿ ಸರ್ಕಾರ ವಿಫಲವಾಗಿದೆಯೇ?

ಹೌದು / ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)
ದೊಡ್ಡ ₹1800-2600
ಮಧ್ಯಮ ₹1200-1800
ಸಣ್ಣ ₹600-1200

ಮನೆ ಮಾರಾಟ ಇಳಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ದೇಶದ ಏಳು ಪ್ರಮುಖ ನಗರಗಳಲ್ಲಿ ಮನೆಗಳ ಮಾರಾಟವು ಏಪ್ರಿಲ್-ಜೂನ್ ಅವಧಿಯಲ್ಲಿ ಶೇಕಡ 6ರಷ್ಟು ಇಳಿಕೆ ಕಂಡಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಉಂಟಾದ ಅನಿಶ್ಚಿತತೆ ಹಾಗೂ ಅದರ ಪರಿಣಾಮವಾಗಿ ಪೂರೈಕೆ ವ್ಯವಸ್ಥೆಯಲ್ಲಿ ಸೃಷ್ಟಿಯಾದ ಸಮಸ್ಯೆಗಳು ಮನೆಗಳ ಮಾರಾಟದ ಮೇಲೆ ಪ್ರಭಾವ ಬೀರಿವೆ ಎಂದು ವರದಿ ಹೇಳಿದೆ. 2025ರ ಜೂನ್ ತ್ರೈಮಾಸಿಕ ದಲ್ಲಿ ಅಂದಾಜು 96,285 ಮನೆಗಳ ಮಾರಾಟ ಆಗಿತ್ತು, ಅದು ಈ ವರ್ಷದ ಜೂನ್ ತ್ರೈಮಾಸಿಕ ದಲ್ಲಿ 90,715ಕ್ಕೆ ಇಳಿದಿದೆ.

ಮನೆಗಳ ಮಾರಾಟ ಬೆಲೆ ಹೆಚ್ಚಾಗಿದ್ದುದು ಕೂಡ ಮಾರಾಟ ಸಂಖ್ಯೆಯು ಕಡಿಮೆ ಆಗಲು ಒಂದು ಕಾರಣ ಎಂದು ಅನರಾಕ್ ಹೇಳಿದೆ. ಮುಂಬೈ, ದೆಹಲಿ, ಪುಣೆ, ಬೆಂಗಳೂರು, ಹೈದರಾಬಾದ್, ಚೆನ್ನೈ ಮತ್ತು ಕೋಲ್ಕತ್ತದ ಮನೆ ಮಾರಾಟ ದತ್ತಾಂಶ ಒಗ್ಗೂಡಿಸಿ ಅನರಾಕ್ ಈ ಲೆಕ್ಕ ನೀಡಿದೆ.

ಈ ಏಳು ನಗರಗಳ ಮನೆಗಳ ಬೆಲೆಯಲ್ಲಿ ಆಗಿರುವ ಸರಾಸರಿ ಏರಿಕೆಯು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 7ರಷ್ಟಿದೆ.

'ಮನೆಗಳ ಮಾರಾಟ ಸಂಖ್ಯೆಯು ನಿರೀಕ್ಷೆಗೆ ಅನುಗುಣವಾಗಿಯೇ ಇದೆ. ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಅದನ್ನು ಆಧರಿಸಿದ ಸೇವಾ ವಲಯಗಳಲ್ಲಿ ಎ.ಐ. ತಂತ್ರಜ್ಞಾನದಿಂದಾಗುವ ಪಲ್ಲಟಗಳಿಗೆ ಸಂಬಂಧಿಸಿದ ಅನಿಶ್ಚಿತತೆಯಿಂದಾಗಿ ಬಹಳಷ್ಟು ಮಂದಿ ಖರೀದಿದಾರರು ಸ್ಪಷ್ಟ ತೀರ್ಮಾನ ತೆಗೆದುಕೊಳ್ಳುತ್ತಿಲ್ಲ' ಎಂದು ಅನರಾಕ್ ಸಂಸ್ಥೆಯ ಅಧ್ಯಕ್ಷ ಅನುಜ್ ಪುರಿ ಹೇಳಿದ್ದಾರೆ.

ಪ್ರೀಮಿಯಂ ವರ್ಗದ ಮನೆಗಳ ಮಾರಾಟವು ಹೆಚ್ಚಿನ ಪ್ರಮಾಣದಲ್ಲಿ ಬೆಳವಣಿಗೆ ಕಂಡಿದೆ. ಹಾಗೆಯೇ ಜಾಗತಿಕ ಸಾಮರ್ಥ್ಯ ಕೇಂದ್ರಗಳು (ಜಿಸಿಸಿ) ಹೆಚ್ಚಿನ ಸಂಖ್ಯೆಯನ್ನು ಉದ್ಯೋಗ ಸೃಷ್ಟಿಸಿರುವ ಕಡೆಗಳಲ್ಲಿ, ಮೂಲಸೌಕರ್ಯ ಯೋಜನೆಗಳು ಜಾರಿಯಲ್ಲಿರುವ ಕಡೆಗಳಲ್ಲಿ ಮನೆಗಳ ಮಾರಾಟವು ಜಾಸ್ತಿ ಇದೆ ಎಂದು ಕೂಡ ಅನುಜ್ ಪುರಿ ತಿಳಿಸಿದ್ದಾರೆ.

ಏಳು ನಗರಗಳ ಪೈಕಿ ಮುಂಬೈ ಮಹಾನಗರ ಪ್ರದೇಶ (ಎಂಎಂಆರ್) ಹಾಗೂ ಬೆಂಗಳೂರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮನೆ ಮಾರಾಟ ದಾಖಲಾಗಿದೆ. ಏಳೂ ನಗರಗಳಲ್ಲಿನ ಒಟ್ಟು ಮಾರಾಟ ಸಂಖ್ಯೆಯಲ್ಲಿ ಶೇ 48ರಷ್ಟು (43,995 ಮನೆಗಳು) ಈ ಎರಡು ನಗರಗಳಲ್ಲಿ ಆಗಿದೆ.

ಸೆಪ್ಟೆಂಬರ್‌ಗೆ ಐವೆಕೊ ಸ್ವಾಧೀನ: ಟಾಟಾ ಮೋಟರ್ಸ್

ಮುಂಬೈ (ಪಿಟಿಐ): 'ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದ ವೇಳೆಗೆ ಇಟಲಿ ಮೂಲದ ವಾಣಿಜ್ಯ ವಾಹನ ತಯಾರಿಕಾ ಕಂಪನಿ ಐವೆಕೊ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ' ಎಂದು ಟಾಟಾ ಮೋಟರ್ಸ್‌ನ ಅಧ್ಯಕ್ಷ ಎನ್. ಚಂದ್ರಶೇಖರನ್ ಹೇಳಿದ್ದಾರೆ.

ಸ್ವಾಧೀನಕ್ಕೆ ಬೇಕಾದ ಬಹುತೇಕ ಅನುಮೋದನೆಗಳನ್ನು ಪಡೆಯಲಾಗಿದ್ದು, ಕೆಲವೊಂದು ಪ್ರಕ್ರಿಯೆಗಳಿಗೆ ಅನುಮೋದನೆ ಬೇಕಿದೆ. ಇದು ಸೆಪ್ಟೆಂಬರ್ ವೇಳೆಗೆ ಮುಕ್ತಾಯಗೊಳ್ಳಬಹುದು. ಈ ಒಪ್ಪಂದವು ಟಾಟಾ ಮೋಟರ್ಸ್‌ನ ಜಾಗತಿಕ ಮಹತ್ವಾಕಾಂಕ್ಷೆಗಳನ್ನು ಸಾಕಾರ ಮಾಡಿಕೊಳ್ಳುವಲ್ಲಿ ಮಹತ್ವದ ಹೆಜ್ಜೆಯಾಗಿದೆ ಎಂದು ಕಂಪನಿಯ ವಾರ್ಷಿಕ ಮಹಾಸಭೆಯಲ್ಲಿ ಷೇರುದಾರರಿಗೆ ತಿಳಿಸಿದ್ದಾರೆ.

ಐವೆಕೊ ಸಮೂಹವನ್ನು ₹41 ಸಾವಿರ ಕೋಟಿಗೆ (3.8 ಬಿಲಿಯನ್ ಯುರೊ) ಅದರ ರಕ್ಷಣಾ ವ್ಯವಹಾರ ಹೊರತುಪಡಿಸಿ ಖರೀದಿಸುತ್ತಿರುವುದಾಗಿ ವಾಣಿಜ್ಯ ವಾಹನ ತಯಾರಿಕಾ ಕಂಪನಿ ಟಾಟಾ ಮೋಟರ್ಸ್ 2025ರ ಜುಲೈನಲ್ಲಿ ಹೇಳಿತ್ತು.

ಈ ವಹಿವಾಟಿನಿಂದ ಕಂಪನಿಯ ವಹಿವಾಟು ಭೌಗೋಳಿಕವಾಗಿ ಹಲವಾರು ರಾಷ್ಟ್ರಗಳಲ್ಲಿ ವಿಸ್ತರಣೆ ಆಗಲಿದೆ ಮತ್ತು ಮುಂದಿನ ತಲೆಮಾರಿನ ತಂತ್ರಜ್ಞಾನವನ್ನು ಸದೃಢಗೊಳಿಸಲಿದೆ ಎಂದು ತಿಳಿಸಿದ್ದಾರೆ.

ಅಡಿಕೆ ಧಾರಣೆ

ಕುಮಟಾ			
ಚಿಪ್ಪು	30289-33899		
ಕೋಕ	16869-33019		
ಫ್ಯಾಕ್ಟರಿ	10189-26000		
ಹಳೆಚಾಲಿ	45099-46698		
ಹೊಸಚಾಲಿ	38599-46019		
ಶಿವಮೊಗ್ಗ			
ಸರಕು	61199-97396		
ಬೆಟ್ಟೆ	51499-63839		
ರಾಶಿ	43669-52699		
ಗೊರಬಲು	19200-42170		
ಪುತ್ತೂರು			
ಕೋಕ	20000-33000		
ಹೊಸತು	30000-47000		
ಸಿದ್ದಾಪುರ			
ಬಿಳಿಗೋಟು	25099-32289		
ಚಾಲಿ	38009-45299		
ಕೋಕ	22099-32899		
ಕೆಂಪುಗೋಟು	30000-35900		
ರಾ[illegible]	46299-49889		
ತಟ್ಟಿಬೆಟ್ಟೆ	38889-45089		
ಯಲ್ಲಾಪುರ			
ಬಿಳಿಗೋಟು	18100-33012		
ಚಾಲಿ	36769-47340		
ಕೋಕ	16900-23909		
ಕೆಂಪುಗೋಟು	24899-35399		
ರಾಶಿ	44821-52869		
ತಟ್ಟಿಬೆಟ್ಟೆ	40900-44300		

ಜರ್ಮನಿ: ಗುಂಡಿನ ದಾಳಿಗೆ 5 ಮಂದಿ ಬಲಿ

ಸ್ಟೇಡ್, ಜರ್ಮನಿ (ಎಎಫ್‌ಪಿ): ಇಲ್ಲಿನ ಯೂತ್ ವೆಲ್ಫೇರ್ ಸೆಂಟರ್‌ನಲ್ಲಿ ಸೋಮವಾರ ಶಂಕಿತ ಬಂದೂಕುಧಾರಿಯೊಬ್ಬ ನಡೆಸಿದ ಗುಂಡಿನ ದಾಳಿಯಲ್ಲಿ ಐದು ಮಂದಿ ಮೃತಪಟ್ಟಿದ್ದಾರೆ. ತಕ್ಷಣವೇ ಕಾರ್ಯಾಚರಣೆ ನಡೆಸಿದ ಪೊಲೀಸರು ದಾಳಿಕೋರನನ್ನು ಬಂಧಿಸಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿಯೇ ಅತ್ಯಂತ ದೊಡ್ಡ ಗುಂಡಿನ ದಾಳಿಯಾಗಿದೆ.

ಹ್ಯಾಂಬರ್ಗ್‌ನ ಪಶ್ಚಿಮ ದಿಕ್ಕಿನಲ್ಲಿರುವ ಸ್ಟೇಡ್ ನಗರದಲ್ಲಿ ಸಂಭವಿಸಿದ ದುರಂತದಲ್ಲಿ ಬದುಕುಳಿದವರನ್ನು ರಕ್ಷಿಸಲು ಆ್ಯಂಬುಲೆನ್ಸ್ ಸಹಿತ ರಕ್ಷಣಾ ಕಾರ್ಯಕರ್ತರು ತೆರಳಿದರು.

ದಾಳಿಯಲ್ಲಿ ಐದು ಮಂದಿ ಮೃತಪಟ್ಟಿದ್ದು, ಹಲವು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಇರಾನ್‌ನ 6 ಶತಕೋಟಿ ಡಾಲರ್ ಬಿಡುಗಡೆ ಶೀಘ್ರ'

ದುಬೈ (ಎಪಿ): 'ಮುಟ್ಟುಗೋಲು ಹಾಕಿಕೊಳ್ಳಲಾಗಿರುವ ಇರಾನ್‌ನ ಸಂಪನ್ಮೂಲಗಳ ಪೈಕಿ ಆರು ಶತಕೋಟಿ ಡಾಲರ್‌ನಷ್ಟು ಮೊತ್ತವನ್ನು ಕತಾರ್ ಬಿಡುಗಡೆ ಮಾಡಲಿದೆ' ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಸೋಮವಾರ ಹೇಳಿದ್ದಾರೆ.

'ಕತಾರ್‌ನಲ್ಲಿ ಇರಾನ್‌ಗೆ ಸೇರಿದ 12 ಶತಕೋಟಿ ಡಾಲರ್ ಮೌಲ್ಯದಷ್ಟು ಸಂಪನ್ಮೂಲಗಳಿದ್ದು, ಕದನ ವಿರಾಮ ಮಾತುಕತೆ ಭಾಗವಾಗಿ ಆರು ಶತಕೋಟಿ ಡಾಲರ್ ಅನ್ನು ಬಿಡುಗಡೆ ಮಾಡಿ, ಇರಾನ್‌ಗೆ ವಾಪಸು ಮಾಡಲಾಗುತ್ತಿದೆ' ಎಂಬ ಪೆಜೆಶ್ಕಿಯಾನ್ ಅವರ ಹೇಳಿಕೆ ಉಲ್ಲೇಖಿಸಿ ಇರಾನ್ ಸರ್ಕಾರಿ ಒಡೆತನದ ಸುದ್ದಿಸಂಸ್ಥೆ ಐಆರ್‌ಎನ್‌ಎ ವರದಿ ಮಾಡಿದೆ.

'ಈ ಬೆಳವಣಿಗೆ ಇರಾನ್ ಜನತೆಗೆ ದೊರೆತ ದೊಡ್ಡ ಗೆಲುವಾಗಿದೆ. ತಾತ್ಕಾಲಿಕ ಕದನ ವಿರಾಮ ಒಪ್ಪಂದ ಕುರಿತ ವಿಶ್ವಾಸ ಮತ್ತಷ್ಟು ಹೆಚ್ಚಲಿದೆ' ಎಂದೂ ಪೆಜೆಶ್ಕಿಯಾನ್ ಹೇಳಿದ್ದಾರೆ.

ಮುಟ್ಟುಗೋಲು ಹಾಕಿಕೊಂಡಿರುವ ಇರಾನ್‌ಗೆ ಸೇರಿದ ಸ್ವತ್ತುಗಳನ್ನು ಬಿಡುಗಡೆ ಮಾಡಿಲ್ಲ ಎಂದು ಅಮೆರಿಕದ ಅಧಿಕಾರಿಗಳು ಪ್ರತಿಕ್ರಿಯಿಸಿದ್ದಾರೆ.

ಕತಾರ್ ಕೂಡ ಈ ವಿಚಾರವನ್ನು ದೃಢಪಡಿಸಿಲ್ಲ. ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆಗೆ ಸಂಬಂಧಿಸಿ ಕತಾರ್ ಮಧ್ಯಸ್ಥಿಕೆ ವಹಿಸಿದ ಪ್ರಮುಖ ರಾಷ್ಟ್ರಗಳಲ್ಲೊಂದಾಗಿದೆ.

ಅಮೆರಿಕ ಇತ್ತೀಚೆಗೆ ಇರಾನ್ ಮೇಲೆ ಹೊಸದಾಗಿ ವಾಯು ದಾಳಿಗಳನ್ನು ನಡೆಸಿತ್ತು. ಇದಕ್ಕೆ ಪ್ರತಿಯಾಗಿ, ಬಹರೇನ್ ಮತ್ತು ಕುವೈತ್ ಗುರಿಯಾಗಿಸಿ ಡ್ರೋನ್ ಹಾಗೂ ಕ್ಷಿಪಣಿಗಳಿಂದ ಇರಾನ್ ದಾಳಿ ನಡೆಸಿತ್ತು. ಅಮೆರಿಕ ದಾಳಿಗಳನ್ನು ಮುಂದುವರಿಸಿದಲ್ಲಿ ಯುದ್ಧ ಕೊನೆಗೊಳಿಸುವ ಕುರಿತ ಮಾತುಕತೆಗಳನ್ನು ಸಂಪೂರ್ಣ ನಿಲ್ಲಿಸುವುದಾಗಿಯೂ ಇರಾನ್ ಬೆದರಿಕೆ ಒಡ್ಡಿತ್ತು.

ಇರಾನ್ ಮನವಿಯಂತೆ ಸಭೆ: ಟ್ರಂಪ್

ದುಬೈ/ವಾಷಿಂಗ್ಟನ್ (ಎಪಿ): 'ಪಶ್ಚಿಮ ಏಷ್ಯಾದಲ್ಲಿನ ಯುದ್ಧವನ್ನು ಕೊನೆಗಾಣಿಸುವುದಕ್ಕೆ ಸಂಬಂಧಿಸಿ ಮಾತುಕತೆ ನಡೆಸುವ ಕುರಿತು ಸಭೆ ಕರೆಯುವಂತೆ ಇರಾನ್ ಮನವಿ ಮಾಡಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು,'ಈ ಸಭೆಯು ದೋಹಾದಲ್ಲಿ ಮಂಗಳವಾರ ನಡೆಯಲಿದೆ' ಎಂದಿದ್ದಾರೆ.

ಟ್ರಂಪ್ ಅವರ ಈ ಹೇಳಿಕೆಗೆ ಪ್ರತಿಕ್ರಿಯಿಸಿರುವ ಇರಾನ್ ಅಧಿಕಾರಿಗಳು, ಶಾಂತಿ ಒಪ್ಪಂದ ಕುರಿತು ಚರ್ಚಿಸುವುದಕ್ಕಾಗಿ ಯಾವುದೇ ಸಭೆ ನಿಗದಿಯಾಗಿಲ್ಲ ಎಂದು ಹೇಳಿದ್ದಾರೆ.

ದೋಹಾದತ್ತ ವಿಟ್ಕಾಫ್: ಮಂಗಳವಾರ ನಡೆಯಲಿರುವ ಉನ್ನತ ಮಟ್ಟದ ಸಭೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿ ಡೊನಾಲ್ಡ್ ಟ್ರಂಪ್ ಅವರ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್, ಶ್ವೇತಭವನದ ಸಲಹೆಗಾರ ಜಾರೆಡ್ ಕುಶ್ನರ್ ಅವರು ದೋಹಾಕ್ಕೆ ಪ್ರಯಾಣಿಸಲಿದ್ದಾರೆ. ಇದೇ ಸಂದರ್ಭದಲ್ಲಿ ತಾಂತ್ರಿಕ ಸಮಿತಿಯ ಸಭೆ ಕೂಡ ನಡೆಯಲಿವೆ ಎಂದು ಅಮೆರಿಕ ಹೇಳಿದೆ.

ಹೊರ್ಮುಜ್ ನಿರ್ವಹಣೆ: ಒಮಾನ್ ಜೊತೆ ಸಭೆ



ಟೆಹರಾನ್ (ಎಎಫ್‌ಪಿ): ಹೊರ್ಮುಜ್ ಜಲಸಂಧಿ ನಿರ್ವಹಣೆಗೆ ಸಂಬಂಧಿಸಿದಂತೆ ಒಮಾನ್ ಜೊತೆ ಮೊದಲ ಸಭೆ ನಡೆಸಿ, ಚರ್ಚಿಸಲಾಗಿದೆ ಎಂದು ಇರಾನ್‌ನ ವಿದೇಶಾಂಗ ಸಚಿವಾಲಯ ಸೋಮವಾರ ಹೇಳಿದೆ.

'ಮಸ್ಕತ್‌ಗೆ ನೀಡಿದ ಭೇಟಿ ವೇಳೆ ಜಂಟಿ ಹೊರ್ಮುಜ್ ಸಮಿತಿಯ ಮೊದಲ ಸಭೆ ನಡೆಸಿ, ಹಲವು ವಿಚಾರಗಳ ಕುರಿತು ಚರ್ಚೆ ನಡೆಸಲಾಯಿತು' ಎಂದು ಇರಾನ್‌ನ ವಿದೇಶಾಂಗ ಉಪ ಸಚಿವ ಕಾಜೆಮ್ ಗರಿಬಾಬಾದಿ ಅವರು 'ಎಕ್ಸ್‌'ನಲ್ಲಿ ಪೋಸ್ಟ್ ಮಾಡಿದ್ದಾರೆ. ಈ ಸಭೆ ಯಾವ ದಿನ ನಡೆಯಿತು ಎಂಬ ಬಗ್ಗೆ ಅವರು ವಿವರ ನೀಡಿಲ್ಲ.

'ಹೊರ್ಮುಜ್ ಜಲಸಂಧಿಗೆ ಸಂಬಂಧಿಸಿ ಸದ್ಯದ ವಿದ್ಯಮಾನಗಳ ಜೊತೆಗೆ, ಭವಿಷ್ಯದಲ್ಲಿ ಈ ಜಲಮಾರ್ಗದ ನಿರ್ವಹಣೆ ಕುರಿತಂತೆ ಮಾತುಕತೆ ನಡೆಸಲಾಯಿತು' ಎಂದೂ ಗರಿಬಾಬಾದಿ ಹೇಳಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧ ನಿಲ್ಲಿಸುವ ಸಂಬಂಧ ಅಮೆರಿಕ ಮತ್ತು ಇರಾನ್ ನಡುವಿನ ಕದನ ವಿರಾಮ ಒಪ್ಪಂದದ ಭಾಗವಾಗಿ ಈ ಸಭೆ ನಡೆದಿದೆ.

ಈ ಜಲಮಾರ್ಗದ ಮೇಲೆ ಸಾರ್ವಭೌಮತ್ವ ಹೊಂದಿರುವುದಾಗಿ ಇರಾನ್ ಹಾಗೂ ಒಮಾನ್ ಹೇಳಿಕೊಂಡಿವೆ.

ಕಳೆದ ಮಂಗಳವಾರ ಇರಾನ್ ಅಧಿಕಾರಿಗಳು ಒಮಾನ್‌ಗೆ ಭೇಟಿ ನೀಡಿ, ಮಾತುಕತೆ ನಡೆಸಿದ್ದರು. ಇದರ ಬೆನ್ನಲ್ಲೇ, ಹೊರ್ಮುಜ್ ಜಲಸಂಧಿ ನಿರ್ವಹಣೆಗೆ ಸಂಬಂಧಿಸಿ ಮುಂಬರುವ ದಿನಗಳಲ್ಲಿ ತಗಲುವ ವೆಚ್ಚ ಕುರಿತು ಪರಿಶೀಲನೆ ನಡೆಸುತ್ತಿರುವುದಾಗಿ ಇರಾನ್ ಹಾಗೂ ಒಮಾನ್ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದವು.

ಪಶ್ಚಿಮ ಏಷ್ಯಾ ಯುದ್ಧ ಆರಂಭಗೊಂಡ ಬಳಿಕ ಈ ಜಲಸಂಧಿ ಮೇಲೆ ನಿರ್ಬಂಧ ಹೇರಲಾಗಿದೆ. ಈ ಜಲಮಾರ್ಗವು ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆಯ ಪ್ರಮುಖ ವಿಷಯವೂ ಆಗಿದೆ.

ಯುದ್ಧ ಆರಂಭಕ್ಕೂ ಮುನ್ನ, ಈ ಜಲಸಂಧಿ ಮೂಲಕ ಸಾಗುವ ಹಡಗುಗಳ ಮೇಲೆ ಯಾವುದೇ ಶುಲ್ಕವನ್ನು ವಿಧಿಸಲಾಗುತ್ತಿರಲಿಲ್ಲ. ಈಗ, 'ಸೇವಾ ಶುಲ್ಕ' ವಿಧಿಸುವುದಕ್ಕೆ ಇರಾನ್ ಚಿಂತನೆ ನಡೆಸುತ್ತಿದೆ. ಹೊರ್ಮುಜ್ ಒಂದು ಅಂತರರಾಷ್ಟ್ರೀಯ ಜಲಮಾರ್ಗವಾಗಿದ್ದು, ಇದರ ಬಳಕೆಗೆ ಯಾವುದೇ ಶುಲ್ಕ ವಿಧಿಸುವುದನ್ನು ವಿರೋಧಿಸುವುದಾಗಿ ಅಮೆರಿಕ ಹೇಳುತ್ತಿದೆ.

ಲಿಖಿತ ಆದೇಶವಿದ್ದರಷ್ಟೇ ಅಡಿಕೆ ಲಾರಿ ಬಿಡುಗಡೆ


ಪ್ರಜಾವಾಣಿ ವಾರ್ತೆ

ಶಿರಸಿ: ಕರ್ನಾಟಕದ ಮಲೆನಾಡು ಹಾಗೂ ಕರಾವಳಿ ಭಾಗದಿಂದ ಉತ್ತರ ಭಾರತಕ್ಕೆ ತೆರಳುತ್ತಿದ್ದ 50ಕ್ಕೂ ಹೆಚ್ಚು ಅಡಿಕೆ ಹೊತ್ತ ಲಾರಿಗಳಿಗೆ ಮುಂದೆ ಸಾಗಲು ಮಹಾರಾಷ್ಟ್ರದ ಆಹಾರ ಮತ್ತು ಔಷಧ ಆಡಳಿತ ಇಲಾಖೆ (ಎಫ್‌ಡಿಎ) ಅಧಿಕಾರಿಗಳು ಇನ್ನೂ ಅವಕಾಶ ನೀಡಿಲ್ಲ.

'ಲಾರಿಗಳಿಗೆ ಮುಂದಕ್ಕೆ ತೆರಳಲು ಅನುವು ಮಾಡಿಕೊಡುವಂತೆ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಮೌಖಿಕ ಸೂಚನೆ ನೀಡಿದ್ದಾರೆ. ಆದರೆ, ಸರ್ಕಾರ ಅಧಿಕೃತವಾಗಿ ಲಿಖಿತ ಸೂಚನೆ ನೀಡುವವರೆಗೆ ಕ್ರಮ ಕೈಗೊಳ್ಳಲು ಅಧಿಕಾರಿಗಳು ಒಪ್ಪುತ್ತಿಲ್ಲ' ಎಂದು ವರ್ತಕರು ತಿಳಿಸಿದರು.

'ಲಾರಿಗಳನ್ನು ತಡೆಹಿಡಿದಿದ್ದ ಮಹಾರಾಷ್ಟ್ರದ ಎಫ್‌ಡಿಎ ಹಿರಿಯ ಅಧಿಕಾರಿಯೊಬ್ಬರು ಸದ್ಯ ರಜೆ ಮೇಲೆ ತೆರಳಿದ್ದಾರೆ. ಸ್ಥಳದಲ್ಲಿರುವ ಇತರ ಅಧಿಕಾರಿಗಳು ತಮಗೆ ಲಿಖಿತವಾಗಿ ಸೂಚನೆ ಬರುವವರೆಗೆ ಯಾವುದೇ ಕಾರಣಕ್ಕೂ ಲಾರಿಗಳನ್ನು ಬಿಡುವುದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ. ಇದರ ಪರಿಣಾಮ ಜೂನ್ 29ರ ಸಂಜೆಯವರೆಗೆ ಲಾರಿಯನ್ನು ಬಿಡುಗಡೆ ಮಾಡಿಲ್ಲ' ಎಂದು ಶಿರಸಿ ವರ್ತಕರ ಸಂಘದ ಲೋಕೇಶ ಹೆಗಡೆ ತಿಳಿಸಿದರು.

'ಅಡಿಕೆ ಲಾರಿಗಳು ದಿನಗಟ್ಟಲೇ ರಸ್ತೆಯಲ್ಲೇ ನಿಂತಿರುವುದರಿಂದ ವರ್ತಕರಿಗೆ ಮತ್ತು ಸಾಗಣೆದಾರರಿಗೆ ಭಾರಿ ನಷ್ಟದ ಭೀತಿ ಎದುರಾಗಿದೆ. ಹೀಗಾಗಿ ಮಹಾರಾಷ್ಟ್ರ ಸರ್ಕಾರದ ಜತೆ ಮತ್ತೊಮ್ಮೆ ಮಾತುಕತೆ ನಡೆಯುತ್ತಿವೆ. ಮಹಾರಾಷ್ಟ್ರ ಸರ್ಕಾರದಿಂದ ಲಿಖಿತ ಸೂಚನೆ ಹೊರಬಿದ್ದ ನಂತರವಷ್ಟೇ ಅಡಿಕೆ ಲಾರಿಗಳ ಸಂಚಾರ ಪುನರಾರಂಭಗೊಳ್ಳುವ ಸಾಧ್ಯತೆಯಿದೆ' ಎಂದರು.


ಚಿಕ್ಕಣ್ಣ, ವಂದಿತಾ

‘ಇನ್ಮೇಲೆ...’ ಎಂದ ಲಕ್ಷ್ಮೀಪುತ್ರ

> ‘ಕಿಸ್’ ಸಿನಿಮಾ ಮುಗಿದ ನಂತರ ಕೋವಿಡ್ ಸಂದರ್ಭದಲ್ಲಿ ಚಿಕ್ಕಣ್ಣ ಅವರಿಗೆ ಈ ಸಿನಿಮಾದ ಕಥೆ ಹೇಳಿದ್ದೆ. ಆರಂಭದಲ್ಲಿ ‘ಗೌರಿಪುತ್ರ’ ಎನ್ನುವ ಶೀರ್ಷಿಕೆಯನ್ನು ಯೋಚನೆ ಮಾಡಿದ್ದೆವು. ಆದರೆ ನಾಯಕನ ಅಮ್ಮನ ಪಾತ್ರದ ಹೆಸರು ‘ಲಕ್ಷ್ಮೀ’ ಆಗಿದ್ದ ಕಾರಣ ‘ಲಕ್ಷ್ಮೀಪುತ್ರ’ ಎಂಬ ಹೆಸರು ಇಟ್ಟೆವು. 65 ದಿನ ಚಿತ್ರೀಕರಣ ನಡೆಸಿದ್ದೇವೆ. ಒಂದು ಹಾಡಿನ ಶೂಟಿಂಗ್ ಅಷ್ಟೇ ಬಾಕಿ ಇದೆ.
> **ಎ.ಪಿ.ಅರ್ಜುನ್,** ನಿರ್ಮಾಪಕ

> ಲಕ್ಷ್ಮೀಪುತ್ರ ಕಥೆಯ ಪ್ರಭಾವಕ್ಕೊಳಗಾಗಿ ಒಪ್ಪಿಕೊಂಡೆ. ಸಿನಿಮಾಗೆ ಅರ್ಜುನ್ ಜನ್ಯ ಸಂಗೀತವೇ ಶಕ್ತಿ. ಇದೇ ಮೊದಲ ಬಾರಿಗೆ ಎ.ಪಿ.ಅರ್ಜುನ್ ಅವರ ಜೊತೆ ಕೆಲಸ ಮಾಡಿದ್ದೇನೆ. ಇಷ್ಟು ದಿನ ನಟನಾಗಿದ್ದ ಚಿಕ್ಕಣ್ಣ ಈ ಸಿನಿಮಾ ಬಳಿಕ ಕಲಾವಿದನಾಗಿ ಹೊರಬರಲಿದ್ದಾನೆ.
> **ತಾರಾ ಅನುರಾಧ,** ನಟಿ

ಚಿಕ್ಕಣ್ಣ ನಟನೆಯ ಎ.ಪಿ.ಅರ್ಜುನ್ ನಿರ್ಮಾಣದ ‘ಲಕ್ಷ್ಮೀಪುತ್ರ’ ಸಿನಿಮಾದ ಮೊದಲ ಹಾಡು ‘ಇನ್ಮೇಲೆ...’ ಇತ್ತೀಚೆಗೆ ಬಿಡುಗಡೆಯಾಯಿತು.

ಚಿತ್ರಕ್ಕೆ ಎ.ಪಿ.ಅರ್ಜುನ್ ಅವರೇ ಕಥೆ ಬರೆದು ತಮ್ಮದೇ ಎ.ಪಿ. ಅರ್ಜುನ್ ಫಿಲ್ಮ್ ಬ್ಯಾನರ್‌ನಡಿ ನಿರ್ಮಾಣ ಮಾಡಿದ್ದಾರೆ. ಹಾಡಿನಲ್ಲಿ ಚಿಕ್ಕಣ್ಣ ಹಾಗೂ ವಂದಿತಾ ಹೆಜ್ಜೆ ಹಾಕಿದ್ದಾರೆ. ಇದು ಚಿಕ್ಕಣ್ಣ ಅವರು ನಾಯಕರಾಗಿ ನಟಿಸುತ್ತಿರುವ ಎರಡನೇ ಸಿನಿಮಾ. ವಿಜಯ್ ಸ್ವಾಮಿ ಆಕ್ಷನ್ ಕಟ್ ಹೇಳಿದ್ದಾರೆ.

ಹಾಡು ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಚಿಕ್ಕಣ್ಣ, ‘ನನ್ನ ಮೊದಲ ಸಿನಿಮಾವನ್ನು ಕನ್ನಡ ಜನತೆ ತುಂಬು ಹೃದಯದಿಂದ ಸ್ವೀಕರಿಸಿತ್ತು. ಅದರಲ್ಲಿ ‘ನನಗೆ ನೀನು’ ಹಾಡು ಹಿಟ್ ಆಗಿತ್ತು. ಆ ಹಾಡನ್ನು ಎ.ಪಿ.ಅರ್ಜುನ್ ಅವರೇ ಬರೆದಿದ್ದರು. ಅರ್ಜುನ್ ಜನ್ಯ ಸಂಗೀತ ನೀಡಿದ್ದರು. ಇದೀಗ ಬಿಡುಗಡೆಗೊಂಡಿರುವ ‘ಇನ್ಮೇಲೆ’ ಹಾಡೂ ಇದೇ ಕಾಂಬಿನೇಷನ್‌ನಲ್ಲಿ ಬಂದಿದೆ. ಸಿನಿಮಾದ ಆಡಿಯೊ ಹಕ್ಕುಗಳು ಖುಷಿ ಪಡುವ ಮೊತ್ತಕ್ಕೆ ಮಾರಾಟಗೊಂಡಿವೆ’ ಎಂದರು.

‘ನಾಯಕನಾದರೂ ಹಾಸ್ಯವನ್ನು ಬಿಟ್ಟು ಬೇರೆನನ್ನೋ ಮಾಡಲು ಸಾಧ್ಯವಿಲ್ಲ. ನನಗೆ ಡಾನ್ಸ್, ರೊಮಾನ್ಸ್ ಕಷ್ಟ. ‘ಉಪಾಧ್ಯಕ್ಷ’ ಗೆದ್ದ ಬಳಿಕ ನನ್ನ ಮೇಲೆ ನಿರ್ಮಾಪಕರಿಗೆ ನಂಬಿಕೆ ಮೂಡಿತು. ಆ ಸಂದರ್ಭದಲ್ಲಿ ನಾನು ಕಥೆ ಹುಡುಕಿ ಅದನ್ನು ಅಂತಿಮಗೊಳಿಸುವಾಗ ವಿಳಂಬವಾಯಿತು. ಮುಂದಿನ ಸಿನಿಮಾಗಳು ವಿಳಂಬವಾಗುವುದಿಲ್ಲ. ಚಿತ್ರಕಥೆಯಲ್ಲಿ ಹೊಸತನವನ್ನು ಕೊಡಲು ಹಾಸ್ಯಕ್ಕಾಗಿಯೇ ಮೂರ್ನಾಲ್ಕು ಬರಹಗಾರರು ಕೆಲಸ ಮಾಡಿದ್ದಾರೆ. ಇದೊಂದು ಒಳ್ಳೆಯ ಫ್ಯಾಮಿಲಿ ಎಂಟರ್‌ಟೇನರ್ ಸಿನಿಮಾವಾಗಲಿದೆ’ ಎನ್ನುತ್ತಾರೆ ಚಿಕ್ಕಣ್ಣ.

ಎ.ಪಿ.ಅರ್ಜುನ್ ಮಾತನಾಡಿ, ‘ಯಾವಾಗಲೂ ಮಾತನಾಡುವ ಪದಗಳಿಂದಲೇ ಹಾಡು ಶುರುವಾಗಬೇಕು. ಹಾಡು ಎಲ್ಲರ ಬಾಯಲ್ಲಿ ಹರಿದಾಡಬೇಕು ಎನ್ನುವುದು ತಲೆಯಲ್ಲಿತ್ತು. ಪ್ರೇಮಿಗಳು ಮಾತನಾಡುವಾಗ ‘ಇನ್ಮೇಲೆ.., ಆಮೇಲೆ..’ ಎನ್ನುತ್ತಿರುತ್ತಾರೆ. ಹಾಗಾಗಿ ಹಾಡನ್ನೂ ಅದೇ ಪದಗಳಿಂದ ಆರಂಭಿಸಿದ್ದೇವೆ. ಇದು ಅಪ್ಪಟ ಕನ್ನಡ ಹಾಡು. ಮಂಡ್ಯ ಸೊಗಡಿರುವ ಗೀತೆ. ದರ್ಶನ್ ಹಾಗೂ ಪೃಥ್ವಿ ಭಟ್ ದನಿಯಾಗಿದ್ದಾರೆ’ ಎಂದರು.

‘ಲಕ್ಷ್ಮೀಪುತ್ರ’ ವಿಜಯ್ ಸ್ವಾಮಿ ನಿರ್ದೇಶನದ ಚೊಚ್ಚಲ ಸಿನಿಮಾವಾಗಿದ್ದು, ಚಿತ್ರದ ಸಾಹಸ ದೃಶ್ಯಗಳಿಗೆ ಮಾಸ್ ಮಾದ ನಿರ್ದೇಶನ ಮಾಡಿದ್ದಾರೆ. ಗಿರೀಶ್ ಆರ್.ಗೌಡ ಛಾಯಾಚಿತ್ರಗ್ರಹಣ ಸಿನಿಮಾಗಿದೆ. ತಾರಾ, ಕುರಿ ಪ್ರತಾಪ್, ಧರ್ಮಣ್ಣ ಸೇರಿ ದೊಡ್ಡ ತಾರಾಬಳಗ ಚಿತ್ರದಲ್ಲಿದೆ. ವರಮಹಾಲಕ್ಷ್ಮೀ ಹಬ್ಬಕ್ಕೆ ಚಿತ್ರವನ್ನು ಬಿಡುಗಡೆ ಮಾಡಲು ಚಿತ್ರತಂಡ ಯೋಚಿಸಿದೆ.

ಪಾರ್ಟ್ನರ್ ಆದ ಅಜಯ್–ಬೃಂದಾ


ಅಜಯ್, ಬೃಂದಾ

ಸ್ಯಾಂಡಲ್‌ವುಡ್‌ನಲ್ಲಿ ಸದ್ಯ ಹೆಚ್ಚು ಸಿನಿಮಾಗಳನ್ನು ಮಾಡುತ್ತಿರುವ ನಟಿಯರ ಪೈಕಿ ಬೃಂದಾ ಆಚಾರ್ಯ ಮುಂಚೂಣಿಯಲ್ಲಿದ್ದಾರೆ. ಅವರ ನಟನೆಯ ಹೊಸ ಸಿನಿಮಾದ ಶೀರ್ಷಿಕೆ ಘೋಷಣೆಯಾಗಿದೆ.

‘ಪ್ರೇಮಂ ಪೂಜ್ಯಂ’ ಸಿನಿಮಾ ಮೂಲಕ ನಾಯಕಿಯಾಗಿ ಚಂದನವನಕ್ಕೆ ಹೆಜ್ಜೆ ಇಟ್ಟ ನಟಿ ಬೃಂದಾ, ನಂತರದಲ್ಲಿ ‘ಕೌಸಲ್ಯ ಸುಪ್ರಜಾ ರಾಮ’, ‘ಬ್ಯಾಂಕ್ ಆಫ್ ಭಾಗ್ಯಲಕ್ಷ್ಮೀ’, ‘ಎಕ್ಸ್ ಆ್ಯಂಡ್ ವೈ’ ಹಾಗೂ ‘ಮಾರುತ’ ಸಿನಿಮಾಗಳಲ್ಲಿ ನಟಿಸಿದರು. ನಿರೂಪ್ ಭಂಡಾರಿ ಜೊತೆಗೆ ಅಭಿನಯಿಸಿರುವ ‘ಸತ್ಯ ಸನ್ ಆಫ್ ಹರಿಶ್ಚಂದ್ರ’ ಬಿಡುಗಡೆಗೆ ಎದುರು ನೋಡುತ್ತಿರುವ ಸಂದರ್ಭದಲ್ಲೇ ‘ಪಾರ್ಟ್ನರ್’ ಸಿನಿಮಾ ಘೋಷಣೆಯಾಗಿದೆ.

ಈ ಹಿಂದೆ ‘ಮಳೆ’, ‘ಧೈರ್ಯಂ’, ‘ದಿಲ್ ಪಸಂದ್’ ಚಿತ್ರಗಳನ್ನು ನಿರ್ದೇಶಿಸಿರುವ ಶಿವತೇಜಸ್ ಈ ಸಿನಿಮಾದ ನಿರ್ದೇಶಕ. ‘ಜೀವನಪೂರ್ತಿ ನಂಬಿಕೆ ಇಟ್ಟುಕೊಂಡು ಜೊತೆಗಿರುವಂಥ ಜೀವನ ಸಂಗಾತಿ ಇರಬೇಕು’ ಎನ್ನುವುದನ್ನು ಚಿತ್ರದ ಮೂಲಕ ಹೇಳಹೊರಟಿದ್ದಾರೆ ಶಿವತೇಜಸ್.

ರೋಮ್ ಕಾಮ್ ಜತೆಗೆ ಭಾವನಾತ್ಮಕ ವಿಷಯಗಳನ್ನಿಟ್ಟುಕೊಂಡು ನಿರ್ದೇಶಕರು ‘ಪಾರ್ಟ್ನರ್’ ಚಿತ್ರದ ಕಥೆ ಹೆಣೆದಿದ್ದಾರೆ. ಕೃಷ್ಣ ಅಜಯ್‌ರಾವ್ ಹಾಗೂ ಬೃಂದಾ ಆಚಾರ್ಯ ನಟಿಸಿರುವ ಈ ಸಿನಿಮಾದಲ್ಲಿ ರಂಗಾಯಣ ರಘು ಪ್ರಮುಖ ಪಾತ್ರದಲ್ಲಿದ್ದಾರೆ. ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಿರುವ ಚಿತ್ರತಂಡ, ಸದ್ಯ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ತೊಡಗಿಸಿಕೊಂಡಿದೆ.

ಚಿತ್ರವನ್ನು ಎಚ್.ಪಿ.ಆರ್.ಎಂಟರ್‌ಪ್ರೈಸಸ್ ಬ್ಯಾನರ್ ಅಡಿ ಹರೀಶ್ ದೇವಿತಂದ್ರೆ ನಿರ್ಮಿಸಿದ್ದಾರೆ. ಸುಜ್ಞಾನ್ ಛಾಯಾಚಿತ್ರಗ್ರಹಣ, ನಕುಲ್ ಅಭಯಂಕರ್ ಸಂಗೀತ ಸಂಯೋಜನೆ, ಕೆ.ಎಂ.ಪ್ರಕಾಶ್ ಸಂಕಲನ ಚಿತ್ರಕ್ಕಿದೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಕವಿರಾಜ್, ಪ್ರಮೋದ್ ಮರವಂತೆ, ನಾಗಾರ್ಜುನ ಶರ್ಮಾ ಸಾಹಿತ್ಯ ರಚಿಸಿದ್ದಾರೆ.

ಜುಲೈ10ಕ್ಕೆ ಮದರ್ ಪ್ರಾಮಿಸ್

‘**ಆರ್ಕೆಸ್ಟ್ರಾ ಮೈಸೂರು**’, ‘ಬಡವ ರಾಸ್ಕಲ್’, ‘ಮರ್ಯಾದೆ ಪ್ರಶ್ನೆ’, ‘ಎಕ್ಕ’ ಚಿತ್ರಗಳಲ್ಲಿ ನಟಿಸಿರುವ ಪೂರ್ಣಚಂದ್ರ ಮೈಸೂರು ನಿರ್ದೇಶನದ ಮೊದಲ ಸಿನಿಮಾ ‘ಮದರ್ ಪ್ರಾಮಿಸ್’ ಜುಲೈ 10ರಂದು ತೆರೆಕಾಣಲಿದೆ.

ಧನಂಜಯ ಅವರ ‘ಡಾಲಿ ಪಿಕ್ಚರ್ಸ್’ ನಿರ್ಮಾಣದ ಈ ಚಿತ್ರಕ್ಕೆ ಹರ್ಷ ಮುರುಂಡಿ ಶಿವಲಿಂಗಪ್ಪ ಸಹನಿರ್ಮಾಪಕರಾಗಿದ್ದಾರೆ. ಗ್ಯಾಂಗ್‌ಸ್ಟರ್ ಕಾಮಿಡಿ ಜಾನರ್‌ನ ಈ ಚಿತ್ರಕ್ಕೆ ಪೂರ್ಣಚಂದ್ರ ಅವರೇ ಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ. ಚಿತ್ರಕಥೆಗೆ ಮಹಾದೇವ್ ಪ್ರಸಾದ್ ಮತ್ತು ಧಾರವಾಡದ ಅರುಣ ಸಹಕರಿಸಿದ್ದಾರೆ.



ಇತ್ತೀಚೆಗೆ ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದ್ದು, ಸ್ನೇಹ, ಗ್ಯಾಂಗ್‌ವಾರ್, ಕ್ರಿಕೆಟ್ ಬೆಟ್ಟಿಂಗ್, ಭಾವನಾತ್ಮಕ ಅಂಶಗಳು ಕಥೆಯಲ್ಲಿವೆ. ಧನಂಜಯ, ನಾಗಭೂಷಣ್, ಶ್ರೀವತ್ಸ, ಗುರುದತ್, ಶಶಾಂಕ್ ಸೋಗಾಲ್, ವಿನಯ ಪ್ರಸಾದ್, ಗೀತಾ, ಮಹಾದೇವ್ ಪ್ರಸಾದ್, ಶ್ರವಣ್ ಕುಮಾರ್ ಎಂ.ಎಸ್. ಮತ್ತು ಯಶ್‌ವಂತ್ ಶೆಟ್ಟಿ ಸೇರಿದಂತೆ ಹಲವರು ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ‘ರೋಸ್ಸಿ’, ‘ದೊನ್ನೆ ಬಿರಿಯಾನಿ’, ‘ರ‍್ಯಾಂಡಿ’, ‘ಕೇಬಲ್’, ‘ಮ್ಯಾಗಿ’ ಮುಂತಾದ ವಿಶೇಷ ಪಾತ್ರಗಳು ಚಿತ್ರದ ವೈವಿಧ್ಯತೆಯನ್ನು ಹೆಚ್ಚಿಸಿವೆ.

ಇದು ಹಾಸ್ಯ ಹಾಗೂ ಥ್ರಿಲ್ಲಿಂಗ್ ಸಿನಿಮಾವಾಗಿದ್ದು, ‘ಡೇರ್‌ಡೆವಿಲ್ ಮುಸ್ತಾಫಾ’ ಸಿನಿಮಾ ನಿರ್ದೇಶಕ ಶಶಾಂಕ್ ಕ್ರಿಯೇಟಿವ್ ಡೈರೆಕ್ಟರ್ ಆಗಿ ಕೆಲಸ ಮಾಡಿದ್ದಾರೆ. ರಾಹುಲ್ ರಾಯ್ ಛಾಯಾಚಿತ್ರಗ್ರಹಣ, ನವನೀತ್ ಶ್ಯಾಮ್ ಸಂಗೀತಾ ನಿರ್ದೇಶನ ಸಿನಿಮಾಗಿದೆ. ‘ಬೆಂಗಳೂರು ನಮ್ದೇನೆ’, ‘ನೀನೆ ಬೇಕು ಅಮ್ಮ’ ಹಾಗೂ ‘ರ,ಗ,ಸ,-ದ,ಅ’ ಹಾಡುಗಳ ಮೂಲಕ ಈಗಾಗಲೇ ಗಮನ ಸೆಳೆದಿರುವ ಈ ಚಿತ್ರವನ್ನು ಕೆವಿಎನ್ ಪ್ರೊಡಕ್ಷನ್ಸ್ ಬಿಡುಗಡೆ ಮಾಡಲಿದೆ.

ಸುದೀಪ್ ಐಷಾರಾಮಿ ಕ್ಯಾರವಾನ್

ನಟ ಸುದೀಪ್ ಸದ್ಯ ‘ಬಿಲ್ಲ ರಂಗ ಬಾಷಾ’ದ ಸೆಟ್‌ನಲ್ಲಿದ್ದಾರೆ. ಈ ಸಂದರ್ಭದಲ್ಲೇ ಅವರದ್ದು ಎನ್ನಲಾದ ಹೊಸ ಕ್ಯಾರವಾನ್‌ನ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಹಲವು ಸೌಲಭ್ಯಗಳನ್ನು ಹೊಂದಿರುವ ಭಿನ್ನ ವಿನ್ಯಾಸದ ಕ್ಯಾರವಾನ್ ಇದಾಗಿದೆ. ಇದು ಸದ್ಯ ಪುಣೆಯಲ್ಲಿದ್ದು ಇನ್ನೂ ಸುದೀಪ್ ಅವರ ಕೈಸೇರಿಲ್ಲ ಎನ್ನಲಾಗಿದೆ. ಕ್ಯಾರವಾನ್ ಬದಿಯಲ್ಲಿ ‘K’ ಎಂಬುದಾಗಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ಸದ್ಯ ಇದೇ ಚರ್ಚೆಯಲ್ಲಿದೆ.

ಇತ್ತೀಚೆಗಷ್ಟೇ ಸಾಮಾಜಿಕ ಮಾಧ್ಯಮಗಳಲ್ಲಿ ಟ್ರೆಂಡ್ ಆದ ‘ವೇಕ್ ಅಪ್’ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿದ್ದ ಸುದೀಪ್, ‘ಜನರ ಆಶೀರ್ವಾದದಿಂದ ಸಿಕ್ಕಿದ ಈ ವೃತ್ತಿಯನ್ನು ನಾನು ಹಗುರವಾಗಿ ತೆಗೆದುಕೊಂಡಿಲ್ಲ. ಸಿನಿಮಾ ಮಾಡುವುದಕ್ಕಿಂತ ಮತ್ತು ಮನರಂಜನೆ ನೀಡುವುದಕ್ಕಿಂತ ಬೇರೆ ಇಷ್ಟವಾದ ಕೆಲಸ ನನಗಿಲ್ಲ. ಹೀಗಿದ್ದರೂ ಕೆಲವರಿಗೆ ಹಾಗೂ ಕೆಲ ಘಟನೆಗಳಿಗೆ ನನ್ನ ಅವಶ್ಯಕತೆ ಹಾಗೂ ಬೆಂಬಲದ ಅಗತ್ಯವಿತ್ತು. ಜೂನ್ 26 ರಿಂದ ‘ಬಿಲ್ಲ ರಂಗ ಬಾಷಾ’ ಶೂಟಿಂಗ್ ಆರಂಭವಾಗಲಿದ್ದು, ನಂತರದಲ್ಲಿ ಸಿನಿಮಾದಲ್ಲೇ ತೊಡಗಿಸಿಕೊಳ್ಳಲಿದ್ದೇನೆ. ನಾಲ್ಕು ಕಥೆಗಳನ್ನು ಒಪ್ಪಿಕೊಂಡಿದ್ದೇನೆ. ಎಲ್ಲ ಸಿನಿಮಾಗಳನ್ನೂ ಆರಂಭಿಸುವುದಕ್ಕೆ ಕಾತುರದಿಂದಿದ್ದೇನೆ’ ಎಂದಿದ್ದರು.



ಅತ್ಯಾಚಾರ: ಅಪರಾಧಿಗೆ ಮರಣದಂಡನೆ

ಕೃತ್ಯ ನಡೆದ 60 ದಿನಗಳ ಒಳಗೆ ತೀರ್ಪು ಪ್ರಕಟಿಸಿದ ನ್ಯಾಯಾಲಯ

ಪ್ರಜಾವಾಣಿ ವಾರ್ತೆ/ ಪಿಟಿಐ



ಪುಣೆ (ಪಿಟಿಐ): ಮೂರು ವರ್ಷದ ಬಾಲಕಿಯ ಅಪಹರಣ, ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ 65 ವರ್ಷದ ವ್ಯಕ್ತಿಗೆ ಪುಣೆಯ ವಿಶೇಷ ನ್ಯಾಯಾಲಯವು ಮರಣದಂಡನೆ ವಿಧಿಸಿ ತೀರ್ಪು ಪ್ರಕಟಿಸಿದೆ. ಮಹಾರಾಷ್ಟ್ರದ ನರಸಾಪುರ ಗ್ರಾಮದಲ್ಲಿ ನಡೆದಿದ್ದ ಕೃತ್ಯದ ಬಗ್ಗೆ ಸಾರ್ವಜನಿಕರಿಂದ ವ್ಯಾಪಕ ಖಂಡನೆ ವ್ಯಕ್ತವಾಗಿತ್ತು.

ಅಪರಾಧಿಗೆ ವಯಸ್ಸಾಗಿದ್ದು, ಶಿಕ್ಷೆ ಪ್ರಕಟಿಸುವ ಮುನ್ನ ಔದಾರ್ಯ ತೋರಬೇಕು ಎಂದು ಕೋರಿದ್ದ ಅರ್ಜಿಯನ್ನು ಹೆಚ್ಚುವರಿ ನ್ಯಾಯಾಧೀಶ ಎಸ್.ಆರ್.ಸಾಲುಂಖೆ ಅವರು ತಿರಸ್ಕರಿಸಿದರು. ‘ಇದೊಂದು ಅಪರೂಪದ ಪ್ರಕರಣ. ದೋಷಿ ಭೀಮರಾವ್ ಕಾಂಬ್ಳೆಯ ನೀಚತನದ ಇತಿಹಾಸವು ನ್ಯಾಯಾಂಗ ಮತ್ತು ಸಮಾಜದ ಅಂತಃಸಾಕ್ಷಿಯನ್ನೇ ಕಲಕುವಂತೆ ಮಾಡಿದೆ’ ಎಂದು ಕಟುವಾಗಿ ಹೇಳಿದರು.

‘ಪ್ರಕರಣದಲ್ಲಿ ಸಂತ್ರಸ್ತೆಗೆ ಅಮಾನವೀಯವಾಗಿ ಚಿತ್ರಹಿಂಸೆ ನೀಡಲಾಗಿದೆ. ಇಲ್ಲಿ ಸಂತ್ರಸ್ತೆಯು ಮುಗ್ಧ ಮತ್ತು ಅಸಹಾಯಕ ಮಗು. ಕಾಮತೃಷೆಯನ್ನು ತೀರಿಸಿಕೊಳ್ಳಲು ಈ ಕೃತ್ಯ ಎಸಗಲಾಗಿದೆ. ಇದು ನೀಚತನದ ಪರಮಾವಧಿ’ ಎಂದು ಹೇಳಿದರು.

‘ಆರೋಪಿಯ ಕಾಮದ ದಾಹವು ಈ ವಯಸ್ಸಿನಲ್ಲೂ ಇಳಿದಿಲ್ಲ. ಬದಲಿಗೆ, ಅದು ಅತ್ಯಂತ ಅಪಾಯಕಾರಿ ಹಂತವನ್ನು ತಲುಪಿದೆ. ಮೂರು ವರ್ಷದ ಬಾಲಕಿಯ ದೇಹದ ಮೇಲಾದ ಗಾಯಗಳು ಆರೋಪಿಯ ಅಮಾನವೀಯ ವರ್ತನೆಯನ್ನು ತೋರಿಸುತ್ತದೆ. ಆರೋಪಿ ಈ ಹಿಂದೆಯೂ ಇಂಥದ್ದೇ ಕೃತ್ಯ ಎಸಗಿದ್ದರೂ ಶಿಕ್ಷೆಯ ಭಯವಿಲ್ಲದೆ ಮತ್ತೆ ಅಂಥದ್ದೇ ಕೃತ್ಯ ಎಸಗಿದ್ದಾನೆ’ ಎಂದರು.

‘ನಿರ್ಭಯಾ ಪ್ರಕರಣದ ಬಳಿಕ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ತ್ವರಿತ ವಿಚಾರಣೆಗಾಗಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿ, ಅಪರಾಧಿಗಳ ವಿರುದ್ಧ ಕಠಿಣ ಕ್ರಮ ಜರುಗಿಸುತ್ತಿದ್ದರೂ ಇಂಥ ಪ್ರಕರಣಗಳು ನಡೆಯುತ್ತಲೇ ಇವೆ’ ಎಂದು ಬೇಸರ ವ್ಯಕ್ತಪಡಿಸಿದರು.

ತ್ವರಿತ ವಿಚಾರಣೆ: ಈ ವರ್ಷ ಮೇ 1ರಂದು ಕೃತ್ಯ ನಡೆದಿದ್ದು, ನ್ಯಾಯಾಲಯವು ಜೂನ್ 25ರಂದು ಆರೋಪಿಯನ್ನು ದೋಷಿ ಎಂದು ಘೋಷಿಸಿತ್ತು. ಈ ಮೂಲಕ ಕೃತ್ಯ ನಡೆದ 60 ದಿನಗಳ ಒಳಗಾಗಿ ನ್ಯಾಯಾಲಯವು ವಿಚಾರಣೆ ನಡೆಸಿ ತೀರ್ಪು ಪ್ರಕಟಿಸಿದಂತಾಗಿದೆ.

ಏನಿದು ಪ್ರಕರಣ?: ನರಸಾಪುರ ಗ್ರಾಮದ ಆರೋಪಿ ಭೀಮರಾವ್, ಮೂರು ವರ್ಷದ ಬಾಲಕಿಗೆ ಸಿಹಿ ತಿನಿಸುಗಳನ್ನು ಕೊಡಿಸುವ ಮತ್ತು ಕರುವನ್ನು ತೋರಿಸುವ ಆಸೆ ತೋರಿಸಿ, ಸಮೀಪದ ಶೆಡ್‌ಗೆ ಕರೆದೊಯ್ದು ಅತ್ಯಾಚಾರ ಎಸಗಿದ್ದ. ಬಳಿಕ ಆಕೆಯ ಮೇಲೆ ಹಲ್ಲೆ ನಡೆಸಿ, ಉಸಿರುಗಟ್ಟಿಸಿ ಕೊಲೆಗೈದಿದ್ದ.

ವಿಚಾರಣೆಯ ಹಾದಿ...

- ಕೃತ್ಯ ನಡೆದ 16 ದಿನಗಳಲ್ಲಿ ಪುಣೆ ಗ್ರಾಮೀಣ ಪೊಲೀಸರಿಂದ ದೋಷಾರೋಪ ಪಟ್ಟಿ ಸಲ್ಲಿಕೆ
- ಮುಂದಿನ 16 ದಿನಗಳಲ್ಲಿ ಸಾಕ್ಷಿಗಳ ಹೇಳಿಕೆ ದಾಖಲು
- ವಿಚಾರಣೆ ವೇಳೆ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ, ಡಿಎನ್‌ಎ, ವೈದ್ಯಕೀಯ ದಾಖಲೆ, ವಿಧಿವಿಜ್ಞಾನ ವರದಿಯನ್ನು ಸಲ್ಲಿಸಿದ್ದ ಪ್ರಾಸಿಕ್ಯೂಷನ್
- ಪ್ರಕರಣದಿಂದ ಅಂತರ ಕಾಯ್ದುಕೊಂಡಿದ್ದ ಕಾಂಬ್ಳೆ ಕುಟುಂಬ

> ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗುವ ದುಷ್ಕರ್ಮಿಗಳಿಗೆ ನ್ಯಾಯಾಲಯವು ಈ ತೀರ್ಪಿನ ಮೂಲಕ ಬಲವಾದ ಸಂದೇಶ ರವಾನಿಸಿದೆ
> **ಏಕನಾಥ ಶಿಂದೆ,** ಉಪ ಮುಖ್ಯಮಂತ್ರಿ

> ಈ ಐತಿಹಾಸಿಕ ತೀರ್ಪು ಜನರಿಗೆ ನ್ಯಾಯಾಂಗದ ಮೇಲಿನ ನಂಬಿಕೆಯನ್ನು ಹೆಚ್ಚಿಸಿದೆ ಮತ್ತು ಸಂತ್ರಸ್ತೆಯ ಕುಟುಂಬಕ್ಕೆ ನ್ಯಾಯವನ್ನು ಒದಗಿಸಿದೆ
> **ಸುನೇತ್ರಾ ಪವಾರ್,** ಉಪ ಮುಖ್ಯಮಂತ್ರಿ

ಭಾವುಕರಾದ ಸಂತ್ರಸ್ತೆಯ ಕುಟುಂಬಸ್ಥರು

ನ್ಯಾಯಾಲಯವು ತೀರ್ಪು ಪ್ರಕಟಿಸುತ್ತಿದ್ದಂತೆಯೇ ಸಂತ್ರಸ್ತೆಯ ಕುಟುಂಬಸ್ಥರು ಭಾವುಕರಾಗಿ ಸಂತೋಷ ವ್ಯಕ್ತಪಡಿಸಿದರು.

‘ನಾವು ನ್ಯಾಯಾಲಯದಿಂದ ಇದನ್ನೇ ನಿರೀಕ್ಷೆ ಮಾಡಿದ್ದೆವು. ಸಮಾಜವೂ ಅಪರಾಧಿಗೆ ಮರಣದಂಡನೆ ವಿಧಿಸಲು ಒತ್ತಾಯಿಸಿತ್ತು’ ಎಂದು ಸಂತ್ರಸ್ತ ಬಾಲಕಿಯ ತಂದೆ ಹೇಳಿದ್ದಾರೆ. ಪ್ರಕರಣದ ತ್ವರಿತ ವಿಲೇವಾರಿಗೆ ಪೊಲೀಸ್ ಮತ್ತು ತನಿಖಾ ತಂಡವು ಸಾಕಷ್ಟು ನೆರವು ನೀಡಿದೆ ಎಂದು ತಿಳಿಸಿದ್ದಾರೆ.

ರಾಜಸ್ಥಾನ: ಪುತ್ರಿ ಮೇಲೆ ಅತ್ಯಾಚಾರ ತಂದೆಗೆ 20 ವರ್ಷ ಜೈಲುಶಿಕ್ಷೆ

ಕೋಟಾ (ಪಿಟಿಐ)– ಹದಿನಾರು ವರ್ಷದ ಮಗಳ ಮೇಲೆ ಪದೇ ಪದೇ ಅತ್ಯಾಚಾರ ಎಸಗಿದ್ದ 45 ವರ್ಷದ ವ್ಯಕ್ತಿಗೆ ರಾಜಸ್ಥಾನದ ಝಾಲವಾಡ ನ್ಯಾಯಾಲಯ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ಸೋಮವಾರ ತೀರ್ಪು ನೀಡಿದೆ. ‘ಕಳೆದ ವರ್ಷ ಫೆಬ್ರುವರಿ 10ರಂದು ಭಾಲ್ತಾ ಪೊಲೀಸ್ ಠಾಣೆಗೆ ತನ್ನ ಚಿಕ್ಕಮ್ಮನ ಜೊತೆ ಬಂದಿದ್ದ ಬಾಲಕಿಯು ತಂದೆಯ ವಿರುದ್ಧ ದೂರು ನೀಡಿದ್ದಳು. ಆರೋಪಿಯ ವೈದ್ಯಕೀಯ ಪರೀಕ್ಷೆ ನಡೆಸಿದ್ದ ಪೊಲೀಸರು ಪೋಕ್ಸೊ ಮತ್ತು ಬಿಎನ್‌ಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದರು’ ಎಂದು ಸರ್ಕಾರಿ ಅಭಿಯೋಜಕ ದೀಪೇಶ್ ಭಾರ್ಗವ್ ತಿಳಿಸಿದ್ದಾರೆ. ಪೋಕ್ಸೊ ವಿಶೇಷ ನ್ಯಾಯಾಲಯದ ನ್ಯಾಯಾಧೀಶರು ಅಪರಾಧಿಗೆ ಸೋಮವಾರ ಜೈಲು ಶಿಕ್ಷೆ ಮತ್ತು ₹12,000 ದಂಡ ವಿಧಿಸಿದ್ದಾರೆ.

‘ಆರೋಪಿಗಳ ಪರ ವಾದಿಸಲ್ಲ’

ದೇಣಿಗೆ ಕಳವು • ಫೈಜಾಬಾದ್ ವಕೀಲರ ಸಂಘದ ನಿರ್ಧಾರ

ಅಯೋಧ್ಯೆ (ಪಿಟಿಐ): ರಾಮಮಂದಿರ ದೇಣಿಗೆ ದುರುಪಯೋಗ ಆರೋಪ ಪ್ರಕರಣದಲ್ಲಿ ಬಂಧಿತರಾಗಿರುವ ಎಂಟು ಆರೋಪಿಗಳನ್ನು ಯಾವುದೇ ವಕೀಲರು ಪ್ರತಿನಿಧಿಸುವುದಿಲ್ಲ ಎಂದು ಅಯೋಧ್ಯೆಯ ಫೈಜಾಬಾದ್ ವಕೀಲರ ಸಂಘ ಸೋಮವಾರ ನಿರ್ಧರಿಸಿದೆ.

ಈ ಆರೋಪಿಗಳ ಪರವಾಗಿ ವಾದ ಮಾಡುವುದಿಲ್ಲ ಎಂಬ ನಿರ್ಧಾರವನ್ನು ಉಲ್ಲಂಘಿಸುವ ವಕೀಲರು ₹5 ಲಕ್ಷ ದಂಡ ಪಾವತಿಸಬೇಕಾಗುತ್ತದೆ ಎಂದು ಸಂಘ ಎಚ್ಚರಿಕೆ ನೀಡಿದೆ.

ದೇವಾಲಯದ ನಿರ್ವಹಣೆಗೆ ಸಂಬಂಧಿಸಿದ ಚಂಪತ್ ರಾಯ್, ಅನಿಲ್ ಮಿಶ್ರಾ ಮತ್ತು ಗೋಪಾಲ್ ರಾವ್ (ಇವರನ್ನು ಎಫ್‌ಐಆರ್‌ನಲ್ಲಿ ಆರೋಪಿಗಳು ಎಂದು ಉಲ್ಲೇಖಿಸಲಾಗಿಲ್ಲ) ಅವರು ಅಯೋಧ್ಯೆ ತೊರೆಯಬೇಕು ಎಂದು ವಕೀಲರ ಸಂಘದ ಸಭೆಯಲ್ಲಿ ವಕೀಲರು ಒತ್ತಾಯಿಸಿದ್ದಾರೆ.

ತೊರೆಯದಿದ್ದರೆ ಮುತ್ತಿಗೆ: ‘ಮೂರು ದಿನಗಳಲ್ಲಿ ಈ ಮೂವರು ಅಯೋಧ್ಯೆ ತೊರೆಯಬೇಕು. ಇಲ್ಲದಿದ್ದರೆ ನಗರದಲ್ಲಿ ಮುತ್ತಿಗೆ ಹಾಕಲಾಗುವುದು, ಯಾರಿಗೂ ಪ್ರವೇಶಿಸಲು ಅವಕಾಶ ನೀಡುವುದಿಲ್ಲ’ ಎಂದು ವಕೀಲರು ಎಚ್ಚರಿಸಿದರು.

ವಕೀಲರ ಸಂಘದ ಸಾಮಾನ್ಯ ಸಭೆ ಭಾನುವಾರ ನಡೆಯಿತು. ರಾಮಮಂದಿರದ ಕಾಣಿಕೆಗಳ ಕಳ್ಳತನವು ತಮ್ಮ ಭಾವನೆಗಳಿಗೆ ನೋವು ಉಂಟುಮಾಡಿದೆ. ಹೀಗಾಗಿ ಈ ಆರೋಪಿಗಳನ್ನು ಸಮರ್ಥಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂದು ವಕೀಲರು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದಾಗ, ಸಂಘ ಈ ಕುರಿತು ನಿರ್ಧಾರ ತೆಗೆದುಕೊಂಡಿತು.

2005ರಲ್ಲಿ ತಾತ್ಕಾಲಿಕ ರಾಮದೇಗುಲದ ಮೇಲೆ ಭಯೋತ್ಪಾದಕ ದಾಳಿ ನಡೆದಿದ್ದ ಸಂದರ್ಭದಲ್ಲಿಯೂ ಆರೋಪಿಗಳ ಪರವಾಗಿ ವಾದ ಮಾಡದಿರಲು ವಕೀಲರ ಸಂಘ ನಿರ್ಧಾರ ತೆಗೆದುಕೊಂಡಿತ್ತು.

ಭಾವನೆಗಳಿಗೆ ನೋವಾಗಿದೆ: ಈ ಕುರಿತು ಪ್ರತಿಕ್ರಿಯಿಸಿದ ವಕೀಲರ ಸಂಘದ ಕಾರ್ಯದರ್ಶಿ ಶೈಲೇಂದ್ರ ಜೈಸ್ವಾಲ್, ‘ದೇಗುಲದ ಕಾಣಿಕೆಗಳ ಕಳ್ಳತನದಿಂದ ನಮ್ಮೆಲ್ಲರ ಭಾವನೆಗಳಿಗೆ ನೋವುಂಟಾಗಿದೆ. ಫೈಜಾಬಾದ್‌ನ ವಕೀಲರು ಬಂಧಿತ ಆರೋಪಿಗಳ ಪರ ವಾದಿಸದಿರಲು ಸಹಮತ ವ್ಯಕ್ತಪಡಿಸಿದ್ದಾರೆ’ ಎಂದು ಹೇಳಿದ್ದಾರೆ.



ಮುಖ್ಯಾಂಶಗಳು

- ಆರೋಪಿಗಳ ಪರ ವಾದಿಸುವ ವಕೀಲರಿಗೆ ₹5 ಲಕ್ಷ ದಂಡ
- ನಮ್ಮೆಲ್ಲರ ಭಾವನೆಗಳಿಗೆ ನೋವುಂಟು ಮಾಡಿದೆ– ವಕೀಲರ ಸಂಘ

14 ದಿನಗಳ ನ್ಯಾಯಾಂಗ ಬಂಧನಕ್ಕೆ ಆದೇಶ

ಬಂಧಿತ ಎಂಟೂ ಆರೋಪಿಗಳನ್ನು 14 ದಿನಗಳವರೆಗೆ ನ್ಯಾಯಾಂಗ ಬಂಧನದಲ್ಲಿಡುವಂತೆ ಸ್ಥಳೀಯ ನ್ಯಾಯಾಲಯ ಸೋಮವಾರ ಆದೇಶ ಹೊರಡಿಸಿತು.

ಆರೋಪಿಗಳನ್ನು ಭ್ರಷ್ಟಾಚಾರ ತಡೆ ನ್ಯಾಯಾಲಯದ ವಿಶೇಷ ನ್ಯಾಯಾಧೀಶ ರಜತ್ ವರ್ಮಾ ಅವರ ಮುಂದೆ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಲಾಯಿತು. ನ್ಯಾಯಾಧೀಶರು ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಆದೇಶಿಸಿದರು.

> ದೇಣಿಗೆ ಕಳ್ಳತನ ಪ್ರಕರಣದ ಆರೋಪಿಗಳು ಕಾನೂನು ಕ್ರಮ ಮಾತ್ರವಲ್ಲದೆ ಸಾಮಾಜಿಕ ಬಹಿಷ್ಕಾರವನ್ನೂ ಎದುರಿಸಬೇಕಾಗುತ್ತದೆ
> **ಪ್ರದೀಪ್ ಭಂಡಾರಿ,** ಬಿಜೆಪಿಯ ರಾಷ್ಟ್ರೀಯ ವಕ್ತಾರ

ಬಿಸಿಲಾಘಾತ: ತತ್ತರಿಸಿದ ಜನತೆ

ಪ್ಯಾರಿಸ್/ಬೆಲ್‌ಗ್ರೇಡ್ (ಎಎಫ್‌ಪಿ/ಪಿಟಿಐ): ಯುರೋಪ್‌ನಾದ್ಯಂತ ತಾಪಮಾನವು ಅತ್ಯಧಿಕವಾಗಿದ್ದು, ಜೂನ್ 21ರಿಂದ ಈವರೆಗೆ 1300 ಜನರು ಮೃತಪಟ್ಟಿದ್ದಾರೆ.

ಯುರೋಪ್‌ನ ಮಧ್ಯ ಮತ್ತು ಪೂರ್ವ ಭಾಗದಲ್ಲಿ ಸೋಮವಾರ ಬಿಸಿಲಿನ ತೀವ್ರತೆ ಮತ್ತಷ್ಟು ಹೆಚ್ಚಿತ್ತು.

ಅಧಿಕ ಶಾಖದ ಪರಿಣಾಮವಾಗಿ ಜೂನ್ 18ರಿಂದ ಫ್ರಾನ್ಸ್‌ನಲ್ಲಿ 74 ಮಂದಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಪೋಲೆಂಡ್‌ನಲ್ಲಿ ಭಾನುವಾರ 17 ಮಂದಿ ಸತ್ತಿದ್ದಾರೆ.

ವಾರಾಂತ್ಯದಲ್ಲಿ ಜೆಕ್ ಗಣರಾಜ್ಯದಲ್ಲಿ 41.9 ಡಿಗ್ರಿ ಸೆಲ್ಸಿಯಸ್, ಜರ್ಮನಿಯಲ್ಲಿ 41.7 ಡಿಗ್ರಿ ಸೆಲ್ಸಿಯಸ್ ಮತ್ತು ಪೋಲೆಂಡ್ ನಲ್ಲಿ 40.5 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು.

ಬಾಲ್ಕನ್‌ನಲ್ಲಿ ಸೋಮವಾರವೂ ತಾಪಮಾನ ಏರಿಕೆ ಕಂಡಿತ್ತು. ಕ್ರೊಯೇಷಿಯಾದಲ್ಲಿ ಅಪಾಯಕಾರಿ ಪರಿಸ್ಥಿತಿ ಇರುವ ಬಗ್ಗೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ. ಬೋಸ್ನಿಯಾ ಮತ್ತು ಅಲ್ಬಾನಿಯಾದಲ್ಲಿ ತಾಪಮಾನವು 40 ಡಿಗ್ರಿ ಸೆಲ್ಸಿಯಸ್‌ಗಿಂತ ಅಧಿಕವಾಗುವ ನಿರೀಕ್ಷೆಯಿದೆ. ಬೋಸ್ನಿಯಾದ ನಗರ ಮೊಸ್ತರ್ ಬಳಿ ಕಾಳ್ಗಿಚ್ಚು ಉಂಟಾಗಿದ್ದು, ಬೆಂಕಿ ನಂದಿಸಲು ರಕ್ಷಣಾ ಸಿಬ್ಬಂದಿ ಎರಡು ದಿನಗಳಿಂದ ಹರಸಾಹಸಪಡುತ್ತಿದ್ದಾರೆ. ಯುರೋಪ್‌ನ 13 ಕೋಟಿ ಜನರು 35 ಡಿಗ್ರಿ ಸೆಲ್ಸಿಯಸ್‌ಗೂ ಅಧಿಕ ತಾಪಮಾನ ಎದುರಿಸಿದ್ದಾರೆ.

29 ಭಯೋತ್ಪಾದಕರ ಹತ್ಯೆ: ಪಾಕಿಸ್ತಾನ • 38 ನಾಗರಿಕರ ಸಾವು- ಅಫ್ಗಾನಿಸ್ತಾನ

ಮತ್ತೆ ಭುಗಿಲೆದ್ದ ಪಾಕ್–ಅಫ್ಗಾನ್ ಸಂಘರ್ಷ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ ನಡುವಿನ ಸಂಘರ್ಷ ಮತ್ತೊಮ್ಮೆ ಭುಗಿಲೆದ್ದಿದ್ದು, ಪಾಕ್ ಸೇನೆಯು ಗಡಿಭಾಗದಲ್ಲಿ ತೀವ್ರ ಕಾರ್ಯಾಚರಣೆ ನಡೆಸಿದೆ.

ಅಫ್ಗಾನಿಸ್ತಾನ ಗಡಿಭಾಗದಲ್ಲಿ ವಾಯು ದಾಳಿ ಮತ್ತು ಭೂ ಕಾರ್ಯಾಚರಣೆಯಲ್ಲಿ 29 ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದೆ ಎಂದು ಪಾಕಿಸ್ತಾನ ಸೋಮವಾರ ಹೇಳಿಕೊಂಡಿದೆ. ಆದರೆ, ಮನೆಗಳ ಮೇಲೆ ವೈಮಾನಿಕ ದಾಳಿ ಮಾಡಿ 38 ನಾಗರಿಕರನ್ನು ಹತ್ಯೆ ಮಾಡಲಾಗಿದೆ ಎಂದು ಅಫ್ಗಾನಿಸ್ತಾನ ಆರೋಪಿಸಿದೆ.

ಕರಾಚಿಯಲ್ಲಿನ ಅರೆಸೇನಾ ಪಡೆಯ ಕಚೇರಿ ಸೇರಿದಂತೆ ಪಾಕಿಸ್ತಾನದ ಹಲವೆಡೆ ಇತ್ತೀಚೆಗೆ ನಡೆದ ದಾಳಿಗೆ ಪ್ರತೀಕಾರವಾಗಿ ಭಯೋತ್ಪಾದಕರ ಅಡಗುತಾಣ ಮತ್ತು ಸುರಕ್ಷಿತತಾಣಗಳ ಮೇಲೆ ದಾಳಿ ನಡೆಸಲಾಯಿತು ಎಂದು ಪಾಕಿಸ್ತಾನದ ಮಾಹಿತಿ ಸಚಿವ ಅಟ್ಟ ತರಾರ್ ಸೋಮವಾರ ತಿಳಿಸಿದ್ದಾರೆ.

‘ಗುಪ್ತಚರ ಮಾಹಿತಿಯ ಆಧಾರದಲ್ಲಿ ಯೋಜಿತ ಕಾರ್ಯಾಚರಣೆಯನ್ನು ನಡೆಸಲಾಗಿದೆ. ಜಮಾತ್ ಉಲ್ ಅಹ್ರಾರ್ (ಜೆಯುಎ) ಮತ್ತು ಫಿತ್ನ ಅಲ್ ಖ್ವರಿಜ್ ಸಂಘಟನೆಗಳ ಭಯೋತ್ಪಾದಕರು ಅಡಗಿದ್ದ ಸ್ಥಳಗಳ ಮೇಲೆ ದಾಳಿ ಮಾಡಲಾಗಿದೆ’ ಎಂದು ಹೇಳಿದ್ದಾರೆ.

‘ಪಾಕಿಸ್ತಾನದ ವೈಮಾನಿಕ ದಾಳಿಯಿಂದ ಮೂರು ಪ್ರಾಂತ್ಯಗಳಿಗೆ ಹಾನಿಯಾಗಿದ್ದು, 36 ನಾಗರಿಕರು ಮೃತಪಟ್ಟಿದ್ದಾರೆ. 163 ಜನ ಗಾಯಗೊಂಡಿದ್ದಾರೆ’ ಎಂದು ತಾಲಿಬಾನ್ ಸರ್ಕಾರ ಹೇಳಿದೆ. ಪಾಕಿಸ್ತಾನ ಸೇನೆ ಮತ್ತು ಸರ್ಕಾರ ಈ ಆರೋಪದ ಬಗ್ಗೆ ಪ್ರತಿಕ್ರಿಯೆ ನೀಡಿಲ್ಲ.

ಬಜೌರ್‌ನಲ್ಲಿ ನಡೆದ ದಾಳಿಯಲ್ಲಿ ತನ್ನ ಕಮಾಂಡರ್ ಒಬ್ಬ ಮೃತಪಟ್ಟಿರುವುದಾಗಿ ತೆಹ್ರೀಕ್ –ಇ–ತಾಲಿಬಾನ್ (ಟಿಟಿಪಿ) (ಪಾಕಿಸ್ತಾನ ತಾಲಿಬಾನ್) ಖಚಿತಪಡಿಸಿದೆ.

ಕರಾಚಿಯಲ್ಲಿನ ಅರೆಸೇನಾ ಪಡೆಯ ಕಚೇರಿ ಬಳಿ ಭಯೋತ್ಪಾದಕರು ಶನಿವಾರ ದಾಳಿ ನಡೆಸಿ ನಾಲ್ವರು ಸೈನಿಕರನ್ನು ಹತ್ಯೆ ಮಾಡಿದ್ದರು. ಈ ದಾಳಿಯಲ್ಲಿ ಗಾಯಗೊಂಡಿದ್ದ ಭಯೋತ್ಪಾದಕನೊಬ್ಬ, ‘ತಾನು ಅಫ್ಗನ್ ಪ್ರಜೆಯಾಗಿದ್ದು, ಪಾಕಿಸ್ತಾನದ ಸ್ಥಳೀಯ ಭಯೋತ್ಪಾದಕನ ಸಹಾಯದಿಂದ ದಾಳಿ ನಡೆಸಿರುವುದಾಗಿ ತಿಳಿಸಿದ್ದಾನೆ’ ಎಂದು ಮೂಲಗಳು ಹೇಳಿವೆ.

ಮುಖ್ಯಾಂಶಗಳು

- ಭಯೋತ್ಪಾದಕ ದಾಳಿಗಳಿಗೆ ಪ್ರತೀಕಾರವೆಂದ ಪಾಕ್
- ಕಮಾಂಡರ್ ಹತ್ಯೆ ದೃಢಪಡಿಸಿದ ಟಿಟಿಪಿ

ಪ್ರತಿಭಟನೆ ದಾಖಲು


ಪಾಕಿಸ್ತಾನದ ದಾಳಿಯಿಂದಾಗಿ ಅಫ್ಗಾನಿಸ್ತಾನದಲ್ಲಿ ಧ್ವಂಸಗೊಂಡಿರುವ ಮನೆ
– ಎಎಫ್‌ಪಿ ಚಿತ್ರ

ದಾಳಿಗಳ ಬಗ್ಗೆ ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ ಪರಸ್ಪರ ಪ್ರತಿಭಟನೆ ದಾಖಲಿಸಿವೆ.

ಪಾಕಿಸ್ತಾನವು ಅಫ್ಗಾನಿಸ್ತಾನದ ರಾಯಭಾರಿ ಕಚೇರಿಯ ಅಧಿಕಾರಿಯನ್ನು ಕರೆಸಿಕೊಂಡು ಕರಾಚಿಯಲ್ಲಿ ಸೇನಾ ಕಚೇರಿಯ ಮೇಲಿನ ದಾಳಿಯ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದೆ.

ಅಫ್ಗಾನಿಸ್ತಾನವು ಪಾಕಿಸ್ತಾನ ರಾಜತಾಂತ್ರಿಕ ಅಧಿಕಾರಿಯನ್ನು ಕರೆಸಿಕೊಂಡು ವೈಮಾನಿಕ ಗಡಿಯನ್ನು ಉಲ್ಲಂಘಿಸಿ ನಾಗರಿಕರ ಮನೆ ಮೇಲೆ ದಾಳಿ ನಡೆಸಲಾಗಿದೆ ಎಂದು ದೂರಿದೆ.

ಪಾಕಿಸ್ತಾನದಲ್ಲಿ ನಡೆದಿರುವ ಭಯೋತ್ಪಾದಕ ದಾಳಿಗಳಿಗೆ ಮತ್ತು ಅಫ್ಗಾನ್‌ಗೆ ನಂಟು ಇದೆ ಎಂಬ ಆರೋಪಗಳನ್ನು ನಿರಾಕರಿಸಿದೆ.

ಸಿಬಿಎಸ್‌ಇ ತ್ರಿಭಾಷಾ ಸೂತ್ರ: ಈ ವರ್ಷ 10ನೇ ತರಗತಿಗೆ ವಿನಾಯಿತಿ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ಪ್ರಸಕ್ತ ವರ್ಷ 10ನೇ ತರಗತಿಯ ವಿದ್ಯಾರ್ಥಿಗಳಿಗೆ ತ್ರಿಭಾಷಾ ನೀತಿಯಿಂದ ವಿನಾಯಿತಿ ನೀಡಿದೆ.

ತ್ರಿಭಾಷಾ ನೀತಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಂಡಳಿ ಸೋಮವಾರ ಹೊಸ ಮಾರ್ಗಸೂಚಿ ಹೊರಡಿಸಿದ್ದು, ‘2026–27ನೇ ಸಾಲಿನ 10ನೇ ತರಗತಿ ವಿದ್ಯಾರ್ಥಿಗಳಿಗೆ ಯಾವುದೇ ಬದಲಾವಣೆ ಇರುವುದಿಲ್ಲ. ಅವರು ಎರಡು ಭಾಷೆಗಳನ್ನು ಓದುವ ಹಳೆ ವ್ಯವಸ್ಥೆಯಲ್ಲಿಯೇ ಮುಂದುವರಿಯಲಿದ್ದಾರೆ. ಮೂರನೇ ಭಾಷೆ ತೆಗೆದುಕೊಳ್ಳುವ ಅಗತ್ಯವಿಲ್ಲ’ ಎಂದು ಹೇಳಿದೆ.

ಇತರ ಬದಲಾವಣೆಗಳು:

- ಈ ವರ್ಷ 9ನೇ ತರಗತಿಯಲ್ಲಿ ಇರುವ ವಿದ್ಯಾರ್ಥಿಗಳಿಗೆ ಒಂದು ಬಾರಿಯ ಸಡಿಲಿಕೆ ನೀಡಲಾಗಿದೆ. ಅಂದರೆ ಅವರು ಈಗಾಗಲೇ ಓದುತ್ತಿರುವ ಎರಡು ವಿದೇಶಿ ಭಾಷೆಯನ್ನು ಮುಂದುವರಿಸಬಹುದು. ಅದರ ಜತೆಗೆ ಒಂದು ಭಾರತೀಯ ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕು
- ಪ್ರಸಕ್ತ ವರ್ಷ 7ರಿಂದ 9ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು 10ನೇ ತರಗತಿಗೆ ಹೋದಾಗ, ಅವರ ಬೋರ್ಡ್ ಪರೀಕ್ಷೆಗಳಿಗೆ ಮೂರನೇ ಭಾಷೆ ಇರುವುದಿಲ್ಲ

ಪಶ್ಚಿಮ ಬಂಗಾಳ: ವಿಚಾರಣೆ ಇಲ್ಲದೇ ವ್ಯಕ್ತಿ ಬಂಧಿಸುವ ಮಸೂದೆ ಅಂಗೀಕಾರ

ಕೋಲ್ಕತ್ತ (ಪಿಟಿಐ): ಸಮಾಜ ವಿರೋಧಿ ಚಟುವಟಿಕೆಗಳನ್ನು ತಡೆಗಟ್ಟಲು ಯಾವುದೇ ವಿಚಾರಣೆ ಇಲ್ಲದೆಯೇ ಮುನ್ನೆಚ್ಚರಿಕೆ ಕ್ರಮವಾಗಿ ವ್ಯಕ್ತಿಯನ್ನು 12 ತಿಂಗಳವರೆಗೆ ಬಂಧಿಸುವ ಅವಕಾಶ ಇರುವ ಮಸೂದೆಯನ್ನು ಪಶ್ಚಿಮ ಬಂಗಾಳ ವಿಧಾನಸಭೆ ಸೋಮವಾರ ಅಂಗೀಕರಿಸಿತು.

‘ಪಶ್ಚಿಮ ಬಂಗಾಳ ಸಾರ್ವಜನಿಕ ಸುರಕ್ಷತೆ ಮತ್ತು ಸಮಾಜ ವಿರೋಧಿ ಚಟುವಟಿಕೆಗಳ ನಿಯಂತ್ರಣ ಮಸೂದೆ, 2026’ ಅನ್ನು ಮತಕ್ಕೆ ಹಾಕಲಾಗಿತ್ತು. 176 ಶಾಸಕರು ಮಸೂದೆ ಪರ ಮತ ಹಾಕಿದರು. 42 ಶಾಸಕರು ಮಸೂದೆಯನ್ನು ವಿರೋಧಿಸಿ ಮತ ಹಾಕಿದರೆ, 20 ಶಾಸಕರು ಗೈರಾಗಿದ್ದರು.

‘ಗಲಭೆಯನ್ನು ತಡೆಗಟ್ಟುವುದು ಈ ಮಸೂದೆ ಉದ್ದೇಶ. ಯಾವುದೇ ಕಾರಣಕ್ಕೂ ಈ ಕಾನೂನನ್ನು ದುರ್ಬಳಕೆ ಮಾಡಿಕೊಳ್ಳುವುದಿಲ್ಲ’ ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಚರ್ಚೆಯ ವೇಳೆ ಹೇಳಿದರು.

‘ದೇಣಿಗೆ ಕನ್ನಕ್ಕೂ ಕರ್ನಾಟಕಕ್ಕೂ ನಂಟು’

ಪ್ರಯಾಗರಾಜ್ (ಪಿಟಿಐ): ‘ರಾಮಮಂದಿರದ ದೇಣಿಗೆ ಕಳವು ಪ್ರಕರಣದ ಜಾಲವು ಕರ್ನಾಟಕದವರೆಗೂ ವಿಸ್ತರಿಸಿದೆ ಎಂದು ಜನರು ಹೇಳುತ್ತಿದ್ದಾರೆ’ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಸೋಮವಾರ ಆರೋಪಿಸಿದರು.

ಇಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ‘ಕರ್ನಾಟಕದ ಕೆಲವರು ಚುನಾವಣೆಗೆ ಸಂಬಂಧಿಸಿದ ಸಂಚುಗಳಲ್ಲಿ ಭಾಗಿಯಾಗಿದ್ದರು. ಅವರ ಕೃತ್ಯವು ಈಗ ಬಹಿರಂಗಗೊಂಡಿದೆ’ ಎಂದು ಹೇಳಿದರು.

‘ಈ ಪ್ರಕರಣದಲ್ಲಿ ಕೇವಲ ಸಣ್ಣ ಮೀನುಗಳನ್ನು ಸೆರೆಹಿಡಿಯಲಾಗಿದೆ. ದೊಡ್ಡ ಮೀನುಗಳನ್ನು ರಕ್ಷಿಸಲಾಗುತ್ತಿದೆ’ ಎಂದು ಹರಿಹಾಯ್ದರು.

‘ಆಡಳಿತಾರೂಢ ಬಿಜೆಪಿಯು ದೇಶಕ್ಕಿಂತ ದೇಣಿಗೆಗೆ ಆದ್ಯತೆ ನೀಡಿದೆ. ಜನರ ವಿಶ್ವಾಸಕ್ಕೆ ದ್ರೋಹ ಬಗೆದಿದೆ. ಸರ್ಕಾರ ಪ್ರತಿ ಹಂತದಲ್ಲೂ ಲೂಟಿ ಹೊಡೆಯುತ್ತಿದೆ. ಬಿಜೆಪಿಯ ನಿಘಂಟಿನಲ್ಲಿ ಧರ್ಮವೂ ಇಲ್ಲ, ನಾಚಿಕೆಯೂ ಇಲ್ಲ’ ಎಂದು ವಾಗ್ದಾಳಿ ನಡೆಸಿದರು.

‘ನಿಜವಾದ ಸನಾತನಿಗಳು ಬಿಜೆಪಿಗೆ ಮತ ಹಾಕಬೇಡಿ ಅಥವಾ ಪಕ್ಷದಿಂದ ಟಿಕೆಟ್ ಕೇಳಬೇಡಿ. ಪಕ್ಷವು ಶ್ರೀರಾಮನಿಗೆ ದ್ರೋಹ ಬಗೆದಿದೆ’ ಎಂದು ಹೇಳಿದರು.

ಪ್ರಿಕ್ವಾರ್ಟರ್‌ಗೆ ದಾಪುಗಾಲಿಟ್ಟ ಕೆನಡಾ

ಅಂತಿಮ ಕ್ಷಣದಲ್ಲಿ ಸ್ಟೆಫಾನ್ ಯೂಸ್ಟಾಕಿಯೊ ಗೋಲು– ದಕ್ಷಿಣ ಆಫ್ರಿಕಾ ತಂಡಕ್ಕೆ ಸೋಲು

ಲಾಸ್ ಏಂಜಲೀಸ್ (ಎಎಫ್‌ಪಿ): 'ಸ್ಟಾಪೇಜ್ ಅವಧಿ'ಯಲ್ಲಿ ಸ್ಟೆಫಾನ್ ಯೂಸ್ಟಾಕಿಯೊ ಹೊಡೆದ ಗೋಲಿನ ನೆರವಿನಿಂದ ಕೆನಡಾ ತಂಡ 1-0 ಯಿಂದ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮೊದಲ ಸಲ ಅಂತಿಮ 16ರ ಹಂತಕ್ಕೆ ದಾಪುಗಾಲಿಟ್ಟಿತು.

ಲಾಸ್ ಏಂಜಲೀಸ್ ಕ್ರೀಡಾಗಣದಲ್ಲಿ ಭಾನುವಾರ ರಾತ್ರಿ ನಡೆದ 32ರ ಸುತ್ತಿನ ಈ ಮೊದಲ ಪಂದ್ಯ ಗೋಲು ಕಾಣದೇ, ಹೆಚ್ಚುವರಿ ಅವಧಿಯತ್ತ ಸಾಗುವಂತೆ ಕಂಡಿತು. ಆದರೆ ಅಂತಿಮ ಕ್ಷಣದಲ್ಲಿ (90 + 2) ದಕ್ಷಿಣ ಆಫ್ರಿಕಾ ರಕ್ಷಣೆ ಆಟಗಾರ ಆಬ್ರೆ ಮೊದಿಬಾ ಅವರು ಅಪಾಯ ತಪ್ಪಿಸಲು 'ಹೆಡ್' ಮಾಡಿದ ಚೆಂಡನ್ನು, 'ಬಾಕ್ಸ್' ತುದಿಯಲ್ಲಿದ್ದ ಯೂಸ್ಟಾಕಿಯೊ ಎದೆಯಿಂದ ತಡೆದು, ಬಲಗಾಲಿನಿಂದ ಕರಾರುವಾಕ್ಕಾಗಿ ಒದ್ದರು; ಚೆಂಡು ಗೋಲ್‌ಕೀಪರ್ ರಾನ್ವೆಲ್ ವಿಲಿಯಮ್ಸ್ ಅವರ ಕೈಗೆ ಸಿಗದೇ ವೇಗವಾಗಿ ಬಲೆಯೊಳಗೆ ನುಗ್ಗಿತು. ಜಂಟಿ ಆತಿಥೇಯ ತಂಡ ಸಂಭ್ರಮದಲ್ಲಿ ಮುಳುಗಿದರೆ, ದಕ್ಷಿಣ ಆಫ್ರಿಕಾ ಆಟಗಾರರಿಗೆ ಆಘಾತವಾಯಿತು.

ಕೆನಡಾ	ದಕ್ಷಿಣ ಆಫ್ರಿಕಾ
1	0

ಕೆನಡಾ ತಂಡ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದಿದ್ದ ಕಾರಣ ತನ್ನ ಪಂದ್ಯವನ್ನು ಅಮೆರಿಕದಲ್ಲಿ ಆಡಬೇಕಾಯಿತು. ಈ ತಂಡವು 16ರ ಸುತ್ತಿನ ಪಂದ್ಯದಲ್ಲಿ ನೆದರ್ಲೆಂಡ್ಸ್– ಮೊರಾಕ್ಕೊ ನಡುವಣ ಪಂದ್ಯದ ವಿಜೇತರನ್ನು ಎದುರಿಸಲಿದೆ. ಈ ಪಂದ್ಯ ಜುಲೈ 4ರಂದು ನಿಗದಿಯಾಗಿದೆ.

ಅಸ್ಥಿರಜ್ಜು ನೋವಿನಿಂದ ಚೇತರಿಸಿಕೊಂಡ ಕೆನಡಾ ಆಟಗಾರ ಅಲ್ಫಾನ್ಸೊ ಡೇವೀಸ್ ಈ ಪಂದ್ಯದಲ್ಲಿ ಆಡಬಹುದೆಂಬ ನಿರೀಕ್ಷೆಯಿತ್ತು. ಆದರೆ ಬಯಾನ್ ಮ್ಯೂನಿಕ್‌ಗೆ ಆಡುವ ಸ್ಟಾರ್ ಆಟಗಾರ ವಿರಾಮದ ನಂತರ ಕಣಕ್ಕಿಳಿದರು.

ಆದರೂ ಪಂದ್ಯದಲ್ಲಿ ಕೆನಡಾ ಹೆಚ್ಚಿನ ಅವಕಾಶಗಳನ್ನು ಗಳಿಸಿತು. 22ನೇ ನಿಮಿಷ ಯೂಸ್ಟಾಕಿಯೊ ಅವರಿಗೆ ಸುವರ್ಣಾವಕಾಶ ದೊರಕಿತ್ತು. ಅವರಿಗೆ ಗೋಲಿನ ಎದುರು ಅಡೆತಡೆಯಿರಲಿಲ್ಲ. ಆದರೆ ಈ ಅವಕಾಶದಲ್ಲಿ ಆರು ಗಜ ದೂರದಿಂದ ಅವರು ಹೆಡ್ ಮಾಡಿದ ಚೆಂಡು ಗುರಿತಲುಪಲಿಲ್ಲ.

ದಕ್ಷಿಣ ಆಫ್ರಿಕಾಕ್ಕೆ ಅತ್ಯುತ್ತಮ ಎನ್ನುವಂಥ ಅವಕಾಶ ದೊರಕಿದ್ದೇ ಕಡಿಮೆ. ವಿರಾಮಕ್ಕೆ ಕೆಲವೇ ಕ್ಷಣ ಮೊದಲು ಕೆನಡಾಕ್ಕೆ ಮುನ್ನಡೆಯ ಮತ್ತೊಂದು ಅವಕಾಶವಿತ್ತು. ಆದರೆ ಮೊಯ್ಸೆ ಬೊಂಬಿಟೊ ಅವರ 'ಹೆಡರ್'ಅನ್ನು ಗೋಲು ಗೆರೆಯಲ್ಲೇ ತಡೆಯಲಾಯಿತು.

60ನೇ ನಿಮಿಷ ಕೆನಡಾ ಮತ್ತೊಮ್ಮೆ ಮುನ್ನಡೆ ಸಾಧಿಸುವ ಹಾದಿಯಲ್ಲಿತ್ತು. ಆದರೆ ಸಬ್‌ಸ್ಟಿಟ್ಯೂಟ್ ನಿಕೊ ಸಿಗುರ್ ಅವರ ಪಾಸ್‌ನಲ್ಲಿ ತನಿ ಒಲುವಸಿಯಿ ಅವರ ಯತ್ನವನ್ನು ಗೋಲ್ ಕೀಪರ್ ತಡೆದರು; ಮರಳಿದ ಚೆಂಡು ಕೆನಡಾದ ಜೊನಾಥನ್ ಡೇವಿಡ್ ಬಳಿ ಹೋಯಿತು. ಆದರೆ ರಕ್ಷಣೆ ಆಟಗಾರ ಎಂಬೆಕೆಝೆಲಿ ಎಂಬೊಕಾಝಿ ಸಕಾಲದಲ್ಲಿ ಧಾವಿಸಿ ಡೇವಿಡ್ ಅವರಿಂದ ಚೆಂಡನ್ನು ದೂರ ಮಾಡಿ ಅಪಾಯ ತಪ್ಪಿಸಿದರು.


ಗೋಲು ಗಳಿಸಿದ ಸಂಭ್ರಮದಲ್ಲಿ ಕೆನಡಾ ತಂಡದ ಸ್ಟೆಫಾನ್ ಯೂಸ್ಟಾಕಿಯೊ (ಬಲ) ಎಎಫ್‌ಪಿ ಚಿತ್ರ

75ನೇ ನಿಮಿಷ ಡೇವೀಸ್ ಕೊನೆಗೂ ಕಣಕ್ಕಿಳಿಯುವ ಅವಕಾಶ ಪಡೆದರು. ಗೋಲು ಯತ್ನಕ್ಕೂ ಕಾರಣರಾದರು. ಡೇವೀಸ್ ಚೆಂಡನ್ನು ಜೊನಾಥನ್ ಡೇವಿಡ್ ಅವರಿಗೆ ಪಾಸ್ ಮಾಡಿದರು. ಆದರೆ ಅವರಿಂದ ಚೆಂಡನ್ನು ಪಡೆದ ಪ್ರಾಮಿಸ್ ಡೇವಿಡ್ ಅವರ ಗೋಲು ಯತ್ನ ವೈಡ್ ಆಯಿತು.


ಇಂಜುರಿ ಅವಧಿಯ ಎರಡನೇ ನಿಮಿಷ ಕೆನಡಾ ಕೊನೆಗೂ ನಿರ್ಣಾಯಕ ಗೋಲು ಗಳಿಸಿತು. ಗೋಲು ಗಳಿಸಿದ ಯೂಸ್ಟಾಕಿಯೊ ಗುಂಪು ಹಂತದ ಪಂದ್ಯಗಳಲ್ಲಿ ಅಲ್ಫಾನ್ಸೊ ಡೇವಿಸ್ ಬದಲು ನಾಯಕತ್ವ ವಹಿಸಿದ್ದರು.

ಪಂದ್ಯ ಮುಗಿದ ಕ್ಷಣಾರ್ಧದಲ್ಲೇ ಮೈದಾನದಲ್ಲೇ ಆಟಗಾರರನ್ನು ಒಟ್ಟುಗೂಡಿಸಿದ ಮ್ಯಾನೇಜರ್ ಜೆಸ್ಸಿ ಮಾರ್ಷ್ ಅವರು 'ನೀವೆಲ್ಲಾ ಕೆನಡಾ ಹೀರೋಗಳು' ಎಂದು ಕೊಂಡಾಡಿದ್ದು ಜಾಲತಾಣಗಳಲ್ಲಿ ವೈರಲ್ ಆಯಿತು. ತನ್ನ ಗುಂಪಿನಲ್ಲಿ ಮೊದಲ ಸ್ಥಾನ ಪಡೆದಿದ್ದರೆ ಕೆನಡಾಕ್ಕೆ ವ್ಯಾಂಕೂವರ್‌ನಲ್ಲಿ ಆಡುವ ಅವಕಾಶ ಪಡೆಯುತಿತ್ತು. 'ಕೆನಡಾದಿಂದ ಹೊರಗೆ ಆಡಬೇಕೆನ್ನುವಾಗ ನಿರಾಶೆಯಾಯಿತು. ಆದರೆ ಆಟಗಾರರು ತಕ್ಷಣ ಇದರಿಂದ ಹೊರಬಂದು ಗುರಿಯತ್ತ ಲಕ್ಷ್ಯವಿಟ್ಟರು. ಇದು ಭಾರಿ ಅವಕಾಶ ಎನ್ನುವುದನ್ನು ಮನಗಂಡರು' ಎಂದು ಮಾರ್ಷ್ ಹೇಳಿದರು.

16ರ ಘಟ್ಟಕ್ಕೆ ಬ್ರೆಜಿಲ್ ಲಗ್ಗೆ

ಹ್ಯೂಸ್ಟನ್ (ಎಎಫ್‌ಪಿ): ಸ್ಟಾಪೇಜ್ (ಇಂಜುರಿ) ಅವಧಿಯಲ್ಲಿ ಸಬ್‌ಸ್ಟಿಟ್ಯೂಟ್ ಆಟಗಾರ ಗೇಬ್ರಿಯಲ್ ಮಾರ್ಟಿನೆಲಿ ಅವರು ಗಳಿಸಿದ ನಿರ್ಣಾಯಕ ಗೋಲಿನಿಂದಾಗಿ ಬ್ರೆಜಿಲ್ ತಂಡವು ಸೋಮವಾರ ರಾತ್ರಿ 2–1ರಿಂದ ಜಪಾನ್ ತಂಡವನ್ನು ಸೋಲಿಸಿ, ಪ್ರಿಕ್ವಾರ್ಟರ್‌ಫೈನಲ್‌ಗೆ ಮುನ್ನಡೆಯಿತು.

ಕೈಶು ಸಾನೊ ಅವರು 29ನೇ ನಿಮಿಷದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಜಪಾನ್ ತಂಡವು ಮೊದಲಾರ್ಧದಲ್ಲಿ 1–0 ಮುನ್ನಡೆ ಯಲ್ಲಿತ್ತು. ವಿರಾಮದ ಬಳಿಕ ಪುಟಿದೆದ್ದ ಬ್ರೆಜಿಲ್‌ನ ಕೆಸೆಮಿರೊ 56ನೇ ನಿಮಿಷದಲ್ಲಿ ಸಮಬಲ ತಂದುಕೊಟ್ಟರು. ಕೊನೆಯಲ್ಲಿ, ಫಾರ್ವರ್ಡ್ ಆಟಗಾರ ಗೇಬ್ರಿಯಲ್ (90 + 6ನೇ ನಿಮಿಷ) ಕಾಲ್ಚಳಕ ಮೆರೆದರು. ಬ್ರೆಜಿಲ್ ತಂಡದ ಅಭಿಮಾನಿಗಳು ಸಂಭ್ರಮದ ಅಲೆಯಲ್ಲಿ ತೇಲಿದರೆ, ಜಪಾನ್ ಅಭಿಮಾನಿಗಳು ನಿರಾಶರಾದರು. ಐದು ಬಾರಿಯ ಚಾಂಪಿಯನ್ ಬ್ರೆಜಿಲ್ ತಂಡವು 16ರ ಘಟ್ಟದಲ್ಲಿ, ನಾರ್ವೆ– ಐವರಿಕೋಸ್ಟ್ ಪಂದ್ಯದ ವಿಜೇತರನ್ನು ಎದುರಿಸಲಿದೆ.



ಗೋಲು ಗಳಿಸಿದ ಸಂಭ್ರಮದಲ್ಲಿ ಗೇಬ್ರಿಯಲ್ ಮಾರ್ಟಿನೆಲಿ ಎಎಫ್‌ಪಿ ಚಿತ್ರ

ಪಂದ್ಯಗಳು

ಐವರಿಕೋಸ್ಟ್	V/s	ನಾರ್ವೆ
ಮಂಗಳವಾರ ರಾತ್ರಿ 10.30		
ಫ್ರಾನ್ಸ್	V/s	ಸ್ವೀಡನ್
ಬುಧವಾರ ಬೆಳಗಿನ ಜಾವ 2.30		
ಮೆಕ್ಸಿಕೊ	V/s	ಈಕ್ವೆಡಾರ್
ಬುಧವಾರ ಬೆಳಗ್ಗೆ 6.30		

ಲೈವ್: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್, ಜೀ5 ಆ್ಯಪ್

ಪ್ರಬಲ ಫ್ರಾನ್ಸ್‌ಗೆ ಸ್ವೀಡನ್ ಸವಾಲು

ನ್ಯೂಜರ್ಸಿ (ಎಎಫ್‌ಪಿ/ ಎಪಿ): ಪ್ರಬಲ ದಾಳಿಯ ಪಡೆ ಹೊಂದಿರುವ ಫ್ರಾನ್ಸ್ ತಂಡ ಗುಂಪು ಹಂತದಲ್ಲಿ ನಿರಾಯಾಸವಾಗಿ ತನ್ನ ಪಂದ್ಯಗಳನ್ನು ಜಯಿಸಿದ್ದು ಆತ್ಮವಿಶ್ವಾಸದಲ್ಲಿದೆ. ಈ ತಂಡ ನ್ಯೂಜರ್ಸಿಯಲ್ಲಿ ಮಂಗಳವಾರ ನಡೆಯುವ 32ರ ಸುತ್ತಿನ ಪಂದ್ಯದಲ್ಲಿ ಸ್ವೀಡನ್ ತಂಡವನ್ನು ಎದುರಿಸಲಿದೆ.


ಕೈಲಿಯನ್ ಎಂಬಾಪೆ

ಕೈಲಿಯನ್ ಎಂಬಾಪೆ, ಉಸ್ಮಾನ್ ಡೆಂಬೆಲೆ ಮತ್ತು ಮೈಕೆಲ್ ಒಲಿಸೆ ಅವರನ್ನು ಹೊಂದಿರುವ ತಂಡವು ಟೂರ್ನಿಯಲ್ಲೇ ಪ್ರಬಲ ಆಕ್ರಮಣದ ಪಡೆ ಹೊಂದಿದೆ. ತಂಡ ಲೀಗ್ ಹಂತದ ಮೂರು ಪಂದ್ಯಗಳಲ್ಲಿ (ಸೆನೆಗಲ್, ನಾರ್ವೆ, ಇರಾಕ್ ವಿರುದ್ಧ) 10 ಗೋಲುಗಳನ್ನು ಹೊಡೆದಿದೆ.

ಆದರೆ ಕೋಚ್ ದಿದಿಯರ್ ದೆಷಾಂಪ್ಸ್ ಅವರು ಎಡಭಾಗದ ಪಡೆಯ ಬಗ್ಗೆ ಸಂತುಷ್ಟರಾಗಿಲ್ಲ. ಲೆಫ್ಟ್‌ಬ್ಯಾಕ್ ಆಟಗಾರ ಥಿಯೊ ಹೆರ್ನಾಂಡೆಝ್ ಅವರ ಆಟ ನಿರೀಕ್ಷಿತ ಮಟ್ಟದಲ್ಲಿಲ್ಲ. ರಕ್ಷಣೆಗೆ ಬಲ ನೀಡಲು ಸ್ವೀಡನ್ ಎದುರು ಲ್ಯುಕಾಸ್ ದಿಗ್ನೆ ಆಡುವ ನಿರೀಕ್ಷೆಯಿದೆ. ಫಾರ್ವರ್ಡ್ ಡಿಸೈರ್ ಡೂವ್ ಬದಲು ಬ್ರಾಡ್ಲಿ ಬರ್ಕೊಲಾ ಅವಾಶ ಪಡೆಯುವ ಸಾಧ್ಯತೆಯಿದೆ.

ಸಂಕ್ಷಿಪ್ತ ಸುದ್ದಿ

ಕಳಪೆ ಆಟ: ಕೋಚ್ ಮುಜುಂದಾರ್ ಅಸಮಾಧಾನ

ಲಂಡನ್ (ಪಿಟಿಐ): 'ಮಹಿಳಾ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡದ ಆಟವಯ ಮೂರು ವಿಭಾಗಗಳಲ್ಲಿಯೂ ಕಳಪೆಯಾಗಿತ್ತು' ಎಂದು ಮುಖ್ಯ ಕೋಚ್ ಅಮೋಲ್ ಮುಜುಂದಾರ್ ಅಸಮಾಧಾನ ವ್ಯಕ್ತಪಡಿಸಿದರು.

ಸೆಮಿಫೈನಲ್‌ಗೆ ಅರ್ಹತೆ ಪಡೆಯಲು ಗೆಲ್ಲಲೇಬೇಕಿದ್ದ ಪಂದ್ಯದಲ್ಲಿ ಭಾರತ ತಂಡವು 6 ವಿಕೆಟ್‌ಗಳಿಂದ ಆಸ್ಟ್ರೇಲಿಯಾ ಎದುರು ಪರಾಭವಗೊಂಡಿತ್ತು.

'ನಮ್ಮ ತಂತ್ರದ ಬಗ್ಗೆ ಮರು ವಿಮರ್ಶೆ ನಡೆಸಬೇಕಾಗಿದೆ. ಯಾವ ಸಂಯೋಜನೆಯಲ್ಲಿ ಆಡುತ್ತೇವೆ ಎಂಬ ಬಗ್ಗೆ ನಿಜವಾಗಿಯೂ ಯೋಚಿಸಬೇಕಿದೆ ಎಂದು ಮುಜುಂದಾರ್ ಪಂದ್ಯದ ನಂತರ ಸುದ್ದಿಗಾರರಿಗೆ ತಿಳಿಸಿದರು.

ವಾಲಿಬಾಲ್: ಭಾರತಕ್ಕೆ ಕಂಚು

ಅಹಮದಾಬಾದ್: ಭಾರತ ತಂಡ, ಭಾನುವಾರ ಮುಕ್ತಾಯಗೊಂಡ ಎವಿಸಿ ಪುರುಷರ ವಾಲಿಬಾಲ್ ಕಪ್ ಟೂರ್ನಿಯಲ್ಲಿ ಇದೇ ಮೊದಲ ಬಾರಿ ಪದಕ ಗೆದ್ದು ಇತಿಹಾಸ ಸ್ಥಾಪಿಸಿತು. ಭಾರತ ತಂಡ ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಬಹರೇನ್ ತಂಡವನ್ನು 25–23, 23–25, 25–21, 25–15 ರಿಂದ ಸೋಲಿಸಿತು.

ಗುಂಪು ಹಂತದ ಎಲ್ಲಾ ಪಂದ್ಯಗಳನ್ನು ಗೆದ್ದು ಅಮೋಘ ಸಾಧನೆ ಮೆರೆದಿದ್ದ ಆತಿಥೇಯ ತಂಡ ಸೆಮಿಫೈನಲ್‌ನಲ್ಲಿ ಇಂಡೊನೇಷ್ಯಾ ಎದುರು 25–15, 24–26, 20–25, 25–19, 13–15 ರಲ್ಲಿ ಸೋಲನುಭವಿಸಿತ್ತು.

ಇಂಡೊನೇಷ್ಯಾ ಫೈನಲ್‌ನಲ್ಲಿ ದಕ್ಷಿಣ ಕೊರಿಯಾ ತಂಡವನ್ನು 3–0 ಯಿಂದ (34–32, 25–13, 25–23ರಲ್ಲಿ ಸೋಲಿಸಿ ಚಾಂಪಿಯನ್ ಆಯಿತು.

ಒಲಿಂಪಿಕ್ಸ್: ಭಾರತ ಮಹಿಳಾ ತಂಡಕ್ಕೆ ನೇರ ಅರ್ಹತೆ

ನವದೆಹಲಿ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡವು 2028ರ ಲಾಸ್ ಏಂಜಲೀಸ್ ಒಲಿಂಪಿಕ್ ಕೂಟಕ್ಕೆ ನೇರ ಅರ್ಹತೆ ಪಡೆದುಕೊಂಡಿದೆ.

ಐಸಿಸಿ ಮಹಿಳೆಯರ ವಿಶ್ವಕಪ್ ಟೂರ್ನಿಯ ಎ ಗುಂಪಿನಲ್ಲಿ ಭಾರತ ತಂಡವು 6 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದಿತ್ತು. ಸೆಮಿಫೈನಲ್ ಪ್ರವೇಶಿಸಲು ವಿಫಲವಾದರೂ, ಏಷ್ಯಾ ಖಂಡದ ರಾಷ್ಟ್ರಗಳ ಪೈಕಿ ಅಗ್ರಸ್ಥಾನ ಪಡೆಯಿತು. ಹೀಗಾಗಿ, ಒಲಿಂಪಿಕ್ಸ್‌ಗೆ ನೇರ ಅರ್ಹತೆ ದೊರಕಿದೆ.

ಭಾರತ ಪುರುಷರ ತಂಡವು ವರ್ಷಾಂತ್ಯದ ವೇಳೆಗೆ ಐಸಿಸಿ ರ‍್ಯಾಂಕಿಂಗ್‌ನಲ್ಲಿ ಏಷ್ಯಾದ ರಾಷ್ಟ್ರಗಳ ಪೈಕಿ ಮೊದಲ ಸ್ಥಾನದಲ್ಲಿದ್ದರೆ, ಒಲಿಂಪಿಕ್ಸ್ ಕೂಟಕ್ಕೆ ನೇರ ಅರ್ಹತೆ ಪಡೆದುಕೊಳ್ಳಲಿದೆ.

1900ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕೊನೆಯ ಬಾರಿಗೆ ಕ್ರಿಕೆಟ್‌ಅನ್ನು ಆಡಿಸಲಾಗಿತ್ತು. 2028ರ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಸ್ಪರ್ಧೆಯನ್ನು ಮರುಸೇರ್ಪಡೆ ಮಾಡಲಾಗಿದ್ದು, ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ತಲಾ ಆರು ತಂಡಗಳು ಕಣಕ್ಕಿಳಿಯಲಿವೆ.

ಒಲಿಂಪಿಕ್ಸ್ ಅರ್ಹತಾ ಮಾನದಂಡವನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಸೋಮವಾರ ಪ್ರಕಟಪಡಿಸಿದೆ. ಟಿ20 ವಿಶ್ವಕಪ್‌ನಲ್ಲಿ ಸೆಮಿಫೈನಲ್ ತಲುಪಿದ ಆಸ್ಟ್ರೇಲಿಯಾ, ಇಂಗ್ಲೆಂಡ್ ಹಾಗೂ ದಕ್ಷಿಣ ಆಫ್ರಿಕಾ ಮಹಿಳಾ ತಂಡಗಳು ನೇರ ಪ್ರವೇಶ ಪಡೆದಿವೆ.

ಮಹಾರಾಜ ಟ್ರೋಫಿ: ಮಯಂಕ್, ತಾಹ ಅರ್ಧಶತಕ

ತವರಿನಲ್ಲಿ ಟೈಗರ್ಸ್ ಜಯಭೇರಿ

• ಸತೀಶ ಬಿ.

ಹುಬ್ಬಳ್ಳಿ: ತವರಿನಂಗಳದಲ್ಲಿ ಅಬ್ಬರಿಸಿದ ಹುಬ್ಬಳ್ಳಿ ಟೈಗರ್ಸ್ ತಂಡದ ಆರಂಭ ಆಟಗಾರರಾದ ಮಯಂಕ್ ಅಗರವಾಲ್ (ಔಟಾಗದೆ 81 ರನ್, 38 ಎ) ಮತ್ತು ಮೊಹಮ್ಮದ್ ತಾಹ (ಔಟಾಗದೆ 57 ರನ್, 35 ಎ) ಅವರು ಗುಲ್ಬರ್ಗ ಮಿಸ್ಟಿಕ್ಸ್ ತಂಡದ ಗೆಲುವಿನ ಓಟಕ್ಕೆ ತಡೆಯೊಡ್ಡಿದರು.

ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಹುಬ್ಬಳ್ಳಿ ತಂಡವು 10 ವಿಕೆಟ್‌ಗಳ ಸುಲಭ ಜಯ ದಾಖಲಿಸಿತು. ಮಳೆಯಿಂದಾಗಿ ಒಂದೂವರೆ ತಾಸು ತಡವಾಗಿ ಆರಂಭವಾದ ಪಂದ್ಯವನ್ನು 15 ಓವರ್‌ಗಳಿಗೆ ನಿಗದಿ ಮಾಡಲಾಯಿತು. ಗುಲ್ಬರ್ಗ ಒಡ್ಡಿದ 139 ರನ್‌ಗಳ ಗುರಿಯನ್ನು ಹುಬ್ಬಳ್ಳಿ 12.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ ತಲುಪಿತು.

ಮೊದಲ ಎಸೆತದಲ್ಲೇ ಮಯಂಕ್ ಅವರ ಕ್ಯಾಚ್‌ಅನ್ನು ಶಾರ್ಟ್ ಥರ್ಡ್ ಮ್ಯಾನ್‌ನಲ್ಲಿದ್ದ ಗೌತಮ್ ಮಿಶ್ರಾ ಕೈಚೆಲ್ಲಿದರು. ಜೀವದಾನ ಪಡೆದ ಮಯಂಕ್ ಅಬ್ಬರಿಸಿದರು. ಅವರ ಇನಿಂಗ್ಸ್‌ನಲ್ಲಿ 5 ಸಿಕ್ಸರ್, 8 ಬೌಂಡರಿಗಳಿದ್ದವು. ಅವರು ಈ ಪಂದ್ಯದಲ್ಲಿ ನಾಯಕತ್ವ ವಹಿಸಿದ್ದರು. ಮಯಂಕ್‌ಗೆ ಬೆಂಬಲ ನೀಡಿದ ಮೊಹಮ್ಮದ್ ತಾಹ 33 ಎಸೆಗಳಲ್ಲಿ ಅರ್ಧಶತಕ ದಾಖಲಿಸಿದರು.

ಮೊದಲು ಬ್ಯಾಟ್ ಮಾಡಿದ ಗುಲ್ಬರ್ಗ ತಂಡಕ್ಕೆ 19 ವರ್ಷದ ಮಧ್ಯಮ ವೇಗಿ ವೈಭವ್ ಶರ್ಮಾ ಎ., ಆರಂಭದಲ್ಲೇ ಆಘಾತ ನೀಡಿದರು. ಪವರ್ ಪ್ಲೇ ಅವಧಿಯಲ್ಲಿ ಎದುರಾಳಿ ತಂಡದ ಪ್ರಮುಖ 3 ವಿಕೆಟ್‌ಗಳನ್ನು ಕಿತ್ತರು. ಇನ್ನೊಂದು ಬದಿಯಲ್ಲಿ ವಿಕೆಟ್ ಉರುಳುತ್ತಿದ್ದರೂ ಬಿರುಸಿನ ಆಟವಾಡಿದ ತಿಪ್ಪಾ ರೆಡ್ಡಿ (51 ರನ್, 34 ಎ, 4X6, 6X2) ತಂಡ ಅಲ್ಪ ಮೊತ್ತಕ್ಕೆ ಕುಸಿಯದಂತೆ ನೋಡಿಕೊಂಡರು. ನಾಯಕ ಮನೀಷ್ ಪಾಂಡೆ (ಔಟಾಗದೆ 35, 20 ಎ, 6X3) ಸಹ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಗುಲ್ಬರ್ಗ ಮಿಸ್ಟಿಕ್ಸ್: 15 ಓವರ್‌ಗಳಲ್ಲಿ 6 ವಿಕೆಟ್‌ಗೆ 139 (ತಿಪ್ಪಾ ರೆಡ್ಡಿ 51, ಮನೀಷ್ ಪಾಂಡೆ 35; ವೈಭವ್ ಶರ್ಮಾ ಎ. 9ಕ್ಕೆ 3, ವಿನಾಯಕ ಹೊಳ್ಳ 20ಕ್ಕೆ1). ಹುಬ್ಬಳ್ಳಿ ಟೈಗರ್ಸ್: 12.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 143 (ಮಯಂಕ್ ಅಗರವಾಲ್ 81, ಮೊಹಮ್ಮದ್ ತಾಹ 57). ಪಂದ್ಯದ ಆಟಗಾರ: ಎ. ವೈಭವ್ ಶರ್ಮಾ

ಇಂದಿನ ಪಂದ್ಯಗಳು
- ಶಿವಮೊಗ್ಗ ಯೋಧಾಸ್–ಗುಲ್ಬರ್ಗ ಮಿಸ್ಟಿಕ್ಸ್ (ಮಧ್ಯಾಹ್ನ 2)
- ಮೈಸೂರು ವಾರಿಯರ್ಸ್–ಕೋಸ್ಟಲ್ ಕಿಂಗ್ಸ್ ಮಂಗಳೂರು (ರಾತ್ರಿ 7)


ಅರ್ಧಶತಕ ಗಳಿಸಿದ ಹುಬ್ಬಳ್ಳಿ ಟೈಗರ್ಸ್ ತಂಡದ ಮಯಂಕ್ ಅಗರವಾಲ್ ಚಿತ್ರ:ಗೋವಿಂದರಾಜ ಜವಳಿ

ಬ್ಲಾಸ್ಟರ್ಸ್‌ಗೆ ಮಣಿದ ಕಿಂಗ್ಸ್

ಭುವನ್ ರಾಜು ಅವರ ಬಿರುಸಿನ ಅರ್ಧಶತಕದ (50 ರನ್, 31 ಎ, 4x3, 6x4) ಬಲದಿಂದ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡವನ್ನು ಮಣಿಸಿತು.

ಮಳೆಯ ಅಡಚಣೆಯ ನಡುವೆ ನಡೆದ ಸೋಮವಾರದ ಎರಡನೇ ಪಂದ್ಯದಲ್ಲಿ ಬೆಂಗಳೂರು ತಂಡ ವಿಜೆಡಿ ನಿಯಮದನ್ವಯ 8 ರನ್‌ಗಳ ಜಯ ಸಾಧಿಸಿತು.

ಮೊದಲು ಬ್ಯಾಟ್ ಮಾಡಿದ ಮಂಗಳೂರು ತಂಡವು 180 ರನ್‌ಗಳ ಗುರಿ ನೀಡಿತು. ಗುರಿ ಬೆನ್ನಟ್ಟಿದ ಬೆಂಗಳೂರು ತಂಡವು 3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 28 ರನ್ ಗಳಿಸಿದ್ದ ವೇಳೆ ಮಳೆ ಸುರಿಯಿತು. ಹೀಗಾಗಿ ಪಂದ್ಯವನ್ನು 11 ಓವರ್‌ಗೆ ಸೀಮಿತಗೊಳಿಸಿ, 109 ರನ್‌ಗಳ ಪರಿಷ್ಕೃತ ಗುರಿ ನೀಡಲಾಯಿತು. ನಂತರ 7 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 68 ರನ್ ಗಳಿಸಿದ್ದಾಗ ಮತ್ತೆ ಮಳೆಯಾಯಿತು. ತಂಡವು ನಿಗದಿಗಿಂತ 8 ರನ್ ಮುಂದಿದ್ದುದರಿಂದ ಗೆಲುವು ಒಲಿಯಿತು.

ಕಿದಂಬಿ ಶ್ರೀಕಾಂತ್ ರನ್ನರ್ ಅಪ್

ಫುಲ್ಲರ್‌ಟನ್ (ಅಮೆರಿಕ), (ಪಿಟಿಐ): ಭಾರತದ ಬ್ಯಾಡ್ಮಿಂಟನ್ ತಾರೆ ಕಿದಂಬಿ ಶ್ರೀಕಾಂತ್ ಅವರ ಯಶಸ್ಸಿನ ಓಟವು ಅಮೆರಿಕ ಓಪನ್ ಫೈನಲ್‌ನಲ್ಲಿ ಚೀನಾ ತೈಪೆಯ ಸು ಲಿ ಯಾಂಗ್ ವಿರುದ್ಧ ಸೋಲುವುದರೊಂದಿಗೆ ಕೊನೆಗೊಂಡಿತು.

2021ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಶ್ರೀಕಾಂತ್ ಅವರು ಭಾನುವಾರ ನಡೆದ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ 15-21, 21-16, 9-21ರಿಂದ ವಿಶ್ವದ 46ನೇ ಕ್ರಮಾಂಕದ ಯಾಂಗ್ ಅವರಿಗೆ ಮಣಿದರು. ತೈಪೆ ಆಟಗಾರನಿಗೆ ಇದು ಬಿಡಬ್ಲ್ಯುಎಫ್ ವಿಶ್ವ ಟೂರ್‌ನ ಚೊಚ್ಚಲ ಪ್ರಶಸ್ತಿಯಾಗಿದೆ.

33 ವರ್ಷದ ಶ್ರೀಕಾಂತ್ ಅವರು ತಮಗಿಂತ ಒಂಬತ್ತು ವರ್ಷ ಕಿರಿಯ ಆಟಗಾರನ ವಿರುದ್ಧ ಆರಂಭಿಕ ಗೇಮ್‌ನ ಹಿನ್ನಡೆಯಿಂದ ಚೇತರಿಸಿಗೊಂಡು ಪಂದ್ಯವನ್ನು ನಿರ್ಣಾಯಕ ಗೇಮ್‌ನತ್ತ ಕೊಂಡೊಯ್ದರು. ಆದರೆ, ಯಾಂಗ್ ಅವರ ವೇಗ ಮತ್ತು ಚುರುಕಾದ ಆಟದ ಮುಂದೆ ಶ್ರೀಕಾಂತ್ ಮಂಕಾದರು.


ಕಿದಂಬಿ ಶ್ರೀಕಾಂತ್ ಬಿಎಐ ಚಿತ್ರ

2014 ಮತ್ತು 2017ರ ನಡುವೆ ಆರು ಸೂಪರ್ ಸರಣಿಯ ಪ್ರಶಸ್ತಿಗಳನ್ನು ಗೆದ್ದಿದ್ದ ಶ್ರೀಕಾಂತ್ ಅವರು ಕೆಲವು ವರ್ಷಗಳಿಂದ ಪ್ರಶಸ್ತಿಯ ಬರ ಎದುರಿಸುತ್ತಿದ್ದಾರೆ. ರಿಯೊ ಒಲಿಂಪಿಕ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದ ಅವರು ಕಳೆದ ವರ್ಷ ಮಲೇಷ್ಯಾ ಮಾಸ್ಟರ್ಸ್ ಸೂಪರ್ 500 ಮತ್ತು ಸೈಯದ್ ಮೋದಿ ಇಂಟರ್‌ನ್ಯಾಷನಲ್ ಸೂಪರ್ 300 ಟೂರ್ನಿಯಲ್ಲಿ ಎರಡನೇ ಸ್ಥಾನ ಪಡೆದರು.

'ಆರಂಭಿಕ ಗೇಮ್‌ನಲ್ಲಿ ಇನ್ನೂ ಉತ್ತಮವಾಗಿ ಆಡಬಹುದಿತ್ತು. ಅದನ್ನು ಹೊರತುಪಡಿಸಿ ನನ್ನ ಪ್ರದರ್ಶನ ತೃಪ್ತಿ ತಂದಿದೆ. ಕಠಿಣ ಪರಿಶ್ರಮ ಮಾಡಿದ್ದ ಫಲವಾಗಿ ನಾನು ಇಲ್ಲಿ ಇದ್ದೇನೆ' ಎಂದು ಶ್ರೀಕಾಂತ್ ಪ್ರತಿಕ್ರಿಯಿಸಿದರು.


ನೆರವು: ಸಿ.ಎಂಗೆ ಅಥ್ಲೀಟ್ ಯಶಸ್ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಪ್ರಮುಖ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್‌ಗಳಾದ ಯಶಸ್ ಪಾಲಾಕ್ಷ ಮತ್ತು ಎಸ್.ಎಸ್. ಸ್ನೇಹಾ ಅವರು ರಾಜ್ಯ ಸರ್ಕಾರದಿಂದ ನೆರವಿನ ನಿರೀಕ್ಷೆಯಲ್ಲಿದ್ದಾರೆ.

ಭುವನೇಶ್ವರದಲ್ಲಿ ನಡೆದ ರಾಷ್ಟ್ರೀಯ ಅಂತರ-ರಾಜ್ಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಯಶಸ್ ಅವರು 400 ಮೀಟರ್ ಹರ್ಡಲ್ಸ್‌ನಲ್ಲಿ ಚಿನ್ನ ಗೆದ್ದರೆ ಮತ್ತು ಸ್ನೇಹಾ ಅವರು 100 ಮೀ. ಓಟದಲ್ಲಿ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದ್ದರು. ಇದರೊಂದಿಗೆ ಇಬ್ಬರೂ ಏಷ್ಯನ್ ಕ್ರೀಡಾಕೂಟಕ್ಕೆ ಅರ್ಹತೆ ಪಡೆದಿದ್ದಾರೆ.

24 ವರ್ಷದ ಯಶಸ್ ಅವರು ಈ ಹಿಂದೆ 49 ಸೆಕೆಂಡುಗಳಲ್ಲಿ ಗುರಿ ತಲುಪಿ, ದೇಶದ ಅತ್ಯಂತ ವೇಗದ ಸಕ್ರಿಯ ಹರ್ಡಲರ್ ಎಂಬ ಹೆಗ್ಗಳಿಕೆಯೊಂದಿಗೆ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೂ ಟಿಕೆಟ್ ಗಳಿಸಿದ್ದಾರೆ.


ಯಶಸ್ ಪಾಲಾಕ್ಷ


ಸ್ನೇಹಾ ಎಸ್.ಎಸ್.

ಭಾರತೀಯ ಸೇನೆಯಲ್ಲಿ ಹವಾಲ್ದಾರ್ ಆಗಿರುವ ಯಶಸ್ ಅವರು 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವ ಗುರಿ ಹೊಂದಿದ್ದಾರೆ. ಹೀಗಾಗಿ, ವಾರ್ಷಿಕವಾಗಿ ₹10 ಲಕ್ಷ ಪ್ರೋತ್ಸಾಹಧನ ನೀಡುವ ರಾಜ್ಯ ಸರ್ಕಾರದ ಯೋಜನೆಗೆ ಸೇರ್ಪಡೆಗೊಳಿಸುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಮಾಡಿದ್ದಾರೆ.

'ಶಿವಕುಮಾರ್ ಅವರೂ ಮಾಜಿ ಕ್ರೀಡಾಪಟು ಆಗಿರುವುದರಿಂದ ಕ್ರೀಡಾಪಟುಗಳ ನೆರವಿಗೆ ಅವರು ಏನಾದರೂ ಮಾಡಬಹುದು ಎಂದು ನಾವು ನಿರೀಕ್ಷಿಸುತ್ತಿದ್ದೇವೆ' ಎಂದು ಯಶಸ್ ಹೇಳಿದ್ದಾರೆ. ತುಮಕೂರಿನ ಯಶಸ್ ಅವರು ಭುವನೇಶ್ವರದಲ್ಲಿ ನಡೆದ ಫೈನಲ್ ಸ್ಪರ್ಧೆಯಲ್ಲಿ ತಮಿಳುನಾಡಿನ ಸಂತೋಷ್ ಟಿ. ಅವರೊಂದಿಗೆ 49.14 ಸೆಕೆಂಡುಗಳಲ್ಲಿ ಗುರಿ ತಲುಪಿ, ಫೋಟೋ ಫಿನಿಶ್‌ನಲ್ಲಿ ಅಗ್ರಸ್ಥಾನ ಗಳಿಸಿದ್ದರು.

ಕಳೆದ ವಾರ ಚೀನಾದಲ್ಲಿ ನಡೆದ ಏಷ್ಯನ್ ರಿಲೇ ಚಾಂಪಿಯನ್‌ಷಿಪ್‌ನಲ್ಲಿ ಮಹಿಳೆಯರ 4x100 ಮೀಟರ್ ರಿಲೇಯಲ್ಲಿ ಚಿನ್ನದ ಪದಕ ಗೆದ್ದು ಹಿಂತಿರುಗಿದ್ದ ಸ್ನೇಹಾ ಅವರು 100 ಮೀಟರ್ ಫೈನಲ್‌ನಲ್ಲಿ 11.65 ಸೆಕೆಂಡುಗಳಲ್ಲಿ ಗುರಿ ತಲುಪಿ ಬೆಳ್ಳಿ ಪದಕ ಗೆದ್ದಿದ್ದರು.

ಟೆಸ್ಟ್ ಸರಣಿ ಗೆದ್ದ ನ್ಯೂಜಿಲೆಂಡ್

ನಾಟಿಂಗ್‌ಹ್ಯಾಮ್ (ಎಎಫ್‌ಪಿ): ಆಲ್‌ರೌಂಡ್ ಆಟವಾಡಿದ ಪ್ರವಾಸಿ ನ್ಯೂಜಿಲೆಂಡ್ ತಂಡವು ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ 160 ರನ್‌ಗಳಿಂದ ಜಯ ಸಾಧಿಸಿತು. ಅದರೊಂದಿಗೆ 2–1ರಿಂದ ಸರಣಿ ಗೆದ್ದು ಬೀಗಿತು.

ಕೊನೆಯ ಪಂದ್ಯ ಆಡಿದ ನಾಯಕ ಬೆನ್ ಸ್ಟೋಕ್ಸ್ ಅವರಿಗೆ ಗೆಲುವಿನ ವಿದಾಯ ಹೇಳುವ ಆತಿಥೇಯ ತಂಡದ ಬಯಕೆ ಈಡೇರಲಿಲ್ಲ. ಇಂಗ್ಲೆಂಡ್‌ಗೆ 20 ಬಾರಿ ಟೆಸ್ಟ್ ಪ್ರವಾಸ ಕೈಗೊಂಡಿರುವ ಕಿವೀಸ್ ಪಡೆಯು ನಾಲ್ಕನೇ ಬಾರಿ ಸರಣಿ ಜಯಿಸಿತು.

ಗೆಲುವಿಗೆ 373 ರನ್ ಗುರಿ ಪಡೆದಿದ್ದ ಸ್ಟೋಕ್ಸ್ ಪಡೆ ಕೊನೆಯ ದಿನವಾದ ಸೋಮವಾರ 51.2 ಓವರ್‌ಗಳಲ್ಲಿ 212 ರನ್‌ಗಳಿಗೆ ಪತನಗೊಂಡಿತು. ನ್ಯೂಜಿಲೆಂಡ್‌ನ ಬೌಲರ್‌ಗಳಾದ ಝಾಕರಿ ಫೌಲ್ಕ್ಸ್ (52ಕ್ಕೆ3), ನಥಾನ್ ಸ್ಮಿತ್ (64ಕ್ಕೆ2) ಮತ್ತು ಮಿಚೆಲ್ ಸ್ಯಾಂಟ್ನರ್ (54ಕ್ಕೆ2) ಪರಿಣಾಮಕಾರಿಯಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್ 114.5 ಓವರ್‌ಗಳಲ್ಲಿ 438; ಇಂಗ್ಲೆಂಡ್: 88.2 ಓವರ್‌ಗಳಲ್ಲಿ 354; ಎರಡನೇ ಇನಿಂಗ್ಸ್: ನ್ಯೂಜಿಲೆಂಡ್: 94 ಓವರ್‌ಗಳಲ್ಲಿ 9ಕ್ಕೆ288 ಡಿ.; ಇಂಗ್ಲೆಂಡ್: 51.2 ಓವರ್‌ಗಳಲ್ಲಿ 212. ಪಂದ್ಯದ ಆಟಗಾರ: ಡೇರಿಲ್ ಮಿಚೆಲ್; ಸರಣಿಯ ಆಟಗಾರರು: ಜೋಫ್ರಾ ಆರ್ಚರ್ ಮತ್ತು ನೇಥನ್ ಸ್ಮಿತ್.

ಅರ್ಲಿಂಗ್ ಆಟದ ಮೇಲೆ ಕಣ್ಣು

ಅರ್ಲಿಂಗ್ಟನ್ (ಟೆಕ್ಸಾಸ್), (ಎಪಿ): ನಾರ್ವೆ ತಂಡ ಮಂಗಳವಾರ ಡಲ್ಲಾಸ್ ಕ್ರೀಡಾಂಗಣದಲ್ಲಿ ನಡೆಯಲಿರುವ ಫಿಫಾ ವಿಶ್ವಕಪ್ 32ರ ಸುತ್ತಿನ ಪಂದ್ಯದಲ್ಲಿ ಐವರಿಕೋಸ್ಟ್ ತಂಡವನ್ನು ಎದುರಿಸಲಿದೆ. ಫುಟ್‌ಬಾಲ್ ಪ್ರಿಯರ ಗಮನ ನಾರ್ವೆಯ ಮುಂಚೂಣಿ ಆಟಗಾರ ಅರ್ಲಿಂಗ್ ಹಾಲಂಡ್ ಮೇಲೆ ಇದೆ. ಐವರಿ ಕೋಸ್ಟ್ ತಂಡವೂ ತನ್ನದೇ ಆದ ಪ್ರತಿಭಾನ್ವಿತ ಆಕ್ರಮಣಕಾರಿ ಆಟಗಾರರ ಪಡೆ ಹೊಂದಿದೆ.


ಅರ್ಲಿಂಗ್ ಹಾಲಂಡ್

ಆಡಿದ ಎರಡು ಪಂದ್ಯಗಳಲ್ಲಿ ನಾಲ್ಕು ಗೋಲುಗಳನ್ನು ಹೊಡೆದಿದ್ದ ಹಾಲಂಡ್ ಅವರಿಗೆ ಫ್ರಾನ್ಸ್ ವಿರುದ್ಧ ಗುಂಪಿನ ಕೊನೆಯ ಪಂದ್ಯಕ್ಕೆ ವಿಶ್ರಾಂತಿ ನೀಡಲಾಗಿತ್ತು.

28 ವರ್ಷಗಳ ನಂತರ ನಾರ್ವೆ ವಿಶ್ವಕಪ್‌ಗೆ ಮರಳಿದ್ದು, ಅಮೋಘ ಲಯದಲ್ಲಿರುವ ಅರ್ಲಿಂಗ್ ಅವರು ಇರಾಕ್ ವಿರುದ್ಧ ಪಂದ್ಯದಲ್ಲಿ ಎರಡು ಗೋಲು ಹೊಡೆದಿದ್ದರು. ಸೆನೆಗಲ್ ವಿರುದ್ಧವೂ ಅಮೋಘ ಆಟ ಮುಂದುವರಿಸಿದ್ದು, ತಂಡ ನಾಕೌಟ್ ತಲುಪಲು ನೆರವಾಗಿದ್ದರು.

ಸೋಲಿನ ಅಪಾಯದಿಂದ ಸಿನ್ನರ್ ಪಾರು

ಸಬಲೆಂಕಾ, ಪೆಗುಲಾ ಶುಭಾರಂಭ • ಮಾಯಾ, ರೂಡ್, ರುಬ್ಲೆವ್ ನಿರ್ಗಮನ

ಲಂಡನ್ (ಎಎಫ್‌ಪಿ): ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರು ಸೋಮವಾರ ಐದು ಸೆಟ್‌ಗಳ ರೋಚಕ ಹಣಾಹಣಿಯಲ್ಲಿ ಸರ್ಬಿಯಾದ ಮಿಯೋಮಿರ್ ಕೆಸ್ಮನೊವಿಚ್ ಅವರನ್ನು ಸೋಲಿಸಿ ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಅಗ್ರ ಶ್ರೇಯಾಂಕದ ಆಟಗಾರ್ತಿ ಅರಿನಾ ಸಬಲೆಂಕಾ ಅವರು 6–2, 6–3ರಿಂದ ನೇರ ಸೆಟ್‌ಗಳಲ್ಲಿ ಸರ್ಬಿಯಾದ ಕ್ವಾಲಿಫಯರ್ ಆಟಗಾರ್ತಿ ಟಿಯೊಡಾರಾ ಕೊಸ್ಟೊವಿಚ್ ಅವರನ್ನು ಮಣಿಸಿ, ಅಭಿಯಾನ ಆರಂಭಿಸಿದರು. ಇಲ್ಲಿ ಮೂರು ಬಾರಿ ಫೈನಲ್ ತಲುಪಿದ್ದರೂ ಕಿರೀಟ ಗೆಲ್ಲಲಾಗದ ಸಬಲೆಂಕಾ, ಈ ಬಾರಿ ಅದನ್ನು ಸಾಧಿಸುವ ಛಲದಲ್ಲಿದ್ದಾರೆ. ನಾಲ್ಕು ಗ್ರ್ಯಾನ್‌ಸ್ಲಾಮ್ ವಿಜೇತೆ, ಜಪಾನ್‌ನ ನವೊಮಿ ಒಸಾಕಾ, ಮೊದಲ ಸುತ್ತಿನಲ್ಲಿ 6–1, 7–5ರಿಂದ ಎಲ್ಸಾ ಜಾಕ್ವೆಮಾಟ್ ಅವರನ್ನು ಹಿಮ್ಮೆಟ್ಟಿಸಿದರು.

ಫ್ರೆಂಚ್ ಓಪನ್ ಹಾಲಿ ರನ್ನರ್ ಅಪ್, ಮಾಯಾ ಕಲ್ವಿನ್‌ಸ್ಕಾಯಾ ಅವರು ಮೊದಲ ಸುತ್ತಿನಲ್ಲೇ ಆಘಾತ ಅನುಭವಿಸಿದರು. ನಾರ್ವೆಯ ಕ್ಯಾಸ್ಪರ್ ರೂಡ್ ಮತ್ತು ರಷ್ಯಾದ ಆ್ಯಂಡ್ರೆ ರುಬ್ಲೆವ್ ಅವರೂ ಆರಂಭಿಕ ಸುತ್ತಿನಲ್ಲಿ ಅಭಿಯಾನ ಮುಗಿಸಿದರು.

ಹಾಲಿ ಚಾಂಪಿಯನ್ ಸಿನ್ನರ್ ಆರಂಭಿಕ ಸುತ್ತಿನಲ್ಲೇ ಸೋಲಿನ ಅಪಾಯದಲ್ಲಿದ್ದರು. ಆಲ್ ಇಂಗ್ಲೆಂಡ್ ಕ್ಲಬ್‌ನ ಸೆಂಟರ್ ಕೋರ್ಟ್‌ನಲ್ಲಿ ನಡೆದ ಪಂದ್ಯದಲ್ಲಿ ಅವರು 4-6, 6-3, 6-7 (6/8), 6-2, 6-3 ಅಂತರದಲ್ಲಿ ಮಿಯೋಮಿರ್ ವಿರುದ್ಧ ಜಯ ಗಳಿಸಿದರು. 23 ವರ್ಷದ ಸಿನ್ನರ್ ಅವರು ಕಳೆದ ತಿಂಗಳು ಫ್ರೆಂಚ್ ಓಪನ್ ಎರಡನೇ ಸುತ್ತಿನಲ್ಲಿ ನಿರ್ಗಮಿಸಿದ್ದರು.



ಗೆಲುವಿನ ಸಂಭ್ರಮದಲ್ಲಿ ಯಾನಿಕ್ ಸಿನ್ನರ್ ಎಎಫ್‌ಪಿ ಚಿತ್ರ

ಹಿಂದೆ ಸರಿದ ರಾಡುಕಾನು, ಡ್ರೇಪರ್

ಲಂಡನ್ (ಎಎಫ್‌ಪಿ): ಬ್ರಿಟನ್‌ನ ಟೆನಿಸ್ ತಾರೆಗಳಾದ ಎಮ್ಮಾ ರಾಡುಕಾನು ಮತ್ತು ಜ್ಯಾಕ್ ಡ್ರೇಪರ್ ಅವರು ಸ್ವದೇಶದಲ್ಲಿ ನಡೆಯುತ್ತಿರುವ ವಿಂಬಲ್ಡನ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

ಬಲಗಾಲಿನ ನೋವಿನಿಂದಾಗಿ ರಾಡುಕಾನು ಅವರು ಕಣಕ್ಕಿಳಿಯಲಿಲ್ಲ. ಮೊದಲ ಸುತ್ತಿನಲ್ಲಿ ಅವರು ಆಂಟೋನಿಯಾ ರುಜಿಕ್ (ಕ್ರೊಯೇಷಿಯಾ) ವಿರುದ್ಧ ಆಡಬೇಕಿತ್ತು. ಡ್ರೇಪರ್ ಅವರು ತೋಳಿನ ಗಾಯದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅವರು ಮಂಗಳವಾರ ಸೆಂಟರ್ ಕೋರ್ಟ್‌ನಲ್ಲಿ ಆರನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ (ಅಮೆರಿಕ) ಅವರನ್ನು ಎದುರಿಸಬೇಕಿತ್ತು.

ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಕ್ವಾಲಿಫಯರ್ ಆಟಗಾರ್ತಿಯಾಗಿ ಕಣಕ್ಕಿಳಿದು ಫೈನಲ್ ತಲುಪಿ ಇತಿಹಾಸ ನಿರ್ಮಿಸಿದ್ದ ಪೋಲೆಂಡ್‌ನ ಮಾಯಾ ಮಹಿಳಾ ಸಿಂಗಲ್ಸ್‌ನಲ್ಲಿ 6–2, 5–7, 2–6ರಿಂದ ಥಾಯ್ಲೆಂಡ್‌ನ ಮನಂಚಾಯ ಸಾವಾಂಗ್‌ಕೆವ್ ಅವರಿಗೆ ಮೂರು ಸೆಟ್‌ಗಳ ಹೋರಾಟದಲ್ಲಿ ಸೋತರು.

ರೂಡ್‌ಗೆ ಆಘಾತ: ಪುರುಷರ ಸಿಂಗಲ್ಸ್‌ನಲ್ಲಿ ಪೋಲೆಂಡ್‌ನ ಹ್ಯೂಬರ್ಟ್ ಹರ್ಕಾಜ್ 6-4, 6-2, 7-6 (9/7) ರಿಂದ 11ನೇ ಶ್ರೇಯಾಂಕದ ರೂಡ್ ಅವರಿಗೆ ಆಘಾತ ನೀಡಿದರು. ಫ್ರೆಂಚ್ ಓಪನ್‌ನಲ್ಲಿ ಎರಡು ಬಾರಿ ಮತ್ತು ಅಮೆರಿಕ ಓಪನ್‌ನಲ್ಲಿ ಒಂದು ಬಾರಿ ಪ್ರಶಸ್ತಿ ಸುತ್ತು ತಲುಪಿದ್ದ ರೂಡ್ ಅವರಿಗೆ ವಿಂಬಲ್ಡನ್‌ನಲ್ಲಿ ಈತನಕ ಎರಡನೇ ಸುತ್ತು ದಾಟಲು ಸಾಧ್ಯವಾಗಿಲ್ಲ.

ದಿನದ ಮತ್ತೊಂದು ಅಚ್ಚರಿಯ ಫಲಿತಾಂಶದಲ್ಲಿ ರಷ್ಯಾದ ರೋಮನ್ ಸಫಿಯುಲಿನ್ ಅವರು ತಮ್ಮದೇ ದೇಶದ ಅನುಭವಿ ರುಬ್ಲೆವ್ ಅವರನ್ನು ಐದು ಸೆಟ್‌ಗಳ ರೋಚಕ ಹಣಾಹಣಿಯಲ್ಲಿ ಸೋಲಿಸಿದರು. 26 ವರ್ಷದ ರೋಮನ್ ಅವರು 6-4, 6-7 (6/8), 3-6, 6-3, 7-6 (14/12)ರಿಂದ ಮೇಲುಗೈ ಸಾಧಿಸಿದರು.

ಪೆಗುಲಾ ಶುಭಾರಂಭ: ಅಮೆರಿಕದ ಅನುಭವಿ ಆಟಗಾರ್ತಿ ಜೆಸಿಕಾ ಪೆಗುಲಾ ಅವರು ಶುಭಾರಂಭ ಮಾಡಿದರು. ನಾಲ್ಕನೇ ಶ್ರೇಯಾಂಕದ ಪೆಗುಲಾ 7-5, 6-3ರಿಂದ ಜೆಕ್ ರಿಪಬ್ಲಿಕ್‌ನ ದರ್ಜಾ ವಿಡ್ಮನೋವಾ ಅವರನ್ನು ಸೋಲಿಸಿದರು. ಸ್ವಿಟ್ಜರ್ಲೆಂಡ್‌ನ ಬೆಲಿಂಡಾ ಬೆನ್ಸಿಕ್ 6-2, 6-1ರಿಂದ ಜರ್ಮನಿಯ ಮಿಕಾ ಸ್ಟೊಜ್ಸಾವ್ಲ್ಜೆವಿಕ್ ಅವರನ್ನು ಹಿಮ್ಮೆಟ್ಟಿಸಿದರು.

ಎಂಟನೇ ಶ್ರೇಯಾಂಕದ ಆಟಗಾರ, ರಷ್ಯಾದ ಡೇನಿಯಲ್ ಮೆಡ್ವೆಡೇವ್ ಅವರು ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ 6–1, 6–2, 6–4ರಿಂದ ನೇರ ಸೆಟ್‌ಗಳಲ್ಲಿ ಅಮೆರಿಕ ಓಪನ್ ಮಾಜಿ ಚಾಂಪಿಯನ್ ಮರೀನ್ ಸಿಲಿಕ್ ಅವರಿಗೆ ಸೋಲುಣಿಸಿದರು.

ಆಸ್ಟ್ರೇಲಿಯಾಕ್ಕೆ ವಿಂಡೀಸ್ ಸವಾಲು

ಲಂಡನ್: ಆರು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡವು ಮಹಿಳಾ ಟಿ20 ವಿಶ್ವಕಪ್‌ನ ಮೊದಲ ಸೆಮಿಫೈನಲ್‌ನಲ್ಲಿ ಮಂಗಳವಾರ ವೆಸ್ಟ್ ಇಂಡೀಸ್ ತಂಡವನ್ನು ಎದುರಿಸಲಿದೆ.

ಸೋಫಿ ಮಾಲಿನೆ ಪಡೆಯು 'ಎ' ಗುಂಪಿನಲ್ಲಿ ಸತತ ಐದು ಪಂದ್ಯಗಳನ್ನು ಗೆದ್ದು ಅಗ್ರಸ್ಥಾನದೊಂದಿಗೆ ನಾಲ್ಕರ ಘಟ್ಟ ಪ್ರವೇಶಿಸಿದೆ. ಎಲ್ಲಾ ವಿಭಾಗಗಳಲ್ಲೂ ಬಲಿಷ್ಠವಾಗಿರುವ ತಂಡವು ಸೆಮಿಫೈನಲ್‌ನಲ್ಲೂ ಪಾರಮ್ಯ ಮೆರೆಯುವ ವಿಶ್ವಾಸದಲ್ಲಿದೆ.

2016ರ ಚಾಂಪಿಯನ್ ವಿಂಡೀಸ್ ಬಿ ಗುಂಪಿನಲ್ಲಿ ಎರಡನೇ ಸ್ಥಾನದೊಂದಿಗೆ ಸೆಮಿಫೈನಲ್ ತಲುಪಿದೆ. ಗುಂಪು ಹಂತದಲ್ಲಿ ಐದು ಪಂದ್ಯಗಳ ಪೈಕಿ ಮೂರನ್ನು ಗೆದ್ದಿರುವ ತಂಡವು ನೆಟ್ ರನ್‌ರೇಟ್ ಆಧಾರದಲ್ಲಿ ಶ್ರೀಲಂಕಾವನ್ನು ಹಿಂದಿಕ್ಕಿ ಮುಂದಿನ ಸುತ್ತು ತಲುಪಿದೆ.

ಇಂದಿನ ಪಂದ್ಯ

ಆಸ್ಟ್ರೇಲಿಯಾ	V/s	ವೆಸ್ಟ್ ಇಂಡೀಸ್
ಪಂದ್ಯ ಆರಂಭ: ರಾತ್ರಿ 7		

ಲೈವ್: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್